ಮಂಗಳವಾರ, ಮಾರ್ಚ್ 9, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 68 | ಪುಟ 16
● www.prajavani.net
/prajavani.net @prajavani /prajavani http://bit.ly/Prajavani

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕ್ಷೇಮ ಕುಶಲ
ಎಲ್ಲ ಋತುಗಳಲ್ಲಿಯೂ ಒಂದಲ್ಲ ಒಂದು ರೀತಿಯಲ್ಲಿ ಚರ್ಮಕ್ಕೆ ಸಂಬಂಧಪಟ್ಟ ರೋಗಗಳು ಇರುತ್ತವೆ. ಅವುಗಳು ಬಾರದಂತೆ ಕೆಲವು ಮುನ್ನೆಚ್ಚರಿಕೆಗಳನ್ನು ತೆಗೆದುಕೊಳ್ಳಬಹುದು...

ಕೋಲ್ಕತ್ತದಲ್ಲಿ ಅಗ್ನಿ ಅವಘಡ: 7 ಮಂದಿ ಸಾವು 2
ಏಳು ವರ್ಷಗಳಲ್ಲಿ ಎಲ್‌ಪಿಜಿ ದರ ದುಪ್ಪಟ್ಟು: ಪ್ರಧಾನ್ 12

ಸೆನ್ಸೆಕ್ಸ್	ನಿಫ್ಟಿ	₹/$
50,441 ▲	14,956 ▲	73.25 ▼

ಒಟ್ಟು ಬಜೆಟ್ ಗಾತ್ರ (ಕೋಟಿಗಳಲ್ಲಿ) **₹2,46,207**

₹2,37,893 ಹಿಂದಿನ ಬಜೆಟ್ ಗಾತ್ರ
ಹೆಚ್ಚಳ: 8,314 ▲

ಒಟ್ಟು ಸಾಲದ ಪ್ರಮಾಣ (ಕೋಟಿಗಳಲ್ಲಿ)

2020–21	2019–20	ಸಾಲದ ಹೆಚ್ಚಳ
₹4,57,899	₹3,68,692	₹89,207

₹1,87,405 ಕೋಟಿ ವೇತನ, ಸಹಾಯಾನುದಾನ, ವಿವಿಧ ಸಮುದಾಯಕ್ಕೆ ಕೊಡುಗೆ ಸೇರಿದಂತೆ ಆಡಳಿತ ವೆಚ್ಚ

₹14,565 ಕೋಟಿ ಸಾಲದ ಮರುಪಾವತಿ ಮೊತ್ತ

ಬರೀ ನೋಟ, ಸಾಲದ ಆಟ

ಕಾಂಗ್ರೆಸ್ ಸಭಾತ್ಯಾಗದ ಮಧ್ಯೆಯೇ ಬಜೆಟ್ ಮಂಡನೆ • ರೈತರಿಗೆ ಅಭಯ, ಸ್ತ್ರೀ ಶಕ್ತಿಗೆ ಅಭ್ಯುದಯ

ರಾಜ್ಯ ಮುಂಗಡಪತ್ರ 2021-22

• ವಿ.ಎಸ್.ಸುಬ್ರಹ್ಮಣ್ಯ

ಬೆಂಗಳೂರು: ಕೊರೊನಾ ತಂದಿತ್ತ ಸಂಕಷ್ಟದಿಂದ ಬಸವಳಿದಿರುವ ಜನರಿಗೆ ಊರುಗೋಲಾಗಿ ನಿಂತು ರಾಜ್ಯವನ್ನು ಅಭಿವೃದ್ಧಿಯತ್ತ ಕೊಂಡೊಯ್ಯುವ ಸಂಕಲ್ಪವನ್ನು ಬಜೆಟ್‌ನಲ್ಲಿ ಮಾಡಬಹುದೆಂಬ ಅಪೇಕ್ಷೆ ಹುಸಿ ಮಾಡಿರುವ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ವರಮಾನ ಸಂಗ್ರಹದಲ್ಲಿ ಉಂಟಾಗಿರುವ ಕೊರತೆ ನೀಗಲು ಅಪಾರ ಪ್ರಮಾಣದ ಸಾಲ ತರುವ ಪ್ರಸ್ತಾವ-ವನ್ನು ಮುಂದಿಟ್ಟಿದ್ದಾರೆ.

ಬಡ್ಡಿ ಪಾವತಿಸಿ ತಂದ ಸಾಲದ ಮೊತ್ತವನ್ನು ಅಭಿವೃದ್ಧಿ ಕಾಮಗಾರಿಗಳಿಗೆ ಆದ್ಯತೆ ಮೇರೆಗೆ ಬಳಸಲು ಚಿತ್ತ ಹರಿಸಿಲ್ಲ. ಅದರ ಬದಲು, ತಮ್ಮ ಹಳೆಯ ಶೈಲಿಯಲ್ಲಿ ಎಲ್ಲ ಸಮುದಾಯಗಳಿಗೂ 'ಉದಾರ' ವಾಗಿ ಹಂಚಿ, ಎಲ್ಲರನ್ನೂ ಮೆಚ್ಚಿಸುವ ಕಸರತ್ತು ನಡೆಸಿದ್ದಾರೆ.

ಕಾಂಗ್ರೆಸ್ ಸದಸ್ಯರ ಧಿಕ್ಕಾರ, ಸಭಾತ್ಯಾಗದ ಮಧ್ಯೆಯೇ ರಾಜ್ಯ ಬಜೆಟ್ ಅನ್ನು ಹಣಕಾಸು ಸಚಿವರೂ ಆಗಿರುವ ಯಡಿಯೂರಪ್ಪ ಸೋಮವಾರ ಮಂಡಿಸಿದರು. ಕೋವಿಡ್‌ನಿಂದ ಆರ್ಥಿಕ ಚಟುವಟಿಕೆ ಮತ್ತು ಆದಾಯ ಸಂಗ್ರಹದ ಮೇಲೆ ಪ್ರತಿಕೂಲ ಪರಿಣಾಮಗಳಾಗಿ-ದ್ದರೂ, ಬಜೆಟ್ ಗಾತ್ರವನ್ನು ಕುಗ್ಗಿಸಿಲ್ಲ. ತೆರಿಗೆ ಹಾಕಿ ಜನರ ಮೇಲೆ ಮತ್ತಷ್ಟು ಹೊರೆ ಹಾಕುವ ಧೈರ್ಯ ತೋರದ ಮುಖ್ಯಮಂತ್ರಿ, ಸಂಪನ್ಮೂಲದ ಕೊರತೆ ತುಂಬಲು ವರ್ಷ-ವೊಂದರಲ್ಲಿ ದಾಖಲೆಯ ₹ 71,332 ಕೋಟಿ ಸಾಲ ಪಡೆಯುವುದಾಗಿ ಹೇಳಿದ್ದಾರೆ.

ಇದರಿಂದಾಗಿ 2022ರ ಏಪ್ರಿಲ್‌ನಲ್ಲಿ ರಾಜ್ಯ ಸರ್ಕಾರದ ಒಟ್ಟು ಸಾಲದ ಮೊತ್ತ ₹ 4.57 ಲಕ್ಷ ಕೋಟಿ ಮೀರಲಿದೆ. ಇದು ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ಶೇಕಡ 26.9ರಷ್ಟಾಗುತ್ತದೆ. ಇದಕ್ಕಾಗಿ ಕಾಯ್ದೆ ತಿದ್ದುಪಡಿ ಪ್ರಸ್ತಾವವನ್ನೂ ಬಜೆಟ್‌ನಲ್ಲಿ ಪ್ರಕಟಿಸಲಾಗಿದೆ.

ಸಾರ್ವಜನಿಕ ಆಸ್ತಿ ನಿರ್ಮಾಣ ಹಾಗೂ ಸರ್ಕಾರದ ಬೊಕ್ಕಸಕ್ಕೆ ನಿರಂತರ ಆದಾಯ ತರುವ ಯೋಜನೆಗಳಿಗೆ ಬಜೆಟ್‌ನಲ್ಲಿ ಆದ್ಯತೆ ಗೌಣವಾಗಿದೆ. ಸಂಪುಟ ಸಭೆಗಳಲ್ಲಿ ಕೈಗೊಂಡಿರುವ ಹಲವು ತೀರ್ಮಾನಗಳನ್ನು ಬಜೆಟ್‌ನಲ್ಲಿ ಪುನರುಚ್ಚ-ರಿಸಲಾಗಿದೆ. ಕೆಲವು ಹೊಸ ಕಾರ್ಯಕ್ರಮಗಳನ್ನು ಘೋಷಿಸಿದ್ದರೂ ಅನುದಾನ ಖಾತರಿಪಡಿಸಿಲ್ಲ. ಕೆಲವು ಇಲಾಖೆಗಳಿಗೆ ಅನುದಾನ ಹಂಚಿಕೆ ಮಾಡಿದ್ದರೂ, ಬಳಕೆಯ ಉದ್ದೇಶವನ್ನು ಸ್ಪಷ್ಟಪಡಿಸದೇ ಇರುವುದು ಎದ್ದು ಕಾಣುತ್ತದೆ. ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಲೇ ಇರುವ ಬದ್ಧ ವೆಚ್ಚಗಳನ್ನು (ವೇತನ, ಸೌಲಭ್ಯ, ಪಿಂಚಣಿ) ಹಾಗೂ ಸಹಾಯಾನುದಾನಗಳನ್ನು ಕಡಿಮೆ ಮಾಡುವ ಗೋಜಿಗೆ ಹೋಗಿಲ್ಲ. ಹೀಗಾಗಿ, ಅಭಿವೃದ್ಧಿಗೆ ಮಾಡಬೇಕಾದ ಬಂಡವಾಳ ವೆಚ್ಚ ಯಥಾಸ್ಥಿ-ತಿಯಲ್ಲಿ ಮುಂದುವರಿದಿದೆ.

ಜಾತಿ, ಧರ್ಮ, ಸಮುದಾಯ ಆಧಾರಿತವಾಗಿ ಅನುದಾನ ಹಂಚಿಕೆ ಮಾಡಿ, ಓಲೈಸುವ ಪ್ರವೃತ್ತಿಯನ್ನು ಯಡಿಯೂರಪ್ಪ ತಮ್ಮ ಎಂಟನೇ ಬಜೆಟ್‌ನಲ್ಲೂ ಮುಂ-ದುವರಿಸಿದ್ದಾರೆ. ಆದ್ಯತಾ ವಲಯಕ್ಕೆ ಅನುದಾನ ಹೆಚ್ಚಳ ಮಾಡದೇ ಇರುವುದಕ್ಕೆ ಕೋವಿಡ್ ಸಂಕಷ್ಟವನ್ನು ಉಲ್ಲೇಖಿಸಿರುವ ಅವರು, ಜಾತಿ ಮತ್ತು ಸಮುದಾಯ ಆಧಾರಿತ ಯೋಜನೆಗಳು, ಮಠ, ಮಂದಿರಗಳು, ಕ್ರೈಸ್ತ ಮತ್ತು ಮುಸ್ಲಿಂ ಸಮುದಾಯಗಳಿಗೆ ಒಟ್ಟಾರೆ ಸುಮಾರು ₹ 3,000 ಕೋಟಿ ಕೊಡುಗೆ ನೀಡಿದ್ದಾರೆ.

ಮೀಸಲಾತಿ ಹೋರಾಟದ ಕಣಕ್ಕೆ ಪ್ರವೇಶಿಸಲು ಅಣಿಯಾಗುತ್ತಿರುವ ಒಕ್ಕಲಿಗ ಸಮುದಾಯದ ಮನವೊಲಿಕೆಗೆ ಮುಂದಾಗಿರುವ ಮುಖ್ಯಮಂತ್ರಿ, ಪ್ರತ್ಯೇಕ ನಿಗಮ ರಚನೆಯ ಘೋಷಣೆ ಮಾಡಿದ್ದಾರೆ. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳು ಮತ್ತು ಹಿಂದುಳಿದ ವರ್ಗಗಳ ಎಲ್ಲ ನಿಗಮಗಳಿಗೆ ಒಟ್ಟಾಗಿ ನೀಡಿರುವ ಅನುದಾನದಷ್ಟೇ ಮೊತ್ತವನ್ನೂ ಒಕ್ಕಲಿಗ ಅಭಿವೃದ್ಧಿ ನಿಗಮಕ್ಕೆ ಘೋಷಿಸಿದ್ದಾರೆ.

8ನೇ ಪುಟ ನೋಡಿ
ಬಜೆಟ್ ವಿಶೇಷ ಪುಟ 5A,5B,6,7,8,9

ಫ್ಲ್ಯಾಟ್ ಖರೀದಿಸುವವರಿಗೆ ಸಿಹಿ

ಅಪಾರ್ಟ್‌ಮೆಂಟ್ ಸಮುಚ್ಚಯಗಳಲ್ಲಿ ಕಡಿಮೆ ದರದ ಫ್ಲ್ಯಾಟ್ ಖರೀದಿ-ಸುವವರಿಗೆ ನೀಡುತ್ತಿರುವ ನೋಂದಣಿ ಶುಲ್ಕದ ರಿಯಾಯಿತಿ ಸೌಲಭ್ಯವನ್ನು ಮತ್ತಷ್ಟು ವಿಸ್ತರಿಸಲಾಗಿದೆ. ಈವರೆಗೂ ₹ 35 ಲಕ್ಷದವರೆಗಿನ ಅಪಾರ್ಟ್‌ಮೆಂಟ್‌ಗಳ ನೋಂದಣಿಗೆ ಶೇ 3ರಷ್ಟು ಶುಲ್ಕ ವಿಧಿಸಲಾಗುತ್ತಿತ್ತು. ಅದಕ್ಕಿಂತ ಹೆಚ್ಚಿನ ಬೆಲೆಯ ಸ್ವತ್ತಿಗೆ ಶೇ 5ರಷ್ಟು ಶುಲ್ಕ ವಿಧಿಸಲಾಗುತ್ತಿತ್ತು.
₹ 45 ಲಕ್ಷದವರೆಗಿನ ಅಪಾರ್ಟ್‌ಮೆಂಟ್‌ಗಳ ನೋಂದಣಿಗೂ ಶೇ 3ರಷ್ಟು ಶುಲ್ಕ ವಿಧಿಸಲಾಗುವುದು ಎಂದು ಬಜೆಟ್‌ನಲ್ಲಿ ಘೋಷಿಸಲಾಗಿದೆ.

ರಾಜ್ಯದ ಬಜೆಟ್‌ಗೆ ಇದ್ದ ಮಹತ್ವ ಮತ್ತು ಪಾವಿತ್ರ್ಯವ-ನ್ನೇ ಯಡಿಯೂರಪ್ಪ ಹಾಳು ಮಾಡಿದ್ದಾರೆ. ರಾಜ್ಯ-ದಲ್ಲಿರುವ 33 ಇಲಾಖೆಗಳನ್ನು ಆರು ವಲಯ-ಗಳನ್ನಾಗಿ ಮಾಡಿ ಗೊಂದಲ ಸೃಷ್ಟಿಸಲಾಗಿದೆ. ಬಜೆಟ್‌ನಲ್ಲಿ ಇಲಾಖೆಗಳ ಕಾರ್ಯಕ್ರಮಗಳೇನು, ಕಳೆದ ವರ್ಷದ ಸಾಧನೆಗಳೇನು, ಹೊಸ ಯೋಜನೆಗಳೇನು ಎಂಬ ವಿವರಗಳೇ ಇಲ್ಲ

ಸಿದ್ದರಾಮಯ್ಯ, ವಿಧಾನಸಭೆ ವಿರೋಧ ಪಕ್ಷದ ನಾಯಕ

ಅತಂತ್ರ ಸ್ಥಿತಿಯಲ್ಲಿರುವ ರೈತರಿಗೆ ಧೈರ್ಯ ತುಂಬುವ ಕೆಲಸ ಆಗಿಲ್ಲ. ಅತಿವೃಷ್ಟಿ ಮತ್ತು ಬೆಳೆ ಹಾನಿಯಿಂದ ನಷ್ಟಕ್ಕೀಡಾದ ರೈತರಿಗೆ ಯಾವುದೇ ಪರಿಹಾರ ಘೋಷಿಸಿಲ್ಲ. ಆರೋಗ್ಯ ಕ್ಷೇತ್ರಕ್ಕೆ ಕನಿಷ್ಠ ₹10 ಸಾವಿರ ಕೋಟಿ ಅನುದಾನ ನೀಡಬೇಕಿತ್ತು. ಆತ್ಮನಿರ್ಭರ ಯೋಜನೆಯಡಿ ಯುವಕರಿಗೆ ಉದ್ಯೋಗ ಸೃಷ್ಟಿಸುವ ಪ್ರಸ್ತಾಪವೇ ಇಲ್ಲ. ತಮಗೆ ಬೇಕಾದವರಿಗೆ ಧಾರಾಳವಾಗಿ ಹಣ ಕೊಟ್ಟಿದ್ದಾರೆ

ಬಂಡೆಪ್ಪ ಕಾಶೆಂಪೂರ್, ಉಪನಾಯಕ, ಜೆಡಿಎಸ್

ಯಾರಿಗೆ ಎಷ್ಟು ಅನುದಾನ

- ಒಕ್ಕಲಿಗ ಅಭಿವೃದ್ಧಿ ನಿಗಮಕ್ಕೆ ₹ **500 ಕೋಟಿ**
- ಎಸ್‌ಸಿ, ಎಸ್‌ಟಿ ಮತ್ತು ಒಬಿಸಿಯ ಎಲ್ಲ ನಿಗಮಗಳಿಗೆ ಒಟ್ಟು ₹ **500 ಕೋಟಿ**
- ಬ್ರಾಹ್ಮಣ ಅಭಿವೃದ್ಧಿ ಮಂಡಳಿಗೆ ₹ **50 ಕೋಟಿ**
- ಎಸ್‌ಸಿಪಿ ಮತ್ತು ಟಿಎಸ್‌ಪಿ ಅನುದಾನ ಕಡಿತ
- ಆದಿಚುಂಚನಗಿರಿ ಮಠದಲ್ಲಿ ನಾಥ ಪಾರಂಪರಿಕ ಕೇಂದ್ರ ಸ್ಥಾಪನೆಗೆ ₹ **10 ಕೋಟಿ**
- ಅಯೋಧ್ಯೆಯ ಯಾತ್ರಿನಿವಾಸಕ್ಕೆ ₹ **10 ಕೋಟಿ**
- ಡಾ. ಎಸ್.ಎಲ್. ಭೈರಪ್ಪ ಅವರ 'ಪರ್ವ' ರಂಗ ಪ್ರಯೋಗಕ್ಕೆ ₹ **1 ಕೋಟಿ**
- ಜೈನ ಪುಣ್ಯ ಕ್ಷೇತ್ರಗಳ ಅಭಿವೃದ್ಧಿಗೆ ₹ **50 ಕೋಟಿ**
- ಸಿದ್ಧಗಂಗಾ ಮಠದಲ್ಲಿ ಶಿವಕುಮಾರ ಸ್ವಾಮೀಜಿ ಸ್ಮೃತಿ ವನಕ್ಕೆ ₹**2 ಕೋಟಿ**
- ಪೇಜಾವರ ಮಠದಲ್ಲಿ ವಿಶ್ವೇಶತೀರ್ಥ ಸ್ವಾಮೀಜಿ ಸ್ಮೃತಿ ವನಕ್ಕೆ ₹ **2 ಕೋಟಿ**

ಇಲಾಖಾವಾರು ಅನುದಾನ (₹ ಕೋಟಿಗಳಲ್ಲಿ)



ಅತ್ಯಾಚಾರ ಪ್ರಕರಣದ ಹೇಳಿಕೆಯ 'ತಪ್ಪು ವರದಿ': 'ಸುಪ್ರೀಂ'

ನವದೆಹಲಿ: ಮಹಿಳೆಯರ ಬಗ್ಗೆ ತನಗೆ ಅತ್ಯಂತ ಹೆಚ್ಚಿನ ಗೌರವವಿದೆ ಎಂದು ಸೋಮವಾರ ಹೇಳಿರುವ ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಎಸ್.ಎ.ಬೊಬಡೆ ಅವರನ್ನು ಒಳಗೊಂಡ ಪೀಠ, ಅತ್ಯಾಚಾರ ಪ್ರಕರಣವೊಂದಕ್ಕೆ ಸಂಬಂಧಿಸಿದಂತೆ ಕಳೆದ ವಾರದ ವಿಚಾರಣೆಯೊಂದನ್ನು 'ಸಂಪೂರ್ಣವಾಗಿ ತಪ್ಪಾಗಿ ವರದಿ ಮಾಡಲಾಗಿದೆ' ಎಂದು ಹೇಳಿದೆ. 11

ಜೆಇಇ (ಮೇನ್ಸ್): ಶೇ 100 ಅಂಕ ಗಳಿಸಿದ ಆರು ವಿದ್ಯಾರ್ಥಿಗಳು

ನವದೆಹಲಿ (ಪಿಟಿಐ): ರಾಷ್ಟ್ರೀಯ ಪರೀಕ್ಷಾ ಸಂಸ್ಥೆ (ಎನ್‌ಟಿಎ) ನಡೆಸಿದ್ದ ಜೆಇಇ-ಮೇನ್ಸ್‌ನಲ್ಲಿ ದೆಹಲಿಯ ಇಬ್ಬರು ಸೇರಿದಂತೆ ಒಟ್ಟು 6 ವಿದ್ಯಾರ್ಥಿಗಳು ನೂರಕ್ಕೆ ನೂರು ಅಂಕ ಗಳಿಸಿ ಸಾಧನೆ ಮಾಡಿದ್ದಾರೆ.

ಎಂಜಿನಿಯರಿಂಗ್ ಕೋರ್ಸ್‌ಗಳ ಪ್ರವೇಶಕ್ಕಾಗಿ ಜೆಇಇ ಪರೀಕ್ಷೆಗಳು ಫೆ. 23ರಿಂದ 26ರ ವರೆಗೆ ನಡೆದಿದ್ದವು. 331 ನಗರಗಳ 800ಕ್ಕೂ ಅಧಿಕ ಕೇಂದ್ರಗಳಲ್ಲಿ ನಡೆದಿದ್ದ ಪರೀಕ್ಷೆಗೆ 6.52 ಲಕ್ಷ ವಿದ್ಯಾರ್ಥಿಗಳು ಹಾಜರಾಗಿದ್ದರು.

ಮೈಕಾಂತಿಗೆ ಬಿಸಿಲಿನಿಂದ ಸುರಕ್ಷೆ ನೀಡಲು ಈಗ ದುಪಟ್ಟಾ ಮಾತ್ರವಲ್ಲ ಗ್ಲೋ ಆ್ಯಂಡ್ ಲವ್ಲೀ ಕೂಡ.

ಇದರಲ್ಲಿದೆ ಅಡ್ವಾನ್ಸ್‌ಡ್ ಮಲ್ಟಿ ವಿಟಮಿನ್, ಇದು ಬಿಸಿಲಿನಿಂದ ಕಪ್ಪಾಗುವುದನ್ನು ಕಡಿಮೆ ಮಾಡುತ್ತದೆ, ಮುಖದ ಕಲೆಗಳನ್ನೂ ಕಡಿಮೆ ಮಾಡುತ್ತದೆ ಮತ್ತು ಇಡೀ ಮುಖಕ್ಕೆ ನೀಡುತ್ತದೆ HDಗ್ಲೋ .

Glow & Lovely | ADVANCED MULTI VITAMIN™

₹20/-*

*ಎಮ್‌ಆರ್‌ಪಿ ₹20 (ಎಲ್ಲಾ ತೆರಿಗೆ ಸಹಿತ) 15 ಗ್ರಾ. ಪ್ಯಾಕ್‌ಗಾಗಿ

ಎಸ್ಸೆಸ್ಸೆಲ್ಸಿ- ಪಿಯುಸಿ
ಪರೀಕ್ಷೆ ದಿಕ್ಸೂಚಿ

ಪ್ರಿಯ ವಿದ್ಯಾರ್ಥಿಗಳೇ,
ಕೋವಿಡ್‌ನಿಂದಾಗಿ ಈ ವರ್ಷ ತರಗತಿಗಳಿಗೆ ಖುದ್ದಾಗಿ ಹಾಜರಾಗಲು ನಿಮಗೆ ಸಾಧ್ಯವಾಗದಿರಬಹುದು. ಎಸ್ಸೆಸ್ಸೆಲ್ಸಿ-ಪಿಯುಸಿ ಪರೀಕ್ಷೆ ಬರೆಯುವ ನಿಮಗಾಗಿ ಅನುಭವಿ ಶಿಕ್ಷಕರು ನೀಡಿರುವ ಮಾರ್ಗದರ್ಶನ ದಿಕ್ಸೂಚಿಯಲ್ಲಿ..
ಪುಟ–5

ಇಂದಿನ ಪಾಡ್‌ಕಾಸ್ಟ್ ವಿಶೇಷ
ಸುದ್ದಿ ಸ್ವಾರಸ್ಯ
ಪ್ರತೀ ದಿನ: ದಿನದ ಸೂಕ್ತಿ, ವಚನವಾಣಿ ಸಂಪಾದಕೀಯ, ಪ್ರಚಲಿತ
Prajavani.net/podcast

ಹುಲಿಗೆ ಬಾಲಕ ಬಲಿ: ಸೆರೆ ಸಿಗದಿದ್ದರೆ ಗುಂಡಿಕ್ಕಲು ಸೂಚನೆ 4

ಚಿನಕುರಳಿ
ಪ್ರಕಾಶ್ ಶೆಟ್ಟಿ

"ಈ ಪಾಲಿಸಿಯಲ್ಲಿನ ಇನ್ವೆಸ್ಟ್‌ಮೆಂಟ್ ಪೋರ್ಟ್‌ಫೋಲಿಯೊದಲ್ಲಿನ ಹೂಡಿಕೆಯ ರಿಸ್ಕ್ ಪಾಲಿಸಿದಾರರದ್ದಾಗಿರುತ್ತದೆ"

Sabse Pehle Life Insurance

ಒಮ್ಮೆ ಉಳಿಸಿರಿ... ಮತ್ತು ಜೀವನದ ಗುರಿಗಳನ್ನು ಸಾಧಿಸಿರಿ

Plan No: 849 UIN:512L317V01

ಯುನಿಟ್ ಲಿಂಕ್ಡ್, ನಾನ್–ಪಾರ್ಟಿಸಿಪೇಟಿಂಗ್, ಸಿಂಗಲ್ ಪ್ರೀಮಿಯಮ್, ಇಂಡಿವಿಜುಯಲ್ ಲೈಫ್ ಇನ್ಶೂರೆನ್ಸ್ ಪ್ಲಾನ್

ಆಯ್ಕೆ ಸ್ವಾತಂತ್ರ್ಯ:
- ಉಳಿತಾಯ ಮೊತ್ತ: ಚಿಕ್ಕದಾದ ಲಮ್‌ಸಮ್ ರೂ. 1 ಲಕ್ಷ ಅಥವಾ ಇನ್ನಾವುದೇ ಜೀವನದ ಬಹುದೊಡ್ಡ ಉದ್ದೇಶಕ್ಕಾಗಿ ಭಾರಿ ಮೊತ್ತವನ್ನು ನೀವು ಹೂಡಿಕೆ ಮಾಡಬಹುದು.
- 4 ಫಂಡ್‌ನ ಆಯ್ಕೆಗಳು: ಬಾಂಡ್, ಸೆಕ್ಯೂರ್ಡ್, ಬ್ಯಾಲನ್ಸ್ಡ್ ಮತ್ತು ಗ್ರೋತ್ ಈ 4 ಫಂಡ್‌ಗಳಲ್ಲಿ ಯಾವುದನ್ನಾದರೂ ನೀವು ಆಯ್ಕೆ ಮಾಡಿಕೊಳ್ಳಬಹುದು.
- ಉಚಿತ ಸ್ವಿಚ್ಚಿಂಗ್: ಲಾಭಾಂಶವನ್ನು ಹೆಚ್ಚುಗೊಳಿಸುವ ಉದ್ದೇಶದಿಂದ ವರ್ಷದಲ್ಲಿ ನಾಲ್ಕು ಬಾರಿ ನೀವು ಉಚಿತವಾಗಿ ಫಂಡ್ ಆಯ್ಕೆಗಳ ಮಧ್ಯೆ ನಿಮ್ಮ ಹಣವನ್ನು ಬದಲಾಯಿಸಬಹುದು.
- ನಿಮ್ಮ ಅವಶ್ಯಕತೆಯಿದ್ದಾಗ ಹಿಂಪಡೆಯಿರಿ: 5ನೇ ವರ್ಷದ ಬಳಿಕ* ನೀವು ಭಾಗಶಃ ಮೊತ್ತವನ್ನು ಹಿಂಪಡೆಯಬಹುದು.
- ಲೈಫ್ ಕವರ್ ಆಯ್ಕೆಗಳು: ಪಾವತಿಸಿದ ಪ್ರಿಮಿಯಮ್‌ನ 1.25ರಷ್ಟು ಅಥವಾ 10ರಷ್ಟು ಲೈಫ್ ಕವರ್ ಆಯ್ಕೆ ಮಾಡಿಕೊಳ್ಳಬಹುದು.

ಪಾಲಿಸಿಯ ಲಾಭಗಳು:
- ಗ್ಯಾರಂಟೀಡ್ ಹೆಚ್ಚುವರಿಗಳು: ಯುನಿಟ್ ಫಂಡ್ ವ್ಯಾಲ್ಯೂ* ಜೊತೆಗೆ ಗ್ಯಾರಂಟೀಡ್ ಹೆಚ್ಚುವರಿಗಳನ್ನು ಕೂಡ ಆನಂದಿಸಿರಿ.
- ಪಾಲಿಸಿ ಮೆಚ್ಯೂರಿಟಿ: ಯುನಿಟ್ ಫಂಡ್ ವ್ಯಾಲ್ಯೂ

ನಿಮ್ಮ ಅರ್ಹತೆಯನ್ನು ಪರೀಕ್ಷಿಸಿ:
- ಪ್ರವೇಶಿಕ ವಯಸ್ಸು: ಕನಿಷ್ಠ ಪ್ರಾಯ: 90 ದಿನಗಳು; ಗರಿಷ್ಠ ಪ್ರಾಯ: 35 ವರ್ಷ / 70 ವರ್ಷ (ಲೈಫ್ ಕವರ್ ಆಯ್ಕೆಯ ಮೇರೆಗೆ)
- ಮೆಚ್ಯೂರಿಟಿ ವಯಸ್ಸು: ಕನಿಷ್ಠ ಪ್ರಾಯ: 18 ವರ್ಷ; ಗರಿಷ್ಠ ಪ್ರಾಯ: 50 ವರ್ಷ/85 ವರ್ಷ (ಲೈಫ್ ಕವರ್ ಆಯ್ಕೆ ಮೇರೆಗೆ
- ಪಾಲಿಸಿ ಅವಧಿ: 10–25 ವರ್ಷ

* ಷರತ್ತುಗಳು ಅನ್ವಯ. ವಿವರಗಳಿಗಾಗಿ ನಿಮ್ಮ ಏಜೆಂಟ್/ಸಮೀಪದ ಎಲ್ಐಸಿ ಶಾಖೆಯನ್ನು ಸಂಪರ್ಕಿಸಿ

ನಿಮ್ಮ ನಗರ ಹೆಸರು ಟೈಪ್ ಮಾಡಿ 56767474 ಸಂಖ್ಯೆಗೆ ಎಸ್‌ಎಂಎಸ್ ಮಾಡಿ
Call Centre Services (022) 6827 6827 | Download LIC Mobile App "MyLIC"
or visit www.licindia.in Follow us : LIC India Forever

ಯುನಿಟ್ ಲಿಂಕ್ಡ್ ಇನ್ಶೂರೆನ್ಸ್ ಉತ್ಪನ್ನಗಳು ಒಪ್ಪಂದ ಮೊದಲ ಐದು ವರ್ಷಗಳ ಅವಧಿಯಲ್ಲಿ ಯಾವುದೇ ಲಿಕ್ವಿಡಿಟಿ ಆಫರ್ ನೀಡುವುದಿಲ್ಲ. ಐದನೇ ವರ್ಷ ಪೂರ್ಣಗೊಳ್ಳುವವರೆಗೂ ಪಾಲಿಸಿದಾರರು ಪಾಲಿಸಿಯನ್ನು ಸರೆಂಡರ್ ಮಾಡಲು/ಯುನಿಟ್ ಲಿಂಕ್ಡ್ ಇನ್ಶೂರೆನ್ಸ್ ಉತ್ಪನ್ನಗಳಲ್ಲಿ ಹೂಡಿದ ಹಣವನ್ನು ಸಂಪೂರ್ಣವಾಗಿ ಅಥವಾ ಭಾಗಶಃವಾಗಿ ಹಿಂಪಡೆಯಲು ಸಾಧ್ಯವಿರುವುದಿಲ್ಲ.

ಮಾರಾಟದ ಸಮಾಪ್ತಿಗೆ ಮುನ್ನ ಅಪಾಯದ ಅಂಶ, ಷರತ್ತು ಮತ್ತು ನಿಯಮಗಳ ವಿವರಗಳನ್ನು ದಯವಿಟ್ಟು ಮಾರಾಟದ ಕೈಪಿಡಿ ಓದಿ ತಿಳಿದುಕೊಳ್ಳಿರಿ.

ನಯವಂಚಕ ದೂರವಾಣಿ ಕರೆಗಳು ಮತ್ತು ಹುಸಿ/ಮೋಸದ ಆಫರ್‌ಗಳಿಂದ ಜಾಗೃತರಾಗಿರಿ. ಐಆರ್‌ಡಿಎಐ ಯಾವುದೇ ಬಗೆಯ ವಿಮೆ ಅಥವಾ ಆರ್ಥಿಕ ಪ್ರಾಡಕ್ಟ್‌ಗಳ ಮಾರಾಟ, ಬೋನಸ್ ಘೋಷಣೆ ಅಥವಾ ಪ್ರೀಮಿಯಂ ಮೊತ್ತ ಹೂಡುವಿಕೆ ಮುಂತಾದ ಚಟುವಟಿಕೆಗಳಲ್ಲಿ ಭಾಗವಹಿಸುವುದಿಲ್ಲ. ಸಾರ್ವಜನಿಕರು ಇಂತಹ ಫೋನ್ ಕರೆಗಳು ಬಂದಲ್ಲಿ ಅವರು ಪೋಲೀಸರ ಬಳಿ ದೂರನ್ನು ದಾಖಲಿಸಬೇಕೆಂದು ಕೋರಲಾಗಿದೆ.

IRDAI Regn No.: 512

LIC
ಭಾರತೀಯ ಜೀವ ವಿಮಾ ನಿಗಮ
भारतीय जीवन बीमा निगम
LIFE INSURANCE CORPORATION OF INDIA
ಪ್ರತಿ ಕ್ಷಣವೂ ನಿಮ್ಮೊಂದಿಗೆ

LIC/AR/19-20/39/KAN

ನಗರದಲ್ಲಿ ಇಂದು

ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ಶಾಲಾ ಮತ್ತು ಕಾಲೇಜು ವಿದ್ಯಾರ್ಥಿನಿಯರಿಗೆ ಸ್ವರಕ್ಷಣಾ ತರಬೇತಿ ಕಾರ್ಯಕ್ರಮ: ಅತಿಥಿ–ಗೃಹ ಸಚಿವ ಬಸವರಾಜ ಬೊಮ್ಮಾಯಿ, ಅಧ್ಯಕ್ಷತೆ–ಡಿಜಿ–ಐಜಿಪಿ ಪ್ರವೀಣ್ ಸೂದ್, ಸ್ಥಳ–ಸುಲ್ತಾನ್ ಹಾಕಿ ಮೈದಾನ, ಬೆಳಿಗ್ಗೆ 9.30



ಬೊಮ್ಮಾಯಿ

ಮಹಾಶಿವರಾತ್ರಿ ಅಂಗವಾಗಿ 10,108 ಪಂಚಮುಖಿ ರುದ್ರಾಕ್ಷಿಗಳಿಂದ ತಯಾರಿಸಿದ ರುದ್ರಾಕ್ಷಿ ಹಾರದ ಪ್ರದರ್ಶನ: ಆಯೋಜನೆ, ಸ್ಥಳ–ಆರ್.ವಿ.ಭದ್ರಯ್ಯ ಸ್ಪೋರ್ಟ್ಸ್, ಈಸ್ಟ್‌ವೆಸ್ಟ್ ಕಾಲೇಜು ಹತ್ತಿರ, ಬಿಇಎಲ್ ಬಡಾವಣೆ, ಮಾಗಡಿ ರಸ್ತೆ,

ಮಹಾಶಿವರಾತ್ರಿ ಪ್ರಯುಕ್ತ ಪವಿತ್ರ ಗಂಗಾಜಲ ಪೂಜೆ ಮತ್ತು ವಿತರಣೆ: ಅತಿಥಿಗಳು–ಆನಂದಗಿರಿ, ಧಾರ್ಮಿಕ ದತ್ತಿ ಇಲಾಖೆಯ ಆಯುಕ್ತ ಕೆ.ಪಿ. ದಯಾನಂದ, ಮಾಲೂರು ಕೃಷ್ಣಪ್ಪ ಶೆಟ್ಟಿ, ಸ್ಥಳ–ಕಾಶಿವಿಶ್ವನಾಥ ದೇವಸ್ಥಾನ, ಬಸವೇಶ ವೃತ್ತ, ಬೆಳಿಗ್ಗೆ 10.30

ಸ್ಪೋಕ್–ಕುತೂಹಲಿ ವಿಜ್ಞಾನ ಬದಲಾವಣೆ ಹಾಗೂ ವಿಜ್ಞಾನ ಪತ್ರಿಕೋದ್ಯಮ ಕಾರ್ಯಾಗಾರ: ಉದ್ಘಾಟನೆ–ವಿಜ್ಞಾನ ಪ್ರಸಾರ ನಿರ್ದೇಶಕ ನಕುಲ್ ಪರಾಶರ್, ಅಧ್ಯಕ್ಷತೆ–ಎಸ್.ಅಯ್ಯಪ್ಪನ್, ಅತಿಥಿಗಳು–ವಿಜ್ಞಾನಿ ಟಿ.ವಿ.ವೆಂಕಟೇಶ್ವರ್, ಸ್ಥಳ–ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ, ಪ್ರೊ. ಯು.ಆರ್.ರಾವ್ ವಿಜ್ಞಾನ ಭವನ, ತೋಟಗಾರಿಕೆ ವಿಜ್ಞಾನಗಳ ಕಾಲೇಜು ಆವರಣ, ಮೇಜರ್ ಸಂದೀಪ್ ಉನ್ನಿಕೃಷ್ಣನ್ ರಸ್ತೆ, ಜಿಕೆವಿಕೆ ಹತ್ತಿರ, ಬೆಳಿಗ್ಗೆ 10.30

ಡ್ರಗ್ಸ್: ನಿರ್ಮಾಪಕನ ಮನೆ ಮೇಲೆ ಪೊಲೀಸರ ದಾಳಿ

ಅಪರಾಧ ಸುದ್ದಿ

ಬೆಂಗಳೂರು: ಡ್ರಗ್ಸ್ ಪ್ರಕರಣ ಸಂಬಂಧ ಬಿಗ್‌ಬಾಸ್ ರಿಯಾಲಿಟಿ ಶೋ ಸ್ಪರ್ಧಿ ಮಸ್ತಾನ್ ಚಂದ್ರ ಮನೆ ಮೇಲೆ ಇತ್ತೀಚೆಗಷ್ಟೇ ದಾಳಿ ಮಾಡಿದ್ದ ಪೂರ್ವ ವಿಭಾಗದ ಪೊಲೀಸರು, ಸಿನಿಮಾ ನಿರ್ಮಾಪಕ ಶಂಕರಗೌಡ ಮನೆ ಮೇಲೂ ಸೋಮವಾರ ಸಂಜೆ ದಾಳಿ ಮಾಡಿದರು.

ಪ್ರಕರಣ ಸಂಬಂಧ ನೈಜೀರಿಯಾ ಪ್ರಜೆಗಳು ಸೇರಿ ಹಲವರನ್ನು ಬಂಧಿಸಿದ್ದ ಪೊಲೀಸರು, ಅವರಿಂದ ₹ 4 ಕೋಟಿ ಮೌಲ್ಯದ ಡ್ರಗ್ಸ್ ಜಪ್ತಿ ಮಾಡಿದ್ದರು. ಆರೋಪಿಗಳು ನೀಡಿದ್ದ ಮಾಹಿತಿ ಆಧರಿಸಿ ಮಸ್ತಾನ್ ಮನೆ ಮೇಲೂ ದಾಳಿ ಮಾಡಿದರು. ಪ್ರಕರಣದ ಪ್ರಾಥಮಿಕ ತನಿಖೆಯಲ್ಲಿ ಶಂಕರಗೌಡ ಹೆಸರು ಸಹ ಕೇಳಿಬಂದಿದೆ.

'ಗೋವಿಂದಪುರ ಠಾಣೆಯಲ್ಲಿ ದಾಖಲಾಗಿದ್ದ ಪ್ರಕರಣದಲ್ಲಿ ನ್ಯಾಯಾಲಯದ ವಾರಂಟ್ ಪಡೆದು ನಿರ್ಮಾಪಕ ಶಂಕರಗೌಡ ಮನೆಯಲ್ಲಿ ಶೋಧ ನಡೆಸಲಾಯಿತು' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'ನೈಜೀರಿಯಾ ಪ್ರಜೆಗಳ ಜೊತೆ ಒಡನಾಟ ಹೊಂದಿದ್ದರು ಎನ್ನಲಾದ ಶಂಕರಗೌಡ, ಡ್ರಗ್ಸ್ ಖರೀದಿ ಮಾಡುತ್ತಿದ್ದರು ಎಂಬ ಮಾಹಿತಿ ಇದೆ' ಎಂದೂ ತಿಳಿಸಿದರು.

ಕೋಲ್ಕತ್ತದಲ್ಲಿ ಅಗ್ನಿ ಅವಘಡ: ಏಳು ಮಂದಿ ಸಾವು

ಕೋಲ್ಕತ್ತ: ನಗರದ ಬಹುಮಹಡಿ ಕಟ್ಟಡವೊಂದರಲ್ಲಿ ಸಂಭವಿಸಿದ ಅಗ್ನಿ ಅವಘಡದಲ್ಲಿ ಏಳು ಮಂದಿ ಸಾವಿಗೀಡಾಗಿದ್ದಾರೆ.

ನಾಲ್ವರು ಅಗ್ನಿಶಾಮಕ ಮತ್ತು ತುರ್ತು ಸೇವೆ ಇಲಾಖೆಯ ಸಿಬ್ಬಂದಿ, ಒಬ್ಬರು ಸಹಾಯಕ ಸಬ್ ಇನ್‌ಸ್ಪೆಕ್ಟರ್ ಹಾಗೂ ರೈಲ್ವೆ ರಕ್ಷಣಾ ಪಡೆಯ ಒಬ್ಬ ಸಿಬ್ಬಂದಿ ಸಾವಿಗೀಡಾಗಿದ್ದಾರೆ. ಇನ್ನೊಬ್ಬರ ಗುರುತು ಪತ್ತೆಯಾಗಿಲ್ಲ.

ಈ ಕಟ್ಟಡದಲ್ಲಿ ರೈಲ್ವೆ ಇಲಾಖೆಯ ಪೂರ್ವ ಮತ್ತು ಆಗ್ನೇಯ ವಲಯದ ಕಚೇರಿಗಳಿವೆ. ಸಂಜೆ 6ಗಂಟೆಗೆ 13ನೇ ಮಹಡಿಯಲ್ಲಿ ಬೆಂಕಿ ಕಾಣಿಸಿಕೊಂಡಿತು. ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸಾವಿಗೀಡಾದ ಕುಟುಂಬದ ಸದಸ್ಯರಿಗೆ ₹10 ಲಕ್ಷ ಪರಿಹಾರ ಮತ್ತು ಸಂಬಂಧಿಕರೊಬ್ಬರಿಗೆ ಸರ್ಕಾರಿ ಉದ್ಯೋಗ ನೀಡಲಾಗುವುದು ಎಂದು ಮುಖ್ಯ ಮಂತ್ರಿ ಮಮತಾ ಬ್ಯಾನರ್ಜಿ ತಿಳಿಸಿದ್ದಾರೆ.

ವರದಿ ಜಾರಿಗೆ ಶಕ್ತಿ ಪ್ರದರ್ಶನ

ಸದಾಶಿವ ಆಯೋಗ: ನಗರದಲ್ಲಿ ನಡೆದ ಮಾದಿಗ ಚೈತನ್ಯ ರಥಯಾತ್ರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಒಳ ಮೀಸಲಾತಿ ಕುರಿತು ನ್ಯಾಯಮೂರ್ತಿ ಎ.ಜೆ. ಸದಾಶಿವ ಆಯೋಗ ನೀಡಿರುವ ವರದಿಯನ್ನು ತ್ವರಿತವಾಗಿ ಅನುಷ್ಠಾನಗೊಳಿಸಬೇಕು' ಎಂದು ಒತ್ತಾಯಿಸಿ ಸಾವಿರಾರು ಮಂದಿ ನಗರದಲ್ಲಿ ಸೋಮವಾರ ಶಕ್ತಿ ಪ್ರದರ್ಶನ ಮಾಡಿದರು.

ನ್ಯಾಯಮೂರ್ತಿ ಸದಾಶಿವ ವರದಿ ಜಾರಿ ಹೋರಾಟ ಸಮಿತಿ ವತಿಯಿಂದ ಹಮ್ಮಿಕೊಂಡಿದ್ದ 'ಮಾದಿಗ ಚೈತನ್ಯ ರಥಯಾತ್ರೆ' ಪ್ರಯುಕ್ತ ನಗರದಲ್ಲಿ ಬೃಹತ್ ಪ್ರತಿಭಟನಾ ಮೆರವಣಿಗೆ ನಡೆಸಲಾಯಿತು. ಮೆಜೆಸ್ಟಿಕ್‌ನ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲು ನಿಲ್ದಾಣದಿಂದ ಸ್ವಾತಂತ್ರ್ಯ ಉದ್ಯಾನದವರೆಗೆ ಸಾಗಿದ ಮೆರವಣಿಗೆಯಲ್ಲಿ ಘೋಷಣಾ ಫಲಕಗಳನ್ನು ಪ್ರದರ್ಶಿಸಲಾಯಿತು.

'ರಾಜ್ಯದ ಹಲವು ಜಿಲ್ಲೆಗಳ ಸಮಾಜದ ಜನರು ವಾಹನಗಳ ಮೂಲಕ ನಗರಕ್ಕೆ ಬಂದಿದ್ದರು. ಅವರೆಲ್ಲರೂ ಮೆರವಣಿಗೆಯಲ್ಲಿ ಪಾಲ್ಗೊಂಡು, ವರದಿ ಜಾರಿಗೆ ಆಗ್ರಹಿಸಿದರು. ಸ್ವಾತಂತ್ರ್ಯ ಉದ್ಯಾನದಲ್ಲಿ ನಿರ್ಮಿಸಿದ್ದ ವೇದಿಕೆಯಲ್ಲಿ ಬಹಿರಂಗ ಸಭೆ ಸಹ ನಡೆಸಲಾಯಿತು.

'ಎಲ್ಲ ಜಾತಿ, ಜನಾಂಗ ಹಾಗೂ ಧರ್ಮದವರಿಗೆ ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ನ್ಯಾಯ ಮತ್ತು ಅವಕಾಶಗಳಲ್ಲಿ ಸಮಾನತೆ ಸಿಗಬೇಕೆಂದು ಅಂಬೇಡ್ಕರ್ ಅವರು ಸಂವಿಧಾನದ ಮುನ್ನುಡಿಯಲ್ಲಿ ಹೇಳಿದ್ದಾರೆ. ಆದರೆ, ರಾಜ್ಯದ ಮಾದಿಗ ಮತ್ತು ಸಂಬಂಧಿತ ಜಾತಿಗಳಿಗೆ ಶಿಕ್ಷಣ, ಸರ್ಕಾರಿ ಉದ್ಯೋಗ, ಭೂಮಿ ಹಾಗೂ ಸಂಪತ್ತಿನಲ್ಲಿ ಸಮಾನ ಪಾಲು ಸಿಗದೇ ಅನ್ಯಾಯ ಆಗುತ್ತಿದೆ' ಎಂದು ಪ್ರತಿಭಟನಕಾರರು ದೂರಿದರು.

'ಬಿಜೆಪಿ, ಕಾಂಗ್ರೆಸ್ ಹಾಗೂ ಜೆಡಿಎಸ್ ಪಕ್ಷಗಳು ಅಧಿಕಾರ ನಡೆಸಿದರೂ 40 ವರ್ಷಗಳಿಂದ ಮಾದಿಗ ಸಮಾಜಕ್ಕೆ ಒಳ ಮೀಸಲಾತಿ ನೀಡಿಲ್ಲ. ಇದರಿಂದಾಗಿ ಮಾದಿಗ ಸಮಾಜಕ್ಕೆ ಸಿಗಬೇಕಾದ ಸೌಲಭ್ಯಗಳು ಹಾಗೂ ಉದ್ಯೋಗಗಳು ಬೇರೆಯವರ ಪಾಲಾಗುತ್ತಿವೆ' ಎಂದೂ ಆರೋಪಿಸಿದರು.

'ತಮಿಳುನಾಡು ಸರ್ಕಾರ ಈಗಾಗಲೇ ಒಳ ಮೀಸಲಾತಿ ಜಾರಿಗೊಳಿಸಿರುವ ಉದಾಹರಣೆ ನಮ್ಮ ಕಣ್ಣ ಮುಂದಿದೆ. ಸಂವಿಧಾನದ ಆಶಯಗಳು ನೆರವೇರಬೇಕಾದರೆ, ಒಳ ಮೀಸಲಾತಿ ಕುರಿತ ಸದಾಶಿವ ಆಯೋಗದ ವರದಿ ಜಾರಿಗೊಳಿಸಬೇಕು' ಎಂದು ಅವರು ಒತ್ತಾಯಿಸಿದರು.

ಶ್ರೀರಾಮುಲು ಭೇಟಿ: ಹೋರಾಟ ಸ್ಥಳಕ್ಕೆ ಸಮಾಜ ಕಲ್ಯಾಣ ಸಚಿವ ಬಿ.ಶ್ರೀರಾಮುಲು ಭೇಟಿ ನೀಡಿ, ಪ್ರತಿಭಟನಾನಿರತರಿಂದ ಮನವಿ ಪತ್ರ ಸ್ವೀಕರಿಸಿದರು.

'ಆಯೋಗದ ವರದಿ ಜಾರಿಗೆ ಕ್ರಮ ಕೈಗೊಳ್ಳುವ ಬಗ್ಗೆ ಉಪ ಸಮಿತಿ ರಚಿಸಲಾಗಿದೆ. ಸದ್ಯಕ್ಕೆ ಪ್ರತಿಭಟನೆ ಕೈಬಿಡಿ' ಎಂದು 'ವರದಿ ತ್ವರಿತವಾಗಿ ಜಾರಿಗೆ ತರಬೇಕು. ಇಲ್ಲದಿದ್ದರೆ, ಪ್ರತಿಭಟನೆಯನ್ನು ಮತ್ತಷ್ಟು ತೀವ್ರಗೊಳಿಸಲಾಗುವುದು' ಎಂದು ಎಚ್ಚರಿಕೆ ನೀಡಿದ ಪ್ರತಿಭಟನಾಕಾರರು, ಪ್ರತಿಭಟನೆ ಕೈಬಿಟ್ಟರು.

ನ್ಯಾ. ಸದಾಶಿವ ವರದಿ ಜಾರಿ ಹೋರಾಟ ಸಮಿತಿಯಿಂದ ನಗರದಲ್ಲಿ ಸೋಮವಾರ ಹಮ್ಮಿಕೊಂಡಿದ್ದ ಪ್ರತಿಭಟನಾ ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದ ಜನ – ಪ್ರಜಾವಾಣಿ ಚಿತ್ರ

ಬೆಂಗಳೂರು-ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಪ್ರದೇಶ ಯೋಜನಾ ಪ್ರಾಧಿಕಾರ

ನಂ.5, 2ನೇ ಮಹಡಿ, ಲೂಪ್‌ಲೇನ್, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು–560 009.
ಫೋನ್: 080–22341230 / 35. E-mail: bmicapa@gmail.com

ಸಂಖ್ಯೆ: ಬಿಎಂಐಸಿಎಪಿಎ/ಭೂಉಬ–02/25/2020–21/1329 ದಿನಾಂಕ: 08–03–2021

ಸಾರ್ವಜನಿಕ ಪ್ರಕಟಣೆ

ರಾಮನಗರ ತಾಲ್ಲೂಕು, ಬಿಡದಿ ಹೋಬಳಿ, ತಾಳಗುಪ್ಪೆ ಗ್ರಾಮದ ಸರ್ವೆ ಸಂಖ್ಯೆ: 126/1ರ 01 ಎ–18 ಗು, 126/3ರ 0 ಎ–20 ಗು, 126/4ರ 01 ಎ–17 ಗು, 126/5ರ 0 ಎ–14 ಗು, 128/2ರ 04 ಎ–22 ಗು, 131/1 ರ 01 ಎ–18 ಗು ಪೈಕಿ 01 ಎಕರೆ ಮತ್ತು ಸರ್ವೆ ಸಂಖ್ಯೆ: 131/1ರ 0 ಎ–13 ಗು ರಲ್ಲಿನ ಒಟ್ಟು 09 ಎ–24 ಗು ವಿಸ್ತೀರ್ಣದ ಜಮೀನನ್ನು ವ್ಯವಸಾಯ ವಲಯದಿಂದ ವಸತಿ ಉದ್ದೇಶಕ್ಕೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14(ಎ)ರ ರನ್ವಯ ಭೂ ಉಪಯೋಗ ಬದಲಾವಣೆ ಮಾಡಲು ಮತ್ತು ಸರ್ವೆ ಸಂಖ್ಯೆ: 131/1ರ 01 ಎ–18 ಗು ಪೈಕಿ 0 ಎ–18 ಗು ವಿಸ್ತೀರ್ಣದ ಜಮೀನನ್ನು ಸಾರ್ವಜನಿಕ ಮತ್ತು ಅರೆ ಸಾರ್ವಜನಿಕ ವಲಯದಿಂದ ವಸತಿ ಉದ್ದೇಶಕ್ಕೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ (ತಿದ್ದುಪಡಿ) ಕಾಯ್ದೆ 2015ರ ಕಲಂ 69(3) ರನ್ವಯ ಭೂ ಉಪಯೋಗ ನಿಗಧಿಪಡಿಸಲು ಕೋರಿ ಶ್ರೀಮತಿ ಕೆ.ಆರ್. ದೇವಿ ಸುಲೋಚನಾ ॥ ಉ ॥ ಕೆ.ಆರ್. ಉಷಾ ರವರ ಪರವಾಗಿ ಜಿಪಿಎದಾರರಾದ ಶ್ರೀ ಪ್ರದೀಪ್ ಕೃಷ್ಣಪ್ಪ ಮತ್ತು ಶ್ರೀ ಜಿ.ಆರ್. ಭೈರೇಶ್. ಬಿನ್ ರಾಮಪ್ಪ ರವರು ಪ್ರಾಧಿಕಾರಕ್ಕೆ ಅರ್ಜಿ ಸಲ್ಲಿಸಿರುತ್ತಾರೆ. ಸರ್ಕಾರದಿಂದ ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶಕ್ಕೆ ಅನುಮೋದನೆಗೊಂಡಿರುವ ಮಹಾಯೋಜನೆ ನಕ್ಷೆಯಲ್ಲಿ ತಾಳಗುಪ್ಪೆ ಗ್ರಾಮದ ಸರ್ವೆ ಸಂಖ್ಯೆ: 126/1ರ 01 ಎ–18 ಗು, 126/3ರ 0 ಎ–20 ಗು, 126/4ರ 01 ಎ–17ಗು, 126/5ರ 0 ಎ–14 ಗು, 128/2 04 ಎ–22 ಗು, 131/1ರ 01 ಎ–18 ಗು ಪೈಕಿ 01 ಎಕರೆ ಮತ್ತು ಸರ್ವೆ ಸಂಖ್ಯೆ: 131/1 ರ 0 ಎ–13 ಗು ಒಟ್ಟು 09 ಎ–24 ಗು ವಿಸ್ತೀರ್ಣದ ಜಮೀನ್ನು ವ್ಯವಸಾಯ ವಲಯವೆಂದು ವರ್ಗೀಕರಿಸಿರುವ ಭೂ ಉಪಯೋಗದಲ್ಲಿ ಕಾಯ್ದಿರಿಸಲಾಗಿದ್ದು, ಸರ್ವೆ ಸಂಖ್ಯೆ: 131/1ರ 01 ಎ–18 ಗು ಪೈಕಿ 0 ಎ–18 ಗು ಪೈಕಿ 0 ಎ–18 ಗು ವಿಸ್ತೀರ್ಣದ ಜಮೀನನ್ನು ಸಾರ್ವಜನಿಕ ಮತ್ತು ಅರೆ ಸಾರ್ವಜನಿಕ ವಲಯವೆಂದು ವರ್ಗೀಕರಿಸಿರುವ ಭೂ ಉಪಯೋಗದಲ್ಲಿ ಕಾಯ್ದಿರಿಸಲಾಗಿರುತ್ತದೆ. ಹಾಗಾಗಿ, ಸದರಿ ಭೂ ಉಪಯೋಗ ಬದಲಾವಣೆ ಪ್ರಸ್ತಾವನೆಯು ಈ ಕೆಳಕಂಡ ಸಾರ್ವಜನಿಕ ಹಿತಾಸಕ್ತಿ ಹೊಂದಿರುವುದಾಗಿ ತಿಳಿಸಿರುತ್ತಾರೆ.

1. ಈ ಜಮೀನಿನಲ್ಲಿ ವಿನ್ಯಾಸ ಅಭಿವೃದ್ಧಿಪಡಿಸುವುದರಿಂದ ಬಡವರು, ಮಧ್ಯಮ ವರ್ಗದವರಿಗೆ ಯೋಗ್ಯ ಬೆಲೆಯಲ್ಲಿ ನಿವೇಶನಗಳು ಲಭ್ಯವಾಗುತ್ತವೆ.
2. ವಿನ್ಯಾಸ ಅಭಿವೃದ್ಧಿ ಕಾಮಗಾರಿಗಳು ನಡೆಯುವಾಗ ಸ್ಥಳೀಯ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ.
3. ಈ ವಿನ್ಯಾಸದ ಅಭಿವೃದ್ಧಿಯಿಂದ ಸುತ್ತ ಮುತ್ತಲಿನ ಪ್ರದೇಶ ಅಭಿವೃದ್ಧಿಗೆ ಸಹಕಾರಿಯಾಗುತ್ತದೆ.
4. ಯೋಜನಾ ಬದ್ಧವಾದ ವಿನ್ಯಾಸ ರಚನೆಯಿಂದ ಉತ್ತಮ ರಸ್ತೆಗಳು, ನಾಗರೀಕ ಸೌಲಭ್ಯದ ಜಾಗಗಳು, ಉದ್ಯಾನವನಗಳು ಸಾರ್ವಜನಿಕರ ಉಪಯೋಗಕ್ಕೆ ಲಭ್ಯವಾಗುತ್ತದೆ.

ಸದರಿ ಭೂ ಉಪಯೋಗ ಬದಲಾವಣೆ ಪ್ರಸ್ತಾವನೆಯ ಬಗ್ಗೆ ಸಾರ್ವಜನಿಕರಿಂದ ಯಾವುದೇ ಅಕ್ಷೇಪಣೆಗಳು ಇದ್ದಲ್ಲಿ ಅವುಗಳನ್ನು ಈ ಪ್ರಕಟಣೆಯ ದಿನಾಂಕದಿಂದ 16 ದಿವಸಗಳೊಳಗಾಗಿ ಸೂಕ್ತ ಕಾರಣಗಳೊಂದಿಗೆ ಲಿಖಿತವಾಗಿ ಸದಸ್ಯ–ಕಾರ್ಯದರ್ಶಿಗಳು, ಬಿ.ಎಂ.ಐ.ಸಿ.ಎ.ಪಿ.ಎ. ಬೆಂಗಳೂರು ಇವರಿಗೆ ಈ ಪ್ರಕಟಣೆಯಲ್ಲಿನ ಮೇಲ್ಕಂಡ ವಿಳಾಸಕ್ಕೆ ಸಲ್ಲಿಸಬೇಕೆಂದು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಸ್ವೀಕೃತವಾಗುವ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಸಹಿ/– ಸದಸ್ಯ–ಕಾರ್ಯದರ್ಶಿಗಳು,
ಬಿ.ಎಂ.ಐ.ಸಿ.ಎ.ಪಿ.ಎ., ಬೆಂಗಳೂರು.

DIPR/DDU/RO3051/AAPL/2020-21

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯತ್

ಜಿಲ್ಲಾಡಳಿತ ಭವನ, ಬೀರಸಂದ್ರ ಗ್ರಾಮ (ಚಪ್ಪರದ ಕಲ್ಲು), ದೇವನಹಳ್ಳಿ ತಾಲ್ಲೂಕು–562110
ದೂರವಾಣಿ ಸಂಖ್ಯೆ: 080–29781057, ಇ–ಮೇಲ್ ಐಡಿ: ceo_zp_brur@nic.in

ಸಂ:ಬೆಂಗ್ರಾಜಿಪಂ/ಉಖಾಯೋ/ಸಿಆರ್–07/2019–20 ದಿನಾಂಕ: 08.03.2021

ಪ್ರಕಟಣೆ

ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಪರಿಣಾಮಕಾರಿ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯಿತಿಯಲ್ಲಿ ಹೊರಗುತ್ತಿಗೆ ಆಧಾರದ ಮೇರೆಗೆ ತಾಲ್ಲೂಕು ಪಂಚಾಯಿತಿ ಮಟ್ಟದಲ್ಲಿ **ತಾಲ್ಲೂಕು ಐ.ಇ.ಸಿ ಸಂಯೋಜಕರು–04, ತಾಂತ್ರಿಕ ಸಂಯೋಜಕರು–03, ತಾಂತ್ರಿಕ ಸಹಾಯಕರು–02 (ಕೃಷಿ–01 & ತೋಟಗಾರಿಕೆ–01), ಒಟ್ಟು–10** ಹುದ್ದೆಗೆ ಹೊರಗುತ್ತಿಗೆ ಆಧಾರದ ಮೇಲೆ ಪಡೆಯಲು ಅರ್ಜಿಯನ್ನು ಆಹ್ವಾನಿಸಲಾಗಿದೆ. ಅರ್ಜಿಯನ್ನು **ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯತ್, ಜಿಲ್ಲಾಡಳಿತ ಭವನ, ಬೀರಸಂದ್ರ (ಚಪ್ಪರದ ಕಲ್ಲು), ಕುಂದಾಣ ಹೋಬಳಿ, ದೇವನಹಳ್ಳಿ ತಾಲ್ಲೂಕು–562110,** ವಿಳಾಸಕ್ಕೆ ಪೋಸ್ಟ್ ಮೂಲಕ ಅಥವಾ ಮುದ್ದಾಂ ಅರ್ಜಿಯನ್ನು ಸಲ್ಲಿಸುವುದು. ಅರ್ಜಿ ನಮೂನೆ **https://bangalorerural.nic.in** ವೆಬ್‌ಸೈಟ್‌ನಲ್ಲಿ ಲಭ್ಯವಿರುತ್ತದೆ. ಅರ್ಜಿ ಸಲ್ಲಿಸಲು ಪ್ರಾರಂಭದ ದಿನಾಂಕ: **10–03–2021** ಮತ್ತು ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: **26–03–2021, ಸಂಜೆ 5.00** ಗಂಟೆಯವರೆಗೆ. ಹೆಚ್ಚಿನ ವಿವರಗಳಿಗಾಗಿ ದೂರವಾಣಿ ಸಂಖ್ಯೆ : **(080–29781057)** ಸಂಪರ್ಕಿಸಬಹುದಾಗಿದೆ.

ಸಹಿ/–
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ,
ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯತ್

ವಾಸಾಸಂಇ/ಉನಿಕ/ಬೆಂಗ್ರಾಜಿ/ಶಿರಡಿಸಾಯಿ/396/2020–21

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಬಜೆಟ್ ದಿನವೇ ಮುತ್ತಿಗೆಗೆ ಯತ್ನ

ಸಿ.ಎಂ.ಮನೆ ಮುಂದೆ ಪಂಚಮಸಾಲಿ ಮಹಿಳಾ ಘಟಕದ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪಂಚಮಸಾಲಿ ಸಮಾಜದವರಿಗೆ 2ಎ ಮೀಸಲಾತಿ ನೀಡಬೇಕು' ಎಂದು ಒತ್ತಾಯಿಸಿ ಸಮಾಜದ ಮಹಿಳಾ ಘಟಕದ ಸದಸ್ಯೆಯರು, ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರ ಕಾವೇರಿ ನಿವಾಸಕ್ಕೆ ಮುತ್ತಿಗೆ ಹಾಕಲು ಸೋಮವಾರ ಬೆಳಿಗ್ಗೆ ಯತ್ನಿಸಿದರು.

ವಿಧಾನಸೌಧದಲ್ಲಿ ಬಜೆಟ್ ಮಂಡಿಸುವುದಕ್ಕಾಗಿ ಮುಖ್ಯಮಂತ್ರಿಯವರು ಸಿದ್ಧತೆ ಮಾಡಿಕೊಳ್ಳುತ್ತಿದ್ದ ವೇಳೆಯಲ್ಲೇ ದಿಢೀರ್ ನಿವಾಸದ ಎದುರು ಸೇರಿದ್ದ ಪ್ರತಿಭಟನಕಾರರು, ಒಳಗೆ ನುಗ್ಗಲು ಯತ್ನಿಸಿದರು. ಸ್ಥಳದಲ್ಲಿದ್ದ ಪೊಲೀಸರು, ಮಹಿಳೆಯರನ್ನು ತಡೆದರು. ಹಲವರನ್ನು ವಶಕ್ಕೆ ಪಡೆದು ಬಸ್ಸಿನಲ್ಲಿ ಕರೆದೊಯ್ದರು.

ಪ್ರತಿಭಟನಕಾರರು ಹಾಗೂ ಪೊಲೀಸರ ನಡುವೆ ವಾಗ್ವಾದ ನಡೆಯಿತು. ಮನೆ ಎದುರಿನ ರಸ್ತೆಯಲ್ಲೇ ಕುಳಿತು ಮಹಿಳೆಯರು ಪ್ರತಿಭಟನೆ ಮುಂದುವರಿಸಿದರು. ರಾಜ್ಯ ಘಟಕದ ಅಧ್ಯಕ್ಷೆ ವೀಣಾ ಕಾಶಪ್ಪನವರ್ ನೇತೃತ್ವದಲ್ಲಿ ಪ್ರತಿಭಟನೆ ಹಮ್ಮಿಕೊಳ್ಳಲಾಗಿತ್ತು.

'ಅನುಮತಿ ಇಲ್ಲದೇ ಪ್ರತಿಭಟನಕಾರರು ಏಕಾಏಕಿ ನಿವಾಸದ ಎದುರು ಬಂದಿದ್ದರು. ವಾಪಸು ಹೋಗುವಂತೆ ಹೇಳಿದರೂ ಸ್ಪಂದಿಸಲಿಲ್ಲ. 40ಕ್ಕೂ ಹೆಚ್ಚು ಮಹಿಳೆಯರನ್ನು ವಶಕ್ಕೆ ಪಡೆದು, ಸಂಜೆ ಬಿಡುಗಡೆ ಮಾಡಲಾಯಿತು' ಎಂದು ಅಧಿಕಾರಿಯೊಬ್ಬರು ಹೇಳಿದರು.

2ಎಗೆ ಸೇರಿಸುವಂತೆ ಘೋಷಣೆ: 'ಪಂಚಮಸಾಲಿ ಸಮುದಾಯಕ್ಕೆ 2ಎ ಮೀಸಲಾತಿ ನೀಡುವಂತೆ ಆಗ್ರಹಿಸಿ ಹಲವು ದಿನಗಳಿಂದ ಪ್ರತಿಭಟನೆ ನಡೆಸಲಾಗುತ್ತಿದೆ. ಆದರೆ, ಸರ್ಕಾರದಿಂದ ಸ್ಪಂದನೆ ಸಿಗುತ್ತಿಲ್ಲ. ಇದರಿಂದ ಆಕ್ರೋಶಗೊಂಡ ಮಹಿಳೆಯರು, ಇಂದು ನಿವಾಸಕ್ಕೆ ಮುತ್ತಿಗೆ ಹಾಕಿದ್ದಾರೆ' ಎಂದು ಪ್ರತಿಭಟನನಿರತರು ಹೇಳಿದರು.

'ಬೇಡಿಕೆಯನ್ನು ಈಡೇರಿಸಬೇಕು. ಇಲ್ಲದಿದ್ದರೆ, ಹೋರಾಟವನ್ನು ತೀವ್ರಗೊಳಿಸಲಾಗುವುದು' ಎಂದರು.

ಪಂಚಮಸಾಲಿ ಮಹಿಳಾ ಘಟಕದ ಸದಸ್ಯೆಯರು ಸಿ.ಎಂ ನಿವಾಸದ ಎದುರು ಸೋಮವಾರ ಪ್ರತಿಭಟನೆ ನಡೆಸಿದರು

ಒಂದೇ ಕುಟುಂಬದ ಐವರಿಗೆ ಕೋವಿಡ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರಕ್ಕೆ ಬೇರೆ ಕಡೆಗಳಿಂದ ಬಂದಿದ್ದವರಲ್ಲಿ ಸೋಂಕು ಹೆಚ್ಚುತ್ತಿದ್ದು, ಸೋಮವಾರ ಒಂದೇ ಕುಟುಂಬದ ಐವರಿಗೆ ಕೊರೊನಾ ಸೋಂಕು ದೃಢಪಟ್ಟಿದೆ. ಒಟ್ಟಾರೆ ಆರು ಮಂದಿ ಈ ಮಾದರಿಯ ಸೋಂಕಿಗೆ ತುತ್ತಾಗಿದ್ದಾರೆ.

ರಾಜನಹಳ್ಳಿ ಮುಖ್ಯರಸ್ತೆಯ ಥಣಿಸಂದ್ರದ ನವಗ್ರಹ ಅಪಾರ್ಟ್‌ಮೆಂಟ್ ಸಮುಚ್ಚಯದ ಕ್ಲಸ್ಟರ್‌ನಲ್ಲಿ ಈ ಪ್ರಕರಣಗಳು ವರದಿಯಾಗಿವೆ. ಸೋಂಕು ದೃಢಪಟ್ಟವರು ಒಂದು ವಾರದ ಹಿಂದೆ ತಿರುಪತಿಗೆ ಹೋಗಿ ಬಂದಿದ್ದರು. ಈ ಪೈಕಿ ಮೊದಲು ಒಬ್ಬರಲ್ಲಿ ಕೆಮ್ಮು, ಶೀತ ಕಾಣಿಸಿಕೊಂಡ ಕಾರಣ ಸೋಂಕು ಪರೀಕ್ಷೆಗೆ ಒಳಗಾಗಿದ್ದು, ಸೋಂಕು ತಗುಲಿರುವುದು ದೃಢಪಟ್ಟಿದೆ. ವ್ಯಕ್ತಿಯು ತಮ್ಮೊಂದಿಗೆ ಇದ್ದ ಕುಟುಂಬ ಸದಸ್ಯರಿಗೆ ಪರೀಕ್ಷೆ ಮಾಡಿಸಿಕೊಳ್ಳುವಂತೆ ಹೇಳಿದ್ದರು. ಆಗ ಕುಟುಂಬದ ಎಲ್ಲರೂ ಸೋಂಕು ಪರೀಕ್ಷೆಗೆ ಒಳಗಾಗಿದ್ದರು.

ಸೋಂಕಿತರೊಂದಿಗೆ ಪ್ರಾಥಮಿಕ ಸಂಪರ್ಕ ಹೊಂದಿದ್ದ 54 ಮಂದಿ ಹಾಗೂ ಪರೋಕ್ಷ ಸಂಪರ್ಕ ಹೊಂದಿದ್ದ 150 ಮಂದಿಯನ್ನು ಪರೀಕ್ಷೆಗೆ ಒಳಪಡಿಸಿ ಕ್ವಾರಂಟೈನ್ ಮಾಡಲಾಗಿದೆ.

ಮಾಸ್ಕ್ ಧರಿಸದ ಯುವತಿಯೊಬ್ಬರಿಗೆ ಮಹಿಳಾ ಮಾರ್ಷಲ್ ಒಬ್ಬರು ಚರ್ಚ್‌ಸ್ಟ್ರೀಟ್‌ನಲ್ಲಿ ದಂಡ ವಿಧಿಸಿದರು

ನಗರದ ಕೋವಿಡ್ ಪ್ರಕರಣಗಳು

4,08,312 ಒಟ್ಟು ಸೋಂಕಿತರು

3,98,808 ಗುಣಮುಖರಾದವರು

5,000 ಸಕ್ರಿಯ ಪ್ರಕರಣ



ಸೋಮವಾರದ ಏರಿಕೆ

287 ದೃಢಪಟ್ಟ ಪ್ರಕರಣ

268 ಗುಣಮುಖ | **4** ಸಾವು

ಮಹಿಳಾ ಮಾರ್ಷಲ್ ನೇಮಕ

ಸಾರ್ವಜನಿಕ ಸ್ಥಳಗಳಲ್ಲಿ ಕೋವಿಡ್ ನಿಯಮಗಳನ್ನು ಪಾಲಿಸದವರಿಗೆ ದಂಡ ವಿಧಿಸಲು ಬಿಬಿಎಂಪಿ ಮಹಿಳಾ ಮಾರ್ಷಲ್‌ಗಳನ್ನು ನೇಮಿಸಿದೆ.

ಮಾಸ್ಕ್ ಧರಿಸದ ಕಾರಣ ದಂಡ ವಿಧಿಸಿದಾಗ ಕೆಲವು ಮಹಿಳೆಯರು ಮಾರ್ಷಲ್‌ಗಳ ಜೊತೆಯಲ್ಲಿ ವಾಗ್ವಾದ ನಡೆಸಿದ್ದರು. ಹಾಗಾಗಿ ಪ್ರಮುಖ ಸಾರ್ವಜನಿಕ ಸ್ಥಳಗಳಲ್ಲಿ ಮಹಿಳಾ ಮಾರ್ಷಲ್ ಗಳ ನೇಮಕ ಮಾಡಲಾಗಿದೆ ಎಂದು ಬಿಬಿಎಂಪಿ ಅಧಿಕಾರಿಯೊಬ್ಬರು ತಿಳಿಸಿದರು.

ಕಲ್ಯಾಣ ಮಂಟಪಗಳಿಗೆ ಭೇಟಿ: ನಗರದಲ್ಲಿ ಕೊರೊನಾ ಸೋಂಕಿತರ ಸಂಖ್ಯೆ ಹೆಚ್ಚುತ್ತಿರುವ ಕಾರಣ ಮದುವೆ, ಸಮಾರಂಭಗಳಿಗೆ ಬಿಬಿಎಂಪಿ ಮಾರ್ಷಲ್‌ಗಳು ಭೇಟಿ ನೀಡಿ, ಪರಿಶೀಲನೆ ನಡೆಸಿದರು.

ಕೋವಿಡ್: 55,612 ಮಂದಿಗೆ ಲಸಿಕೆ

ಬೆಂಗಳೂರು: ರಾಜ್ಯದಲ್ಲಿ ಸೋಮವಾರ 2,411 ಕಡೆ ಕೋವಿಡ್ ಲಸಿಕೆ ವಿತರಣೆ ಅಭಿಯಾನ ನಡೆದಿದ್ದು, 55,612 ಮಂದಿಗೆ ಲಸಿಕೆ ವಿತರಣೆ ಮಾಡಲಾಗಿದೆ. ಇದರಲ್ಲಿ 32,183 ಮಂದಿ ಹಿರಿಯ ನಾಗರಿಕರು ಸೇರಿದ್ದಾರೆ.

3 ಸಾವಿರ ಆರೋಗ್ಯ ಕೇಂದ್ರಗಳಲ್ಲಿ ಪ್ರತಿನಿತ್ಯ 1.50 ಲಕ್ಷ ಮಂದಿಗೆ ಲಸಿಕೆ ನೀಡುವ ಗುರಿಯನ್ನು ಆರೋಗ್ಯ ಇಲಾಖೆ ಹಾಕಿಕೊಂಡಿತ್ತು. ಜಿಲ್ಲಾ ಆಸ್ಪತ್ರೆಗಳಲ್ಲಿ ಒಂದೊಂದು ಪಿಂಕ್ ಬೂತ್‌ಗಳನ್ನು ನಿರ್ಮಿಸಿ, ಲಸಿಕೆ ನೀಡಲಾಯಿತು. ಆರೋಗ್ಯ ಕಾರ್ಯಕರ್ತರಲ್ಲಿ 11,871 ಮಂದಿ ಎರಡನೇ ಡೋಸ್ ಲಸಿಕೆ ಪಡೆದುಕೊಂಡರು. ಕೋವಿಡೇತರ ಕಾಯಿಲೆಗಳನ್ನು ಎದುರಿಸುತ್ತಿರುವ 45ರಿಂದ 60 ವರ್ಷ ವಯೋಮಾನದವರಲ್ಲಿ 5,669 ಮಂದಿ ಲಸಿಕೆ ಹಾಕಿಸಿಕೊಂಡರು.

ಎರಡು ವಾರಗಳಿಂದ ಪ್ರತಿನಿತ್ಯ 500ರ ಗಡಿ ದಾಟುತ್ತಿದ್ದ ಕೋವಿಡ್ ಪ್ರಕರಣಗಳ ಸಂಖ್ಯೆ ಇಳಿಕೆ ಕಂಡಿದೆ. ಸೋಮವಾರ 436 ಕೋವಿಡ್ ಪ್ರಕರಣಗಳು ದೃಢಪಟ್ಟಿದ್ದು, ಈವರೆಗೆ ಸೋಂಕಿತರಾದವರ ಒಟ್ಟು ಸಂಖ್ಯೆ 9.55 ಲಕ್ಷ ದಾಟಿದೆ. ಈ ತಿಂಗಳು ಎಂಟು ದಿನಗಳ ಅವಧಿಯಲ್ಲಿ 4,200 ಮಂದಿ ಕೋವಿಡ್ ಪೀಡಿತರಾಗಿರುವುದು ಖಚಿತಪಟ್ಟಿದೆ. ಸೋಂಕಿತರಲ್ಲಿ ಬೆಂಗಳೂರಿನಲ್ಲಿ ನಾಲ್ವರು ಹಾಗೂ ಮೈಸೂರಿನಲ್ಲಿ ಒಬ್ಬರು ಮೃತಪಟ್ಟಿದ್ದಾರೆ. ಸಾವಿಗೀಡಾದವರ ಒಟ್ಟು ಸಂಖ್ಯೆ 12,367ಕ್ಕೆ ತಲುಪಿದೆ. ಕೋವಿಡ್ ಪೀಡಿತರಲ್ಲಿ 478 ಮಂದಿ ಗುಣಮುಖರಾಗಿದ್ದು, ಚೇತರಿಸಿಕೊಂಡವರ ಸಂಖ್ಯೆ 9.36 ಲಕ್ಷ ದಾಟಿದೆ.

ಪರೀಕ್ಷಾ ವೇಳಾಪಟ್ಟಿ ಪರಿಷ್ಕರಣೆ

ನವದೆಹಲಿ (ಪಿಟಿಐ): 10 ಮತ್ತು 12ನೇ ತರಗತಿಯ ಪರೀಕ್ಷಾ ವೇಳಾಪಟ್ಟಿಯನ್ನು ಐಸಿಎಸ್‌ಇ ಸೋಮವಾರ ಪರಿಷ್ಕರಿಸಿದೆ.

ಕೆಲವು ವಿಷಯಗಳ ಪರೀಕ್ಷಾ ದಿನಾಂಕಗಳನ್ನು ಬದಲಾಯಿಸಲಾಗಿದೆ. ಪರಿಷ್ಕೃತ ವೇಳಾಪಟ್ಟಿ ಅನ್ವಯ ಮೇ 13 ಮತ್ತು 15ರಂದು ಹಾಗೂ ಜೂನ್ 12ರಂದು ಪರೀಕ್ಷೆ ನಡೆಯುವುದಿಲ್ಲ.

10ನೇ ತರಗತಿಯ ಅರ್ಥಶಾಸ್ತ್ರದ ಪರೀಕ್ಷೆ ಈಗ ಮೇ 4ರಂದು ನಡೆಯಲಿದೆ. ಕಲಾ ವಿಷಯದ 2ನೇ ಪತ್ರಿಕೆಯ ಪರೀಕ್ಷೆ ಮೇ 22ರಂದು ನಡೆಯಲಿದೆ. ಕಲಾ ವಿಷಯದ 3ನೇ ಮತ್ತು 4ನೇ ಪತ್ರಿಕೆಯ ಪರೀಕ್ಷೆಗಳು ಕ್ರಮವಾಗಿ ಮೇ 29 ಮತ್ತು ಜೂನ್ 5ರಂದು ನಡೆಯಲಿವೆ ಎಂದು ಪ್ರಕಟಣೆ ತಿಳಿಸಿದೆ.

10ನೇ ತರಗತಿ ಪರೀಕ್ಷೆಗಳು ಮೇ 5ರಿಂದ ಜೂನ್ 7ರವರೆಗೆ ನಡೆಯಲಿವೆ. 12ನೇ ತರಗತಿ ಪರೀಕ್ಷೆಗಳು ಏಪ್ರಿಲ್ 8ರಿಂದ ಜೂನ್ 16ರಂದು ನಡೆಯಲಿವೆ ಎಂದು ಐಸಿಎಸ್‌ಇ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಮತ್ತು ಕಾರ್ಯದರ್ಶಿ ಗೆರ್ರಿ ಅರಾಥೂನ್ ತಿಳಿಸಿದ್ದಾರೆ.

ವರಿಷ್ಠರ ಜತೆ ಉತ್ತರಾಖಂಡ ಸಿ.ಎಂ. ಚರ್ಚೆ

ಡೆಹ್ರಾಡೂನ್, ನವದೆಹಲಿ (ಪಿಟಿಐ): ಉತ್ತರಾಖಂಡ ಮುಖ್ಯಮಂತ್ರಿ ತ್ರಿವೇಂದ್ರ ಸಿಂಗ್ ರಾವತ್ ಸೋಮವಾರ ದೆಹಲಿಯಲ್ಲಿ ಬಿಜೆಪಿ ಅಧ್ಯಕ್ಷ ಜೆ.ಪಿ. ನಡ್ಡಾ ಸೇರಿದಂತೆ ಹಲವು ಕೇಂದ್ರೀಯ ನಾಯಕರನ್ನು ಭೇಟಿಯಾದರು.

ಉತ್ತರಾಖಂಡ ರಾಜ್ಯದಲ್ಲಿ ನಾಯಕತ್ವ ಬದಲಾವಣೆಯ ಬಗ್ಗೆ ಹೆಚ್ಚುತ್ತಿರುವ ಊಹಾಪೋಹಗಳ ನಡುವೆ ರಾವತ್ ಬೆಳಿಗ್ಗೆ ದೆಹಲಿಗೆ ದೌಡಾಯಿಸಿದ್ದರು.

ಬಿಜೆಪಿ ಉಪಾಧ್ಯಕ್ಷ ರಮಣ್ ಸಿಂಗ್ ಮತ್ತು ಪ್ರಧಾನ ಕಾರ್ಯದರ್ಶಿ ದುಷ್ಯಂತ್ ಸಿಂಗ್ ಗೌತಮ್ ಅವರು ರಾಜ್ಯ ಬಿಜೆಪಿ ಕೋರ್ ಕಮಿಟಿ ಸದಸ್ಯರ ಜತೆ ರಾಜಕೀಯ ಪರಿಸ್ಥಿತಿ ಕುರಿತು ನಡೆಸಿದ ಮಾತುಕತೆಯ ವರದಿಯನ್ನು ಪಕ್ಷದ ಅಧ್ಯಕ್ಷ ಜೆ.ಪಿ ನಡ್ಡಾ ಅವರಿಗೆ ಸಲ್ಲಿಸಿದ್ದಾರೆ ಎನ್ನಲಾಗಿದೆ.

ಆದರೆ, ನಾಯಕತ್ವದ ಬದಲಾವಣೆ ಸಾಧ್ಯತೆಗಳನ್ನು ಪಕ್ಷದ ಹಿರಿಯ ನಾಯಕರು ತಳ್ಳಿ ಹಾಕಿದ್ದಾರೆ. ಈ ಬೆಳವಣಿಗೆಯ ಬಗ್ಗೆ ಪ್ರತಿಕ್ರಿಯಿಸಿರುವ ರಾಜ್ಯ ಬಿಜೆಪಿ ಮುಖ್ಯ ವಕ್ತಾರ ಮುನ್ನಾ ಸಿಂಗ್ ಚೌಹಾಣ್, 'ಕಾದು ನೋಡಿ' ಎಂದಿದ್ದಾರೆ.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

PERSONAL

Change of Name

I, NAMADHA aged about 26 years D/o Gunashekar.K.B Residing No.52/6, 2nd Cross, Nethravathi Extension, Devasandra, Near Venkateshwara Theatre road, Krishnarajapuram, Bangalore- 560036 have changed my name to NARMADA.K.G vide affidavit Dated: 08.03.2021 sworn before Advocate notary C.Sasikala

I, SHWETHA. A.N ,D/o. Nanjundappa and Tayamma W/o. Imran Khan, Residing at No.28A, 4th Main Road, Near Maruthi Temple, Bhuvaneshwari Nagar, Dasarahalli, Bangalore-560057, Have changed my old name SHWETHA. A. N to new name AYESHA KHANAM, vide affidavit dated 03/03/2021 before the notary Sivakumara. M.N, Bangalore

CHANGE OF NAME

I, H. Kaliammal spouse of No.14283346A, Rank: Ex- L/NK Name: Johnson Joseph Herman R/at. #216, Kali Nilayam, 4th Block, Near KNE College, Doddabommasandra, Vidyaranyapura Post, Blr-97, have changed my name to KALI HERMAN vide affidavit dated 08/03/2021 before Notary L. Gopalakrishana, Bangalore.

JC672715K, SUB/MT, Prem Singh Bhandari, MT Wing, 2ATC daughter name service record SHIWANI instead of SHIVANI BHANDARI, notary K.V. Mani, Bangalore.

I, AKHILA. A aged about 58 Years W/o Dr. B.S. Mirji R/a #107, KHB Road, 5th Main, 3rd Cross, Ranka Nagar, R.T. Nagar, Bangalore-32 have changed my name to AKHILA MIRJI vide affidavit dated 02.03.2021 before notary MIR ZIAULLA, Bengaluru.

I, A. Pushpalatha S/o Maddileti aged 21 Years R/a House #7, Old No 71/2, Third Floor, House #1, Venkateshappa Building, 3rd Cross, Near Muneshwara Temple, Nagashettyhalli, Bengaluru-94 have changed my name to A.VARUN TEJ & Gender Female to Male vide affidavit dated 08.03.2021 before notary L. Gopalakrishna, Bangalore

CHANGE OF NAME
I, George Thomas S/o. K.J.Thomas R/at. No.52, Ushus house near Shekhar Building, Avalahalli, Virgonagar, Bangalore South, Blr-49, have changed my name to AJITH THOMAS, vide affidavit dated 08/03/2021 before Notary Manjunath.T, Bangalore.

I, MOHAMMED Sultan. K S/o Late. Abdul Khalaq R/at. No.9, First floor, E- 2nd street, Lubbay Masjid Street cross, Shivajinagar, Blr-01, have changed my daughter's name from ARSH NAAZ SULTAN to JAVERIA vide affidavit 02/03/2021 notary A.C. Suburban Swamy, Bangalore

I, AROKIASWAMY JESUDASS S/o S. Jesudass Residing at #441, 10th cross, Vijayanagar, Whitefield, Bengaluru- 560066, have changed my name to SAM RAJAN JESUDASS vide affidavit dated 08/03/2021 before notary M. Narendran, Bangalore.

14830197N, NK/MT, Pawar Nivas, Shrirang, MT Wing, 2ATC, daughter name service record VRUSHALI instead of VRUSHALI NIVAS PAWAR, notary K.V. Mani, Bangalore.

JC667559F, SUB/MAJ, MD Sobrati, 2ATC, son name service record MOHAMD ARMAN instead of MD ARMAN, notary Meer Hassan, Bangalore.

JC672715K, SUB/MT, Prem Singh Bhandari, MT Wing, 2ATC daughter name service record TANISA instead of TANISHA BHANDARI, notary K.V. Mani, Bangalore.

14816008N- HAV- NETAI CHANDA at ASC Centre and College, Bangalore, changed my minor daughter's name from ANANNA CHANDA to ANANYA CHANDA notary KV Mani Bangalore.

DH Classifieds
BOOK YOUR PROPERTY TEXT AD ON SATURDAY & SUNDAY
FOR JUST ₹ 1530/-*
For more information contact:
9880856233
9731810277 | 9901641752
9845114560 | 9886213331
*condition apply

JOB OPPORTUNITIES

General

IMMEDIATE RECRUITMENT HRD/ ADMINISTRATION/ ACCOUNTS/ MANAGER/ SUPERVISOR/ MECHANICAL/ ELECTRONICS/ ELECTRICAL/ SOFTWARE/ HARDWARE ENGINEERS:-7676760299/ 7676760399

BUSINESS

Business to Business

Finance

NRI'S INVESTMENT AND FINANCE AVAILABLE ON LOW-INTEREST AGAINST PROPERTIES,LAND, BUILDINGS SITES,FLATS, BUSINESSES ALSO AYUSH, MEDICAL HOSPITALS. CALL -7411265189

FUTURE FOCUS

Astrology

WONDERFUL FREE Sample Astrological consultation available SMS your Birth Date Time 7760960709 Assured response.

RENTAL PROPERTIES

Accommodation Available

Commercial

SHOWROOM_&_OFFICE_SPACES FURNISHED & Unfurnished Available for Rent.T Dasarahalli, 8th Mile, Tumkur Road, Ph: 9391024959

REAL ESTATE SELLING

Flat

Bommanahalli

LUXURY-APARTMENT FOR Sale. 3 BHK with attached bathroom. 1800 Sft + 1 Car Park & all amenities in Roopena Agrahara, Bommanahalli Ph: 9391024959, 7710878007

Sites

Hosur Road

APPROX. ONE Acre Industrial Land for Sale. Power, Water available. Papers upto date. Ideal for Pharma aswell. Brokers Excuse. Contact: 9620938350/ 9342825263.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

ವೃತ್ತಗಳ ಅಭಿವೃದ್ಧಿ: ವಾಸ್ತುಶಿಲ್ಪಿಗಳ ಜೊತೆ ಸಭೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು (ಬಿಬಿಎಂಪಿ) ನಗರದ ಪ್ರಮುಖ 12 ವೃತ್ತಗಳನ್ನು ಆಕರ್ಷಣೀಯಗೊಳಿಸಲು ಮುಂದಾಗಿದೆ. ಬಿಬಿಎಂಪಿ ಆಡಳಿತಾಧಿಕಾರಿ ಗೌರವ್ ಗುಪ್ತ ಹಾಗೂ ಆಯುಕ್ತ ಎನ್.ಮಂಜುನಾಥ್ ಪ್ರಸಾದ್ ಅವರು ಈ ಸಂಬಂಧ ವಾಸ್ತುಶಿಲ್ಪಿಗಳ ಜೊತೆ ಸೋಮವಾರ ಸಭೆ ನಡೆಸಿದರು.

ಸಭೆಯ ಬಳಿಕ ಮಾತನಾಡಿದ ಗುಪ್ತ, 'ಸುಗಮ ಸಂಚಾರಕ್ಕೆ ಅನುವು ಮಾಡಿಕೊಡುವುದು ಹಾಗೂ ವೃತ್ತಗಳನ್ನು ಆಕರ್ಷಣೀಯಗೊಳಿಸುವ ಉದ್ದೇಶದಿಂದ ಈ ಯೋಜನೆ ಕೈಗೆತ್ತಿಕೊಳ್ಳಲಾಗಿದೆ. ವಾಸ್ತುಶಿಲ್ಪಿಗಳು ವಿವಿಧ ಪರಿಕಲ್ಪನೆಗಳನ್ನಿಟ್ಟುಕೊಂಡು ವೃತ್ತಗಳ ವಿನ್ಯಾಸ ಸಿದ್ಧಪಡಿಸಿದ್ದಾರೆ. ಅವುಗಳನ್ನು ಕಾರ್ಯಗತಗೊಳಿಸುವಂತೆ ಅಧಿಕಾರಿಗಳಿಗೆ ಸೂಚಿಸಲಾಗಿದೆ' ಎಂದರು.

ಬಿಬಿಎಂಪಿ ಸುದ್ದಿ

'ಚಾಲುಕ್ಯ ವೃತ್ತದಲ್ಲಿ ಚಾಲುಕ್ಯರ ಕಾಲದ ಗತವೈಭವ ಬಿಂಬಿಸುವುದು, ಅನಿಲ್ ಕುಂಬ್ಳೆ ವೃತ್ತವನ್ನು ಕ್ರೀಡಾ ಆಸಕ್ತಿಯ ಪರಿಕಲ್ಪನೆಯಡಿ ವಿನ್ಯಾಸಗೊಳಿಸುವುದು, ಮೈಸೂರು ಬ್ಯಾಂಕ್ ವೃತ್ತವನ್ನು ಪ್ರಸಿದ್ಧ ಕರಗ ಮಹೋತ್ಸವದ ವೈಭವದ ಮಾದರಿಯಲ್ಲಿ ರೂಪಿಸುವ ಉದ್ದೇಶವಿದೆ. ಪಾದಚಾರಿ ಮಾರ್ಗಗಳ ಸೌಂದರ್ಯೀಕರಣಕ್ಕೂ ಹೆಚ್ಚು ಒತ್ತು ನೀಡಲಾಗಿದೆ' ಎಂದರು.

ಯಾವ ವೃತ್ತಗಳ ಅಭಿವೃದ್ಧಿ...

ಚಾಲುಕ್ಯ, ಲಾಲ್‌ಬಾಗ್ ಪಶ್ಚಿಮ ದ್ವಾರ, ಮೈಸೂರು ಬ್ಯಾಂಕ್, ಕ್ವೀನ್ಸ್ ಪ್ರತಿಮೆ (ಕಬ್ಬನ್ ಉದ್ಯಾನ) ಮತ್ತು ಅನಿಲ್ ಕುಂಬ್ಳೆ , ಟ್ರಿನಿಟಿ, ಕಮ್ಮನಹಳ್ಳಿ, ಬಾಣಸವಾಡಿ ಮುಖ್ಯರಸ್ತೆ (100ಅಡಿ ರಸ್ತೆ), ಕೋಲ್ಸ್ ರಸ್ತೆ- ಮಾಸ್ಕ್ ರಸ್ತೆ, ನವರಂಗ್, ಮಾಗಡಿ ರಸ್ತೆ, ಕೃಪಾನಿಧಿ ಕಾಲೇಜು, ಅರಮನೆ ರಸ್ತೆ ಮತ್ತು ಎಂ.ವಿ.ಜಯರಾಮನ್ ರಸ್ತೆ

ಉದ್ಯಾನ, ಆಟದ ಮೈದಾನಗಳ ಪಟ್ಟಿ ನೀಡಲು ನಿರ್ದೇಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ಮತ್ತು ಬಿಡಿಎ ವ್ಯಾಪ್ತಿಯಲ್ಲಿನ ಉದ್ಯಾನಗಳು, ಆಟದ ಮೈದಾನ ಮತ್ತು ತೆರೆದ ಜಾಗಗಳ ಪಟ್ಟಿ ನೀಡುವಂತೆ ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ನಿರ್ದೇಶನ ನೀಡಿದೆ.

ಈ ವಿಷಯದಲ್ಲಿ ಹೈಕೋರ್ಟ್ ಮಧ್ಯಪ್ರವೇಶ ಕೋರಿ ಹೈಕೋರ್ಟ್ ಕಾನೂನು ಸೇವೆಗಳ ಸಮಿತಿಯು ಕಳೆದ ವರ್ಷ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿತ್ತು. ಉದ್ಯಾನಗಳನ್ನು ಸಂರಕ್ಷಿಸಲು ಕೈಗೊಂಡ ಕ್ರಮಗಳ ಬಗ್ಗೆ ವಿವರ ಸಲ್ಲಿಸುವಂತೆ ರಾಜ್ಯ ಸರ್ಕಾರಕ್ಕೆ ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ನೇತೃತ್ವದ ವಿಭಾಗೀಯ ಪೀಠ ನಿರ್ದೇಶನ ನೀಡಿತ್ತು.

'ಬಿಬಿಎಂಪಿ ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಿರುವ ಉದ್ಯಾನವನಗಳ ಪಟ್ಟಿಯಲ್ಲಿ, ಸದ್ಯದ ಸ್ಥಿತಿ ಕಾಲಂ ಖಾಲಿ ಇಡಲಾಗಿದೆ. ಕೆಲವು ಕಡೆ ಮಾತ್ರ 'ಸರಾಸರಿ' ಎಂದು ನಮೂದಿಸಲಾಗಿದೆ' ಎಂದು ಅರ್ಜಿದಾರರು ತಿಳಿಸಿದರು. ಮುಂದಿನ ವಿಚಾರಣೆಯನ್ನು ಏಪ್ರಿಲ್ 5ಕ್ಕೆ ಪೀಠ ಮುಂದೂಡಿತು.

'ಕರ್ನಾಟಕ ಮುನ್ಸಿಪಲ್ ಕಾಯ್ದೆ(ಕೆಎಂಸಿ) ಪ್ರಕಾರ, ಉದ್ಯಾನಗಳನ್ನು ನಿರ್ವಹಿಸುವುದು ಬಿಬಿಎಂಪಿಯ ಆದ್ಯ ಕರ್ತವ್ಯ. ಉದ್ಯಾನ ಎಂದು ಘೋಷಿಸಿದ ಬಳಿಕ ಅವುಗಳ ರಚನೆಗಳ ಮೇಲೆ ಪರಿಣಾಮ ಬೀರುವ ಯಾವುದೇ ನಿರ್ಣಯಗಳನ್ನು ತೆಗೆದುಕೊಳ್ಳಬಾರದು' ಎಂದು ಈ ಹಿಂದಿನ ವಿಚಾರಣೆ ವೇಳೆ ಪೀಠ ನಿರ್ದೇಶನ ನೀಡಿತ್ತು.





ಇದು ‘ಆಪರೇಷನ್ ಬರ್ಬಾದ್’ ಬಜೆಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ’ಇದು ಅನೈತಿಕ ಸರ್ಕಾರ. ಈ ಸರ್ಕಾರಕ್ಕೆ ಬಜೆಟ್ ಮಂಡಿಸುವ ನೈತಿಕತೆ ಇಲ್ಲ’ ಎಂದು ಪ್ರತಿಭಟಿಸಿ, ಬಜೆಟ್ ಮಂಡನೆಯಾಗುತ್ತಿದ್ದಂತೆ ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ನೇತೃತ್ವದಲ್ಲಿ ಕಾಂಗ್ರೆಸ್ ಶಾಸಕರು ಸಭಾತ್ಯಾಗ ಮಾಡಿದರು.

ಬಳಿಕ ಸುದ್ದಿಗಾರರ ಜೊತೆ ಮಾತನಾಡಿದ ಸಿದ್ದರಾಮಯ್ಯ, ‘ಆಪರೇಷನ್ ಕಮಲ ಎಂಬ ಅನೈತಿಕ ರಾಜಕೀಯದ ಮೂಲಕ ರಾಜ್ಯದಲ್ಲಿ ಅಧಿಕಾರಕ್ಕೆ ಬಂದಿರುವ ಬಿಜೆಪಿ ಸರ್ಕಾರ ರಾಜ್ಯವನ್ನು ದಶಕಗಳ ಹಿಂದಕ್ಕೆ ಒಯ್ಯುವ ‘ಆಪರೇಷನ್ ಬರ್ಬಾದ್’ ಕಾರ್ಯಕ್ರಮವನ್ನು ಯಶಸ್ವಿಯಾಗಿ ಮಾಡುತ್ತಿದೆ. ಇದಕ್ಕೆ ಕಳೆದ ಮತ್ತು ಈ ವರ್ಷದ ಎರಡು ಬಜೆಟ್‌ಗಳೇ ಸಾಕ್ಷಿ’ ಎಂದು ಟೀಕಿಸಿದರು.



‘ಆಯವ್ಯಯವನ್ನು ಇಲಾಖಾವಾರು ನೀಡದೆ ಆರು ವಲಯಗಳಾಗಿ ವಿಂಗಡಿಸಿ ಯಾವ ಇಲಾಖೆಗೆ ಎಷ್ಟು ಅನುದಾನ ನೀಡಲಾಗಿದೆ. 33 ಇಲಾಖೆಗಳನ್ನು ಆರು ವಲಯಗಳಾಗಿ ಮಾಡಿ ಗೊಂದಲ ಸೃಷ್ಟಿಸಲಾಗಿದೆ. ಆರೂ ವಲಯಗಳಿಗೆ ಕಳೆದ ಬಜೆಟ್‌ನಲ್ಲಿ ನಿಗದಿಪಡಿಸಲಾಗಿದ್ದ ಅನುದಾನಕ್ಕಿಂತ ಕಡಿಮೆ ಹಣ ನಿಗದಿಪಡಿಸಲಾಗಿದೆ’ ಎಂದರು.

‘ಸಂಕಷ್ಟಗಳ ಸರಮಾಲೆಗೆ ಸಿಲುಕಿರುವ ರೈತರು ದೇಶದಾದ್ಯಂತ ಬೀದಿಗಿಳಿದಿದ್ದಾರೆ. ಕೃಷಿ ವಿರೋಧಿ ಕಾಯ್ದೆಗಳ ಮೂಲಕ ರೈತರನ್ನು ದಿವಾಳಿ ಮಾಡಲು ಹೊರಟಿರುವ ಕೇಂದ್ರ ಸರ್ಕಾರದ ಜೊತೆ ಸೇರಿರುವ ರಾಜ್ಯ ಸರ್ಕಾರ ಬಜೆಟ್‌ನಲ್ಲೂ ಕೃಷಿ ಕ್ಷೇತ್ರವನ್ನು ನಿರ್ಲಕ್ಷಿಸಿದೆ. ಅಂಬೇಡ್ಕರ್, ವಾಲ್ಮೀಕಿ, ಆದಿಜಾಂಬವ, ಬೋವಿ, ವಿಶ್ವಕರ್ಮ, ಕಾಡುಗೊಲ್ಲರ, ಅಂಬಿಗರ ಚೌಡಯ್ಯ, ಸವಿತಾ ಸಮಾಜ ಮತ್ತು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮಗಳಿಗೆ ಒಟ್ಟು ಕೇವಲ ₹ 500 ಕೋಟಿ ಅನುದಾನ ನೀಡುವ ಮೂಲಕ ತಳ ಸಮುದಾಯಗಳಿಗೆ ಅನ್ಯಾಯ ಮಾಡಲಾಗಿದೆ. ಈ ಮೂಲಕ ರಾಜ್ಯದ ಬಿಜೆಪಿ ಸರ್ಕಾರ ಸಾಮಾಜಿಕ ನ್ಯಾಯದ ವಿರೋಧಿ ಎನ್ನುವುದನ್ನು ಸಾಬೀತುಪಡಿಸಿದೆ. ಒಟ್ಟಿನಲ್ಲಿ ಕೇಂದ್ರ ಮತ್ತು ರಾಜ್ಯಗಳಲ್ಲಿನ ಎರಡೂ ಬಿ.ಜೆ.ಪಿ. ಸರ್ಕಾರಗಳು ಜನರ ತಲೆಗೆ ಟೋಪಿ ಹಾಕುತ್ತಿವೆ’ ಎಂದರು.

ಸಿದ್ದರಾಮಯ್ಯಗೆ ಪ್ರತಿಪಕ್ಷ ಸ್ಥಾನವೇ ಕಾಯಂ: ಸಿ.ಎಂ

ಬೆಂಗಳೂರು: ’ಮನಸ್ಸಿನ ಮೇಲೆ ಹಿಡಿತ ಕಳೆದುಕೊಂಡು ಏನೇನೋ ಮಾತನಾಡುತ್ತಿರುವ ಸಿದ್ದರಾಮಯ್ಯ ಅವರಿಗೆ ವಿರೋಧ ಪಕ್ಷದ ನಾಯಕನ ಸ್ಥಾನವೇ ಕಾಯಂ’ ಎಂದು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಹೇಳಿದರು.

ಸೋಮವಾರ ಬಜೆಟ್ ಮಂಡಿಸಿದ ಬಳಿಕ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಬಜೆಟ್ ಮಂಡನೆಯ ಸಂದರ್ಭದಲ್ಲಿ ವಿರೋಧ ಪಕ್ಷದವರು ಪ್ರತಿಭಟನೆ ನಡೆಸುವುದು, ಸಭಾತ್ಯಾಗ ಮಾಡುವುದು ಇತಿಹಾಸದಲ್ಲಿ ಯಾವತ್ತೂ ನಡೆದಿಲ್ಲ’ ಎಂದು ಅಸಮಾಧಾನ ವ್ಯಕ್ತಪಡಿಸಿದರು.

‘ಮುಂದಿನ ಚುನಾವಣೆಯಲ್ಲೂ 130ರಿಂದ 135 ಸ್ಥಾನಗಳನ್ನು ಗೆಲ್ಲಿಸಿ, ಬಿಜೆಪಿಯನ್ನು ಮತ್ತೆ ಅಧಿಕಾರಕ್ಕೆ ತರುವೆ. ಇವರು ಕಾಯಂ ವಿರೋಧ ಪಕ್ಷದ ಸ್ಥಾನದಲ್ಲೇ ಕುಳಿತಿರಬೇಕು. ಬಿಜೆಪಿಯನ್ನು ಮತ್ತೆ ಅಧಿಕಾರಕ್ಕೆ ತರದಿದ್ದರೆ ನನ್ನನ್ನು ಯಡಿಯೂರಪ್ಪ ಎಂದು ಕರೆಯಬೇಡಿ’ ಎಂದು ಸವಾಲು ಹಾಕಿದರು.

ಸಿ.ಡಿ ವಿಚಾರದಲ್ಲಿ ಮೊದಲು ಚರ್ಚೆಗೆ ಬರಲಿ. ಸೂಕ್ತ ಸಲಹೆ ನೀಡಲಿ. ಅದನ್ನು ಬಿಟ್ಟು ನೈತಿಕತೆ ಎಂದು ಏನೇನೋ ಮಾತನಾಡುವುದು ಸರಿಯಲ್ಲ. ಅಗತ್ಯವಿದ್ದರೆ ಯಾವುದೇ ತನಿಖೆಗೂ ಆದೇಶಿಸಲು ಸಿದ್ಧ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಒಂದು ನಯಾ ಪೈಸೆಯಷ್ಟು ತೆರಿಗೆಯನ್ನೂ ಯಾರ ಮೇಲೂ ಹೇರಿಲ್ಲ. ಪೆಟ್ರೋಲ್ ಮತ್ತು ಡೀಸೆಲ್ ದರ ದೇಶದಲ್ಲೇ ಕಡಿಮೆ ಇರುವುದು ಕರ್ನಾಟಕದಲ್ಲಿ. ಆದ್ದರಿಂದ ಮತ್ತೆ ತೆರಿಗೆ ಕಡಿಮೆ ಮಾಡುವ ಪ್ರಮೇಯವೇ ಇಲ್ಲ. ವಿವಿಧ ಸಮುದಾಯಗಳ ನಿಗಮಗಳಿಗೆ ಅಗತ್ಯವಿದ್ದರೆ ಮುಂದಿನ ದಿನಗಳಲ್ಲಿ ಹೆಚ್ಚಿನ ಅನುದಾನ ಒದಗಿಸಲು ಸಿದ್ಧ ಎಂದರು.

ಹುಲಿಗೆ ಬಾಲಕ ಬಲಿ: ಸೆರೆ ಸಿಗದಿದ್ದರೆ ಗುಂಡಿಕ್ಕಲು ಸೂಚನೆ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- 15 ದಿನಗಳ ಅಂತರದಲ್ಲಿ 3ನೇ ಬಲಿ
- ಬೆಳ್ಳೂರು ಸುತ್ತಮುತ್ತಲ ಗ್ರಾಮದಲ್ಲಿ ನಿಷೇಧಾಜ್ಞೆ

ಪೊನ್ನಂಪೇಟೆ (ಕೊಡಗು): ಪೊನ್ನಂಪೇಟೆಯ ಬೆಳ್ಳೂರು ಗ್ರಾಮದಲ್ಲಿ ಸೋಮವಾರ ಬೆಳಿಗ್ಗೆ ಹುಲಿಯೊಂದು ಇಬ್ಬರ ಮೇಲೆ ದಾಳಿ ನಡೆಸಿದೆ. ಬಾಲಕ ರಂಗಸ್ವಾಮಿ (8) ಸ್ಥಳದಲ್ಲಿಯೇ ಮೃತಪಟ್ಟಿದ್ದಾನೆ. ಆತನ ಅಜ್ಜ, ಗುಂಡ್ಲಪೇಟೆಯ ಕೆಂಚ (50) ಗಂಭೀರವಾಗಿ ಗಾಯಗೊಂಡಿದ್ದು, ಮೈಸೂರಿನ ಅಪೋಲೊ ಆಸ್ಪತ್ರೆಗೆ ದಾಖಲಿಸಲಾಗಿದೆ.

ಹುಲಿ ಸೆರೆಗೆ ಅರಣ್ಯ ಇಲಾಖೆ ಪ್ರಧಾನ ಮುಖ್ಯ ಸಂರಕ್ಷಣಾಧಿಕಾರಿ ಆದೇಶ ಹೊರಡಿಸಿದ್ದು, ಹುಲಿಯನ್ನು ಸೆರೆಹಿಡಿಯಲು ಸಾಧ್ಯವಾಗದಿದ್ದರೆ ಕೊನೆಯ ಆಯ್ಕೆಯಾಗಿ ಗುಂಡಿಕ್ಕಲು ಸೂಚನೆ ನೀಡಲಾಗಿದೆ. ಕಾರ್ಯಾಚರಣೆಗೆ ಬೆಂಗಳೂರಿನಿಂದ, ತಜ್ಞ ಸುಶೀಲ್ ಅವರನ್ನು ನಿಯೋಜನೆ ಮಾಡಲಾಗಿದೆ. ಬೆಂಗಳೂರಿನಲ್ಲಿ ಸೋಮವಾರ ಅರಣ್ಯ ಸಚಿವ ಅರವಿಂದ ಲಿಂಬಾವಳಿ ಅಧ್ಯಕ್ಷತೆಯಲ್ಲಿ ಸಭೆಯೂ ನಡೆದಿದೆ. ಪ್ರಾಣ ಹಾನಿಯಾಗದಂತೆ ಕ್ರಮ ಕೈಗೊಳ್ಳಲು ಸೂಚನೆ ನೀಡಿದ್ದಾರೆ.

ರೊಚ್ಚಿಗೆದ್ದ ಗ್ರಾಮಸ್ಥರು: ಇದಕ್ಕೂ ಮುನ್ನ, ವಿಷಯ ತಿಳಿಯುತ್ತಿದ್ದಂತೆಯೇ ರೊಚ್ಚಿಗೆದ್ದ ಗ್ರಾಮಸ್ಥರು ಮತ್ತು ರೈತ ಸಂಘದ ಮುಖಂಡರು, ಹುಲಿಯನ್ನು ಗುಂಡಿಕ್ಕಿ ಕೊಲ್ಲುವಂತೆ ಆಗ್ರಹಿಸಿ ಬೆಳ್ಳೂರು ಗ್ರಾಮದಲ್ಲಿ ಪೊನ್ನಂಪೇಟೆ-ಕುಟ್ಟ ಮೂಲಕ ಕೇರಳ ಸಂಪರ್ಕಿಸುವ ಹೆದ್ದಾರಿ ತಡೆದು ಪ್ರತಿಭಟನೆ ನಡೆಸಿದರು. ಕಾರ್ಯಾಚರಣೆಗೆ ತೆರಳುತ್ತಿದ್ದ ಸಾಕಾನೆಗಳನ್ನೂ ತಡೆದು ಆಕ್ರೋಶ ವ್ಯಕ್ತಪಡಿಸಿದರು. ಹುಲಿಯನ್ನು ಸೆರೆಹಿಡಿಯಲು ಅರಣ್ಯ ಇಲಾಖೆ ವೈಫಲ್ಯವೇ ಕಾರಣ ಎಂದು ದೂರಿದ ಅವರು, ‘ನಿಮ್ಮಿಂದ (ಅರಣ್ಯ ಇಲಾಖೆಯ ಸಿಬ್ಬಂದಿ) ಸೆರೆ ಹಿಡಿಯಲಾಗದಿದ್ದರೆ ನಮಗೆ ಅವಕಾಶ ನೀಡಿ. ನಾವೇ ಗುಂಡಿಕ್ಕುತ್ತೇವೆ’ ಎಂದು ಹರಿಹಾಯ್ದರು.

‘ಹುಲಿ ಸೆರೆ ಕಾರ್ಯಾಚರಣೆ ನಡೆಯುತ್ತಿದೆ. ಸುಮಾರು 10 ದಿನಗಳಿಂದ ಹುಲಿಯ ಚಲನವಲನಗಳ ಬಗ್ಗೆ ಮಾಹಿತಿ ಸಂಗ್ರಹಿಸಲಾಗಿದೆ’ ಎಂದು ಪ್ರಭಾರ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಹೀರಾಲಾಲ್, ಗ್ರಾಮಸ್ಥರನ್ನು ಸಮಾಧಾನಗೊಳಿಸಲು ಯತ್ನಿಸಿದರು. ತೀವ್ರ ಆಕ್ರೋಶಗೊಂಡಿದ್ದ ಗ್ರಾಮಸ್ಥರು ಹಾಗೂ ಕಾರ್ಮಿಕರು, ಆರಂಭದಲ್ಲಿ ಪಟ್ಟು ಸಡಿಲಿಸಲಿಲ್ಲ. ಕೊನೆಗೆ ಮನವೊಲಿಕೆ ನಂತರ, ಕಾರ್ಯಾಚರಣೆ ನಡೆಸಲು ಸಾಕಾನೆಗಳಿಗೆ ಅನುವು ಮಾಡಿಕೊಟ್ಟರು.

ನಿಷೇಧಾಜ್ಞೆ ಜಾರಿ: ಹುಲಿ ದಾಳಿಯಿಂದ ಕಂಗೆಟ್ಟಿರುವ ಬೆಳ್ಳೂರು, ನಿಟ್ಟೂರು, ಶ್ರೀಮಂಗಲ, ಕುರ್ಚಿ, ಮಂಚಳ್ಳಿ, ಬಾಳೆಲೆ ಭಾಗದ ಜನರ ಆಕ್ರೋಶ ಹೆಚ್ಚಾಗಿದೆ. ಘರ್ಷಣೆ ತಡೆಯುವ ನಿಟ್ಟಿನಲ್ಲಿ ಈ ಗ್ರಾಮಗಳ ವ್ಯಾಪ್ತಿಯಲ್ಲಿ ಎರಡು ದಿನ ನಿಷೇಧಾಜ್ಞೆ ಜಾರಿಗೊಳಿಸಲಾಗಿದೆ.

ಜಾನುವಾರುಗಳ ಮೇಲೂ ದಾಳಿ: ಬೆಳ್ಳೂರು ಗ್ರಾಮದಲ್ಲಿ ಸೋಮವಾರ ಮುಂಜಾನೆ ನಡೆದ ಹುಲಿ ದಾಳಿಯಲ್ಲಿ ಒಂದು ಜಾನುವಾರು ಸಾವಿಗೀಡಾಗಿದ್ದು ಮತ್ತೊಂದು ಗಾಯಗೊಂಡಿದೆ. ಈ ಹುಲಿ ಜಾನುವಾರುಗಳ ಮೇಲೂ ನಿರಂತರ ದಾಳಿ ನಡೆಸುತ್ತಿದೆ.

ಸುದ್ದಿ 2 ನಿಮಿಷ

ಡಾ.ಸುದರ್ಶನ ಬಲ್ಲಾಳಗೆ ಜಗದ್ಗುರು ರೇಣುಕಾಚಾರ್ಯ ಪ್ರಶಸ್ತಿ

ರಂಭಾಪುರಿ ಪೀಠ (ಬಾಳೆಹೊನ್ನೂರು): ಇಲ್ಲಿನ ರಂಭಾಪುರಿ ಪೀಠವು ನೀಡುವ ವಾರ್ಷಿಕ ‘ಜಗದ್ಗುರು ರೇಣುಕಾಚಾರ್ಯ ಪ್ರಶಸ್ತಿ’ಗೆ ಈ ಸಾಲಿಗೆ ಬೆಂಗಳೂರಿನ ಮಣಿಪಾಲ್ ಆಸ್ಪತ್ರೆಗಳ ಸಮೂಹ ಸಂಸ್ಥೆಗಳ ಅಧ್ಯಕ್ಷ ಡಾ.ಸುದರ್ಶನ ಬಲ್ಲಾಳ ಅವರನ್ನು ಆಯ್ಕೆ ಮಾಡಲಾಗಿದೆ ಎಂದು ರಂಭಾಪುರಿ ಪೀಠದ ವೀರಸೋಮೇಶ್ವರ ಸ್ವಾಮಿಜಿ ತಿಳಿಸಿದರು.

ಪ್ರಶಸ್ತಿಯು ₹ 1 ಲಕ್ಷ ನಗದು, ಕಂಚಿನ ಪ್ರಶಸ್ತಿ ಪತ್ರ ಒಳಗೊಂಡಿದೆ. ಮಾ. 26ರಂದು ಇಲ್ಲಿ ನಡೆಯುವ ಜಗದ್ಗುರು ರೇಣುಕಾಚಾರ್ಯ ಜಯಂತಿ ಯುಗಮಾನೋತ್ಸವ, ಮಹಾರಥೋತ್ಸವದಲ್ಲಿ ಪ್ರಶಸ್ತಿ ಪ್ರದಾನ ನಡೆಯಲಿದೆ ಎಂದು ತಿಳಿಸಿದ್ದಾರೆ.

ಮಣ್ಣು ಕುಸಿದು ನಾಲ್ವರು ಕೂಲಿ ಕಾರ್ಮಿಕರ ಸಾವು

ಯಲ್ಲಾಪುರ: ತಾಲ್ಲೂಕಿನ ಇಡಗುಂದಿ ಗ್ರಾಮದ ಸಂಪೆಬೈಲ್‌ನಲ್ಲಿ ಸೋಮವಾರ, ಗುಡ್ಡದ ಮಣ್ಣು ಕುಸಿದು ನಾಲ್ವರು ಕೂಲಿ ಕಾರ್ಮಿಕರು ಮೃತಪಟ್ಟಿದ್ದಾರೆ.

ತಾಲ್ಲೂಕಿನ ಕಿರವತ್ತಿ ಬಳಿಯ ಹೊಸಳ್ಳಿ ಗ್ರಾಮದ ಭಾಗ್ಯಶ್ರೀ ಯಡಗೆ (21), ಲಕ್ಷ್ಮೀ ದೋಯಿಪಡೆ (38), ಸಂತೋಷ ದೋಯಿಪಡೆ (18) ಹಾಗೂ ಮಾಳು ದೋಯಿಪಡೆ (21) ಮೃತರು.

ಸಂಜೆಯ ವೇಳೆಗೆ ಗುಡ್ಡದ ಮೇಲಿನ ಮಣ್ಣನ್ನು ಅರ್ಧ ತೆರವು ಮಾಡಿದ್ದ ಕಾರ್ಮಿಕರು, ನೀರು ಕುಡಿಯಲೆಂದು ಕೆಳಗೆ ಬಂದು ಕುಳಿತಿದ್ದರು. ಆಗ ಭಾರಿ ಪ್ರಮಾಣದಲ್ಲಿ ಮಣ್ಣು ಏಕಾಏಕಿ ಕುಸಿದು ಕಾರ್ಮಿಕರು ಅದರ ಕೆಳಗೆ ಸಿಲುಕಿದರು. ಮಂಜುನಾಥ ನಾಗಪ್ಪ ಭಟ್ ಎಂಬುವವರ ತೋಟದಲ್ಲಿ ಈ ಅವಘಡ ನಡೆದಿದೆ. ಅಲ್ಲಿ ಒಟ್ಟು ಏಳು ಮಂದಿ ಕಾರ್ಮಿಕರು ಕೆಲಸ ಮಾಡುತ್ತಿದ್ದರು. ಯಲ್ಲಾಪುರ ಠಾಣೆ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

ಈ ಘಟನೆಯ ಬಗ್ಗೆ ಆಘಾತ ವ್ಯಕ್ತಪಡಿಸಿರುವ ಕಾರ್ಮಿಕ ಸಚಿವ ಶಿವರಾಮ ಹೆಬ್ಬಾರ, ಮೃತರ ಕುಟುಂಬಕ್ಕೆ ಕಾರ್ಮಿಕ ಇಲಾಖೆಯಿಂದ ಸೂಕ್ತ ಪರಿಹಾರ ಒದಗಿಸಲಾಗುವುದು ಎಂದು ತಿಳಿಸಿದ್ದಾರೆ.

ಪೋಕ್ಸೊ ಪ್ರಕರಣ: ಚಂದ್ರ ಹೆಮ್ಮಾಡಿಗೆ 10 ವರ್ಷ ಜೈಲು

ಪ್ರಜಾವಾಣಿ ವಾರ್ತೆ

ಉಡುಪಿ: ಬಾಲಕರ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದ ಚಂದ್ರ ಕೆ.ಹೆಮ್ಮಾಡಿ ಎಂಬಾತನಿಗೆ ಜಿಲ್ಲಾ ಹೆಚ್ಚುವರಿ ಮತ್ತು ಸೆಷನ್ಸ್ ಕೋರ್ಟ್‌ನ ಪೋಕ್ಸೊ ತ್ವರಿತ ವಿಶೇಷ ನ್ಯಾಯಾಲಯ 10 ವರ್ಷ ಕಠಿಣ ಜೈಲು ಶಿಕ್ಷೆ ಹಾಗೂ ₹ 10,000 ದಂಡ ವಿಧಿಸಿದೆ.

ಚಂದ್ರ ಹೆಮ್ಮಾಡಿ ಮೇಲೆ 21 ಪೋಕ್ಸೊ ಪ್ರಕರಣಗಳು ದಾಖಲಾಗಿದ್ದವು.

ಚಂದ್ರ ಕೆ.ಹೆಮ್ಮಾಡಿ

ಇವುಗಳಲ್ಲಿ ಮೊದಲ ಪ್ರಕರಣದ ವಿಚಾರಣೆ ನಡೆಸಿದ ನ್ಯಾಯಾಧೀಶರಾದ ಯಾದವ್ ವನಮಾಲಾ ಆನಂದರಾವ್ ಸೋಮವಾರ ಆದೇಶ ಪ್ರಕಟಿಸಿದ್ದಾರೆ.

ಸರಣಿ ಲೈಂಗಿಕ ದೌರ್ಜನ್ಯ: ಛಾಯಾಚಿತ್ರ ತೆಗೆಯುವ ನೆಪದಲ್ಲಿ ಬಾಲಕನನ್ನು ನಿರ್ಜನ ಪ್ರದೇಶಕ್ಕೆ ಒಯ್ದಿದ್ದ ಈತ ಲೈಂಗಿಕ ದೌರ್ಜನ್ಯ ಎಸಗಿದ್ದ. ಮಾನಸಿಕವಾಗಿ ಜರ್ಜರಿತನಾಗಿದ್ದ ಬಾಲಕನ ಕೌನ್ಸೆಲಿಂಗ್ ನಡೆಸಲಾಗಿತ್ತು. ಈ ಸಮಯದಲ್ಲಿ ಕೃತ್ಯ ಎಸಗಿದ್ದು ತಿಳಿದುಬಂದಿತ್ತು.

ಬಳಿಕ ಬೈಂದೂರು, ಕೊಲ್ಲೂರು ಸೇರಿದಂತೆ ವಿವಿಧ ಠಾಣೆಗಳಲ್ಲಿ ಚಂದ್ರ ಹೆಮ್ಮಾಡಿ ವಿರುದ್ಧ 21 ಪೋಕ್ಸೊ ಪ್ರಕರಣಗಳು ದಾಖಲಾಗಿವೆ. ವ್ಯಕ್ತಿಯೊಬ್ಬನ ಮೇಲೆ ದಾಖಲಾದ ಗರಿಷ್ಠ ಪೋಕ್ಸೊ ಪ್ರಕರಣಗಳು ಇವಾಗಿವೆ.

ಕೋರ್ಟ್ ಮೊರೆ ಹೋಗುವುದಿಲ್ಲ: ಶ್ರೀಮಂತ ಪಾಟೀಲ

ಅಥಣಿ (ಬೆಳಗಾವಿ): ‘ಮಾನಹಾನಿ ಆಗುವ ವಿಷಯ ಪ್ರಸಾರ ಮಾಡದಂತೆ ಆರು ಸಚಿವರು ನ್ಯಾಯಾಲಯದ ಮೊರೆ ಹೋಗಿದ್ದಾರೆ. ನಾನು ಯಾವುದೇ ಕೋರ್ಟ್‌ಗೆ ಹೋಗುವುದಿಲ್ಲ’ ಎಂದು ಜವಳಿ ಸಚಿವ ಶ್ರೀಮಂತ ಪಾಟೀಲ ತಿಳಿಸಿದರು.

ತಾಲ್ಲೂಕಿನ ಸಂಬರಗಿ ಗ್ರಾಮದಲ್ಲಿ ₹ 2 ಕೋಟಿ ವೆಚ್ಚದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಸೋಮವಾರ ಭೂಮಿಪೂಜೆ ನೆರವೇರಿಸಿದ ಬಳಿಕ ಪತ್ರಕರ್ತರೊಂದಿಗೆ ಅವರು ಮಾತನಾಡಿದರು.

‘ಕೆಲವರು ದುರುದ್ದೇಶ ಇಟ್ಟುಕೊಂಡು ಷಡ್ಯಂತ್ರ ಮಾಡುತ್ತಿದ್ದಾರೆ. ಮುಂದೆ ನಮ್ಮ ಬಗ್ಗೆಯೂ ಸುಳ್ಳು ಆರೋಪ ಹಾಗೂ ವದಂತಿಗಳನ್ನು ಹಬ್ಬಿಸಬಹುದು ಎಂದು ಮುಂಜಾಗ್ರತಾ ಕ್ರಮವಾಗಿ ಸಚಿವರು ನ್ಯಾಯಾಲಯಕ್ಕೆ ಹೋಗಿದ್ದಾರೆ. ನನಗೇನೂ ಹೆದರಿಕೆ ಇಲ್ಲ’ ಎಂದರು.

ಸಂಕ್ಷಿಪ್ತ ಸುದ್ದಿ

ಮಾಜಿ ಸಂಸದ ಕೆ.ವಿರೂಪಾಕ್ಷಪ್ಪ ಬಿಜೆಪಿಗೆ ಇಂದು

ರಾಯಚೂರು: ಮಾಜಿ ಸಂಸದ ಕೆ.ವಿರೂಪಾಕ್ಷಪ್ಪ ಅವರು ಕಾಂಗ್ರೆಸ್ ತೊರೆದು, ಮಾರ್ಚ್ 9ರಂದು ಬೆಂಗಳೂರಿನಲ್ಲಿ ಬಿಜೆಪಿ ಸೇರಲಿದ್ದಾರೆ.



ಕೆ.ವಿರೂಪಾಕ್ಷಪ್ಪ

2004ರಲ್ಲಿ ಕೊಪ್ಪಳ ಲೋಕಸಭಾ ಕ್ಷೇತ್ರದಿಂದ ಕಾಂಗ್ರೆಸ್ ಪಕ್ಷದಿಂದ ಆಯ್ಕೆಯಾಗಿದ್ದರು. 2013ರಲ್ಲಿ ಕೆಜೆಪಿಗೆ ಸೇರ್ಪಡೆಯಾಗಿ, ನಂತರ ಕಾಂಗ್ರೆಸ್‌ಗೆ ಮರಳಿದ್ದರು. ಕುರುಬರ ಎಸ್‌ಟಿ ಮೀಸಲಾತಿ ಹೋರಾಟ ಸಮಿತಿ ರಾಜ್ಯ ಘಟಕದ ಅಧ್ಯಕ್ಷರಾಗಿರುವ ಇವರು ಸಚಿವ ಈಶ್ವರಪ್ಪ ನೇತೃತ್ವದಲ್ಲಿ ನಡೆದ ಹೋರಾಟದಲ್ಲಿ ಸಕ್ರಿಯರಾಗಿದ್ದರು. ಮಸ್ಕಿ ವಿಧಾನಸಭೆ ಕ್ಷೇತ್ರದ ಉಪಚುನಾವಣೆಯಲ್ಲಿ ಗೆಲ್ಲಲೇಬೇಕು ಎಂಬ ಪಣತೊಟ್ಟಿರುವ ಬಿಜೆಪಿ ಇವರನ್ನು ಸೆಳೆದಿದೆ.

ಮಾಜಿ ಶಾಸಕರ ಮೊಮ್ಮಕ್ಕಳು ಶವವಾಗಿ ಪತ್ತೆ

ವರುಣ ನಾಯಕ, ತನಯ ನಾಯಕ

ಸಿರವಾರ (ರಾಯಚೂರು ಜಿಲ್ಲೆ): ಭಾನುವಾರ ನಾಪತ್ತೆಯಾಗಿದ್ದ ಮಾನ್ವಿಯ ಮಾಜಿ ಶಾಸಕ ಹಂಪಯ್ಯ ನಾಯಕ ಅವರ ಇಬ್ಬರು ಮೊಮ್ಮಕ್ಕಳ ಶವ ಗ್ರಾಮದ ಹಳ್ಳದ ಪಕ್ಕದ ಹೊಂಡದಲ್ಲಿ ಪತ್ತೆಯಾಗಿವೆ.

ಬಲ್ಲಟಗಿ ಗ್ರಾಮದಲ್ಲಿ ವಾಸವಾಗಿರುವ ಹಂಪಯ್ಯ ಅವರ ಕಿರಿಯ ಮಗ ಶಿವಾನಂದ ಅವರ ಮಕ್ಕಳಾದ ವರುಣ ನಾಯಕ (11), ತನಯ ನಾಯಕ (5) ಮೃತರು.

ಮಕ್ಕಳಿಬ್ಬರು ಭಾನುವಾರ ಮಧ್ಯಾಹ್ನ ಮನೆ ಅಂಗಳದಲ್ಲಿ ಆಟವಾಡುತ್ತಿದ್ದರು. ನಂತರ ಕಾಣೆಯಾಗಿದ್ದರು. ರಾತ್ರಿಯವರೆಗೆ ಹುಡುಕಿದರೂ ಸಿಕ್ಕಿರಲಿಲ್ಲ. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪ್ರಕಾಶ ನಿಕ್ಕಂ ಸ್ಥಳಕ್ಕೆ ಭೇಟಿ ನೀಡಿ ತನಿಖೆಗೆ ಆದೇಶಿಸಿದ್ದಾರೆ.

‘ವಕೀಲರು ಹೇಳಿದಂತೆ ನಡೆಯುವೆ’

ರಾಮನಗರ: ‘ದೂರು ಹಿಂಪಡೆಯುವ ವಿಚಾರದಲ್ಲಿ ನಮ್ಮ ವಕೀಲರ ಮಾರ್ಗದರ್ಶನದಂತೆ ನಡೆಯುತ್ತೇನೆ’ ಎಂದು ರಮೇಶ್ ಜಾರಕಿಹೊಳಿ ವಿರುದ್ಧ ದೂರು ನೀಡಿರುವ ಸಾಮಾಜಿಕ ಕಾರ್ಯಕರ್ತ ದಿನೇಶ್ ಕಲ್ಲಹಳ್ಳಿ ಸೋಮವಾರ ತಿಳಿಸಿದರು.

ಕಲ್ಲಹಳ್ಳಿಯ ತಮ್ಮ ನಿವಾಸದ ಬಳಿ ಪತ್ರಕರ್ತರ ಜೊತೆ ಮಾತನಾಡಿದ ಅವರು ‘ದೂರು ಹಿಂಪಡೆಯಲು ಈಗಾಗಲೇ ಐದು ಪುಟಗಳ ಸವಿವರವಾದ ಅರ್ಜಿಯನ್ನು ವಕೀಲರ ಮೂಲಕ ಕೊಟ್ಟಿದ್ದೇನೆ. ಪೊಲೀಸರು ತನಿಖೆ ಮುಂದುವರಿಸುವ ಬಗ್ಗೆ ನನಗೆ ಗೊತ್ತಿಲ್ಲ. ಈಗಲೂ ನನ್ನ ದೂರಿಗೆ ಬದ್ಧನಾಗಿದ್ದೇನೆ’ ಎಂದರು.

ಕರ್ನಾಟಕ ಸರ್ಕಾರ

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಛೇರಿ, ಜಿಲ್ಲಾ ಕ್ಷಯರೋಗ ನಿಯಂತ್ರಣಾಧಿಕಾರಿಗಳ ಕಛೇರಿ, ಹಾಸನ–573201

ದೂ: 08172–297122 ಇ–ಮೇಲ್: dtokahas@rntcp.org

ಸಂಖ್ಯೆ:ಡಿ.ಟಿ.ಸಿ/ಟೆಂಡರ್/ಪ್ರ.ಶಾ.ಸಾ/181/2020–21 ದಿನಾಂಕ:05.03.2021

ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ

2020–21ನೇ ಸಾಲಿಗೆ ಜಿಲ್ಲಾ ಕ್ಷಯರೋಗ ನಿಯಂತ್ರಣಾಧಿಕಾರಿಗಳ ಕಛೇರಿ, ಹಾಸನ ಇಲ್ಲಿಗೆ ಪ್ರಯೋಗ ಶಾಲಾ ರಾಸಾಯನಿಕಗಳು ಮತ್ತು ಇನ್ನಿತರೆ ಸಾಮಗ್ರಿಗಳನ್ನು ಖರೀದಿಸಲು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಹೊರಡಿಸಿದ್ದು, ದಿನಾಂಕ: 13.03.2021ಕ್ಕೆ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕವಾಗಿರುತ್ತದೆ. Tender No:DHFWS/2020-21/IND4751 ಹೆಚ್ಚಿನ ನಿಯಮ ಹಾಗೂ ಮಾಹಿತಿಯನ್ನು http://www.eproc.karnataka.gov.in ವೆಬ್‌ಸೈಟ್‌ನಲಲಿ ಪಡೆಯಬಹುದಾಗಿರುತ್ತದೆ.

ಸಹಿ/– ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು, ಹಾಸನ.

ವಾಸಾಸಂಇ/ಹಿಸನಿ/ಹಾಸನ/ಎಂಸಿಎ/697/2020–21

ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ

(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)

(CIN - UO4010KA2002SGC030438)

ಸಂಕ್ಷಿಪ್ತ ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ)

ಬೆವಿಕಂ ವಿಚಾರಣ ಸಂಖ್ಯೆ. ಅಇಂವಿ/ಬಿಸಿಎಸ್/ಸಕಾನಿಇಂ/ಸಿವಿಲ್/ವಿ/20–21/01 ರ ಅನ್ವಯ ಬೆಂಗಳೂರು, ಬೆವಿಕಂ, ಹೆಚ್‌ಎಸ್‌ಆರ್ ವಿಭಾಗೀಯ ಕಛೇರಿ ಆವರಣದಲ್ಲಿ ಲಿಫ್ಟ್ ಸೌಲಭ್ಯ, ಸಭಾಂಗಣ ಹಾಗೂ ಲ್ಯಾಂಡ್‌ಸ್ಕೇಪಿಂಗ್ ಕಾಮಗಾರಿಗಳ ನಿರ್ಮಾಣಕ್ಕಾಗಿ ದ್ವಿಲಕೋಟೆ ಪದ್ಧತಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಿದೆ. ಟೆಂಡರಿಗಿಟ್ಟ ಮೊತ್ತ (ಅಂದಾಜು): ರೂ.46.15 ಲಕ್ಷಗಳು. ಟೆಂಡರ್ ವಿವರಣೆ/ಸ್ಪಷ್ಟತೆಗಾಗಿ ವಿಚಾರಿಸಲು ಕೊನೆಯ ದಿನಾಂಕ:– 24–03–2021 ರ ಸಮಯ 17.30 ಗಂಟೆಯವರೆಗೆ. ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ:– 26–03–2021 ರ ಸಮಯ 16.00 ಗಂಟೆಯವರೆಗೆ. ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ :– 29–03–2021 ರ ಸಮಯ 11.00 ಗಂಟೆಗೆ. ದರ ಬಿಡ್‌ಗಳನ್ನು ತೆರೆಯುವ ದಿನಾಂಕ ಹಾಗೂ ಸಮಯ:– ನಂತರ ತಿಳಿಸಲಾಗುವುದು. ಟೆಂಡರ್‌ನಲ್ಲಿ ಭಾಗವಹಿಸುವ ಬಗ್ಗೆ ವಿವರಗಳನ್ನು ವೆಬ್‌ಸೈಟ್ http://eproc.karnataka.gov.in ನಲ್ಲಿ ದಿನಾಂಕ 10–03–2021 ರಂದು ಅಥವಾ ನಂತರ ಭೇಟಿ ನೀಡಿ ಪಡೆಯಬಹುದು. ಯಾವುದೇ ಸ್ಪಷ್ಟತೆಗಾಗಿ ಇ–ಪ್ರೊಕ್ಯೂರ್‌ಮೆಂಟ್ ಸಹಾಯವಾಣಿ +91–080–46010000, +91–080–68948777 ಅಥವಾ ಇ–ಮೇಲ್ support@eprochelpdesk.com ಮೂಲಕ ಸಂಪರ್ಕಿಸಿ.

ಸಹಿ/– ಅಧೀಕ್ಷಕ ಇಂಜಿನಿಯರ್ (ವಿ), ಬೆಂಗಳೂರು ದಕ್ಷಿಣ ವೃತ್ತ, ಬೆವಿಕಂ

ವಿದ್ಯುತ್ ಸಂಬಂಧಿತ ದೂರುಗಳಿಗೆ ಕರೆ ಮಾಡಿ : 1912

ಬೆಸ್ಕಾಂ ಮಿತ್ರ MOBILE APP ಡೌನ್‌ಲೋಡ್ ಮಾಡಿಕೊಳ್ಳಿ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ ಕಛೇರಿ, ಮಹಾಲಕ್ಷ್ಮಿಪುರಂ ವಿಭಾಗ, 12ನೇ ಮೈನ್, 11ನೇ ಕ್ರಾಸ್, ವೆಸ್ಟ್ ಆಫ್ ಕಾರ್ಡ್ ರಸ್ತೆ, ಬಿಬಿಎಂಪಿ, ಬೆಂಗಳೂರು.

ನಂ: ಕಾಪಾಅ/ಮಹಾಲಕ್ಷ್ಮಿಪುರಂ/ಇ–ಪ್ರೋಕ್/15/2020–21 ದಿನಾಂಕ: 08.03.2021

ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ)

(ಅಲ್ಪಾವಧಿ ಟೆಂಡರ್ ಪ್ರಕಟಣೆ : ದ್ವಿ ಟೆಂಡರ್ ಡಾಕ್ಯೂಮೆಂಟ್ ಸಿಸ್ಟಮ್)

(ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಕಾರ್ಯಪಾಲಕ ಅಭಿಯಂತರರು, ಮಹಾಲಕ್ಷ್ಮಿಪುರಂ ವಿಭಾಗ, ಬಿಬಿಎಂಪಿ ಬೆಂಗಳೂರು ಇವರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ/ ಕೆ.ಪಿ.ಡಬ್ಲ್ಯೂ.ಡಿ/ ಸಿ.ಪಿ.ಡಬ್ಲ್ಯೂ.ಡಿ / ರೈಲ್ವೇಸ್/ ಎಂ.ಇ.ಎಸ್/ ರಾಷ್ಟ್ರೀಯ ಹೆದ್ದಾರಿ ಅಥವಾ ಯಾವುದೇ ರಾಜ್ಯ ಸರ್ಕಾರದ ಸಂಸ್ಥೆಗಳಲ್ಲಿ ನೋಂದಾಯಿತ ಅರ್ಹ ವರ್ಗ–1 ಗುತ್ತಿಗೆದಾರರಿಂದ ಈ ಕೆಳಕಂಡ ಕಾಮಗಾರಿಗಳಿಗೆ ಐಟಂವಾರು ಟೆಂಡರನ್ನು ಆಹ್ವಾನಿಸಿದ್ದಾರೆ.

ಕ್ರ ಸಂ.	ಕಾಮಗಾರಿಯ ವಿವರಗಳು	ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)
1	ವಾರ್ಡ್ ಸಂಖ್ಯೆ 74, ಶಕ್ತಿಗಣಪತಿನಗರ, ಎನ್‌ಜಿಒ ಕಾಲೋನಿ, ಚಂದ್ರನಗರ, ಕುವೆಂಪು ರಸ್ತೆಯಲ್ಲಿ ಸಿಸಿಟಿವಿ ಕ್ಯಾಮರಾಗಳನ್ನು ಸರಿಪಡಿಸುವುದು ಮತ್ತು ಒದಗಿಸುವುದು. ಮತ್ತು ಸುತ್ತಮುತ್ತಲಿನ ಪ್ರದೇಶದಲ್ಲಿ ಇತರ ಅಭಿವೃದ್ಧಿ ಕಾರ್ಯಗಳು.	100.00
ಇ.ಎಂ.ಡಿ. (ರೂ.ಗಳಲ್ಲಿ)	ಸರ್ಕಾರ ಆದೇಶದ ಪ್ರಕಾರ ಇಎಂಡಿ ಬದಲಾಗಿ ಟೆಂಡರರ್ ಪ್ರಕಟಣೆಯ ಸಂಖ್ಯೆ : ಆಇ/675 ವೆಚ್ಚ–12/2020 ಬೆಂಗಳೂರು, ದಿನಾಂಕ : 22.12.2021.	

(1) ಆನ್‌ಲೈನ್ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರ್ ಸಲ್ಲಿಸುವ ದಿನಾಂಕ : 29.03.2021 ರಂದು 15.00 ಗಂಟೆಯವರೆಗೆ ಮತ್ತು ಟೆಂಡರ್ ತೆರೆಯುವ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮಾರ್ಗಸೂಚಿಗಳ ಪ್ರಕಾರ ಇರುತ್ತದೆ. (2) ಪೂರ್ವ ಬಿಡ್ ಸಭೆ 16.03.2021 ರಂದು 11.30 ಗಂಟೆಗೆ ಕಚೇರಿಯ ವಿಳಾಸ : ಕಾರ್ಯಪಾಲಕ ಅಭಿಯಂತರರು, ಮಹಾಲಕ್ಷ್ಮಿಪುರಂ ವಿಭಾಗ ಇಲ್ಲಿ ನಡೆಯಲಿದೆ ಮತ್ತು ಬಿಡ್ಡಿಂಗ್ ಡಾಕ್ಯುಮೆಂಟ್‌ನ "ಬಿಡ್‌ದಾರರಿಗೆ ಸೂಚನೆಗಳು" ಅಲ್ಲಿ ಹೇಳಿರುವಂತೆ ಆ ಹಂತದಲ್ಲಿ ಇರುವ ಯಾವುದೇ ವಿಷಯದ ಕುರಿತು ಪ್ರಶ್ನೆಗಳಿಗೆ ಉತ್ತರಿಸಲಾಗುವುದು. (3) ತಾಂತ್ರಿಕ ಬಿಡ್ ತೆರೆಯುವ ವೆಬ್‌ಸೈಟ್ https://eproc.karnataka.gov.in ಕಛೇರಿ ಕಾರ್ಯಪಾಲಕ ಅಭಿಯಂತರರು, ಮಹಾಲಕ್ಷ್ಮಿಪುರಂ ವಿಭಾಗ ದಿನಾಂಕ 31.03.2021 ರ ಸಂಜೆ 17.00 ಗಂಟೆಗೆ & ನಂತರ ತೆರೆಯಲಾಗುವುದು. ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ವೆಬ್‌ಸೈಟ್ https://eproc.karnataka.gov.in ನಲ್ಲಿ ಪಡೆಯಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು, ಮಹಾಲಕ್ಷ್ಮಿಪುರಂ ವಿಭಾಗ.

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.

ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

CENTRAL SLIVER PLANT
KHADI AND VILLAGE INDUSTRIES COMMISSION
Ministry of MS & ME GOVT. OF INDIA
No.9, 10 &11, KELAKOTE INDUSTRIAL AREA,
CHITRADURGA -577 501. Karnataka State, Mob: 9448455466

No.:KNT/CSP/Chitradurga/Refurbishment/2020-21/ Dt : 09.03.2021

NOTIFICATION

Applications are invited from the candidates possessing minimum Bachelor degree in Mechanical Engineering for engaging as Mechanical / Electrical Consultant for renovation / upgradation of humidification plant under refurbishment program of Central Sliver Plant of Khadi & V.I. Commission, Chitradurga on contract basis for the period 6 months or **upto 31.12.2021,** which may be extended for further period upon the performance of the selected candidates. The interested persons fulfilling the eligibility criteria shall submit their application **on or before 24.03.2021 at 3.00 p.m.**

For further details of qualification, experience, job description, remuneration, age limit etc., please visit **www.kvic.org.in**

Sd/-
Project Manager, CSP, KVIC, CHITRADURGA

ಕರ್ನಾಟಕ ಸರ್ಕಾರ

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಾರ್ಯಾಲಯ ಕೊಪ್ಪಳ.

ಸಂಖ್ಯೆ: ಡಿ.ಹೆಚ್.ಓ/ಸಾರಿಗೆ/106/2020–21 ದಿನಾಂಕ: 08.03.2021

ಅಲ್ಪಾವಧಿ ಟೆಂಡರ್ ಅಧಿಸೂಚನೆ

2020–21ನೇ ಸಾಲಿನ ಜಿಲ್ಲಾ ಪಂಚಾಯತ್ ಅನುದಾನದಲ್ಲಿ ಅವಶ್ಯವಿರುವ ಹೊಸ ಅಂಬ್ಯುಲೆನ್ಸ್ ವಾಹನವನ್ನು ಖರೀದಿಸಲು ಅಲ್ಪಾವಧಿ ಟೆಂಡರ್ ಕರೆಯಲಾಗಿದೆ.

1)ಭರ್ತಿ ಮಾಡಿದ ಟೆಂಡರ್‌ನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಅವಧಿ : 19.03.2021 ರಂದು ಸಾಯಂಕಾಲ 5–00 ಗಂಟೆಯೊಳಗೆ. 2) ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 22.03.2021 ರಂದು ಬೆಳಿಗ್ಗೆ 11–00 ಗಂಟೆಗೆ. 3) ಆರ್ಥಿಕ ಬಿಡ್ ತೆರೆಯುವ ದಿನಾಂಕ: 24.03.2021 ರಂದು ಬೆಳಿಗ್ಗೆ 11–00 ಗಂಟೆಗೆ

ಸಹಿ/– ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ, ಅಧಿಕಾರಿಗಳು ಕೊಪ್ಪಳ.

ಡಿಐಪಿಆರ್/ಕೊಪ್ಪಳ/452/ಎಂಸಿಎ/2020–21

ಕರ್ನಾಟಕ ಸರ್ಕಾರ

ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖೆ

ಕೆ.ಆರ್.ವೃತ್ತ, ಬೆಂಗಳೂರು–560001, ದೂ: 91–080–22212408, ಫ್ಯಾಕ್ಸ್: 91–080–22277528

ಸಂಖ್ಯೆ: SSLR/STR/KH/79/2020-21 ದಿನಾಂಕ : 02.03.2021

ಈ ಕಛೇರಿಯ ಉಪಯೋಗಕ್ಕೆ ಹೌಸ್ ಕೀಪಿಂಗ್, ಸೆಕ್ಯೂರಿಟಿ ಗಾರ್ಡ್, ವಾಹನ ಚಾಲಕರು ಮತ್ತು ಕಂಪ್ಯೂಟರ್ ಆಪರೇಟರ್ ಸೇವೆಯನ್ನು ಹೊರಗುತ್ತಿಗೆ ಆಧಾರದ ಮೇಲೆ ಪಡೆಯುವ ಬಗ್ಗೆ.

ಈ ಕಛೇರಿಯ ಉಪಯೋಗಕ್ಕೆ ಹೌಸ್ ಕೀಪಿಂಗ್–05, ಸೆಕ್ಯೂರಿಟಿ ಗಾರ್ಡ್–02, ವಾಹನ ಚಾಲಕರು–10 ಮತ್ತು ವ್ಯವಸ್ಥಾಕರು/ವೈಯಕ್ತಿಕ ಅಧಿಕಾರಿ–01, ಹುದ್ದೆಗಳ ಸೇವೆಯನ್ನು ಹೊರಗುತ್ತಿಗೆ ಆಧಾರದ ಮೇಲೆ ಒದಗಿಸುವ ಸಂಬಂಧ ಆಸಕ್ತಿ ಇರುವ ಖಾಸಗಿ ಸಂಸ್ಥೆಗಳಿಂದ ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ದಾಖಲೆಗಳ ಹಾಗೂ ಇದಕ್ಕೆ ಸಂಬಂಧಿಸಿದ ಇತರೆ ಮಾಹಿತಿಯನ್ನು e-Procument Portal http://www.eproc.karnataka.gov.in ನಲ್ಲಿ ದಿನಾಂಕ: 08.03.2021 ರಿಂದ ಲಭ್ಯವಿರುತ್ತದೆ. ಆಸಕ್ತ ಸಂಸ್ಥೆಗಳು ಇ–ಆಡಳಿತ ಕೇಂದ್ರದಲ್ಲಿ ನೊಂದಾಯಿಸಿಕೊಂಡು ಬಿಡ್ಡಿಂಗ್ ಪ್ರಕ್ರಿಯೆಯಲ್ಲಿ ಭಾಗವಹಿಸಬಹುದಾಗಿದೆ. ಪ್ರಸ್ತಾವನೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 18.03.2021 ಸಂಜೆ 5.30 ಗಂಟೆ ಆಗಿರುತ್ತದೆ.

ಸಹಿ/– ಆಯುಕ್ತರು, ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳು, ಬೆಂಗಳೂರು

ವಾಸಾಸಂಇ/ಬೆಂ.ನ/ಶಿರಡಿ ಸಾಯಿ/3046/2020–21

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.

ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರಕಾರ

(ಲೋಕೋಪಯೋಗಿ ಇಲಾಖೆ)

ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ, ಚಿಕ್ಕೋಡಿ

ನಂ.ಲೋ.ಇ./ಚಿ.ವಿ./ಸ.ಇಂ.–1/ಟೆಂಡರ/2020–21/6936 ದಿನಾಂಕ:06/03/2021

ಅಲ್ಪಾವಧಿ ಇ–ಟೆಂಡರ ಪ್ರಕಟಣೆ

ಲೋಕೋಪಯೋಗಿ ಇಲಾಖೆ ಚಿಕ್ಕೋಡಿ ವಿಭಾಗದಡಿ 2020–21 ನೇ ಸಾಲಿನ ಲೆಕ್ಕ ಶಿರ್ಷಿಕೆ 5054–ಜಿಲ್ಲಾ ಮುಖ್ಯ ರಸ್ತೆ ಸುಧಾರಣೆ ಅಡಿ 1 ಕಾಮಗಾರಿ ಮತ್ತು ಲೆಕ್ಕ ಶಿರ್ಷಿಕೆ 3054–ರಾಜ್ಯ ಹೆದ್ದಾರಿ ನಿರ್ವಹಣೆ ಅಡಿ 1 ಕಾಮಗಾರಿ, ಹೀಗೆ ಒಟ್ಟು 2 ಕಾಮಗಾರಿಗಳು ಗುತ್ತಿಗೆ ಇಟ್ಟ ಮೊತ್ತ ರೂ. 350.88 ಲಕ್ಷ ಹಾಗೂ ರೂ. 263.16 ಲಕ್ಷಗಳು ಇರುತವೆ.

ಗುತ್ತಿಗೆ ಪ್ರಕ್ರಿಯೆಯ ನಿಗದಿತ ದಿನಾಂಕಗಳು ಈ ಕೆಳಗಿನಂತೆ ಇರುವುದು

1)ಗುತ್ತಿಗೆ ಪೂರ್ವಭಾವಿ ಸಭೆ ವಿಭಾಗ ಕಚೇರಿಯಲ್ಲಿ:12–03–2021 ರಂದು (11.00 ಗಂಟೆಗೆ), 2)ಆಕ್ಷೇಪಣೆ –ಸಂದೇಹ ಮತ್ತು ವಿವರಣೆಗಳಿಗೆ ಕೊನೆಯ ದಿನಾಂಕ:16–03–2021 (ಸಾಯಂಕಾಲ 5.30 ಗಂಟೆಯ ವರೆಗೆ), 3)ಗುತ್ತಿಗೆ ಪತ್ರಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ:18–03–2021 (ಸಾಯಂಕಾಲ 5.00 ಗಂಟೆಯವರೆಗೆ), 4)ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ (Two Cover System): 20–03–2021 (ಸಾಯಂ ಕಾಲ 4.30 ಗಂಟೆಗೆ), 5)ಹಣಕಾಸು ಬಿಡ್‌ನ್ನು ತೆರೆಯುವ ದಿನಾಂಕ (Two Cover System): “ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ”

ಕಾಮಗಾರಿಗಳ ಎಲ್ಲ ವಿವರಗಳಿಗಾಗಿ ಇಲಾಖೆಯ ವೆಬಸೈಟ್ www.eproc.karnataka.gov.in ನ್ನು ಮತ್ತು ಟೆಂಡರ ಪ್ರಕಟಣೆಗಾಗಿ www.kpwd.gov.in ನ್ನು ಗಮನಿಸಲು ಅಥವಾ ಲೋಕೋಪಯೋಗಿ ಇಲಾಖೆ ವಿಭಾಗ ಚಿಕ್ಕೋಡಿ ಕಾರ್ಯಾಲಯವನ್ನು ಕಚೇರಿಯ ವೇಳೆಯಲ್ಲಿ ಸಂಪರ್ಕಿಸಲು ಕೋರಲಾಗಿದೆ.

ಸಹಿ/–ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ, ವಿಭಾಗ ಚಿಕ್ಕೋಡಿ.

DIPR/BGM/RO-NO-1509/MCA/2020-21

ಕರ್ನಾಟಕ ಸರ್ಕಾರ

ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ,ಕಲಬುರಗಿ ವಿಭಾಗ ಕಲಬುರಗಿ

ಸಂ.ಕಾನಿಅ/ಲೋಇ/ಕವಿ/ತಾಶಾ–3/.ಟೆಂಡರ್.ಅಧಿಸೂಚನೆ/2020–21/8020 ದಿನಾಂಕ: 06.03.2021

ಅಲ್ಪಾವಧಿ ಟೆಂಡರ್ ಅಧಿಸೂಚನೆ

1) ಕಾಮಗಾರಿ ವಿವರ : ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ, ಇಲಾಖೆ, ಕಲಬುರಗಿ ವಿಭಾಗ ಕಾರ್ಯಾಲಯದಿಂದ ಲೆಕ್ಕ ಶೀರ್ಷಿಕೆ 5054 ಎಸ್.ಸಿ.ಪಿ/ಟಿ.ಎಸ್.ಪಿ ಮತ್ತ ನೆರೆಹಾವಳಿ ಅತಿವೃಷ್ಟಿ ಯೋಜನೆಯಡಿಯಲ್ಲಿ (03) ಕಾಮಗಾರಿಗಳಿಗೆ e-procurement ಮುಖಾಂತರ ಟೆಂಡರ ಕರೆಯಲಾಗಿದೆ. 2) ಕಾಮಗಾರಿ ಅಂದಾಜು ಮೊತ್ತ : ಕನಿಷ್ಠ ರೂ. 44.57 ಲಕ್ಷಗಳು ಗರಿಷ್ಠ ರೂ. 352.83 ಲಕ್ಷಗಳು, 3) ಗುತ್ತಿಗೆದಾರರ ಅರ್ಹತೆ ವಿವರ : ಈ ಕಾಮಗಾರಿಗೆ ಟೆಂಡರ ಸಲ್ಲಿಸುವವರು, ಲೋಕೋಪಯೋಗಿ ಇಲಾಖೆಯಲ್ಲಿ ಒಂದನೇ ದರ್ಜೆ ನೊಂದಾಯಿತ ಗುತ್ತಿಗೆದಾರರಾಗಿರಬೇಕು, 4) ಟೆಂಡರ ಅರ್ಜಿಯ ಬೆಲೆ ಹಾಗೂ ಇ.ಎಮ್.ಡಿ. ಮೊತ್ತದ ವಿವರ : ಅರ್ಜಿ ಬೆಲೆ e-procurement ನಂತೆ, ಇ.ಎಮ್.ಡಿ. ಡಿಕ್ಲೆರೆಶನ ಸರಕಾರ ಆದೇಶದಂತೆ, 5) ಪ್ರೀ ಬಿಡ್ ಮಿಟಿಂಗ : 12/03/2021 (11.00 ಗಂಟೆ), 5) ಟೆಂಡರ ಬಗ್ಗೆ ಮಾಹಿತಿ ಹಾಗು ಸಷಪಷ್ಟೀಕರಣ ಕೋರುವ ಕೊನೆಯ ದಿನಾಂಕ : 15/03/2021 (17.30 ಗಂಟೆ), 6) ಟೆಂಡರ ಸಲ್ಲಿಸುವ ಕೊನೆಯ ದಿನಾಂಕ : 16/03/2021 (16.00 ಗಂಟೆ), 7) ತಾಂತ್ರಿಕ ಬಿಡ್ ತೆರವುಗೊಳಿಸುವ ದಿನಾಂಕ : 17/03/2021 (16.30 ಗಂಟೆ), 8) ಆರ್ಥಿಕ ಬಿಡ್ ತೆರೆವುಗೋಳಿಸುವ ದಿನಾಂಕ : 20/03/2021 (16.30 ಗಂಟೆ), 9) ಹೆಚ್ಚಿನ ವಿವರಗಳಿಗೆ : ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ, ಇಲಾಖೆ, ವಿಭಾಗ ಕಲಬುರಗಿ ಕಚೇರಿ, 10) ಅಂತರ್ಜಾಲ ತಾಣದ ವಿಳಾಸ : www.e-proc.karnataka.gov.in

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ ಕಲಬುರಗಿ

ವಾ.ಸಾ.ಸಂ.ಇ/ಕಲಬುರಗಿ/1054/ಎಂ.ಸಿ.&ಎ/2020–21

ಕಾಗಿನೆಲೆ ಅಭಿವೃದ್ಧಿ ಪ್ರಾಧಿಕಾರ, ಕಾಗಿನೆಲೆ, ಬ್ಯಾಡಗಿ ತಾಲೂಕ, ಹಾವೇರಿ ಜಿಲ್ಲೆ

ಸಂ:ಆಯುಕ್ತರು/ಕಾಅಪ್ರಾ/ಟೆಂಡರ್/2020–21/125 ದಿನಾಂಕ : 05–03–2021

ಟೆಂಡರ್ ಪ್ರಕಟಣೆ (E-GOK ಇ–ಪ್ರಕ್ಯೂರಮೆಂಟ್ ಮುಖಾಂತರ ಮಾತ್ರ)

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದ್ಯಾದೇಶ 1999–2000ರ ಪ್ರಕಾರ ಆಕ್ಟ್ 2000ರ ನಿಯಮದಂತೆ ಸ್ಟ್ಯಾಂಡರ್ಡ ಟೆಂಡರ್ ಡಾಕ್ಯೂಮೆಂಟ್‌ನ ಸೂಕ್ತ ಕೆ/ಡಬ್ಲೂ ನಿಯಮದನ್ವಯ ಇ–ಪ್ರಕ್ಯೂರಮೇಂಟ್ ಪೋರ್ಟಲ್ ಮುಖಾಂತರ ಟೆಂಡರ್‌ನ್ನು ಈ ಕೆಳಗಡೆ ಸಹಿ ಮಾಡಿರುವವರು ಆಹ್ವಾನಿಸಿರುತ್ತಾರೆ. ಲೋಕೋಪಯೋಗಿ ಇಲಾಖೆಯಲ್ಲಿ ಸೂಕ್ತ ದರ್ಜೆಯಲ್ಲಿ ನೊಂದಾಯಿಸಿರುವ ಅರ್ಹ ಸಿವಿಲ್ ಗುತ್ತಿಗೆದಾರರು ಇ–ಪ್ರಕ್ಯೂರಮೆಂಟ್ ಪೋರ್ಟಲ್ http://eproc.karnataka.gov.in ಮುಖಾಂತರ ಕರೆದಿರುವ ಈ ಕೆಳಕಂಡ ಕಾಮಗಾರಿಗಳಿಗೆ ಟೆಂಡರ್‌ನಲ್ಲಿ ಭಾಗವಹಿಸುವುದು.

(1) ಖಾಲಿ ಟೆಂಡರ್ ಫಾರಂಗಳಿಗಾಗಿ ಅರ್ಜಿಸಲ್ಲಿಸಲು ಹಾಗೂ ಭರ್ತಿಮಾಡಿದ ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 05–04–2021 ರ 16.30 ಗಂಟೆವರೆಗೆ. (2) ತಾಂತ್ರಿಕ ಬಿಡ್ ತೆರೆಯುವ ದಿನಾಂಕ (ಕ್ರ.ಸಂ:1 ಮತ್ತು 2): 06–04–2021 ರ ಬೆಳಿಗ್ಗೆ 11.30 ಗಂಟೆಗೆ (3) ಅರ್ಹ ಗುತ್ತಿಗೆದಾರರ ಆರ್ಥಿಕ ಬಿಡ್ ತೆರೆಯುವ ದಿನಾಂಕ (ಎಲ್ಲ ಕಾಮಗಾರಿಗಳು): 08–04–2021 ರ ಬೆಳಿಗ್ಗೆ 11.30 ಗಂಟೆಗೆ

ಅ. ನಂ.	ಕಾಮಗಾರಿ ಹೆಸರು	ಟೆಂಡರಿಗಿಟ್ಟ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಖಾಲಿ ಟೆಂಡರ್ ಫಾರಂ ಬೆಲೆ	ಟೆಂಡರ್‌ದಾರರ ವರ್ಗ	ಕಾಮಗಾರಿ ಪೂರ್ಣಗೊಳಿಸಲು ನಿಗದಿ ಪಡಿಸಿದ ಕಾಲಮಿತಿ (ಮಳೆಗಾಲ ಅವಧಿ ಸಹಿತ)
1	ಬ್ಯಾಡಗಿ ತಾಲ್ಲೂಕಿನ ಕಾಗಿನೆಲೆ ಆದಿಕೇಶವ ದೇವಸ್ಥಾನ ಹತ್ತಿರ ವಿವಿಧ ಅಭಿವೃದ್ಧಿ ಕಾಮಗಾರಿಗಳು.RD/2020-21/OW/WORK_INDENT164 (ಪ್ಯಾಕೇಜ್–1)	60.59	ಇ–ಪೋರ್ಟಲ್‌ನಲ್ಲಿ ನಮೂದಿಸಿದ ಹಾಗೆ	3 ನೇ ದರ್ಜೆ ಅಥವಾ ಅದಕ್ಕಿಂತ ಮೇಲೆ	6 ತಿಂಗಳು
2	ಬ್ಯಾಡಗಿ ತಾಲ್ಲೂಕಿನ ಕಾಗಿನೆಲೆ ಗ್ರಾಮದ ಕನಕ ಗದ್ದುಗೆ ದೇವಸ್ಥಾನದ ಹತ್ತಿರ ವಿವಿಧ ಅಭಿವೃದ್ಧಿ ಕಾಮಗಾರಿಗಳು. RD/2020-21/OW/WORK_INDENT165 (ಪ್ಯಾಕೇಜ್–2)	57.47		3 ನೇ ದರ್ಜೆ ಅಥವಾ ಅದಕ್ಕಿಂತ ಮೇಲೆ	6 ತಿಂಗಳು
3	ಬ್ಯಾಡಗಿ ತಾಲ್ಲೂಕಿನ ಕಾಗಿನೆಲೆ ಪರಿಸರ ಸ್ನೇಹಿ ಉದ್ಯಾನವನದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳು RD/2020-21/OW/WORK_INDENT163(ಪ್ಯಾಕೇಜ್–3)	49.35		3 ನೇ ದರ್ಜೆ ಅಥವಾ ಅದಕ್ಕಿಂತ ಮೇಲೆ	6 ತಿಂಗಳು
4	ಬ್ಯಾಡಗಿ ತಾಲ್ಲೂಕು ಕುಮ್ಮೂರು ಗ್ರಾಮದಲ್ಲಿನ ತಿಮ್ಮಕೇಶವ ದೇವಸ್ಥಾನಕ್ಕೆ ಮೆಟ್ಟಿಲು ನಿರ್ಮಾಣRD/2020-21/OW/WORK_INDENT162(ಪ್ಯಾಕೇಜ್–4)	11.67		4 ನೇ ದರ್ಜೆ	3 ತಿಂಗಳು
5	ಶಿಗ್ಗಾಂವ ತಾಲ್ಲೂಕು ಬಾಡ ಗ್ರಾಮದ ಕಾಗಿನೆಲೆ ಅಭಿವೃದ್ಧಿ ಪ್ರಾಧಿಕಾರದ ವಿವಿಧ ಅಭಿವೃದ್ಧಿ ಕಾಮಗಾರಿಗಳುRD/2020-21/OW/WORK_INDENT166(ಪ್ಯಾಕೇಜ್–5)	25.85		3 ನೇ ದರ್ಜೆ ಅಥವಾ ಅದಕ್ಕಿಂತ ಮೇಲೆ	3 ತಿಂಗಳು

ಟೆಂಡರನಲ್ಲಿಯ ನಿಬಂಧನೆಗಳನ್ನು ಹಾಗೂ ಷರತ್ತುಗಳ ವಿವರಗಳನ್ನು E-GOK ಇ–ಪ್ರಕ್ಯೂರಮೆಂಟ್ ಪ್ಲಾಟಫಾರಂನಲ್ಲಿ www.eproc.karnataka.gov.in ರಲ್ಲಿ ಪಡೆಯಬಹುದು ಹಾಗೂ ಕಾಗಿನೆಲೆ ಅಭಿವೃದ್ಧಿ ಪ್ರಾಧಿಕಾರ ಕಾರ್ಯಾಲಯ ಸಂಪರ್ಕಿಸಿ ಹೆಚ್ಚಿನ ಮಾಹಿತಿಯನ್ನು ಪಡೆಯಬಹುದು. (ದೂರವಾಣಿ : 08375–289388). ಸಹಿ/– ಆಯುಕ್ತರು, ಕಾಗಿನೆಲೆ ಅಭಿವೃದ್ಧಿ ಪ್ರಾಧಿಕಾರ, ಕಾಗಿನೆಲೆ, ತಾ: ಬ್ಯಾಡಗಿ, ಜಿ. ಹಾವೇರಿ

ವಾಸಾಸಂಇ/ಹಾವೇರಿ/ಎಂಸಿಎ/382/2020–21

ಕ್ಷೇಮ ಕುಶಲ

ಆಹಾರವೇ ಯೋಗ ಆಹಾರವೇ ರೋಗ

ಋತುಚರ್ಯೆಯಲ್ಲಿ ಆರೋಗ್ಯಭಾಗ್ಯ

ಡಾ. ಅನಿತಾ ರವಿ

ಋತುವಿಗೆ ತಕ್ಕಂತೆ ಮನುಷ್ಯನ ದೇಹದಲ್ಲಿಯೂ ಬದಲಾವಣೆ ಸಹಜ. ಅದಕ್ಕೆ ಪೂರಕವಾಗಿ ಆರೋಗ್ಯಕರವಾದ ಆಹಾರ ವಿಹಾರಗಳನ್ನು ಪಾಲಿಸುವುದೇ ಋತುಚರ್ಯೆ. ಮಾನಸಿಕ ದೈಹಿಕ ಸ್ವಸ್ಥತೆಯನ್ನು ಸದಾ ಕಾಲ ಕಾಪಾಡಿಕೊಳ್ಳುವುದೇ ಆಯುರ್ವೇದದ ಮೊದಲ ಧ್ಯೇಯ; ದಿನಚರ್ಯೆ, ಋತುಚರ್ಯೆಗಳ ಪಾಲನೆಯಿಂದ ಆರೋಗ್ಯವನ್ನು ಕಾಪಾಡಿಕೊಳ್ಳುವುದು.

ರೋಗಕ್ಕೆ ಮೊದಲ ಆಹ್ವಾನವೇ ಋತುಚರ್ಯವನ್ನು ಪಾಲಿಸದಿರುವುದು. ಇದನ್ನು ಈಗಿನ ಯುಗದಲ್ಲಿ 'ಲೈಫ್ ಸ್ಟೈಲ್ ಡಿಸೀಸಸ್' ಎಂದು ಕರೆಯಲಾಗುತ್ತಿದೆ. ಉದಾ: ರಕ್ತದ ಒತ್ತಡ, ಥೈರಾಯ್ಡ್ ಸಮಸ್ಯೆ, ಸಕ್ಕರೆಕಾಯಿಲೆ ಮುಂತಾದವು. ಋತುಗಳು ಆರು; ಪ್ರತಿ ಎರಡು ತಿಂಗಳಿಗೊಂದರಂತೆ; ಅವೇ ಶಿಶಿರ, ವಸಂತ, ಗ್ರೀಷ್ಮ, ವರ್ಷ, ಶರತ್, ಹೇಮಂತ.

ಋತುಚರ್ಯೆಗಳು ಮತ್ತು ಅವುಗಳ ಪಾಲನೆ

ಹೇಮಂತಋತು (ನವೆಂಬರ್ ಮಧ್ಯಭಾಗದಿಂದ - ಜನವರಿಯ ಮಧ್ಯಭಾಗದವರೆಗೆ)

ಶಿಶಿರಋತು (ಜನವರಿ ಮಧ್ಯಭಾಗದಿಂದ- ಮಾರ್ಚ್ ಮಧ್ಯಭಾಗದವರೆಗೆ):

ಋತುವಿನ ಗುಣಧರ್ಮ:

ಈ ಚಳಿಗಾಲದಲ್ಲಿ ತಂಗಾಳಿಯಿಂದಾಗಿ ದೇಹದ ಜೀರ್ಣಶಕ್ತಿಯು ವರ್ಧಿಸುತ್ತದೆ. ತೀಕ್ಷ್ಣ ಸೂರ್ಯಕಿರಣಗಳಿಂದ ಶುಷ್ಕತೆ ಹೆಚ್ಚುತ್ತದೆ.

- **ಆಹಾರ:** ಆಹಾರದಲ್ಲಿ ಜಿಡ್ಡಿನ ಅಂಶ ಉಳ್ಳ ಆಹಾರ ಪದಾರ್ಥಗಳು, ಹಾಲಿನ ಉತ್ಪನ್ನಗಳು, ಬಿಸಿ ನೀರು, ಕಬ್ಬಿನ ಹಾಲು, ಉಪ್ಪು, ಹುಳಿ ಅಂಶಗಳ ಆಹಾರ, ಮಾಂಸಸೇವನೆ.
- **ವಿಹಾರ:** ಅಭ್ಯಂಗ (ಮಸಾಜ್), ಬೆಚ್ಚನೆಯ ಬಟ್ಟೆಗಳನ್ನು ಧರಿಸುವುದು.
- **ನಿಷಿದ್ಧ:** ತೀಕ್ಷ್ಣ (ಖಾರ) ಕಟು, ತಂಪಾದ ಆಹಾರ ಸೇವನೆ. ಹಗಲಿನಲ್ಲಿ ನಿದ್ರೆ ಮಾಡುವುದು.

ವಸಂತಋತು (ಮಾರ್ಚ್ ಮಧ್ಯ ಭಾಗದಿಂದ ಮೇ ಮಧ್ಯ ಭಾಗದವರೆಗೆ)

- **ಗುಣ:** ಪ್ರಖರವಾದ ಸೂರ್ಯನ ಬಿಸಿಲು. ಇದರಿಂದಾಗಿ ಜೀರ್ಣ ಶಕ್ತಿ ಕಡಿಮೆಯಾಗುತ್ತದೆ.
- **ಆಹಾರ:** ಲಘು ಆಹಾರಸೇವನೆ, ಬಾರ್ಲಿ, ಗೋಧಿ.
- **ವಿಹಾರ:** ವ್ಯಾಯಾಮ.
- **ನಿಷಿದ್ಧ:** ಜೀರ್ಣವಾಗಲು ತುಂಬಾ ಸಮಯ ತೆಗೆದುಕೊಳ್ಳುವ ಸಿಹಿ ಪದಾರ್ಥಗಳು, ಜಿಡ್ಡಿನ ಆಹಾರ. ಹಗಲಿನಲ್ಲಿ ನಿದ್ರೆ ಮಾಡುವುದು.

ಗ್ರೀಷ್ಮಋತು (ಮೇ ಮಧ್ಯಭಾಗದಿಂದ - ಜುಲೈ ಮಧ್ಯ ಭಾಗದವರೆಗೆ)

- **ಗುಣ:** ಸೂರ್ಯನ ತೀಕ್ಷ್ಣ ಕಿರಣಗಳು ಭೂಮಿಯ ಮೇಲಿನ ನೀರಿನ ಅಂಶವನ್ನು ಆ ವಿ ಯಾ ಗಿ ಸು ವು ದ ರಿ ೦ ದ ದೇಹಬಲ ಕಡಿಮೆಯಾಗುತ್ತದೆ.
- **ಆಹಾರ:** ಸಿಹಿ ಆಹಾರ ಪದಾರ್ಥಗಳು, ತಂಪು ಪಾನೀಯಗಳು, ಜಿಡ್ಡು ಪದಾರ್ಥಗಳು, ತುಪ್ಪ, ಹಾಲು ಸೇವನೆ ಹಿತಕರ.
- **ವಿಹಾರ:** ಹಗಲಿನಲ್ಲಿ ತಂಪಾದ ಸ್ಥಳದಲ್ಲಿ ನಿದ್ರೆ ಹಿತವನ್ನು ಉಂಟುಮಾಡುತ್ತದೆ. ಚಂದನದಂತಹ ತಂಪಾದ ದ್ರವ್ಯಗಳ ಲೇಪನ.
- **ನಿಷಿದ್ಧ:** ವ್ಯಾಯಾಮ, ಹೆಚ್ಚು ಬಿಸಿಯಾದ, ಮಸಾಲೆ ಪದಾರ್ಥಗಳುಳ್ಳ ಆಹಾರ.

ವರ್ಷಋತು (ಜುಲೈ ಮಧ್ಯಭಾಗದಿಂದ - ಸೆಪ್ಟೆಂಬರ್ ಮಧ್ಯಭಾಗದವರೆಗೆ)

- **ಗುಣ:** ಮಳೆಗಾಲ; ದೇಹದಲ್ಲಿ ಜೀರ್ಣಶಕ್ತಿ, ದೇಹ ಬಲ, ರೋಗನಿರೋಧಕ ಶಕ್ತಿ ಅತ್ಯಂತ ಕಡಿಮೆಯಾಗಿರುತ್ತದೆ.
- **ಆಹಾರ:** ಬಾರ್ಲಿ, ಗೋಧಿ, ಜೀರ್ಣಕ್ಕೆ ಸುಲಭವಾಗುವ ಆಹಾರ. ಕುಡಿಯುವ ನೀರಿನೊಂದಿಗೆ ಜೇನುತುಪ್ಪವನ್ನು ಸೇರಿಸಿ ಸೇವಿಸುವುದು ಹಿತಕರ.
- **ವಿಹಾರ:** ಔಷಧೀಯ ಚೂರ್ಣಗಳ ಲೇಪ.
- **ನಿಷಿದ್ಧ:** ತಂಪು ಪಾನೀಯಗಳು, ಹಗಲುನಿದ್ರೆ.

ಶರತ್ ಋತು (ಸೆಪ್ಟೆಂಬರ್ ಮಧ್ಯಭಾಗದಿಂದ - ನವೆಂಬರ್ ಮಧ್ಯಭಾಗದ ವರೆಗೆ)

- **ಗುಣ:** ಮಳೆ ಕಡಿಮೆಯಾಗಿ, ಉಷ್ಣತೆಯು ಹೆಚ್ಚುವ ಕಾಲ.
- **ಆಹಾರ:** ಜೀರ್ಣಕ್ರಿಯೆಗೆ ಸುಲಭವಾಗುವ ಆಹಾರ, ತುಪ್ಪದ ಸೇವನೆ ಅತ್ಯಂತ ಹಿತಕರ.
- **ವಿಹಾರ:** ಅಭ್ಯಂಗನಿಷಿದ್ಧ, ಮಸಾಲೆ ಆಹಾರ ಪದಾರ್ಥಗಳು.

ಹಿತಮಿತವಾದ ಆಹಾರ-ವಿಹಾರ, ದಿನಚರ್ಯ ಋತುಚರ್ಯೆಗಳ ಪಾಲನೆ, ಸದ್ವಿಚಾರಗಳ ಚಿಂತನೆಗಳಿಂದ ಈಗಿನ ಧಾವಂತದ ಜೀವನಕ್ರಮದಲ್ಲೂ ಮನುಷ್ಯ ಸ್ವಸ್ಥನಾಗಿರಲು ಸಾಧ್ಯ.

ಆಹಾರಕ್ರಮ

ಶಿಶಿರ

ಪಥ್ಯ ಆಹಾರ: ಅಕ್ಕಿ, ಗೋಧಿ, ಎಳ್ಳು, ಹಾಲು, ಹಾಲಿನ ಉತ್ಪನ್ನ, ಕಬ್ಬು, ಬೆಲ್ಲ, ಜಿಡ್ಡಿನ ಪದಾರ್ಥಗಳು, ಹಿಟ್ಟಿನಿಂದ ತಯಾರಿಸಿದ ತಿನಿಸುಗಳು.
ಶುಂಠಿ, ಬೆಳ್ಳುಳ್ಳಿ, ಅಳಲೆಕಾಯಿ, ಹಿಪ್ಪಲಿ.
ಅಪಥ್ಯ ಆಹಾರ: ತಂಪು ಪಾನೀಯಗಳು, ಕಡಲೆಕಾಳು, ಉದ್ದಿನ ಬೇಳೆ, ಅವಲಕ್ಕಿ.

ವಸಂತ

ಪಥ್ಯ ಆಹಾರ: ಅಕ್ಕಿ, ಗೋಧಿ, ಜೋಳ, ಮೆಕ್ಕೆಜೋಳ, ಹೆಸರುಬೇಳೆ, ತೊಗರಿಬೇಳೆ, ಮಸೂರ, ಬಾರ್ಲಿ, ಜೇನುತುಪ್ಪ ಬೆರೆಸಿದ ನೀರು,
ಶುಂಠಿ, ಅರಿಶಿಣ, ತುಳಸಿ, ಬೇವು, ಖದಿರ, ಮುಸ್ತಾ, ಕೊತ್ತಂಬರಿ, ಜೀರಿಗೆ, ಮೆಂತ್ಯ.
ಅಪಥ್ಯ ಆಹಾರ: ತಂಪು ಪಾನೀಯಗಳು, ಸಿಹಿ ತಿನಿಸುಗಳು, ಹುಳಿ ಮೊಸರಿನಿಂದ ತಯಾರಿಸಿದ ಆಹಾರ, ಎಣ್ಣೆ ಜಿಡ್ಡಿನ ಪದಾರ್ಥಗಳು, ಮಾಂಸಾಹಾರ, ಉದ್ದಿನ ಬೇಳೆ.

ಗ್ರೀಷ್ಮ

ಪಥ್ಯ: ಅಕ್ಕಿ, ಹೆಸರು ಬೇಳೆ, ಸೌತೆಕಾಯಿ, ಮಾವಿನ ಹಣ್ಣು, ಕಲ್ಲಂಗಡಿ ಹಣ್ಣು, ಹಣ್ಣಿನ ರಸ, ಎಳನೀರು, ಮಜ್ಜಿಗೆ, ಕಾಳುಮೆಣಸಿನ ಪುಡಿ ಸೇರಿಸಿದ ಮೊಸರು, ಮಾಂಸರಸ, ಮೆಂತ್ಯೆ.
ಅಪಥ್ಯ: ಮೆಣಸಿನಕಾಯಿ, ಮಸಾಲೆ ಪದಾರ್ಥಗಳು, ಅತ್ಯಂತ ಬಿಸಿಯಾದ ಆಹಾರಸೇವನೆ, ಅತಿಯಾದ ಮಾಂಸಸೇವನೆ.

ವರ್ಷ

ಪಥ್ಯ: ಬಿಸಿಯಾದ ತಾಜಾ ಆಹಾರ, ಶುಂಠಿ, ನಿಂಬೆ, ಹಿಪ್ಪಲಿ, ಸೈಂಧವ ಲವಣ, ಕಾಳು ಮೆಣಸು, ಮಾಂಸ ರಸ, ವಿವಿಧ ತರಕಾರಿಗಳ ಸೂಪ್.
ಅಪಥ್ಯ: ಉಪ್ಪಿನಂಶ ಅಧಿಕವುಳ್ಳ ಆಹಾರ, ಹುದುಗಿಸಿದ ಆಹಾರ.

ಶರತ್

ಪಥ್ಯ: ಗೋಧಿ, ಹೆಸರು ಬೇಳೆ, ಸಿಹಿ ತಿನಿಸುಗಳು, ತುಪ್ಪ, ಪಡವಲಕಾಯಿ, ಸೊಪ್ಪುಗಳು, ಕಂದಮೂಲಗಳು.
ಅಪಥ್ಯ: ಹುದುಗಿಸಿದ ಆಹಾರ. ಮೆಣಸಿನ ಕಾಯಿ.

ಹೇಮಂತ

ಪಥ್ಯ: ಹೆಸರು ಬೇಳೆ, ಧಾನ್ಯಗಳು, ಜೋಳ, ಹಾಲಿನ ಉತ್ಪನ್ನಗಳು, ಪಾಲಕ್, ಖರ್ಜೂರ.
ಶುಂಠಿ, ಹಿಪ್ಪಲಿ, ಮೆಣಸು.
ಅಪಥ್ಯ: ಉದ್ದಿನ ಬೇಳೆ, ಕಡಲೆ ಕಾಳು.

ಋತು ಸಂಧಿ ಎನ್ನುವುದು ಎರಡು ಋತುಗಳು ಸಂಧಿಸುವ ಕಾಲ. ಹಿಂದಿನ ಋತುವಿನ ಕೊನೆಯ ಏಳು ದಿನಗಳು ಮತ್ತು ಮುಂಬರುವ ಋತುವಿನ ಆರಂಭದ ಏಳು ದಿವಸಗಳು. ಈ ಸಮಯದಲ್ಲಿ ಕಳೆದ ಋತುವಿನ ಆಹಾರಪದ್ಧತಿಯನ್ನು ನಿಧಾನವಾಗಿ ಬದಲಾಯಿಸುತ್ತಾ ಮುಂದಿನ ಋತುವಿನ ಆಹಾರಪದ್ಧತಿಗೆ ಒಗ್ಗಿಕೊಳ್ಳಬೇಕು.

ಚರ್ಮರೋಗದ ಮರ್ಮ

ಡಾ. ವಿಜಯಲಕ್ಷ್ಮಿ ಪಿ.

> ಎಲ್ಲ ಋತುಗಳಲ್ಲಿಯೂ ಒಂದಲ್ಲ ಒಂದು ರೀತಿಯಲ್ಲಿ ಚರ್ಮಕ್ಕೆ ಸಂಬಂಧಪಟ್ಟ ರೋಗಗಳು ಕಾಣಿಸಿಕೊಳ್ಳುತ್ತವೆ. ಅವುಗಳು ಬಾರದಂತೆ ಕೆಲವು ಮುನ್ನೆಚ್ಚರಿಕೆಗಳನ್ನು ತೆಗೆದುಕೊಳ್ಳಬಹುದು.

ಯಾವುದೇ ರೋಗನಿವಾರಣೆಗೆ ಮೂರು ಉಪಾಯಗಳು. 1. ರೋಗ ಬಾರದಂತೆ ದೇಹದ ರೋಗಕ್ಷಮತೆಯನ್ನು ಕಾಪಾಡಿಕೊಳ್ಳುವುದು 2. ರೋಗಕಾರಣಗಳಿಂದ ದೂರವಿರುವುದು 3. ಸೂಕ್ತವಾದ ಚಿಕಿತ್ಸೆ ಪಡೆಯುವುದು.

ನಮ್ಮ ದೇಹದ ಅತಿ ವಿಸ್ತಾರವಾದ ಅಂಗ ಎಂದರೆ ಅದು ಚರ್ಮ. ಎಲ್ಲ ಋತುಗಳಲ್ಲಿಯೂ ಒಂದಲ್ಲ ಒಂದು ರೀತಿಯಲ್ಲಿ ಚರ್ಮಕ್ಕೆ ಸಂಬಂಧಪಟ್ಟ ರೋಗಗಳು ಇರುತ್ತವೆ. ಚರ್ಮರೋಗ ಎಂದಾಗ ಮೈ ತುರಿಸುವುದು, ಗಂದೆ ಬರುವುದು, ಹುಣ್ಣಾಗುವುದು, ಚರ್ಮ ಒಡೆಯುವುದು, ಗಾಯಗಳಾಗಿ ರಕ್ತ ಬರುವುದು, ಮೈಯಲ್ಲಿ ಸಣ್ಣ ಸಣ್ಣ ಗುಳ್ಳೆಗಳಾಗುವುದು, ಹೀಗೆ ಅನೇಕ ವಿಧ. ಇದು ತೊಂದರೆ ಕೊಡಲು ಅನೇಕ ಕಾರಣಗಳುಂಟು. 1. ಆಹಾರಜನ್ಯ 2. ವಿಹಾರಜನ್ಯ 3. ವಿಚಾರಜನ್ಯ

ಆಹಾರ ಜನ್ಯಕಾರಣಗಳಲ್ಲಿ ಮುಖ್ಯವಾದದ್ದು:

- ಅತಿಯಾಗಿ ನಿರಂತರವಾಗಿ ಆರೋಗ್ಯಕ್ಕೆ ಒಳ್ಳೆಯದು ಎಂದು ಕಾಲ-ಅಕಾಲ, ತೆಗೆದುಕೊಳ್ಳುವ ಕ್ರಮಾಕ್ರಮಗಳ ವಿವೇಚನೆ ಇಲ್ಲದೆ ಜೇನುತುಪ್ಪವನ್ನು ನಿರಂತರವಾಗಿ ನಿತ್ಯವೂ ಸೇವಿಸುವುದು. ಬಿಸಿನೀರು ಅಥವಾ ಬಿಸಿ ಪದಾರ್ಥದೊಂದಿಗೆ, ಬೇಸಿಗೆ ಕಾಲದಲ್ಲಿ ನಿರಂತರವಾಗಿ ಜೇನುತುಪ್ಪ ಸೇವನೆ.
- ಅತಿಯಾಗಿ ಜಿಡ್ಡು ಹೆಚ್ಚಿರುವ ಪದಾರ್ಥಗಳು, ಕರಿದ ಪದಾರ್ಥಗಳ ಸೇವನೆ. ಇವುಗಳ ಜೊತೆಗೆ ಅತಿ ತಣ್ಣಗಿರುವ ಪದಾರ್ಥಗಳಾದ ಐಸ್ ಕ್ರೀಂ, ತಣ್ಣಗಿರುವ ಹಣ್ಣಿನ ರಸ, ಅತಿ ತಂಪಾದ ಪಾನೀಯ /ನೀರು ಸೇವಿಸುವುದು.
- ಹಸಿವಿಲ್ಲದಿರುವಾಗಲೂ ಪದೇ ಪದೇ ಆಹಾರ ಸೇವಿಸುವುದು.
- ಚಳಿಗಾಲದಲ್ಲಿ ಅತಿಯಾಗಿ ಬಿಸಿನೀರಿನ ಉಪಯೋಗ ಮಾಡುತಿದ್ದು, ವಸಂತದ ಪ್ರವೇಶವಾದೊಡನೆ ಅತಿ ತಣ್ಣಗಿನ ಆಹಾರ ಸೇವನೆ.
- ಮೀನು, ಮಾಂಸಗಳ ಜೊತೆ, ಹಾಲು ಮತ್ತು ಹಾಲಿನಿಂದ ತಯಾರಿಸಿದ ಪದಾರ್ಥಗಳ ಸೇವನೆ.
- ತೂಕ ಕಡಿಮೆ ಆಗಬೇಕೆಂದು ಅತಿಯಾಗಿ ಪಥ್ಯ ಮಾಡುತಿದ್ದವರು ತೂಕ ಕಡಿಮೆಯಾಯಿತೆಂದು ತಕ್ಷಣ ಅಪಥ್ಯ ಸೇವನೆ ಮಾಡುವುದು
- ಹಾಲಿನ ಜೊತೆಗೆ ಮೊಸರು, ಮಜ್ಜಿಗೆ /ಉಪ್ಪು / ಹಣ್ಣು / ಮಾಂಸ/ ಮೀನು ಇವುಗಳನ್ನು ಬೆರೆಸುವುದು ಮತ್ತು ಬೆರೆಸಿ ಆಹಾರ ತಯಾರಿಸಿ ಸೇವಿಸುವುದು.
- ಬದನೇಕಾಯಿ, ದಪ್ಪ ಮೆಣಸಿನಕಾಯಿ, ಟೊಮೆಟೊ, ಹಸಿಮೆಣಸಿನಕಾಯಿ, ಅಣಬೆ, ಅತಿಯಾದ ಮಸಾಲೆ ಪದಾರ್ಥಗಳ ಅತಿಸೇವನೆ.

ವಿಹಾರಕ್ಕೆ ಸಂಬಂಧಿಸಿದ ಕಾರಣಗಳು

- ಹೊಟ್ಟೆ ತುಂಬಾ ಆಹಾರ ಸೇವಿಸಿ, ಆಹಾರ ಜೀರ್ಣವಾಗುವ ಮೊದಲೇ ಅತಿಯಾದ ದೈಹಿಕ ಶ್ರಮ, ವ್ಯಾಯಾಮ ಮಾಡುವುದು, ಬಿಸಿಲಿನಲ್ಲಿ ತಿರುಗಾಡುವುದು, ಸ್ನಾನ ಮಾಡುವುದು, ಮೈಥುನಕ್ರಿಯೆ ನಡೆಸುವುದು.
- ಹಸಿವೆ, ಬಾಯಾರಿಕೆ, ಮಲ ಮೂತ್ರವಿಸರ್ಜನೆ, ವಾಂತಿ ಬರುವಿಕೆಗಳನ್ನು ತಡೆಯುವುದು.
- ಕೆಲವೊಮ್ಮೆ ತಣ್ಣೀರಿನ ಸ್ನಾನ ಕೆಲವು ದಿನ ಅತಿ ಬಿಸಿನೀರಿನ ಸ್ನಾನ ಮಾಡುವುದು.
- ನಿರಂತರವಾಗಿ ತಂಪು ಮತ್ತು ಬಿಸಿ ವಾತಾವರಣಗಳ ಬದಲಾವಣೆ (ಎಸಿ ಯಿಂದ ಬಿಸಿಲಿಗೆ ಮತ್ತೆ ಎಸಿ ವಾತಾವರಣಕ್ಕೆ ಬದಲಾವಣೆ)
- ಬಿಸಿಲಿನಿಂದ ಬಂದ ನಂತರ, ವ್ಯಾಯಾಮದ ನಂತರ, ಅತಿ ಶ್ರಮ, ಭಯ, ಸಿಟ್ಟು, ಶೋಕದಿಂದ ಪೀಡಿತರಾದವರು ತಕ್ಷಣ ಅತಿ ತಂಪಾದ ನೀರಿನಲ್ಲಿ ಸ್ನಾನ ಮಾಡುವುದು.
- ಪಂಚಕರ್ಮ ಚಿಕಿತ್ಸೆ ಮಾಡಿಸಿಕೊಂಡು ನಂತರ ತಂಪಾದ ವಾತಾವರಣದಲ್ಲಿ ತಿರುಗಾಡುವುದು, ಅಪಥ್ಯಕರ ಭೋಜನ ಸೇವಿಸುವುದು.

ವಿಚಾರಜನ್ಯ ಕಾರಣಗಳು

- ಅತಿಯಾದ ದ್ವೇಷಭಾವ, ವಿನಾಕಾರಣ ಸಿಟ್ಟಾಗುವುದು, ಸಿಟ್ಟಿನಿಂದ ವಿವೇಚನೆ ಇಲ್ಲದೆ ಕೂಗಾಡುವುದು, ಇತರರನ್ನು ಹಂಗಿಸಿ ಮಾತಾಡುವುದು, ಆ ಭಾವನೆಗಳಿರುವಾಗ ತಂಪಾದ ಪಾನೀಯ, ಮದ್ಯ, ಅತಿ ಖಾರವಾದ ಕರಿದ ಪದಾರ್ಥಗಳ ಸೇವನೆ .

ಇಂತಹ ಹಲವಾರು ಕಾರಣಗಳು ಚರ್ಮದಲ್ಲಿ ವಿಕೃತಿಯನ್ನು ಉತ್ಪತ್ತಿ ಮಾಡುತ್ತವೆ. ಇವುಗಳನ್ನು ಗಮನಿಸಿ ದೂರವಿರುವುದೇ ಅರ್ಧಭಾಗ ಚಿಕಿತ್ಸೆಯನ್ನು ಪೂರೈಸುತ್ತದೆ ಮತ್ತು ಚರ್ಮರೋಗ ಬಾರದಂತೆ ತಡೆಗಟ್ಟುತ್ತದೆ.

ಇದರ ಜೊತೆಗೆ ನಿತ್ಯವೂ ಅಲ್ಪಪ್ರಮಾಣದ ಎಣ್ಣೆ ಹಚ್ಚಿ ಸ್ನಾನ ಮಾಡುವುದು, ತ್ರಿಫಲಾ, ನೆಲ್ಲಿ, ಲಾವಂಚ, ಕೆಂಪು ಚಂದನ, ಅಗುರು ಚೂರ್ಣ, ಬೇವು, ಹೊಂಗೆ, ಆಲ, ಅಶ್ವತ್ಥ ಇವುಗಳ ತೊಗಟೆ ಚೂರ್ಣದಿಂದ ಮೈ ಕೈ ಕಾಲುಗಳನ್ನು ತಿಕ್ಕಿ ಕೊಳ್ಳುವುದು, ಇವುಗಳನ್ನು ಹಾಕಿ ನೀರು ಕಾಯಿಸಿ ಸ್ನಾನ ಮಾಡುವುದು, ಸಕಾಲದಲ್ಲಿ, ಹಿತಕರವಾದ ವಾತಾವರಣದಲ್ಲಿ, ಹಿತಕರವಾದ ಆಹಾರವನ್ನು ಮಿತವಾಗಿ ಸೇವಿಸುವುದು – ಇವು ಬಂದಂತಹ ಚರ್ಮರೋಗ ಗಳನ್ನು ನಿವಾರಿಸುತ್ತದೆ.

ಇನ್ನೂ ಹೆಚ್ಚಿಗೆ ತೊಂದರೆ ಇದ್ದಲ್ಲಿ ತಜ್ಞವೈದ್ಯರಿಂದ ಸಲಹೆ ಪಡೆದು ಚಿಕಿತ್ಸೆ ಮಾಡಿಕೊಳ್ಳುವುದು ಒಳಿತು.

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ವಕ್ರೀಭವನ ಸೂಚ್ಯಂಕ

(ಮುಂದುವರಿದ ಭಾಗ)

ಭೌತಶಾಸ್ತ್ರ

ಬೆಳಕಿನ ವಕ್ರೀಭವನದಲ್ಲಿ ಮಾಧ್ಯಮ 1ಕ್ಕೆ ಸಂಬಂಧಿಸಿದಂತೆ ಮಾಧ್ಯಮ 2ರ ಸಾಪೇಕ್ಷ ವಕ್ರೀಭವನದ ಸೂಚ್ಯಂಕ ಎನ್ನುವರು.

ಬೆಳಕಿನ ವೇಗವು ಮಾಧ್ಯಮದ ಸಾಂದ್ರತೆಯ ಮೇಲೆ ಅವಲಂಬಿಸಿದ್ದು, ವಕ್ರೀಭನವು ಎರಡು ಮಾಧ್ಯಮಗಳ ಸಾಂದ್ರತೆಯ ವ್ಯತ್ಯಾಸವನ್ನು ಅವಲಂಬಿಸಿರುತ್ತದೆ.



ಮಾಧ್ಯಮ 1 (ಗಾಳಿ) ರಲ್ಲಿ ಬೆಳಕಿನ ವೇಗ ಮತ್ತು ಮಾಧ್ಯಮ 2 (ಗಾಜು) ರಲ್ಲಿ ಬೆಳಕಿನ ವೇಗ ಆದಾಗ ಮಾಧ್ಯಮ 1ಕ್ಕೆ ಸಂಬಂಧಿಸಿದಂತೆ ಮಾಧ್ಯಮ 2 ರ ವಕ್ರೀಭವನ ಸೂಚ್ಯಂಕ

$$n_{21} = \frac{\text{ಮಾಧ್ಯಮ 1 ರಲ್ಲಿ ಬೆಳಕಿನ ವೇಗ}}{\text{ಮಾಧ್ಯಮ 2 ರಲ್ಲಿ ಬೆಳಕಿನ ವೇಗ}} = \frac{v_1}{v_2}$$

ಅದೇ ರೀತಿ ಮಾಧ್ಯಮ 2ಕ್ಕೆ ಸಂಬಂಧಿಸಿದಂತೆ ಮಾಧ್ಯಮ 1ರ ವಕ್ರೀಭವನ ಸೂಚ್ಯಂಕ

$$n_{12} = \frac{\text{ಮಾಧ್ಯಮ 2 ರಲ್ಲಿ ಬೆಳಕಿನ ವೇಗ}}{\text{ಮಾಧ್ಯಮ 1 ರಲ್ಲಿ ಬೆಳಕಿನ ವೇಗ}} = \frac{v_2}{v_1}$$

ಮಾಧ್ಯಮ 1 ನಿರ್ವಾತವಾದಾಗ ವಕ್ರೀಭವನ ಸೂಚ್ಯಂಕವು

$$n_m \; \frac{\text{ನಿರ್ವಾತದಲ್ಲಿ ಬೆಳಕಿನ ವೇಗ}}{\text{ಮಾಧ್ಯಮದಲ್ಲಿ ಬೆಳಕಿನ ವೇಗ}} = \frac{c}{v}$$

ಗೋಳೀಯ ಮಸೂರಗಳು

ಪೀನ ಮಸೂರ

ಈ ಮಸೂರವು ಗೋಳವಾದ ಹೊರಕ್ಕೆ ಬಾಗಿದ ಒಂದು ಅಥವಾ ಎರಡು ಮೇಲ್ಮೈಗಳನ್ನು ಹೊಂದಿದ್ದು ಅಂಚುಗಳಿಗೆ ಹೋಲಿಸಿದಾಗ ಮಧ್ಯದಲ್ಲಿ ದಪ್ಪವಾಗಿರುತ್ತದೆ.



ಪೀನ ಮಸೂರಗಳು ಬೆಳಕಿನ ಕಿರಣಗಳನ್ನು ಕೇಂದ್ರೀಕರಿಸುತ್ತವೆ. ಮಸೂರದಿಂದ ವಕ್ರೀಭವಿಸಿದ ನಂತರ ಪ್ರಧಾನ ಅಕ್ಷದ ಒಂದು ಬಿಂದುವಿನ ಮೇಲೆ ಕೇಂದ್ರೀಕರಿಸುತ್ತದೆ. ಈ ಬಿಂದುವನ್ನು ಪ್ರಧಾನ ಸಂಗಮ ಎನ್ನುವರು.

ನಿಮ್ನ ಮಸೂರ



ಎಸ್ಸೆಸ್ಸೆಲ್ಸಿ

ಈ ಮಸೂರವು ಗೋಳದ ಒಳಕ್ಕೆ ಬಾಗಿದ ಒಂದು ಅಥವಾ ಎರಡು ಮೇಲ್ಮೈಗಳನ್ನು ಹೊಂದಿದ್ದು ಮಧ್ಯಕ್ಕೆ ಹೋಲಿಸಿದಾಗ ಅಂಚುಗಳು ದಪ್ಪದಾಗಿರುತ್ತವೆ. ಪೀನ ಮಸೂರಗಳು ಬೆಳಕನ್ನು ಪ್ರಧಾನಾಕ್ಷದಿಂದ ವಿಕೇಂದ್ರಿಕರಿಸುತ್ತವೆ. ಪ್ರಧಾನಾಕ್ಷದ ಮೇಲಿನ ಈ ಬಿಂದುವನ್ನು ಮಸೂರದ ಪ್ರಧಾನ ಸಂಗಮ ಎನ್ನುವರು.

ದೃಕ್ ಕೇಂದ್ರ (0): ಮಸೂರದ ಕೇಂದ್ರ ಬಿಂದುವಾಗಿದೆ. ದೃಕ್ ಕೇಂದ್ರದ ಮೂಲಕ ಹಾದು ಹೋಗುವ ಬೆಳಕಿನ ಕಿರಣಗಳು ಯಾವುದೇ ವಿಚಲನೆಯನ್ನು ಹೊಂದುವುದಿಲ್ಲ.

ಪ್ರಜಾವಾಣಿ ನೋಡಿಯೊ

ಹತ್ತನೇ ತರಗತಿಯ ಇಂಗ್ಲಿಷ್ ಮಾಧ್ಯಮ ಜೀವಶಾಸ್ತ್ರ ವಿಭಾಗದ 'ಹೌ ಡು ಆರ್ಗಾನಿಸಂ ರಿಪ್ರೊಡ್ಯೂಸ್' ಪಾಠವನ್ನು ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.

https://bit.ly/3rtLOkf

ಡಯೋಡ್‌ನ V-I ಲಕ್ಷಣಗಳು

ಭೌತಶಾಸ್ತ್ರ

ನೇರ ಪಕ್ಷಪಾತದಲ್ಲಿ





ಇಲ್ಲಿ ಪ್ರವಾಹವು ನಿರೀಕ್ಷಿತ ಪ್ರಮಾಣದಲ್ಲಿ ಹೆಚ್ಚು ಇರುವುದರಿಂದ ಇದನ್ನು ಅಳೆಯಲು ಮಿಲಿ ಅಮ್ಮೀಟರ್ ಬಳಸಲಾಗುತ್ತದೆ. ನೇರಪಕ್ಷ ಪಾತದಲ್ಲಿ ಪ್ರಾರಂಭದಲ್ಲಿ ಪ್ರವಾಹವು ಉದಾಸೀನ ಮಟ್ಟದಲ್ಲಿದ್ದು ಯಾವಾಗ ಅನ್ವಯಿತ ವೋಲ್ಟೇಜ್ ಸೀಮಾ ವಿಭವನ್ನು ಮೀರಿಸುತ್ತದೆಯೋ ಪ್ರವಾಹವು ಗುರುತರ ಪ್ರಮಾಣದಲ್ಲಿ ಹೆಚ್ಚುವುದು. ಈ ವೋಲ್ಟೇಜ್ ಅನ್ನು ಹೊಸ್ತಿಲು ವೋಲ್ಟೇಜ್ ಎನ್ನುವರು. ಇದು ಜರ್ಮೇನಿಯಂ ಡಯೋಡ್‌ಗೆ 0.2V ಮತ್ತು ಸಿಲಿಕಾನ್ ಡಯೋಡ್‌ಗೆ 0.7 V ಆಗಿರುತ್ತದೆ.

ವಿಪರ್ಯಾಯ ಪಕ್ಷಪಾತದಲ್ಲಿ





ಇಲ್ಲಿ ಪ್ರವಾಹದ ಪ್ರಮಾಣವು ತುಂಬಾ ಕಡಿಮೆ ಇರುವುದರಿಂದ ಇದನ್ನು ಅಳೆಯಲು ಮೈಕ್ರೋ ಅಮ್ಮೀಟರ್ ಬಳಸಲಾಗುತ್ತದೆ. ಈ ಪಕ್ಷಪಾತದಲ್ಲಿ ಡಯೋಡ್‌ನ ಪ್ರವಾಹವು ತುಂಬಾ ಕಡಿಮೆ ಮತ್ತು ($\sim\mu A$) ಪಕ್ಷಪಾತ ವೋಲ್ಟೇಜ್ ಅನ್ನು ಬದಲಾಯಿಸಿದರೂ ಸಹ ಪ್ರವಾಹವು ಸ್ಥಿರವಾಗಿ ಉಳಿಯುತ್ತದೆ. ಇದನ್ನು ವಿರ್ಯಾಯ ಪರ್ಯಾಪ್ತ ಪ್ರವಾಹ ಎನ್ನುತ್ತಾರೆ.

ದಿಷ್ಟೀಕಾರಕ

ಸಂಧಿ ಡಯೋಡ್‌ನ ಕೇವಲ ನೇರ ಪಕ್ಷಪಾತದಲ್ಲಿ ಮಾತ್ರ ಪ್ರವಾಹವನ್ನು ತನ್ನ ಮೂಲಕ ಹರಿಯಲು ಅವಕಾಶ ಕಲ್ಪಿಸುತ್ತಿದ್ದು ಇದನ್ನು ದ್ವಿಮುಖ ದಿವೋಲ್ಟೇಜ್ ಅನ್ನು ದಿಷ್ಟೀಕರಿಸಲು ಬಳಸುತ್ತಾರೆ. ಬಳಸುವ ಮಂಡಲವನ್ನು ದಿಷ್ಟೀಕಾರಕ ಎನ್ನುವರು.

ಅರ್ಧ ಅಲೆ ದಿಷ್ಟೀಕಾರಕ





ಅರ್ಧ ಅಲೆ ದಿಷ್ಟೀಕಾರಕಗಳಲ್ಲಿ ಹೊರ ರೋಧದೊಂದಿಗೆ ಶ್ರೇಣಿಯಲ್ಲಿ ಡಯೋಡ್ ಅನ್ನು ಜೋಡಿಸಲಾಗುತ್ತದೆ ಮತ್ತು ಅದಕ್ಕೆ ದ್ವಿಮುಖ ವೋಲ್ಟೇಜ್ ಅನ್ನು ಅನ್ವಯಿಸಲಾಗುತ್ತದೆ. ಈ ಸಂದರ್ಭದಲ್ಲಿ ಅನ್ವಯಿಸಿದ ದ್ವಿಮುಖ ವೋಲ್ಟೇಜ್‌ನಲ್ಲಿನ ಅರ್ಧ ಆವರ್ತದಲ್ಲಿ ಡಯೋಡ್ ನೇರ ಪಕ್ಷಪಾತದಲ್ಲಿಯೂ ಇನ್ನರ್ಧ ಆವರ್ತದಲ್ಲಿ ವಿಪರ್ಯಾಯ ಪಕ್ಷಪಾತದಲ್ಲಿಯೂ ಇರುತ್ತದೆ. ಆದ್ದರಿಂದ ಇದನ್ನು ಅರ್ಧದಿಷ್ಟೀಕಾರಕ ಎನ್ನುವರು. A ತುದಿಗೆ ಧನ ವೋಲ್ಟೇಜ್ ಬಂದಾಗ ಡಯೋಡ್ ನೇರ ಪಕ್ಷಪಾತಕ್ಕೆ ಜಾರಿ ವಾಹಕತ್ವವನ್ನು ಪಡೆದುಕೊಳ್ಳುತ್ತದೆ. ಮತ್ತು A ತುದಿಗೆ ಋಣ ವೋಲ್ಟೇಜ್ ಬಂದಾಗ ಡಯೋಡ್ ವಿಪರ್ಯಾಯ ಪಕ್ಷಪಾತಕ್ಕೆ ಜಾರಿ ವಾಹಕತ್ವವನ್ನು ಕಳೆದುಕೊಳ್ಳುತ್ತದೆ.

ಇದರಿಂದಾಗಿ ಧನ ಅರ್ಧ ಆವರ್ತ ಮಾತ್ರ ಹೊರೆ ರೋಧನ ಮೂಲಕ ಪ್ರವಹಿಸುತ್ತದೆ. ಇಲ್ಲಿ ಋಣ ಆವರ್ತ ಬಂದಾಗ ನಿರ್ಗತ ವೋಲ್ಟೇಜ್ ಉಂಟಾಗುವುದಿಲ್ಲ. ಹೀಗಾಗಿ ಭುಕ್ತ ದ್ವಿಮುಖ ಪ್ರವಾಹ ಅಲೆಯ ಅರ್ಧದಷ್ಟು ಅಲೆ ಮಾತ್ರ ನಿರ್ಗತ ವೋಲ್ಟೇಜ್ ಆಗಿ ಪರಿವರ್ತನೆಯಾಗುವುದರಿಂದ ಇದನ್ನು ಅರ್ಧ ಅಲೆ ದಿಷ್ಟೀಕಾರಕವೆಂತಲೂ ಈ ಅಲೆಯನ್ನು ದಿಷ್ಟೀಕರಿಸಿದ ಅಲೆ ಎಂತಲೂ ಕರೆಯುತ್ತಾರೆ.

ಪ್ರಜಾವಾಣಿ ನೋಡಿಯೊ

ದ್ವಿತೀಯ ಪಿಯುಸಿ ಭೌತಶಾಸ್ತ್ರ ವಿಭಾಗದ 'ಮ್ಯಾಗ್ನೆಟಿಸಂ ಅಂಡ್ ಮ್ಯಾಟರ್_ಕೈನಿಟಿಕ್ ಎನರ್ಜಿ' ಪಾಠವನ್ನು ಇಂಗ್ಲಿಷ್‌ನಲ್ಲಿ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.

https://bit.ly/38kyqHA

ಪೂರ್ಣ ಅಲೆ ದಿಷ್ಟೀಕಾರಕ





ಪೂರ್ಣ ಅಲೆ ದಿಷ್ಟೀಕಾರಕಗಳಲ್ಲಿ ಎರಡು ಡಯೋಡ್‌ಗಳ p- ಬದಿಯನ್ನು ಪರಿವರ್ತಕದ ದ್ವಿತೀಯಕ ತುದಿಗಳಿಗೆ ಮತ್ತು ಬದಿಗಳೆರಡನ್ನು ಹೊರ ರೋಧನ (R_L) X- ತುದಿಗೆ ಜೋಡಿಸಲಾಗುತ್ತದೆ. ದ್ವಿತೀಯಕ ಮಧ್ಯೆ ಮೋರೆಯನ್ನು ಹೊರೆ ರೋಧಕದ y- ತುದಿಗೆ ಜೋಡಿಸಲಾಗಿದ್ದು ನಿರ್ಗತವನ್ನು x ಮತ್ತು y ತುದಿಗಳ ನಡುವೆ ತೆಗೆದುಕೊಳ್ಳಲಾಗುವುದು. ಇಲ್ಲಿ ತುದಿಯನ್ನು ಹೊರೆ ರೋಧಕ y- ತುದಿಗೆ ಜೋಡಿಸಲಾಗುತ್ತದೆ.

ಒಂದು ಕ್ಷಣದಲ್ಲಿ ಕೇಂದ್ರ ಮೋರೆ ತುದಿಗನುಗುಣವಾಗಿ A ನಲ್ಲಿನ ಭುಕ್ತ ವೋಲ್ಟೇಜ್ ಧನವಾದರೆ B - ನಲ್ಲಿ ವೋಲ್ಟೇಜ್ ಋಣವಾಗುತ್ತದೆ. ಈ ಸಂದರ್ಭದಲ್ಲಿ ಡಯೋಡ್ D_1 ನೇರಪಕ್ಷಪಾತದಲ್ಲಿ ಒಂದು ವಾಹಕತೆಯನ್ನು ಪಡೆದುಕೊಳ್ಳುತ್ತದೆ. ಮತ್ತು D_2 ಡಯೋಡ್ ವಿಪರ್ಯಾಯ ಪಕ್ಷಪಾತದಲ್ಲಿ ಒಂದು ವಾಹಕತೆಯನ್ನು ಕಳೆದುಕೊಳ್ಳುತ್ತದೆ. ಇಲ್ಲಿ ಅರ್ಧ ಆವರ್ತವಿರುವ ಸಂದರ್ಭದಲ್ಲಿ ನಿರ್ಗತ ಪ್ರವಾಹವಿರುತ್ತದೆ. ಅದೇ ರೀತಿ ದ್ವಿಮುಖ ಆವರ್ತಗಳ ಮಾಲಿಕೆಯಲ್ಲಿ ಕೇಂದ್ರ ಮೋರೆ ತುದಿಗನುಗುಣವಾಗಿ A ನಲ್ಲಿನ ವೋಲ್ಟೇಜ್ ಋಣವಾದರೆ B ಯಲ್ಲಿನ ವೋಲ್ಟೇಜ್ ಧನವಾಗುತ್ತದೆ. ಈ ಸಂದರ್ಭದಲ್ಲಿ D_1 ವಿಪರ್ಯಾಯ ಪಕ್ಷಪಾತದಲ್ಲಿ ವಾಹಕತೆಯನ್ನು ಕಳೆದುಕೊಂಡು D_2 ನೇರ ಪಕ್ಷಪಾತದಲ್ಲಿ ವಾಹಕತೆಯನ್ನು ಪಡೆದುಕೊಂಡು ನಿರ್ಗತ ಪ್ರವಾಹ ಮತ್ತು ನಿರ್ಗತ ವೋಲ್ಟೇಜ್‌ಗಳನ್ನು ಕೊಡುತ್ತದೆ.

ದ್ವಿತೀಯ ಪಿಯುಸಿ

ಹೀಗಾಗಿ ನಿರ್ಗತ ವೋಲ್ಟೇಜ್ ಅನ್ನು ಧನ ಅರ್ಧ ಆವರ್ತ ಹಾಗೂ ಋಣ ಅರ್ಧ ಆವರ್ತಗಳೆರಡರಿಂದಲೂ ಪಡೆಯುವುದರಿಂದ ಇದನ್ನು ಪೂರ್ಣ ಅಲೆ ದಿಷ್ಟೀಕಾರಕ ಎನ್ನುವರು ಮತ್ತು ಇದು ದ್ವಿಮುಖ ಪ್ರವಾಹ ಊರ್ಮಿಕೆಯನ್ನು ಸೋಸಲ್ಪಟ್ಟು ಶುದ್ಧವಾದ ಏಕಮುಖ ಪ್ರವಾಹದ ವೋಲ್ಟೇಜ್ ಅನ್ನು ನೀಡುವುದರಿಂದ ಸೋಸುಕಗಳೆಂದೂ ಕರೆಯುತ್ತಾರೆ.

THE BIG DISCOUNT SALE
All New 2021 Collection at Mill Rate

Last 5 days only
Credit Cards Accepted
SINCE 1960
hakoba
Embroidery beyond your imagination
CHIKAN EMBROIDERIES
Check out the Export Dress Materials, Punjabi Suit Fabrics, Sarees, Organdi, Voile, Terrene, Shiffon, Taspa, Swiss Voile, Ready-made Palazzo Pant, Kurtis, Legging Embroidered & Dupattas
HEAVY DISCOUNT UPTO 50%
Shop online at www.hakoba.in
Venue :
Lady Jahangir Kotari Hall
Queens Circle, Near Indian Express

ನೆರೆ ಹಾವಳಿಯಿಂದ ಬೆಳಗಾವಿ ಭಾಗದ ಜೈನ ಸಮುದಾಯಕ್ಕೆ ತೊಂದರೆಯಾಗಿದೆ. ಕ್ಷೇತ್ರಗಳ ಆದಾಯ ಕುಂಠಿತವಾಗಿದೆ. ಪುಣ್ಯಕ್ಷೇತ್ರಗಳಿಗೆ ₹50 ಕೋಟಿ ಅನುದಾನವನ್ನು ಮುಖ್ಯಮಂತ್ರಿ ನಿಗದಿ ಮಾಡಿದ್ದಾರೆ. ಅವರ ಕಳಕಳಿಗೆ ಸಮಾಜ ಋಣಿಯಾಗಿರುತ್ತದೆ.
-ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿ, ಶ್ರವಣಬೆಳಗೊಳ ಜೈನ ಮಠ



ಪೆರಿಫೆರಲ್ ವರ್ತುಲ ರಸ್ತೆಗೆ ‘ಸ್ವಿಸ್ ಚಾಲೆಂಜ್’

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಪೆರಿಫೆರಲ್ ವರ್ತುಲ ರಸ್ತೆ ನಿರ್ಮಾಣಕ್ಕೆ ‘ಸ್ವಿಸ್ ಚಾಲೆಂಜ್’ ಮಾದರಿಯಲ್ಲಿ ಟೆಂಡರ್ ಕರೆಯಲು ಸರ್ಕಾರ ಮುಂದಾಗಿದೆ. ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಬಜೆಟ್‌ನಲ್ಲಿ ಈ ಬಗ್ಗೆ ಉಲ್ಲೇಖಿಸಿದ್ದಾರೆ.

ಈ ಯೋಜನೆಯ ಭೂಸ್ವಾಧೀನಕ್ಕೆ ಸರ್ಕಾರ 2006ರಲ್ಲೇ ಪ್ರಾಥಮಿಕ ಅಧಿಸೂಚನೆ ಹೊರಡಿಸಿತ್ತು. 15 ವರ್ಷಗಳ ಬಳಿಕವೂ ಈ ಯೋಜನೆ ಕಾರ್ಯಗತಗೊಂಡಿಲ್ಲ. ಪ್ರತಿ ಬಜೆಟ್‌ನಲ್ಲೂ ಪ್ರಸ್ತಾಪವಾಗುತ್ತಲೇ ಇದೆ. ಭೂಸ್ವಾಧೀನಕ್ಕೆ ಭಾರಿ ಬಂಡವಾಳ ಬಯಸುವ ಈ ಯೋಜನೆ ಅನುಷ್ಠಾನಕ್ಕೆ ಎಲ್ಲ ಸರ್ಕಾರಗಳೂ ಮೀನಮೇಷ ಎಣಿಸುತ್ತಲೇ ಬಂದಿವೆ. ಬಂಡವಾಳ ಹೂಡಿಕೆ ಮಾಡಲು ಮುಂದೆ ಬಂದಿದ್ದ ಸಂಸ್ಥೆಗಳೂ ಬಳಿಕ ಹಿಂದೇಟು ಹಾಕಿದ್ದವು. ತೂಗುಯ್ಯಾಲೆಯಂತಾಗಿರುವ ಈ ಯೋಜನೆಗೆ ತಾರ್ಕಿಕ ಅಂತ್ಯ ಹಾಡಲು ಈಗಿನ ಸರ್ಕಾರ ಹೊಸ ಬಿಡ್ಡಿಂಗ್ ಮಾದರಿಯ ಮೊರೆ ಹೋಗಲಿದೆ.

ಏನಿದು ಸ್ವಿಸ್ ಚಾಲೆಂಜ್: ‘ಪಿಆರ್‌ಆರ್ ಅನುಷ್ಠಾನದ ಬಗ್ಗೆ ಜಾಗತಿಕ ಮಟ್ಟದಲ್ಲಿ ಪ್ರಸ್ತಾವನೆಯನ್ನು ಆಹ್ವಾನಿಸಲಾಗುತ್ತದೆ. ಅದನ್ನು ಮುಂದಿಟ್ಟು, ಅದಕ್ಕಿಂತ ಉತ್ತಮ ಪ್ರಸ್ತಾವನೆ ಯಾರಾದರೂ ಸಲ್ಲಿಸುತ್ತಾರೆಯೇ ಎಂದು ಸವಾಲು ಹಾಕಲಾಗುತ್ತದೆ. ಈ ರೀತಿ ಅತ್ಯುತ್ತಮ ಪ್ರಸ್ತಾವನೆಯನ್ನು ಆಯ್ಕೆ ಮಾಡಿ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತದೆ’ ಎಂದು ಬಿಡಿಎ ಅಧಿಕಾರಿಯೊಬ್ಬರು ‘ಪ್ರಜಾವಾಣಿ’ಗೆ ಮಾಹಿತಿ ನೀಡಿದರು.

‘ನನಗೆ ತಿಳಿದಂತೆ ಬೆಂಗಳೂರಿನಲ್ಲಿ ಸ್ವಿಸ್ ಚಾಲೆಂಜ್ ಮಾದರಿಯಲ್ಲಿ ಅನುಷ್ಠಾನಗೊಳ್ಳುತ್ತಿರುವ ಮೊದಲ ಯೋಜನೆ ಇದು. ಇಷ್ಟೊಂದು ಭಾರಿ ಮೊತ್ತದ ಯೋಜನೆಯನ್ನು ರಾಜ್ಯದಲ್ಲಿ ಎಲ್ಲೂ ಸ್ವಿಸ್ ಚಾಲೆಂಜ್ ಮಾದರಿಯಲ್ಲಿ ಅನುಷ್ಠಾನಗೊಳಿಸಿದಂತಿಲ್ಲ’ ಎಂದರು.

ಅಂಕಿ-ಅಂಶಗಳು

65 ಕಿ.ಮೀ ಪೆರಿಫೆರಲ್ ವರ್ತುಲ ರಸ್ತೆಗೆ ಉದ್ದ

₹21 ಸಾವಿರ ಕೋಟಿ ಪೆರಿಫೆರಲ್ ವರ್ತುಲ ರಸ್ತೆ ನಿರ್ಮಾಣಕ್ಕೆ ತಗಲುವ ಅಂದಾಜು ವೆಚ್ಚ

ಅನುದಾನ ನೀಡಿಕೆಯಲ್ಲಿ ನಿರ್ಲಕ್ಷ್ಯ: ಸಚಿವರ ಅಸಮಾಧಾನ

ಬೆಂಗಳೂರು: ಬಜೆಟ್‌ನಲ್ಲಿ ಶಿಕ್ಷಣ, ಉನ್ನತ ಶಿಕ್ಷಣ, ಗ್ರಾಮೀಣಾಭಿವೃದ್ಧಿ, ಕೈಗಾರಿಕಾ ಕ್ಷೇತ್ರಗಳಿಗೆ ಹೆಚ್ಚಿನ ಅನುದಾನ ನೀಡದೇ ಇರುವ ಬಗ್ಗೆ ಆಯಾ ಇಲಾಖೆಗಳ ಸಚಿವರು ಅಸಮಾಧಾನಗೊಂಡಿದ್ದಾರೆ ಎಂದು ಮೂಲಗಳು ಹೇಳಿವೆ. ‘ತಮ್ಮ ಇಲಾಖೆಗಳಿಗೆ ಸಂಬಂಧಿಸಿದಂತೆ ಹಲವು ಪ್ರಸ್ತಾವನೆ ಸಲ್ಲಿಸಲಾಗಿತ್ತು. ಎಲ್ಲವನ್ನೂ ನಿರ್ಲಕ್ಷಿಸಲಾಗಿದೆ. ಈ ರೀತಿ ಆದರೆ ಕೆಲಸ ಮಾಡುವುದು ಹೇಗೆ. ಶಿಕ್ಷಣ, ಗ್ರಾಮೀಣಾಭಿವೃದ್ಧಿ, ಕೈಗಾರಿಕೆ ಅತಿ ಮುಖ್ಯ ಇಲಾಖೆಗಳು. ರಾಜ್ಯದ ಪ್ರಗತಿಯನ್ನು ಕಡೆಗಣಿಸಿದಂತಾಗಿದೆ’ ಎಂದು ಸಚಿವರೊಬ್ಬರು ಬೇಸರ ವ್ಯಕ್ತಪಡಿಸಿದ್ದಾರೆ.

ಜಾತಿ ನಿಗಮ–ಮಂಡಳಿಗಳಿಗೆ ಅನುದಾನ ನೀಡಿಕೆಯಲ್ಲೂ ತಾರತಮ್ಯ ಮಾಡಲಾಗಿದೆ. ಲಿಂಗಾಯತ ಮತ್ತು ಒಕ್ಕಲಿಗ ಅಭಿವೃದ್ಧಿ ನಿಗಮಗಳಿಗೆ ತಲಾ ₹500 ಕೋಟಿ ನೀಡಲಾಗಿದೆ. ಆದರೆ, ಹಿಂದುಳಿದ ವರ್ಗಗಳಿಗೆ ಸೇರಿದ ವಿವಿಧ ಜಾತಿಗಳ ನಿಗಮ– ಮಂಡಳಿಗಳಿಗೆ ಅತಿ ಕಡಿಮೆ ಹಣ ನಿಗದಿ ಮಾಡಲಾಗಿದೆ ಎಂಬುದಾಗಿ ಹಲವು ಶಾಸಕರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

‘ಪೀಣ್ಯ ಟೌನ್‌ಶಿಪ್‌ಗೆ ಅನುದಾನ ಸ್ವಾಗತಾರ್ಹ’

ಪೀಣ್ಯ ದಾಸರಹಳ್ಳಿ: ‘ಪೀಣ್ಯ ಕೈಗಾರಿಕಾ ಟೌನ್‌ಶಿಪ್ ಅಥಾರಿಟಿಗೆ ₹100 ಕೋಟಿ ಅನುದಾನ ನೀಡಿರುವುದು ಸ್ವಾಗತಾರ್ಹ. ಈ ಕುರಿತು ನಾವು ಮುಖ್ಯಮಂತ್ರಿಗೆ ಮನವಿ ಮಾಡಿದ್ದೆವು’ ಎಂದು ಪೀಣ್ಯ ಕೈಗಾರಿಕಾ ಸಂಘದ ಅಧ್ಯಕ್ಷ ಸಿ. ಪ್ರಕಾಶ್ ತಿಳಿಸಿದರು.

‘ಈ ಪ್ರದೇಶ ಬಿಬಿಎಂಪಿಗೆ ಒಳಪಟ್ಟ ಮೇಲೆ ಇಲ್ಲಿ ಬರುವ ಕೈಗಾರಿಕೆಗಳಿಗೆ ಆಸ್ತಿ ತೆರಿಗೆ ದೊಡ್ಡ ತಲೆನೋವಾಗಿತ್ತು. ಏಕೆಂದರೆ ಸಣ್ಣ ಸಣ್ಣ ಫ್ಯಾಕ್ಟರಿಗಳಿರುವುದಿಲ್ಲ. ಕೈಗಾರಿಕೆಗಳಿಗೆ ಪ್ರತ್ಯೇಕ ತೆರಿಗೆ ವಿಧಿಸಿ ಎಂಬ ಬೇಡಿಕೆಗೆ ಈ ಬಜೆಟ್ ನಲ್ಲಿ ಅನುಮೋದನೆ ದೊರೆತಿದೆ’ ಎಂದು ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಈ ಸಂದರ್ಭದಲ್ಲಿ ಪದಾಧಿಕಾರಿಗಳಾದ ಆರಿಫ್, ಮುರಳಿ ಕೃಷ್ಣ, ಶ್ಯಾಮ್ ಚಂದ್ರನ್, ದಾನಪ್ಪ, ಮಲ್ಲಿಕಾರ್ಜುನ ಸ್ವಾಮಿ, ಕೃಷ್ಣಮೂರ್ತಿ, ಡಿ.ಟಿ.ವೆಂಕಟೇಶ್, ಮಲ್ಲೇಶ್ ಗೌಡ್ರು ಇದ್ದರು.

ಜನನಾಯಕರ ಪ್ರತಿಕ್ರಿಯೆ

ಇದು ಕಣ್ಣಾಮುಚ್ಚಾಲೆಯ ಬೋಗಸ್ ಬಜೆಟ್

ಇದೊಂದು ಕಣ್ಣಾಮುಚ್ಚಾಲೆಯ ಬೋಗಸ್ ಬಜೆಟ್. ಜನರನ್ನು ಹೇಗೆಲ್ಲಾ ದಾರಿ ತಪ್ಪಿಸಬಹುದು ಎಂಬುದರ ಬಗ್ಗೆ ಪಿಎಚ್.ಡಿ ಮಾಡಿ ಈ ಬಜೆಟ್ ರೂಪಿಸಿದಂತಿದೆ. ರಾಜ್ಯದ ಆರ್ಥಿಕ ಪರಿಸ್ಥಿತಿ ಸರಿಯಿಲ್ಲ, ಕೇಂದ್ರದ ನೆರವೂ ಸಿಕ್ಕಿಲ್ಲ. ಜಿಎಸ್‌ಟಿ ಸಾಲದ ಮೊರೆ ಅನಿವಾರ್ಯವಾಗಿದೆ ಎಂಬುದನ್ನು ಯಡಿಯೂರಪ್ಪ ಅವರು ಭಾಷಣದ ಆರಂಭದಲ್ಲೇ ವಿವರಿಸಿದ್ದಾರೆ. ಕಳೆದ ವರ್ಷ ಮಾಡಿಕೊಂಡಿರುವ ಸಾಲವನ್ನೇ ತೀರಿಸಲು ಆಗಿಲ್ಲ. ಈಗ ಹೊಸದಾಗಿ ₹ 70 ಸಾವಿರ ಕೋಟಿ ಸಾಲದ ಹೊರೆ ರಾಜ್ಯದ ಜನರ ತಲೆ ಮೇಲೆ ಬೀಳಲಿದೆ. ಸಾಲ ಮಾಡಿ ತುಪ್ಪ ತಿನ್ನು ಎಂದು ಸಾಲಗಾರರನ್ನು ಅಣಕಿಸುವ ಮಾತಿದೆ. ಆದರೆ, ಈ ಸರ್ಕಾರ ಸಾಲ ಮಾಡಿ ಜನರಿಗೆ ಮಣ್ಣು ತಿನ್ನಿಸಲು ಹೊರಟಿದೆ. ರಾಜ್ಯಗಳ ಜಿಎಸ್‌ಟಿ ಪಾಲು ಹಂಚುವಾಗ ಗುಜರಾತ್, ಅಸ್ಸಾಂ ಮತ್ತಿತರ ರಾಜ್ಯಗಳ ಕಣ್ಣಿಗೆ ಬೆಣ್ಣೆ ಹಚ್ಚಿದ ಕೇಂದ್ರ ಸರಕಾರ ರಾಜ್ಯದ ಕಣ್ಣಿಗೆ ಸುಣ್ಣ ಸುರಿದಿದೆ. ಅದನ್ನು ರಾಜ್ಯ ಸರಕಾರವಾಗಲಿ, ರಾಜ್ಯದಿಂದ ಕೇಂದ್ರ ಪ್ರತಿನಿಧಿಸುತ್ತಿರುವ ಎರಡು ಡಜನ್ ಸಂಸದರು ಪ್ರಶ್ನಿಸುವ ಗೋಜಿಗೆ ಹೋಗಲಿಲ್ಲ. ಅದರ ಫಲವೇ ಈಗ ರಾಜ್ಯದ ಜನರ ತಲೆ ಮೇಲೆ ಬೀಳುತ್ತಿರುವ ಸಾಲದ ಹೊರೆ.

ಡಿ.ಕೆ.ಶಿವಕುಮಾರ್, ಕೆಪಿಸಿಸಿ ಅಧ್ಯಕ್ಷ

ಅಭಿವೃದ್ಧಿಗೆ ಅನುಕೂಲ

ಸಾಮಾಜಿಕ ನ್ಯಾಯವನ್ನು ಈ ಬಜೆಟ್ ಎತ್ತಿ ಹಿಡಿದಿದ್ದು, 30 ಜಿಲ್ಲೆಗಳ ಸರ್ವತೋಮುಖ ಅಭಿವೃದ್ಧಿಯನ್ನು ದೃಷ್ಟಿಯಲ್ಲಿಟ್ಟುಕೊಳ್ಳಲಾಗಿದೆ. ಈಗಾಗಲೇ ಜಾಗತಿಕ ಮಟ್ಟದಲ್ಲಿ ಅತ್ಯುತ್ತಮ ನಗರವಾಗಿ ಹೊರಹೊಮ್ಮಿರುವ ಬೆಂಗಳೂರು ನಗರವನ್ನು ಇನ್ನು ಬಹು ಆಯಾಮಗಳಲ್ಲಿ ಅಭಿವೃದ್ಧಿಪಡಿಸಲು ಸಂಕಲ್ಪಿಸಲಾಗಿದೆ. ಅದಕ್ಕಾಗಿ ಒಟ್ಟು ₹7,700 ಕೋಟಿ ಅನುದಾನ ಘೋಷಣೆ ಮಾಡಿರುವುದು ಸಂಪನ್ಮೂಲಗಳ ಕೊರತೆಯ ನಡುವೆಯೂ ಅಭಿವೃದ್ಧಿಯ ಇಚ್ಛಾಶಕ್ತಿಗೆ ಹಿಡಿದ ಕನ್ನಡಿ.

ಡಾ.ಸಿ.ಎನ್.ಅಶ್ವತ್ಥನಾರಾಯಣ, ಉಪಮುಖ್ಯಮಂತ್ರಿ

ಸಂಕಷ್ಟದಲ್ಲೂ ಸರ್ವರಿಗೂ ನ್ಯಾಯ ಕಲ್ಪಿಸಿದ ಬಜೆಟ್

ಬಜೆಟ್‌ನಲ್ಲಿ ರಾಜಧಾನಿ ಬೆಂಗಳೂರು ನಗರದ ಸರ್ವಾಂಗೀಣ ಅಭಿವೃದ್ಧಿಗೆ ಹೆಚ್ಚಿನ ಒತ್ತು ನೀಡಿರುವುದು ಸ್ವಾಗತಾರ್ಹ ಮತ್ತು ಸರ್ವರಿಗೂ ಅನುಕೂಲವಾಗಲಿದೆ. ನಗರದಲ್ಲಿರುವ ಗಾರ್ಮೆಂಟ್ಸ್‌ನಲ್ಲಿ ಕೆಲಸ ಮಾಡುತ್ತಿರುವ ಲಕ್ಷಾಂತರ ಕಾರ್ಮಿಕರಿಗೆ ಓಡಾಟಕ್ಕೆ ಅನುಕೂಲ ಮಾಡಿಕೊಡುವ ವಿಶೇಷ ಪಾಸ್ ವ್ಯವಸ್ಥೆಯಾದ ವನಿತಾ ಸಂಗಾತಿ ಯೋಜನೆ ಜಾರಿಗೆ ತರಲಾಗುತ್ತಿದೆ. ಸೇಫ್ ಸಿಟಿ ಯೋಜನೆಯಡಿ ನಗರದಲ್ಲಿ ಇನ್ನೂ 7,500 ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸುವ ಮೂಲಕ ಮುಖ್ಯಮಂತ್ರಿಗಳು ನಗರದ ನಾಗರಿಕರ ರಕ್ಷಣೆಗೆ ಹೆಚ್ಚಿನ ಆದ್ಯತೆ ನೀಡಿದ್ದಾರೆ.

ಎಸ್.ಆರ್.ವಿಶ್ವನಾಥ್, ಬಿಡಿಎ ಅಧ್ಯಕ್ಷ

ಹೊರವಲಯದ ನಿರ್ಲಕ್ಷ್ಯ

ಬಿಬಿಎಂಪಿ ವ್ಯಾಪ್ತಿಗೆ ಸೇರಿದ 110 ಹಳ್ಳಿಗಳಲ್ಲಿ ಕುಡಿಯುವ ನೀರು ಹಾಗೂ ಒಳಚರಂಡಿ ವ್ಯವಸ್ಥೆ ಕಲ್ಪಿಸಲು ರಸ್ತೆಗಳನ್ನು ಅಗೆದು ಹಾಕಲಾಗಿದೆ. ಈ ರಸ್ತೆಗಳು ವಾಹನ ಸಂಚಾರಕ್ಕೆ ಯೋಗ್ಯವಾಗಿಲ್ಲ. ಹೊರವಲಯದ ಪ್ರದೇಶಗಳ ಅಭಿವೃದ್ಧಿಗೆ ₹5 ಸಾವಿರ ಕೋಟಿ ಅನುದಾನ ನೀಡುವಂತೆ ಮುಖ್ಯಮಂತ್ರಿ ಅವರಿಗೆ ಪತ್ರ ಬರೆದಿದ್ದೆ. ಆದರೆ, ಈ ಬಗ್ಗೆ ಗಮನ ಹರಿಸಿಲ್ಲ. ಬಿಬಿಎಂಪಿ ಬಜೆಟ್‌ನಲ್ಲಾದರೂ ಅಗತ್ಯ ಅನುದಾನ ನೀಡಬೇಕು. ರಾಜಕಾಲುವೆಗಳ ಅಭಿವೃದ್ಧಿಗೂ ಅನುದಾನ ನೀಡಿಲ್ಲ. ಪೀಣ್ಯ ಕೈಗಾರಿಕಾ ಪ್ರದೇಶದ ಅಭಿವೃದ್ಧಿಗೆ ₹100 ಕೋಟಿ ನೀಡಿರುವುದು ಸ್ವಾಗತಾರ್ಹ.

ಆರ್.ಮಂಜುನಾಥ್, ದಾಸರಹಳ್ಳಿ ಶಾಸಕ

ಹೈನೋದ್ಯಮಕ್ಕೆ ಉತ್ತೇಜನ

ಹೈನುಗಾರಿಕೆಯನ್ನು ಉತ್ತೇಜಿಸಲು ಹೊರ ರಾಜ್ಯಗಳ ವಿವಿಧ ದೇಸಿ ತಳಿಗಳನ್ನು ರಾಜ್ಯದ ರೈತರಿಗೆ ಪರಿಚಯಿಸಲು ಸಮಗ್ರ ಗೋಸಂಕುಲ ಅಭಿವೃದ್ಧಿ ಪರಿಚಯಿಸಿದ್ದು ರಾಜ್ಯದ ಹೈನೋದ್ಯಮಕ್ಕೆ ಹೆಚ್ಚು ಉತ್ತೇಜನ ದೊರಕಲಿದೆ. ಕೋವಿಡ್ ಸಂಕಷ್ಟದಲ್ಲೂ ಅತ್ಯಂತ ಸಮತೋಲಿತ ಹಾಗೂ ರೈತಪರ ಮತ್ತು ಪಶುಪಾಲಕರಿಗೆ ಉತ್ತೇಜನ ನೀಡುವ ಬಜೆಟ್ ಅನ್ನು ಮುಖ್ಯಮಂತ್ರಿ ಮಂಡನೆ ಮಾಡಿದ್ದಾರೆ.

ಪ್ರಭು ಚವ್ಹಾಣ್, ಪಶುಸಂಗೋಪನಾ ಸಚಿವ

ತೆರಿಗೆ ಹೆಚ್ಚಳ ಇಲ್ಲದ ಬಜೆಟ್

ನೈಸರ್ಗಿಕ ಪ್ರಕೋಪ, ಕೋವಿಡ್ ಸಂಕಷ್ಟದ ಮಧ್ಯೆಯೂ ತೆರಿಗೆ ಹೆಚ್ಚಳ ಇಲ್ಲದ ಅತ್ಯುತ್ತಮ ಬಜೆಟ್. ಮಹಿಳಾ ದಿನಾಚರಣೆಯ ದಿನವೇ ಬಜೆಟ್ ಮಂಡಿಸಿರುವ ಮುಖ್ಯಮಂತ್ರಿಯವರು ಮಹಿಳೆಯರಿಗಾಗಿ ವಿಶೇಷ ಅನುದಾನ ನೀಡಿದ್ದಾರೆ. ಕೃಷಿ, ಆರೋಗ್ಯ ಮತ್ತು ಮೂಲಸೌಕರ್ಯ ಅಭಿವೃದ್ಧಿಗೆ ಪೂರಕ ಬಜೆಟ್.

ನಳಿನ್ ಕುಮಾರ್ ಕಟೀಲು, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ

ಸಾರಿಗೆ ಪುನಶ್ಚೇತನಕ್ಕೆ ಆದ್ಯತೆ

ಬಜೆಟ್ ರಾಜ್ಯದ ಸರ್ವತೋಮುಖ ಬೆಳವಣಿಗೆಗೆ ಪೂರಕವಾಗಿದೆ. ಎಲ್ಲ ಕ್ಷೇತ್ರಗಳ ಅಭಿವೃದ್ಧಿಯಲ್ಲೂ ಸಮತೋಲನ ಸಾಧಿಸುವಲ್ಲಿ ಈ ಬಜೆಟ್ ಯಶಸ್ವಿಯಾಗಿದೆ. ಸಾರಿಗೆ ವಲಯಕ್ಕೂ ಹಲವು ಹೊಸ ಕಾರ್ಯಕ್ರಮಗಳೊಂದಿಗೆ ಪುನಶ್ಚೇತನ ನೀಡುವ ನಮ್ಮ ಪ್ರಯತ್ನಕ್ಕೆ ಮುಖ್ಯಮಂತ್ರಿಯವರು ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ.

ಲಕ್ಷ್ಮಣ ಸವದಿ, ಉಪಮುಖ್ಯಮಂತ್ರಿ

ವಿಕಾಸ ಪತ್ರ

ಕೊರೊನಾ ಸಂಕಷ್ಟ ಕಾಲದ ಆರ್ಥಿಕ ಹಿಂಜರಿತದ ಮಧ್ಯೆಯೂ ರಾಜ್ಯದ ಸರ್ವಾಂಗೀಣ ಅಭಿವೃದ್ಧಿ ಆಶಯದೊಂದಿಗೆ ಸಮತೋಲಿತ ಬಜೆಟ್ ಅನ್ನು ಯಡಿಯೂರಪ್ಪ ಮಂಡಿಸಿದ್ದಾರೆ. ಇದನ್ನು ವಿಕಾಸ ಪತ್ರ ಎಂದು ಬಣ್ಣಿಸುವುದೇ ಸೂಕ್ತ.

ಡಿ.ವಿ.ಸದಾನಂದ ಗೌಡ, ಕೇಂದ್ರ ರಸಗೊಬ್ಬರ ಸಚಿವ

ಸರ್ವರ ಲೇಸು ಬಯಸುವ ಬಜೆಟ್

ಆರ್ಥಿಕ ಸಂಕಷ್ಟದ ಸಮಯದಲ್ಲೂ ಸರ್ವರ ಲೇಸು ಬಯಸುವ ಬಜೆಟ್ ಅನ್ನು ಯಡಿಯೂರಪ್ಪ ಮಂಡಿಸಿದ್ದಾರೆ. ಕೊರೊನಾದಿಂದಾಗಿ ನಿರೀಕ್ಷಿತ ಪ್ರಮಾಣದಲ್ಲಿ ಸಂಪನ್ಮೂಲ ಸಂಗ್ರಹ ಆಗಿಲ್ಲ. ಹೀಗಾಗಿ, ತಮ್ಮ ಇತಿಮಿತಿಯಲ್ಲಿ ಎಲ್ಲ ಕ್ಷೇತ್ರ, ಜಾತಿ ಹಾಗೂ ಜನಾಂಗಗಳ ಕಲ್ಯಾಣಕ್ಕೆ ಪೂರಕವಾದ ಯೋಜನೆ ಪ್ರಕಟಿಸಿದ್ದಾರೆ. ಆರೋಗ್ಯ ಮತ್ತು ಕುಟುಂಬ ಕಲ್ಯಾಣ, ವೈದ್ಯಕೀಯ ಶಿಕ್ಷಣ ಇಲಾಖೆಗಳಿಗೆ ಹೆಚ್ಚಿನ ಅನುದಾನ ನಿರೀಕ್ಷೆ ಮಾಡಲಾಗಿತ್ತು. ಆದರೆ, ಸೀಮಿತ ಸಂಪನ್ಮೂಲದಲ್ಲಿ ಅನುದಾನ ಹಂಚಿಕೆ ಮಾಡಿದ್ದಾರೆ. ಮುಂದಿನ ದಿನಗಳಲ್ಲಿ ಹೆಚ್ಚಿನ ಸಂಪನ್ಮೂಲ ಒದಗಿಸುವ ವಿಶ್ವಾಸ ಇದೆ.

ಡಾ.ಕೆ.ಸುಧಾಕರ್, ಆರೋಗ್ಯ ಹಾಗೂ ವೈದ್ಯಕೀಯ ಶಿಕ್ಷಣ ಸಚಿವ

ಇದ್ದೂ ಇಲ್ಲದಂತಿರುವ ಬಜೆಟ್

ಈ ಬಾರಿಯ ಬಜೆಟ್ ಮೇಲ್ನೋಟಕ್ಕೆ ಆಕರ್ಷಕ. ಪ್ರಬಲ ವರ್ಗಗಳಿಗೆ ಮಣೆ ಹಾಕಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ. ಕೆಲವು ಕ್ಷೇತ್ರಗಳಿಗೆ ಒತ್ತು ನೀಡಿರುವುದು ಆಶಾದಾಯಕ. ನೆರೆ ಮತ್ತು ಬರ ಸಮಸ್ಯೆಗಳಿಗೆ ಎಂದಿನಂತೆ ಈ ಬಾರಿಯೂ ನಿರ್ಲಕ್ಷಿಸಲಾಗಿದೆ. ಬಜೆಟ್‌ನಲ್ಲಿ ಘೋಷಣೆಗಳು ಮುಖ್ಯವಲ್ಲ. ಅವುಗಳ ಅನುಷ್ಠಾನಕ್ಕೂ ಗಮನ ನೀಡಿ. ಒಟ್ಟಾರೆ ರಾಜ್ಯದ ಸರ್ವತೋಮುಖ ಅಭಿವೃದ್ಧಿಯ ಹೊಣೆ ಬಜೆಟ್‌ನಲ್ಲಿ ಇಲ್ಲ.

ರವಿಕೃಷ್ಣಾರೆಡ್ಡಿ, ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷದ ಅಧ್ಯಕ್ಷ

ಖಾಲಿ ಹಾಳೆ ತುಂಬಿಸಿರುವ ಬಜೆಟ್

ಎಲ್ಲ ಹಳೆಯ ಯೋಜನೆಗಳಿಗೆ ಹೊಸ ಹೆಸರು ನೀಡುವ ಮೂಲ ಅವರ ಚೇಲಾಗಳನ್ನು ಸಂಭ್ರಮಪಡಿಸುವ ಬೋಗಸ್ ಬಜೆಟ್ ಹಾಗೂ ಅರಳು ಮರುಳಲ್ಲಿ ಮಾಡಿರುವ ಸಾಲದ ಬಜೆಟ್. ಮತ್ತಷ್ಟು ಸಾಲ ಮಾಡಿ ಬಡ್ಡಿ ಏರಿಸಿದ್ದೆ ಯಡಿಯೂರಪ್ಪ ಅವರ ಬಜೆಟ್‌ನ ಸಾಧನೆ.

ಬಿ.ಟಿ.ನಾಗಣ್ಣ, ಆಮ್ ಆದ್ಮಿ ಪಕ್ಷದ ಬೆಂಗಳೂರು ಘಟಕ ಉಪಾಧ್ಯಕ್ಷ

ದಲಿತರಿಗೆ ಮಾರಕ

ಒಕ್ಕಲಿಗರು ಮತ್ತು ವೀರಶೈವ ಅಭಿವೃದ್ಧಿ ನಿಗಮಗಳಿಗೆ ತಲಾ ₹500 ಕೋಟಿ ನೀಡಿರುವ ಸರ್ಕಾರ 16 ಸಮುದಾಯದಗಳನ್ನು ಒಳಗೊಂಡ ಹಿಂದುಳಿದ ನಿಗಮಗಳಿಗೆ ₹500 ಕೋಟಿ ಅನುದಾನ ಘೋಷಿಸಿರುವುದು ಯಾವ ನ್ಯಾಯ? ಇದು ದಲಿತ ಮತ್ತು ಹಿಂದುಳಿದವರಿಗೆ ಮಾರಕವಾದ ಬಜೆಟ್

ಲಕ್ಷ್ಮೀನಾರಾಯಣ ನಾಗವಾರ, ರಾಜ್ಯ ದಲಿತ ಸಂಘರ್ಷ ಸಮಿತಿ ಸಂಚಾಲಕ

ಬಜೆಟ್ ಎಂಬ ಕಣ್ಕಟ್ಟು

ಮಹಿಳಾ ದಿನದ ಹೆಸರಿನಲ್ಲಿ ಬಜೆಟ್‌ನ ಮೊದಲ ಸಾಲುಗಳು ಮಹಿಳಾ ವಿಭಾಗಕ್ಕೆ ಬಂದಿದೆ ಎಂಬುದು ಬಿಟ್ಟರೆ ಖಚಿತವಾಗಿ ಸಮತೆಯ ತಲೆಮಾರು ಕಟ್ಟುವ ಕನಸು ಎಲ್ಲಿಯೂ ಹುಟ್ಟಲಿಲ್ಲ. ಒಟ್ಟು ಬಜೆಟ್ ನ ಕೇವಲ ಶೇ 1 ಹಣ ಕೊಟ್ಟು ಮಹಿಳೆಯರ ಅಭಿವೃದ್ಧಿ ಮಾಡುತ್ತೇವೆ ಎನ್ನುವ ಕಣ್ಕಟ್ಟು ಇದು. ಕೊವಿಡ್‌ನಿಂದ ಕಂಗೆಟ್ಟ ಕಾಲದಲ್ಲಿಯೂ ದಿಟ್ಟತನದಿಂದ ಎದುರಿಸಿದ ಸ್ವಸಹಾಯ ಸಂಘದ ಮಹಿಳೆಯರಿಗೆ ಭರವಸೆ ನೀಡುವ ಅಕ್ಷರಗಳೂ ಕಾಣುತ್ತಿಲ್ಲ.

ಉದ್ಯೋಗದ ಕ್ಷೇತ್ರ ಸಂಪೂರ್ಣವಾಗಿ ಕುಸಿದಿದ್ದು ಅದರ ಬಗ್ಗೆ ಚಕಾರವಿಲ್ಲ. ನಗರ ಉದ್ಯೋಗ ಖಾತ್ರಿ ಯೋಜನೆಯ ಮೂಲಕ ಹದಗೆಟ್ಟ ನಗರವಾಸಿಗಳ ಬದುಕಿಗೆ ಸ್ವಲ್ಪವಾದರೂ ನೆರವು ನೀಡಬಹುದಾಗಿದ್ದನ್ನು ರಾಜ್ಯದ ಬಜೆಟ್ ಗಮನಕ್ಕೆ ತೆಗೆದುಕೊಂಡಿಲ್ಲ. ಜಾತಿ ಆಧಾರಿತ ನಿಗಮಗಳ ಸರ್ವತೋಮುಖ ಅಭಿವೃದ್ಧಿಗೆ ಕೋಟ್ಯಂತರ ರೂಪಾಯಿ ನೀಡಿ ಅತೃಪ್ತ ಆತ್ಮಗಳನ್ನು ತೃಪ್ತಿ ಪಡಿಸುವ ಪ್ರಯತ್ನ ಮಾಡಲಾಗಿದೆ.

ವಿಮಲಾ ಕೆ.ಎಸ್., ಜನವಾದಿ ಮಹಿಳಾ ಸಂಘಟನೆ

ಸಮತೋಲಿತ ಬಜೆಟ್

ಹೊಸ ತೆರಿಗೆ ಹೊರಿಸದೇ ಪ್ರಗತಿಗೆ ಇಂಬು ನೀಡುವ ಸಮತೋಲಿತ ಬಜೆಟ್ ಇದಾಗಿದೆ. ಕೃಷಿ, ನೀರಾವರಿ, ಮಹಿಳೆ, ಸಮಾಜ ಕಲ್ಯಾಣ, ಹಿಂದುಳಿದ ವರ್ಗ, ಮೂಲಸೌಕರ್ಯಕ್ಕೆ ಪ್ರಾಧಾನ್ಯತೆ ನೀಡಲಾಗಿದೆ. ಯಾವುದೇ ಹಳೇ ಯೋಜನೆಗಳನ್ನು ಕೈಬಿಟ್ಟಿಲ್ಲ. ಕೋವಿಡ್ ಸಂದರ್ಭದಲ್ಲಿ ಆರ್ಥಿಕ ಹಿನ್ನಡೆಯನ್ನು ಸರ್ಕಾರ ಎದುರಿಸಿತ್ತು. ಆದರೆ, ಆ ಸಂಕಷ್ಟವನ್ನು ಸರಿದೂಗಿಸಿ ಆರ್ಥಿಕ ಮುನ್ನಡೆ ಸಾಧಿಸಲು ಬಜೆಟ್ ಪೂರಕವಾಗಿದೆ.

ಬಸವರಾಜ ಬೊಮ್ಮಾಯಿ, ಗೃಹ ಸಚಿವ

ಬಜೆಟ್ ಪ್ರತಿಕ್ರಿಯೆಗಳು

ಕೋವಿಡ್ ಪರಿಸ್ಥಿತಿಯಲ್ಲೂ ಬಜೆಟ್ ಕೊಡುಗೆಗಳನ್ನು ನೀಡಿದೆ ಎಂದು ಕೆಲವರು ಸ್ವಾಗತಿಸಿದ್ದಾರೆ. ‘ಕೋವಿಡ್ ತೊಡಕುಗಳಿಂದ ತತ್ತರಿಸಿರುವ ಜನಸಾಮಾನ್ಯರ ಜೀವನ ನಿರ್ವಹಣೆಗೆ ಈ ಬಜೆಟ್ ತೃಪ್ತಿಕರವಾಗಿಲ್ಲ’ ಎಂದೂ ಹಲವರು ವಿರೋಧಿಸಿದ್ದಾರೆ. ಆಯ್ದ ಪ್ರತಿಕ್ರಿಯೆಗಳು ಇಲ್ಲಿ ಪ್ರಕಟಗೊಂಡಿವೆ.

ಜೀವನ ಸುಧಾರಿಸದ ಬಜೆಟ್

ಸಣ್ಣ ,ಮಧ್ಯಮ ಕೈಗಾರಿಕೆಗೆ ಹೆಚ್ಚಿನ ಅನುದಾನದ ಅಗತ್ಯವಿತ್ತು. ಕೋವಿಡ್ ನಡುವೆಯೂ ಮಂಡನೆಯಾದ ಹಾಗೂ ಆತ್ಮನಿರ್ಭರ ಬಜೆಟ್ ಎಂದೇ ಕರೆಸಿಕೊಂಡ ಕೇಂದ್ರ ಬಜೆಟ್‌ನಲ್ಲಿ ಈ ವಲಯಕ್ಕೆ ನಿರೀಕ್ಷಿತ ಕೊಡುಗೆಗಳು ಬಂದಿಲ್ಲ. ರಾಜ್ಯದ ಬಜೆಟ್‌ನಲ್ಲೂ ಅದೇ ಆಗಿದೆ.

ಪ್ರಿಯದರ್ಶಿನಿ, ಉದ್ಯೋಗಿ

ಮಹಿಳೆಯರಿಗೆ ಸೌಲಭ್ಯ ಸಾಲದು

ಸಣ್ಣ ಉದ್ಯೋಗ ಮಾಡುತ್ತಿರುವ ಮಹಿಳೆಯರು ಹಾಗೂ ಹೆಣ್ಣು ಮಕ್ಕಳಿಗೆ ವಿವಿಧ ಉದ್ದೇಶಗಳಿಗಾಗಿ ಸಬ್ಸಿಡಿಗಳನ್ನು ಘೋಷಿಸಬೇಕಿತ್ತು. ಉದ್ಯಮ ಕಟ್ಟಿಕೊಳ್ಳಲು ಇಚ್ಛಿಸುವ ಮಹಿಳೆಯರಿಗೆ ಬ್ಯಾಂಕ್‌ಗಳಿಂದ ಶೀಘ್ರವಾಗಿ ಸಾಲ ಸೌಲಭ್ಯ ಸಿಗಬೇಕು. ಮಹಿಳೆಯರಿಗೆ ತೆರಿಗೆ ವಿನಾಯಿತಿ ಬೇಕಿತ್ತು.

ಶ್ರುತಿ ಕುಲಕರ್ಣಿ, ಉದ್ಯಮಿ

ಬಜೆಟ್‌ನಲ್ಲಿ ಹೊಸತನವಿಲ್ಲ

ಮುಖ್ಯಮಂತ್ರಿ ಮಂಡಿಸಿದ ಬಜೆಟ್‌ನಲ್ಲಿ ವಿಶೇಷ ಎನಿಸುವ ಅಂಶಗಳಿಲ್ಲ. ರಾಜ್ಯದಲ್ಲಿ ಈಗಿನ ಸ್ಥಿತಿಯನ್ನು ನಿಯಂತ್ರಿಸುವ ಪೂರಕ ಯೋಜನೆಗಳು ಬರಲಿಲ್ಲ. ರೈತರ ಆದಾಯ ದ್ವಿಗುಣಗೊಳಿಸುತ್ತೇವೆ ಎಂದು ಪ್ರಧಾನಿ ಮೋದಿ ಹೇಳಿದ್ದರು. ಹಸಿರು ಶಾಲು ಧರಿಸಿ ಯಡಿಯೂರಪ್ಪ ಬಜೆಟ್ ಮಂಡಿಸಿದರು. ಆದರೆ, ರೈತರಿಗೆ ಅನುಕೂಲವಾಗುವ ಯೋಜನೆಗಳು ಕಡಿಮೆ.

ಸವಿತಾ, ಉದ್ಯೋಗಿ

ಉದ್ಯೋಗಗಳು ಎಲ್ಲಿ?

ಯುವಜನರಿಗೆ ಉದ್ಯೋಗ ಸೃಷ್ಟಿಸುವ ಯೋಜನೆಗಳನ್ನು ತರಲು ಬಜೆಟ್‌ನಲ್ಲಿ ವಿಶೇಷ ಆದ್ಯತೆ ನೀಡಿಲ್ಲ. ಕೊರೊನಾದಿಂದ ಹಲವರ ಬದುಕು ಬೀದಿಗೆ ಬಂದಿದೆ. ಶಿಕ್ಷಿತ ಯುವ ಸಮುದಾಯಕ್ಕೆ ಉದ್ಯೋಗಗಳೇ ಇಲ್ಲ. ಮುಂದಿನ ಚುನಾವಣೆಯವರೆಗೆ ಯುವಜನಾಂಗದ ನೆನಪು ಸರ್ಕಾರಕ್ಕೆ ಬಾರದು.

ಅಭಿಷೇಕ್, ಸಾಫ್ಟ್‌ವೇರ್ ಉದ್ಯೋಗಿ

ಹೂವಿನ ಮಾರುಕಟ್ಟೆ ಸ್ವಾಗತಾರ್ಹ

ಬೈಯಪ್ಪನಹಳ್ಳಿ ಬಳಿ ₹50 ಕೋಟಿ ವೆಚ್ಚದಲ್ಲಿ ಹೂವಿನ ಮಾರುಕಟ್ಟೆ ನಿರ್ಮಾಣ ಸ್ವಾಗತಾರ್ಹ. ಇದರಿಂದ ಹೂ ಬೆಳೆಗಾರರಿಗೆ ನಿರಾಳ ಮೂಡಿಸಿದೆ. ಕೆ.ಆರ್.ಮಾರುಕಟ್ಟೆಯಲ್ಲೂ ಹೂ ವಹಿವಾಟಿಗೆ ಸೂಕ್ತ ವಾತಾವರಣ ಇರಲಿಲ್ಲ. ವ್ಯಾಪಾರಕ್ಕೆ ಬರುತ್ತಿದ್ದ ಬೆಳೆಗಾರರನ್ನು ಸುಲಿಗೆ ಮಾಡುವವರೇ ಹೆಚ್ಚಾಗಿದ್ದರು. ಇಂತಹ ಮಾರುಕಟ್ಟೆಗಳನ್ನು ಮುಂದಿನ ದಿನಗಳಲ್ಲಿ ಅಲ್ಲಲ್ಲಿ ನಿರ್ಮಿಸಬೇಕು.

ಪ್ರದೀಪ್, ರೈತ

ಸಮರ್ಪಕ ಬಳಕೆಯಾಗಲಿ

ರಾಜ್ಯ ಬಜೆಟ್‌ನಲ್ಲಿ ಈ ಬಾರಿ ತೃಪ್ತಿಕರ ಅಂಶಗಳಿವೆ. ಅನುದಾನ ಹಾಗೂ ಯೋಜನೆಗಳಲ್ಲಿ ಏರುಪೇರು ಇರಬಹುದು. ಆದರೆ, ಎಲ್ಲ ಕ್ಷೇತ್ರಗಳನ್ನು ಈ ಸರ್ಕಾರ ಗಣನೆಗೆ ತೆಗೆದುಕೊಂಡಿದೆ. ಕೋಟಿಗಟ್ಟಲೆ ಘೋಷಣೆಯಾಗಿರುವ ಅನುದಾನಗಳು ಜನರಿಗೆ ಎಷ್ಟರ ಮಟ್ಟಿಗೆ ತಲುಪುತ್ತವೆ ಹಾಗೂ ಎಷ್ಟು ಪ್ರಮಾಣದ ಅಭಿವೃದ್ಧಿಯಾಗಲಿದೆ? ಎನ್ನುವುದೇ ಈಗಿರುವ ಪ್ರಶ್ನೆ.

ಕೆ.ಕೆ.ರಾಜು, ಸ್ನಾತಕೋತ್ತರ ಪದವಿ ವಿದ್ಯಾರ್ಥಿ

ಮಹಿಳಾ ಯೋಜನೆಗಳು ಭರಪೂರ

ಅಂತರರಾಷ್ಟ್ರೀಯ ಮಹಿಳಾ ದಿನದಂದೇ ಮಂಡನೆಯಾದ ರಾಜ್ಯ ಬಜೆಟ್‌ನಲ್ಲಿ ಮಹಿಳೆಯರಿಗೆ ಸುಗ್ಗಿ ಎನ್ನುವಂತೆ ವಿಶೇಷ ಯೋಜನೆಗಳನ್ನು ಘೋಷಿಸಿರುವುದು ಸ್ವಾಗತಾರ್ಹ. ಮಹಿಳೆಯರ ಸರ್ವತೋಮುಖ ಅಭಿವೃದ್ಧಿಗೆ ನೆರವಾಗುವಂತಹ ಯೋಜನೆಗಳನ್ನು ಕೊಡುಗೆಯಾಗಿ ನೀಡಲಾಗಿದೆ. ಮೀಸಲಿಟ್ಟಿರುವ ಹಣ ಸಮರ್ಪಕವಾಗಿ ಬಳಸಿಕೊಂಡರೆ ಪರಿಣಾಮಕಾರಿ.

ಶ್ವೇತಾ, ಪದವಿ ವಿದ್ಯಾರ್ಥಿನಿ

ಮಕ್ಕಳಿಗೆ ಪರ–ವಿರೋಧದ ಬಜೆಟ್

ರಾಜ್ಯದ ಬಜೆಟ್ ಅನ್ನು ವಿಮರ್ಶಿಸಿದರೆ, ಮಕ್ಕಳ ಬದುಕು, ರಕ್ಷಣೆ ಮತ್ತು ಅಭಿವೃದ್ಧಿಗೆ ಅಲ್ಪ ಪ್ರಮಾಣದ ಹಣ ಮೀಸಲಿಡಲಾಗಿದೆ. ಪಂಚಾಯತ್ ರಾಜ್ ಹಂತದಲ್ಲಿ ಮಕ್ಕಳ ರಕ್ಷಣಾ ಆಯೋಗ ಉತ್ತಮ ವಿಚಾರವಾದರೂ ಈಗಿನ ಮಕ್ಕಳ ರಕ್ಷಣೆ ವ್ಯವಸ್ಥೆ ಬಲಪಡಿಸಲು ಯಾವುದೇ ಅನುದಾನ ಮೀಸಲಿಡದಿರುವುದು ಶೋಚನೀಯ. ಅಂಗವಿಕಲ ಮಕ್ಕಳ ಶಿಕ್ಷಣಕ್ಕೆ ಒತ್ತು ನೀಡಿರುವುದು ಸಂತಸ. ಆದರೆ, ಅಂಗವಿಕಲ ಮಕ್ಕಳಿಗೆ ತರಬೇತಿ ನೀಡುವ ಶಿಕ್ಷಕರ ಉಲ್ಲೇಖವೇ ಇಲ್ಲ.

ನಾಗಸಿಂಹ ಜಿ.ರಾವ್, ಚೈಲ್ಡ್ ರೈಟ್ಸ್ ಟ್ರಸ್ಟ್ ನಿರ್ದೇಶಕ



1.ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ ಆಯೋಜಿಸಿದ ‘ಮಹಿಳಾ ವಾದ್ಯ ನಾದ ವೈಭವ 2021’ ಕಾರ್ಯಕ್ರಮವನ್ನು ಅದಮ್ಯ ಚೇತನ ಸಂಸ್ಥೆಯ ಅಧ್ಯಕ್ಷೆ ತೇಜಸ್ವಿನಿ ಅನಂತಕುಮಾರ್ ಉದ್ಘಾಟನೆ ಮಾಡಿದರು. ಅಕಾಡೆಮಿ ಸದಸ್ಯ ಕಿಕ್ಕೇರಿ ಕೃಷ್ಣಮೂರ್ತಿ, ರಿಜಿಸ್ಟ್ರಾರ್ ಬನಶಂಕರಿ ವಿ. ಅಂಗಡಿ, ಅಧ್ಯಕ್ಷ ಆನೂರು ಅನಂತ ಕೃಷ್ಣ ಶರ್ಮ, ಕಲಾವಿದೆ ಅನಸೂಯಾ ಕುಲಕರ್ಣಿ, ಕಾರ್ಯಕ್ರಮದ ಸಂಚಾಲಕಿ ಡಾ. ಪದ್ಮಿನಿ ಓಕ್ ಇದ್ದರು. 2. ಬೈಕ್ ರ್‍ಯಾಲಿ ನಡೆಸುವ ಮೂಲಕ ಮಹಿಳೆಯರು ಜಾಗೃತಿ ಮೂಡಿಸಿದರು. 3. ಸಿ.ವಿ. ರಾಮನ್ ಸಾರ್ವಜನಿಕ ಆಸ್ಪತ್ರೆಯ ಪಿಂಕ್ ಬೂತ್‌ನಲ್ಲಿ ಮಹಿಳಾ ಫಲಾನುಭವಿಗಳು ಲಸಿಕೆ ಪಡೆದುಕೊಂಡರು – ಪ್ರಜಾವಾಣಿ ಚಿತ್ರಗಳು

ಮಹಿಳಾ ಸಾಧಕರು, ಕೊರೊನಾ ಯೋಧರಿಗೆ ಗೌರವ, ಜಾಗೃತಿ ಜಾಥಾ

ನಗರದೆಲ್ಲೆಡೆ ಮಹಿಳೆಯರ ಸಡಗರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದೆಲ್ಲೆಡೆ ಮಹಿಳೆಯರು ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಸೋಮವಾರ ಸಂಭ್ರಮ ಮತ್ತು ಸಡಗರದಿಂದ ಆಚರಿಸಿದರು. ವಿವಿಧ ಸಂಘ–ಸಂಸ್ಥೆಗಳು ಮಹಿಳಾ ಸಾಧಕರು ಹಾಗೂ ಕೊರೊನಾ ಯೋಧರನ್ನು ಗೌರವಿಸಿದವು.

ನಗರದ ವಿವಿಧೆಡೆ ಸಂಘಟನೆಗಳು ಮಹಿಳೆಯರ ಸ್ಥಿತಿಗತಿಯನ್ನು ಕುರಿತ ಚಿಂತನ ಮಂಥನ, ವಿಚಾರಗೋಷ್ಠಿ, ಚರ್ಚೆಗಳನ್ನು ನಡೆಸಿದವು. ಮಹಿಳೆಯರಿಗಾಗಿ ರಂಗೋಲಿ, ಚಿತ್ರ ಬಿಡಿಸುವ ಸ್ಪರ್ಧೆ, ಸಾಂಸ್ಕೃತಿಕ ಕಾರ್ಯಕ್ರಮಗಳು ಕೂಡ ಜರುಗಿದವು. ಇದರೊಂದಿಗೆ ಕೆಲವು ಸ್ತ್ರೀಪರ ಸಂಘಟನೆಗಳು ಹಲವು ಬೇಡಿಕೆಗಳ ಈಡೇರಿಕೆಗಾಗಿ ಹೋರಾಟ ನಡೆಸಿದವು. ಸ್ತ್ರೀ ಸಂಕುಲದ ಸ್ವಾಭಿಮಾನ ಮತ್ತು ಸಬಲೀಕರಣವೇ ಮಹಿಳಾ ದಿನಾಚರಣೆಯ ಮೂಲ ತಿರುಳಾಗಬೇಕೆಂದು ಹಲವು ಸ್ತ್ರೀ ಸಂಘಟನೆಗಳು ಆಶಯ ವ್ಯಕ್ತಪಡಿಸಿದವು. ಕಾಲೇಜುಗಳು, ಕಚೇರಿಗಳು, ಕಂಪನಿಗಳು ಸೇರಿದಂತೆ ವಿವಿಧೆಡೆ ಮಹಿಳೆಯರು ಪರಸ್ಪರ ಶುಭಾಶಯಗಳನ್ನು ವಿನಿಮಯ ಮಾಡಿಕೊಂಡು ಸಂಭ್ರಮಿಸಿದರು.

ಕಂಠೀರವ ಕ್ರೀಡಾಂಗಣದಲ್ಲಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಆಯೋಜಿಸಿದ ವಿಶ್ವ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಸಚಿವ ಕೆ.ಸಿ. ನಾರಾಯಣಗೌಡ ಅವರು ಮಹಿಳಾ ಬೈಕ್ ರೈಡ್ ಮತ್ತು ಕಾರು ಸ್ಪರ್ಧೆಗೆ ಚಾಲನೆ ನೀಡಿದರು. ಬಳಿಕ ಕ್ರೀಡಾಂಗಣದಲ್ಲಿರುವ ವಿವಿಧ ಕ್ರೀಡಾ ಕೋರ್ಟ್‌ಗಳಿಗೆ ತೆರಳಿ, ಕ್ರೀಡೆಯಲ್ಲಿ ಪಾಲ್ಗೊಂಡು ಆಟಗಾರರನ್ನು ಹುರಿದುಂಬಿಸಿದರು. ಈ ವೇಳೆ ಒಲಂಪಿಕ್ ಅಸೋಸಿಯೇಷನ್ ಅಧ್ಯಕ್ಷ ಗೋವಿಂದರಾಜು ಮತ್ತು ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಉಪಸ್ಥಿತರಿದ್ದರು.

ಮಹಿಳೆಯರಿಗೆ ಪ್ರವಾಸ: ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮವು (ಕೆಎಸ್‌ಟಿಡಿಸಿ) ಮಹಿಳಾ ಕೊರೊನಾ ಯೋಧರು ಹಾಗೂ ತನ್ನ ಸಿಬ್ಬಂದಿಗೆ ಪ್ರವಾಸವನ್ನು ಆಯೋಜಿಸಿತ್ತು. ಎರಡು ದಿನಗಳ ಪ್ರವಾಸದಲ್ಲಿ 80 ಮಂದಿ ಬೇಲೂರು ಹಳೇಬೀಡು, ಧರ್ಮಸ್ಥಳ, ಕುಕ್ಕೆ ಸುಬ್ರಮಣ್ಯ ಸೇರಿದಂತೆ ವಿವಿಧೆಡೆ ಭೇಟಿ ನೀಡಲಿದ್ದಾರೆ. ಕುಮಾರಕೃಪಾದಲ್ಲಿ ಎರಡು ಬಸ್‌ಗಳಿಗೆ ಪ್ರವಾಸೋದ್ಯಮ ಸಚಿವ ಸಿ.ಪಿ. ಯೋಗೇಶ್ವರ್ ಚಾಲನೆ ನೀಡಿ, ‘ಮಹಿಳಾ ಸಿಬ್ಬಂದಿಯನ್ನು ಪ್ರೋತ್ಸಾಹಿಸಲು ಇಲಾಖೆಯು ಎರಡು ದಿನಗಳ ಪ್ರವಾಸ ಏರ್ಪಡಿಸಿದೆ. ಒಂದು ತಿಂಗಳ ಕಾಲ ಇಲಾಖೆಯ ಹೋಟೆಲ್‌ಗಳಲ್ಲಿ ಮಹಿಳೆಯರಿಗೆ ವಿಶೇಷ ರಿಯಾಯಿತಿ ನೀಡಲಾಗುತ್ತಿದೆ’ ಎಂದು ಹೇಳಿದರು.

ಕೆಎಸ್‌ಟಿಡಿಸಿ ಅಧ್ಯಕ್ಷೆ ಶ್ರುತಿ ಮಾತನಾಡಿ, ‘ಕೋವಿಡ್ ಸಂದರ್ಭದಲ್ಲಿ ಶುಶ್ರೂಷಕಿಯರು ತಮ್ಮ ಜೀವವನ್ನು ಪಣಕ್ಕಿಟ್ಟು ಕೆಲಸ ಮಾಡಿದ್ದಾರೆ. ಅವರನ್ನು ಪ್ರೋತ್ಸಾಹಿಸುವುದು ನಮ್ಮ ಕರ್ತವ್ಯ. ಹೀಗಾಗಿ, ಮುಂಚೂಣಿಯಲ್ಲಿದ್ದ ಕೊರೊನಾ ಯೋಧರು ಹಾಗೂ ಪ್ರವಾಸೋದ್ಯಮ ಇಲಾಖೆಯ ಮಹಿಳಾ ಸಿಬ್ಬಂದಿಗೆ ಎರಡು ದಿನಗಳ ಪ್ರವಾಸ ಕಾರ್ಯಕ್ರಮ ಏರ್ಪಡಿಸಲಾಗಿದೆ. ಮುಂದಿನ ದಿನಗಳಲ್ಲಿ ಮಹಿಳೆಯರಿಗೆ ಇಲಾಖೆಯಿಂದ ಇನ್ನಷ್ಟು ಉತ್ತೇಜನ ನೀಡಲಾಗುವುದು’ ಎಂದರು.

ಶೈಕ್ಷಣಿಕ ದತ್ತು ಸ್ವೀಕಾರ: ಸಂಸ್ಕೃತ ವಿಶ್ವವಿದ್ಯಾಲಯದ ಸಭಾಂಗಣದಲ್ಲಿ] ನಡೆದ ಕಾರ್ಯಕ್ರಮದಲ್ಲಿ ಡಾ. ವಿಷ್ಣು ಸೇನಾ ಸಮಿತಿ ಮಹಿಳಾ ಘಟಕವು ಇಬ್ಬರು ಹೆಣ್ಣುಮಕ್ಕಳನ್ನು ಶೈಕ್ಷಣಿಕವಾಗಿ ದತ್ತು ಸ್ವೀಕಾರ ಮಾಡಿತು. ಹೆಣ್ಣು ಮಕ್ಕಳ ವಿದ್ಯಾಭ್ಯಾಸಕ್ಕೆ ತಗಲುವ ಶುಲ್ಕದ ಹಣವನ್ನು ಚೆಕ್ ರೂಪದಲ್ಲಿ ಶಾಲಾ ಆಡಳಿತ ಮಂಡಳಿಗೆ ಹಿರಿಯ ಪತ್ರಕರ್ತೆ ಡಾ.ಆರ್. ಪೂರ್ಣಿಮಾ, ಲೇಖಕಿ ಭಾರತಿ ಹೆಗಡೆ, ಕನ್ನಡ ಪರಿಚಾರಕರಾದ ಪ್ರಕಾಶ್ ಮೂರ್ತಿ ಮತ್ತು ಮಹಿಳಾಪರ ಚಿಂತಕಿ ಶೋಭಾ ಎಚ್.ಜಿ., ವಿಷ್ಣು ಸೇನಾ ಸಮಿತಿಯ ಮುಖಂಡರಾದ ರಾಧಾ ಗಂಗಾಧರ್, ವಿಜಯಲಕ್ಷ್ಮಿ ಮತ್ತು ಭಾಗ್ಯರಾಮು ಹಸ್ತಾಂತರಿಸಿದರು.

ಯುವತಿಯರು ಹೂಗುಚ್ಛ ನೀಡಿ ಪರಸ್ಪರ ಶುಭಾಶಯ ವಿನಿಮಯ ಮಾಡಿಕೊಳ್ಳುವ ಮೂಲಕ ಮಹಿಳಾ ದಿನಾಚರಣೆ ಆಚರಿಸಿದರು.

ಪ್ರಜಾವಾಣಿ ಚಿತ್ರ : ಅನೂಪ್ ರಾಘ್.ಟಿ.

ಪಿಂಕ್ ಬೂತ್‌ನಲ್ಲಿ ಲಸಿಕೆ

ವಿಶ್ವ ಮಹಿಳಾ ದಿನಾಚರಣೆಯ ಪ್ರಯುಕ್ತ ನಗರದ ಸಿ.ವಿ.ರಾಮನ್ ಆಸ್ಪತ್ರೆಯಲ್ಲಿ ಪಿಂಕ್ ಬೂತ್ ನಿರ್ಮಿಸಲಾಗಿತ್ತು. ಗುಲಾಬಿ ಬಣ್ಣದ ಬಲೂನುಗಳಿಂದ ಕೇಂದ್ರವನ್ನು ಅಲಂಕರಿಸಲಾಗಿತ್ತು. ನಿಯೋಜಿಸಲಾಗಿದ್ದ ಮಹಿಳಾ ಸಿಬ್ಬಂದಿ, ಮಹಿಳಾ ಫಲಾನುಭವಿಗಳನ್ನು ಬರಮಾಡಿಕೊಂಡು ಲಸಿಕೆ ನೀಡಿದರು.

ಪಿಂಕ್ ಬೂತ್ ಉದ್ಘಾಟಿಸಿದ ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ. ಸುಧಾಕರ್, ‘ನವಜಾತ ಶಿಶು ಹಾಗೂ ತಾಯಂದಿರ ಮರಣ ಪ್ರಮಾಣವನ್ನೂ ಶೂನ್ಯಕ್ಕೆ ತರುವ ಗುರಿ ಇಟ್ಟುಕೊಳ್ಳಲಾಗಿದೆ. ಉತ್ತರ ಕರ್ನಾಟಕ ಭಾಗದಲ್ಲಿ ಈ ನಿಟ್ಟಿನಲ್ಲಿ ಹೆಚ್ಚು ಕ್ರಮ ವಹಿಸಬೇಕಿದೆ’ ಎಂದರು.

111 ಸಾಧಕರಿಗೆ 111 ನಿಮಿಷಗಳಲ್ಲಿ ಸನ್ಮಾನ

ಲೀಡ್ ಫೌಂಡೇಷನ್ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿರುವ 111 ಮಹಿಳೆಯರನ್ನು 111 ನಿಮಿಷಗಳಲ್ಲಿ ಸನ್ಮಾನಿಸುವ ಮೂಲಕ ವಿಶ್ವ ದಾಖಲೆಯ ಪ್ರಯತ್ನ ನಡೆಸಿತು. ರಾಜಕೀಯ, ಸಿನಿಮಾ, ಮಾಧ್ಯಮ, ಶಿಕ್ಷಣ ಮೊದಲಾದ ಕ್ಷೇತ್ರಗಳಲ್ಲಿ ಸಾಧನೆ ಮಾಡಿದವರು ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. ರಾಜ್ಯಮಟ್ಟದ ಮಹಿಳಾ ಸಂಘಟನೆಗಳ ಒಕ್ಕೂಟವು ರಾಷ್ಟ್ರೀಯ ಮಹಿಳಾ ನೀತಿಯನ್ನು ಜಾರಿ ಮಾಡಬೇಕು ಎಂದು ಒತ್ತಾಯಿಸಿ ಜಾಗೃತಿ ಜಾಥಾ ನಡೆಸಿತು. ಆಲ್ ಇಂಡಿಯಾ ಟ್ರೇಡ್ ಯೂನಿಯನ್ ಕಾಂಗ್ರೆಸ್ ಮತ್ತು ಭಾರತೀಯ ಮಹಿಳಾ ಒಕ್ಕೂಟವು ಮಹಿಳಾ ದಿನಾಚರಣೆ ಆಚರಿಸಿತು.

ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಆಯೋಜಿಸಿದ ಕಾರ್ಯಕ್ರಮದಲ್ಲಿ ಮಹಿಳಾ ಸಾಧಕರಾದ ಇಶಾ ಪಂತ್, ವಿ. ಸುಮಂಗಲಾ, ಕೆ.ಆರ್. ಪಲ್ಲವಿ, ಡಾ.ಎನ್. ಶೈಲಜಾ, ಡಾ. ಶ್ರೀಲಕ್ಷ್ಮಿ ಶ್ರೀನಿವಾಸನ್, ಡಾ. ರಿತು ಗಂಜಿಗಟ್ಟಿ, ಡಾ.ಜಿ.ವಿ. ಸಹನಾ, ಡಾ.ಸಿ.ವಿ. ಕೃಪಾ ವಿಜಯ್, ಯಶೋದಾ ಲೋಕೇಶ್ ಹಾಗೂ ಯಶೋದಾ ಅವರಿಗೆ ಗೌರವ ಸಮರ್ಪಣೆ ಮಾಡಲಾಯಿತು. ಕಲಾ ನೇಕಾರ ಸಂಸ್ಥೆ ಆಯೋಜಿಸಿದ ಕಾರ್ಯಕ್ರಮದಲ್ಲಿ ಶೈಲಜಾ ಸುರೇಶ್ ಅವರ ‘ಬದುಕ ಭಿತ್ತಿಯ ಚಿತ್ರಗಳು’ ಮತ್ತು ‘ಪ್ರವಲ್ಲಿಕಾ’ ಪುಸ್ತಕವನ್ನು ಲತಾ ಶ್ರೀನಿವಾಸ್ ಬಿಡುಗಡೆ ಮಾಡಿದರು.

ರಂಜಿಸಿದ ಮಹಿಳಾ ವಾದ್ಯ ನಾದ

ವಿಶ್ವ ಮಹಿಳಾ ದಿನದ ಅಂಗವಾಗಿ ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿಯು ರವೀಂದ್ರ ಕಲಾಕ್ಷೇತ್ರದಲ್ಲಿ ಆಯೋಜಿಸಿದ ಮಹಿಳಾ ವಾದ್ಯ ನಾದ ವೈಭವ ಕಾರ್ಯಕ್ರಮವು ಸಂಗೀತಪ್ರೇಮಿಗಳನ್ನು ರಂಜಿಸಿತು. ಖ್ಯಾತ ಮಹಿಳಾ ಕಲಾವಿದರು ವೀಣೆ, ಸಂತೂರ್, ನಾಗಸ್ವರ, ಪಿಟೀಲು, ಜಲತರಂಗ, ತಾಳ, ಸಿತಾರ್, ರುದ್ರವೀಣಾ ಹಾಗೂ ಮಂಗಳವಾದ್ಯಗಳವನ್ನು ಪ್ರಸ್ತುತಪಡಿಸಿದರು.

ಕನ್ನಡ ಮತ್ತು ಸಂಸ್ಕೃತಿ ಸಚಿವ ಅರವಿಂದ ಲಿಂಬಾವಳಿ ಮಾತನಾಡಿ, ‘ಸ್ವಾತಂತ್ರ್ಯದ 75ನೇ ವರ್ಷಾಚರಣೆಯನ್ನು ಕೇಂದ್ರ ಸರ್ಕಾರವು ‘ಆಜಾದ್ ಕಿ ಅಮೃತ ಮಹೋತ್ಸವ’ ಎಂಬ ಶೀರ್ಷಿಕೆಯಡಿ ಮಾ.12ರಿಂದ ಆ.15ರವರೆಗೆ ಆಚರಣೆ ಮಾಡುತ್ತಿದೆ. ಇದು ಜನಾಂದೋಲನದ ರೀತಿಯಲ್ಲಿ ನಡೆಯಬೇಕು’ ಎಂದರು.

ಒಕ್ಕಲಿಗ ಸಮುದಾಯದ ಬಹುದಿನಗಳ ಹಕ್ಕೊತ್ತಾಯಕ್ಕೆ ಸ್ಪಂದಿಸಿ, ಅಭಿವೃದ್ಧಿ ನಿಗಮ ಸ್ಥಾಪಿಸಿರುವುದು ಸ್ವಾಗತಾರ್ಹ

ನಿರ್ಮಲಾನಂದನಾಥ ಸ್ವಾಮೀಜಿ
ಆದಿಚುಂಚನಗಿರಿ ಮಹಾಸಂಸ್ಥಾನ ಮಠ

₹7,795 ಕೋಟಿ
2021–22ನೇ ಸಾಲಿಗೆ ಬೆಂಗಳೂರು ನಗರದ ಸಮಗ್ರ ಅಭಿವೃದ್ಧಿಗೆ ಒದಗಿಸಲಾದ ಅನುದಾನ

₹850 ಕೋಟಿ
ಉಪನಗರ ರೈಲು ಯೋಜನೆಗೆ 2021–22ನೇ ಸಾಲಿನಲ್ಲಿ ರಾಜ್ಯ ಸರ್ಕಾರ ನಿಗದಿಪಡಿಸಿದ ಅನುದಾನ

₹9,000 ಕೋಟಿ
ಮೇಕೆದಾಟು ಸಮತೋಲನ ಜಲಾಶಯ ನಿರ್ಮಾಣ ಯೋಜನಾ ವರದಿ ಕೇಂದ್ರಕ್ಕೆ ಸಲ್ಲಿಕೆ: ಶೀಘ್ರ ಅನುಮೋದನೆ ನಿರೀಕ್ಷೆ

₹169 ಕೋಟಿ
ಕೋರಮಂಗಲ ಕಣಿವೆಯ ರಾಜಕಾಲುವೆ ಅಭಿವೃದ್ಧಿ ಮತ್ತು ನಿರ್ವಹಣೆ ಯೋಜನೆಗೆ ಮೀಸಲಿಟ್ಟ ಅನುದಾನ

ಮುಖ್ಯಾಂಶಗಳು

- ಸಿಂಗೇನ ಅಗ್ರಹಾರದಲ್ಲಿ ಹಣ್ಣು ಮಾರುಕಟ್ಟೆಗೆ ಹೊಂದಿಕೊಂಡ ಗುಳಿಮಂಗಲ ಗ್ರಾಮದ 42 ಎಕರೆಯಲ್ಲಿ ಅತ್ಯಾಧುನಿಕ ತರಕಾರಿ ಮಾರುಕಟ್ಟೆ ನಿರ್ಮಾಣ
- ಪೀಣ್ಯ ಕೈಗಾರಿಕಾ ಟೌನ್‌ಷಿಪ್ ಸ್ಥಾಪನೆಗೆ ₹ 100 ಕೋಟಿ
- ಬೆಂಗಳೂರಿನಲ್ಲಿ ಇನ್ವೆಸ್ಟ್ ಕರ್ನಾಟಕ ಯೋಜನೆಯಡಿ ಜಾಗತಿಕ ಹೂಡಿಕೆದಾರರ ಸಮಾವೇಶ ಆಯೋಜನೆ

₹450 ಕೋಟಿ
ಕೆ.ಸಿ.ವ್ಯಾಲಿ ಆವರಣದಲ್ಲಿರುವ 248 ಎಂಎಲ್‌ಡಿ ಸಾಮರ್ಥ್ಯದ ಎಸ್‌ಟಿಪಿ ಪುನರುಜ್ಜೀವನ ಮತ್ತು ಉನ್ನತೀಕರಣಕ್ಕೆ

₹2 ಕೋಟಿ
ಮಲ್ಲತ್ತಹಳ್ಳಿಯ ಕಲಾಗ್ರಾಮದಲ್ಲಿ ವಾರಾಂತ್ಯದ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ

₹33 ಕೋಟಿ
ಬೆಂಗಳೂರು ಮಹಾನಗರ ಪಾಲಿಕೆಯ ಶಾಲೆಗಳ ನವೀಕರಣ ಮತ್ತು ಪುನರ್‌ನಿರ್ಮಾಣಕ್ಕೆ

₹10 ಕೋಟಿ
ಪಾಲಿಕೆ ವ್ಯಾಪ್ತಿಯಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಲ್ಲದ 57 ವಾರ್ಡ್‌ಗಳಲ್ಲಿ ಜನಾರೋಗ್ಯ ಕೇಂದ್ರ ಸ್ಥಾಪನೆಗೆ

₹20 ಕೋಟಿ
ಜಯದೇವ ಆಸ್ಪತ್ರೆ ಮೇಲಿನ ಒತ್ತಡ ಕಡಿಮೆ ಮಾಡಲು ಕೆ.ಸಿ. ಜನರಲ್ ಆಸ್ಪತ್ರೆಯಲ್ಲಿ 50 ಹಾಸಿಗೆಗಳ ಉಪಕೇಂದ್ರ ಸ್ಥಾಪನೆಗೆ

ಆರೋಗ್ಯ ಮೂಲಸೌಕರ್ಯ ಅಭಿವೃದ್ಧಿಗೆ ಕ್ರಮ • ವಿಶೇಷ ಮೂಲಸೌಕರ್ಯ ಅಭಿವೃದ್ಧಿಗೆ ಹೆಚ್ಚಿಸಿಲ್ಲ ಅನುದಾನ

ಉಪನಗರ ರೈಲು: ಮೂಡಿದ ಭರವಸೆ

• ಪ್ರವೀಣ್ ಕುಮಾರ್ ಪಿ.ವಿ.

ಬೆಂಗಳೂರು: ಉಪನಗರ ರೈಲು ಯೋಜನೆ ಅನುಷ್ಠಾನಕ್ಕೆ ರಾಜ್ಯದ ಪಾಲು ಭರಿಸಲು ₹ 850 ಕೋಟಿ ಅನುದಾನವನ್ನು ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ಬಜೆಟ್‌ನಲ್ಲಿ ಘೋಷಿಸಿರುವುದು ಕೊನೆಗೂ 'ಈ ಯೋಜನೆ ಹಳಿಗೆ ಬರುತ್ತದೆ' ಎಂಬ ಆಶಾವಾದ ಮೂಡಿಸಿದೆ. ಆರೋಗ್ಯ ಮೂಲಸೌಕರ್ಯಕ್ಕೂ ಕೆಲವು ಕಾರ್ಯಕ್ರಮಗಳನ್ನು ಪ್ರಕಟಿಸಲಾಗಿದೆ.

₹ 15,767 ಕೋಟಿ ವೆಚ್ಚ ಉಪನಗರ ಯೋಜನೆಗೆ ಕೇಂದ್ರ ಸರ್ಕಾರದ ಆರ್ಥಿಕ ವ್ಯವಹಾರಗಳ ಸಚಿವ ಸಂಪುಟಸಮಿತಿ (ಸಿಸಿಇಎ) ಅನುಮೋದನೆ ನೀಡಿತ್ತು. ಆರು ವರ್ಷಗಳಲ್ಲಿ ಈ ಯೋಜನೆಯನ್ನು ಪೂರ್ಣಗೊಳಿಸುವ ಉದ್ದೇಶ ಈಡೇರಬೇಕಾದರೆ ಈ ಯೋಜನೆಯ ಭೂಸ್ವಾಧೀನ ಕಾರ್ಯ ಚುರುಕುಗೊಳಿಸಬೇಕಿದೆ. ಭೂಸ್ವಾಧೀನ ಪ್ರಕ್ರಿಯೆ ಚುರುಕುಗೊಳಿಸಲು ರಾಜ್ಯ ಸರ್ಕಾರ ಒದಗಿಸುವ ಅನುದಾನ ನೆರವಾಗಲಿದೆ.

'ಆರೋಗ್ಯಕರ'ವಾಗಿಲ್ಲ ಅನುದಾನ

ರಾಜ್ಯದಲ್ಲಿ ಕೋವಿಡ್‌ನ ಭೀಕರ ಹೊಡೆತ ಅನುಭವಿಸಿದ್ದು ಬೆಂಗಳೂರು ನಗರ. ಕೋವಿಡ್ ಎರಡನೇ ಅಲೆ ಹರಡದಂತೆ ಮುಂಜಾಗ್ರತೆ ವಹಿಸಲಾಗುತ್ತದೆ ಎಂದು ಬಜೆಟ್‌ನಲ್ಲಿ ಮುಖ್ಯಮಂತ್ರಿ ಉಲ್ಲೇಖಿಸಿದ್ದಾರೆ. ಆದರೆ, ಇದಕ್ಕೆ ಪೂರಕವಾಗಿ ಅನುದಾನ ಒದಗಿಸುವಲ್ಲಿ ವಿಫಲರಾಗಿದ್ದಾರೆ. ಸಿಲಿಕಾನ್ ಸಿಟಿ ಎಂಬ ಹೆಗ್ಗಳಿಕೆ ಪಡೆದ ನಗರದಲ್ಲೂ ಕೋವಿಡ್ ಹೇಗೆ ಕ್ಷಿಪ್ರವಾಗಿ ವ್ಯಾಪ್ತಿಸಿತು, ಚಿಕಿತ್ಸೆಗೆ ಆಸ್ಪತ್ರೆಗಳಲ್ಲಿ ಹಾಸಿಗೆ ಸಿಗದೆ ಜನ ಹೇಗೆ ಪರದಾಡಿದರು ಎಂಬುದು ತಿಳಿಯದ ವಿಷಯವೇನಲ್ಲ. ಹಾಗಾಗಿ ಇಲ್ಲಿನ ಆರೋಗ್ಯ ಮೂಲಸೌಕರ್ಯ ಅಭಿವೃದ್ಧಿಗೆ ಬಜೆಟ್‌ನಲ್ಲಿ ಸಾಕಷ್ಟು ಅನುದಾನ ಸಿಗಬಹುದು ಎಂದು ನಿರೀಕ್ಷಿಸಲಾಗಿತ್ತು.

ಪಾಲಿಕೆ ವ್ಯಾಪ್ತಿಯಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಲ್ಲದ 57 ವಾರ್ಡ್‌ಗಳಲ್ಲಿ ನವದೆಹಲಿಯ 'ಮೊಹಲ್ಲಾ ಕ್ಲಿನಿಕ್' ಮಾದರಿಯಲ್ಲಿ ಜನಾರೋಗ್ಯ ಕೇಂದ್ರ ಸ್ಥಾಪಿಸಲಾಗುತ್ತದೆ. ಈ ಕೇಂದ್ರಗಳಲ್ಲಿ ಆರೋಗ್ಯ ತಪಾಸಣಾ ಸೌಲಭ್ಯ ಹಾಗೂ ಹೊರರೋಗಿಗಳ ಸೇವೆ ಒದಗಿಸಲಾಗುತ್ತದೆ ಎಂದು ಬಜೆಟ್‌ನಲ್ಲಿ ಹೇಳಲಾಗಿದೆ. ಆದರೆ, ಈ ಯೋಜನೆಗೆ ಕಾಯ್ದಿರಿಸಿದ್ದು ಕೇವಲ ₹ 10 ಕೋಟಿ. ಇದು ರಾವಣನ ಹೊಟ್ಟೆಗೆ ಅರೆಕಾಸಿನ ಮಜ್ಜಿಗೆ ಎಂಬಂತಾಗಿದೆ.

ಬೆಂಗಳೂರು ವೈದ್ಯಕೀಯ ವಿಜ್ಞಾನ ಸಂಸ್ಥೆಯ ಆಸ್ಪತ್ರೆಯಲ್ಲಿ ತುರ್ತು ಚಿಕಿತ್ಸಾ ವಿಭಾಗ ತೆರೆಯಲು ₹ 5 ಕೋಟಿ ಒದಗಿಸಲಾಗಿದೆ. ಜಯದೇವ ಆಸ್ಪತ್ರೆ ಮೇಲಿನ ಒತ್ತಡ ಕಡಿಮೆ ಮಾಡಲು ಕೆ.ಸಿ. ಜನರಲ್ ಆಸ್ಪತ್ರೆಯಲ್ಲಿ 50 ಹಾಸಿಗೆ ಸಾಮರ್ಥ್ಯದ ಉಪಕೇಂದ್ರ ಸ್ಥಾಪನೆಗೆ ಅನುದಾನ ಒದಗಿಸಲಾಗಿದೆ. ನಗರದಲ್ಲಿ ಗಣನೀಯ ಸಂಖ್ಯೆಯಲ್ಲಿರುವ ವಲಸೆ ಕಾರ್ಮಿಕರ ಹಾಗೂ ಬಡಜನರಿಗಾಗಿ ತಜ್ಞ ವೈದ್ಯಕೀಯ ಸೇವೆ ಒದಗಿಸಲು ಉತ್ತರ ಬೆಂಗಳೂರಿನಲ್ಲಿ ಹೊಸ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ಆರಂಭಿಸುವ ಪ್ರಸ್ತಾವ ಬಜೆಟ್‌ನಲ್ಲಿದೆ. ಆದರೆ, ಇದಕ್ಕೆ ಎಷ್ಟು ಅನುದಾನ ನೀಡಲಾಗುತ್ತದೆ ಎಂಬ ವಿವರಗಳಿಲ್ಲ.

ವಿಕ್ಟೋರಿಯಾ ಆಸ್ಪತ್ರೆಯ ಗ್ಯಾಸ್ಟ್ರೊ ಎಂಟ್ರಾಲಜಿ ವಿಜ್ಞಾನ ಹಾಗೂ ಅಂಗಾಂಗ ಕಸಿ ಸಂಸ್ಥೆಯಲ್ಲಿ ಬಡವರಿಗೆ ಕೈಗೆಟಕುವ ದರದಲ್ಲಿ ಅಂಗಾಂಗ ಕಸಿ ಚಿಕಿತ್ಸೆ ಒದಗಿಸಲಾಗುತ್ತದೆ. ಈ ಆಸ್ಪತ್ರೆಯಲ್ಲಿ 120 ಹಾಸಿಗೆಗಳನ್ನು ಒದಗಿಸಿ ಅವಶ್ಯಕ ಉಪಕರಣಗಳನ್ನು ಪೂರೈಸಲು ₹ 28 ಕೋಟಿ ಒದಗಿಸಲಾಗಿದೆ.

ಶಾಲೆಗಳ ಸುಧಾರಣೆ

ಬೆಂಗಳೂರು ನಗರದ ಶಾಲೆಗಳನ್ನು ನವದೆಹಲಿ ಮಾದರಿಯಲ್ಲಿ ಅಭಿವೃದ್ಧಿಪಡಿಸುವ ಬಗ್ಗೆ ಸರ್ಕಾರ ಆಸಕ್ತಿ ತೋರಿದೆ. ಬಡ ಮಕ್ಕಳಿಗೆ ಉತ್ತಮ ಗುಣಮಟ್ಟದ ಶಿಕ್ಷಣ ನೀಡಲು ಬಿಬಿಎಂಪಿ ಶಾಲೆಗಳ ನವೀಕರಣ ಮತ್ತು ಪುನರ್ನಿರ್ಮಾಣಕ್ಕಾಗಿ ₹ 33 ಕೋಟಿ ಅನುದಾನವನ್ನು ಒದಗಿಸಿದೆ. ಬಿಬಿಎಂಪಿ ಅಧೀನದಲ್ಲಿ 150ಕ್ಕೂ ಅಧಿಕ ಶಾಲಾ ಕಾಲೇಜುಗಳಿವೆ. ಮೂಲಸೌಕರ್ಯ ಕೊರತೆಯಿಂದ ಬಳಲುತ್ತಿರುವ ಈ ಶಿಕ್ಷಣ ಸಂಸ್ಥೆಗಳಿಗೆ ಚೈತನ್ಯ ತುಂಬಲು ಇದರಿಂದ ಸ್ವಲ್ಪಮಟ್ಟಿನ ನೆರವು ಸಿಗಲಿದೆ.

ಕೇಂದ್ರ ವಸತಿ ಮತ್ತು ನಗರ ವ್ಯವಹಾರಗಳ ಸಚಿವಾಲಯವು 'ಸುಲಲಿತ ಜೀವನ ನಿರ್ವಹಣೆ ಸೂಚ್ಯಂಕ- 2020' ಪಟ್ಟಿಯಲ್ಲಿ ಬೆಂಗಳೂರಿಗೆ ಅಗ್ರಸ್ಥಾನ ನೀಡಿರುವ ವಿಷಯಕ್ಕೆ ಮುಖ್ಯಮಂತ್ರಿ ಬೆನ್ನುತಟ್ಟಿಕೊಂಡಿದ್ದಾರೆ. ಈ ಮನ್ನಣೆ ಉಳಿಸಿಕೊಳ್ಳುವುದಕ್ಕೆ ಪೂರಕವಾಗಿ ನಗರವನ್ನು ಕಟ್ಟುವುದಕ್ಕೆ ನೆರವಾಗುವ ಯೋಜನೆಗಳ ಕೊರತೆ ಎದ್ದು ಕಾಣಿಸುತ್ತಿದೆ. ಮಲ್ಲತ್ತಹಳ್ಳಿ ಕಲಾಗ್ರಾಮದಲ್ಲಿ ವಾರಾಂತ್ಯದಲ್ಲಿ ಭರಪೂರ ಮನರಂಜನೆ ಸಿಗಲಿದೆ. ಇಲ್ಲಿ ಸಾಹಿತ್ಯ ಮತ್ತು ಸಾಂಸ್ಕೃತಿಕ ಕಾರ್ಯಕ್ರಮ, ಚಿತ್ರಸಂತೆ, ಶಿಲ್ಪ ಕಲಾಕೃತಿ ಪ್ರದರ್ಶನ ಹಾಗೂ ಜಾನಪದ ಕಾರ್ಯಕ್ರಮ ಹಮ್ಮಿಕೊಳ್ಳಲು ಸರ್ಕಾರ ₹ 2 ಕೋಟಿ ಮೀಸಲಿಟ್ಟಿದೆ.

ವಿಶೇಷ ಮೂಲಸೌಕರ್ಯ ಅಭಿವೃದ್ಧಿಗೆ ಸರ್ಕಾರ 2020–21ರಲ್ಲಿ ₹ 3 ಸಾವಿರ ಕೋಟಿ ಮಂಜೂರು ಮಾಡಿತ್ತು. ರಾಜ್ಯದ ಬೊಕ್ಕಸಕ್ಕೆ ಅತಿಹೆಚ್ಚು ವರಮಾನ ತರುವ ಬೆಂಗಳೂರಿಗೆ ಇಷ್ಟು ಕಡಿಮೆ ಮೊತ್ತ ಸಾಲದು ಎಂಬ ಟೀಕೆ ವ್ಯಕ್ತವಾಗಿತ್ತು. ಈ ನಡುವೆ, ಕೋವಿಡ್ ಬಿಕ್ಕಟ್ಟಿನ ಕಾರಣ ನೀಡಿ ₹ 1 ಸಾವಿರ ಕೋಟಿಗಳಷ್ಟು ಮೊತ್ತದ ಕಾಮಗಾರಿಗಳಿಗೆ ಕತ್ತರಿ ಹಾಕಿತ್ತು. ಈ ಬಾರಿ ವಿಶೇಷ ಮೂಲ ಸೌಕರ್ಯ ಯೋಜನೆ ಅಡಿ ನಗರಕ್ಕೆ ಹೆಚ್ಚು ಅನುದಾನ ಒದಗಿಸಬಹುದು ಎಂದು ನಿರೀಕ್ಷಿಸಲಾಗಿತ್ತು. ಆದರೆ, ಈ ಬಾರಿ ಕೇವಲ ₹ 3 ಸಾವಿರ ಕೋಟಿ ಮೀಸಲಿಡಲಾಗಿದೆ.

ಟಿಡಿಆರ್ ನೀಡುವ ಪ್ರಕ್ರಿಯೆಯನ್ನು ಸರಳೀಕರಿಸುವ ಪ್ರಸ್ತಾಪ ಬಜೆಟ್‌ನಲ್ಲಿದೆ. ಇದರಿಂದ ನಗರದಲ್ಲಿ ಮೂಲಸೌಕರ್ಯ ಯೋಜನೆಗಳಿಗೆ ವೇಗವೇನೋ ಸಿಗಲಿದೆ. ಇದು ನಗರದಲ್ಲಿ ಬಹುಮಹಡಿ ಕಾಂಕ್ರೀಟ್ ಕಟ್ಟಡಗಳ ಹೆಚ್ಚಳಕ್ಕೂ ಕಾರಣವಾಗಲಿದೆ ಎಂಬ ಆತಂಕವಿದೆ.

ನಗರದ ಅಭಿವೃದ್ಧಿಗೆ ಒಟ್ಟು ₹ 7,795 ಕೋಟಿ ಅನುದಾನ ಒದಗಿಸಲಾಗುತ್ತದೆ ಎಂದು ಮುಖ್ಯಮಂತ್ರಿಯವರು ಬಜೆಟ್ ಭಾಷಣದಲ್ಲಿ ಹೇಳಿದ್ದಾರೆ. ರಾಜ್ಯದ ಒಟ್ಟು ಜನಸಂಖ್ಯೆಯ ಐದನೇ ಒಂದರಷ್ಟು ಪಾಲನ್ನು ಹೊಂದಿರುವ ಬೆಂಗಳೂರಿನ ಅಭಿವೃದ್ಧಿಗೆ ಈ ಅನುದಾನ ತೀರ ಕಡಿಮೆ ಎಂಬ ಟೀಕೆ ವ್ಯಕ್ತವಾಗಿದೆ.

ರೈಲು ಹಳಿ ದ್ವಿಪಥಕ್ಕೆ ₹ 407 ಕೋಟಿ

ಯಶವಂತಪುರ– ಚನ್ನಸಂದ್ರ ಮತ್ತು ಬೈಯಪ್ಪನಹಳ್ಳಿ– ಹೊಸೂರು ರೈಲು ಮಾರ್ಗಗಳನ್ನು ದ್ವಿಪಥಗೊಳಿಸುವ ಕಾಮಗಾರಿಯನ್ನು ಕರ್ನಾಟಕ ರೈಲು ಮೂಲಸೌಕರ್ಯ ಅಭಿವೃದ್ಧಿ ಕಂಪನಿ (ಕೆ–ರೈಡ್) ಜಾರಿಗೊಳಿಸುತ್ತಿದೆ. ₹ 813 ಕೋಟಿ ವೆಚ್ಚದ ಈ ಯೋಜನೆಯ ಶೇ 50ರಷ್ಟು ಪಾಲನ್ನು ರಾಜ್ಯ ಸರ್ಕಾರ ಭರಿಸಬೇಕಿದೆ. ಇದಕ್ಕೆ ಬಜೆಟ್‌ನಲ್ಲಿ ಅನುದಾನ ಕಾಯ್ದಿರಿಸಲಾಗಿದೆ. ಈ ಕಾಮಗಾರಿಯನ್ನು 2023ರ ಅಂತ್ಯದೊಳಗೆ ಪೂರ್ಣಗೊಳಿಸುವ ಉದ್ದೇಶವನ್ನು ರೈಲ್ವೆ ಇಲಾಖೆ ಹೊಂದಿದೆ.

12 ಕಡೆ ಪಾದಚಾರಿ ಮೇಲ್ಸೇತುವೆ

ಯಶವಂತಪುರ, ಕೆಆರ್.ಪುರ, ಜ್ಞಾನಭಾರತಿಯಲ್ಲಿ ಮೆಟ್ರೊ ನಿಲ್ದಾಣಗಳ ಬಳಿ, ದಾಸರಹಳ್ಳಿ, ಚಿಕ್ಕಬಿದರಕಲ್ಲುಗಳಲ್ಲಿ ಪಾದಚಾರಿ ಮೇಲ್ಸೇತುವೆ ನಿರ್ಮಿಸಬೇಕೆಂಬ ಕೂಗಿಗೆ ಕೊನೆಗೂ ಮುಕ್ತಿ ಸಿಕ್ಕಿದೆ. ಈ ಮೂರು ಪಾದಚಾರಿ ಮೇಲ್ಸೇತುವೆಗಳಿಗೆ ಅನುದಾನ ಒದಗಿಸುವ ಭರವಸೆಯನ್ನು ಮುಖ್ಯಮಂತ್ರಿ ನೀಡಿದ್ದಾರೆ.

ಹೊಸೂರು ರಸ್ತೆಗೆ ಅಡ್ಡಲಾಗಿ ಏಳು ಕಡೆ ಪಾದಚಾರಿ ಮೇಲ್ಸೇತುವೆ ನಿರ್ಮಿಸುವ ಪ್ರಸ್ತಾಪವೂ ಬಜೆಟ್‌ನಲ್ಲಿದೆ. ಈ ಮೇಲ್ಸೇತುವೆಗಳು ಇಲ್ಲಿ ನಿರ್ಮಾಣವಾಗಲಿರುವ ಮೆಟ್ರೊ ನಿಲ್ದಾಣಗಳಿಗೆ ಉತ್ತಮ ಸಂಪರ್ಕ ಕಲ್ಪಿಸಲಿವೆ.

ಮಾಜಿ ಮೇಯರ್‌ಗಳು ಏನನ್ನುತ್ತಾರೆ?

'ಮಹಿಳೆಯರ ಅಭಿವೃದ್ಧಿಗೆ ಬಜೆಟ್‌ನಲ್ಲಿ ವಿಶೇಷ ಯೋಜನೆಗಳಿಲ್ಲ'

ಅಂತರರಾಷ್ಟ್ರೀಯ ಮಹಿಳಾ ದಿನದಂದೇ ಬಜೆಟ್ ಮಂಡಿಸಿದರೂ ಮಹಿಳೆಯ ಅಭಿವೃದ್ಧಿಗೆ ವಿಶೇಷ ಯೋಜನೆಗಳನ್ನು ಪ್ರಕಟಿಸಿಲ್ಲ. ಕೋವಿಡ್ ಕಾಲದಲ್ಲಿ ಕೆಲಸ ಕಳೆದುಕೊಂಡು ನೆಯಲ್ಲಿರುವ ಮಹಿಳೆಯರಿಗೆ ನೆರವಾಗುವ ಕಾರ್ಯಕ್ರಮದ ಅಗತ್ಯವಿತ್ತು. ಬೆಂಗಳೂರು ಅಭಿವೃದ್ಧಿಯ ವಿಚಾರದಲ್ಲೂ ಇದು ನಿರಾಶಾದಾಯಕ ಬಜೆಟ್. ಈಗಾಗಲೇ ಕೈಗೆತ್ತಿಕೊಂಡಿರುವ ಯೋಜನೆಗಳನ್ನು ಬಜೆಟ್‌ನಲ್ಲಿ ಮತ್ತೆ ಪ್ರಸ್ತಾಪಿಸಲಾಗಿದೆ. ಮಹಿಳಾ ಕಾರ್ಮಿಕರಿಗೆ ಬಸ್ ಪ್ರಯಾಣದಲ್ಲಿ ರಿಯಾಯಿತಿ ನೀಡುವ 'ವನಿತಾ ಸಂಗಾತಿ' ಯೋಜನೆಗೆ ಈ ಬಾರಿ ಅನುದಾನ ನೀಡಿದ್ದು ಸ್ವಾಗಹಾರ್ತ. ನಗರದ ಗಾರ್ಮೆಂಟ್ಸ್‌ಗಳಲ್ಲಿ ಕೆಲಸ ಮಾಡುವ ಬಡ ಮಹಿಳೆಯರಿಗೆ ಇದರಿಂದ ಅನುಕೂಲವಾಗಲಿದೆ

ಜಿ.ಪದ್ಮಾವತಿ

'ತೆರಿಗೆ ಹೊರೆ ಇರದ ಮಹಿಳಾ ಪರ ಬಜೆಟ್'

ಮಹಿಳಾ ದಿನದಂದು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಮಹಿಳಾ ಪರ ಬಜೆಟ್ ಮಂಡಿಸಿದ್ದಾರೆ. ಮಹಿಳೆಯರಿಗಾಗಿ ಅನೇಕ ಕಾರ್ಯಕ್ರಮಗಳನ್ನು ಪ್ರಕಟಿಸಿದ್ದಾರೆ. ಕೋವಿಡ್‌ನಿಂದ ಜನ ತತ್ತರಿಸಿದ್ದರು. ತೆರಿಗೆ ಹೆಚ್ಚಿಸದೆಯೇ ಉತ್ತಮ ಯೋಜನೆಗಳನ್ನು ನೀಡಿದ್ದಾರೆ. ಮುಂದಾಲೋಚನೆಯಿಂದ ಕೂಡಿದ ಬಜೆಟ್ ನೀಡಿದ್ದಾರೆ. ಬಿಬಿಎಂಪಿಗೂ ಸಾಕಷ್ಟು ಅನುದಾನ ನೀಡುವ ಮೂಲಕ ನಗರದ ಅಭಿವೃದ್ಧಿಗೂ ಒತ್ತು ನೀಡಿದ್ದಾರೆ.

ಶಾಂತಕುಮಾರಿ

'ಬಜೆಟ್: ಹಳೆಯೋಜನೆ ಪೂರ್ಣಗೊಳಿಸಲು ಸೀಮಿತ'

ರಾಜ್ಯದ ಬೊಕ್ಕಸಕ್ಕೆ ಅತಿಹೆಚ್ಚು ವರಮಾನ ತರುವ ಬೆಂಗಳೂರಿನ ಅಭಿವೃದ್ಧಿಯನ್ನು ಕಡೆಗಣಿಸಲಾಗಿದೆ. ಇಲ್ಲಿನ ಮೂಲಸೌಕರ್ಯ ಅಭಿವೃದ್ಧಿಗೆ ಇನ್ನೂ ಹೆಚ್ಚಿನ ಅನುದಾನದ ಅಗತ್ಯವಿತ್ತು. ನಗರಕ್ಕೆ ಹೊಸದಾಗಿ ಸೇರಿಸಲಿರುವ ಗ್ರಾಮಗಳ ಅಭಿವೃದ್ಧಿಗೆ ಅನುದಾನ ಮೀಸಲಿಟ್ಟಿಲ್ಲ. ಹಳೆಯ ಯೋಜನೆಗಳನ್ನು ಪೂರ್ಣಗೊಳಿಸಲು ಮಂಡಿಸಿರುವ ಬಜೆಟ್ ಇದು. ನಗರದ ಅಭಿವೃದ್ಧಿಗೆ ಹೊಸ ಯೋಜನೆಗಳು ಯಾವುದೂ ಇಲ್ಲ. ಈ ಹಿಂದೆ ಬಿಜೆಪಿ ಸರ್ಕಾರ ಪಾಲಿಕೆಗೆ 110 ಹಳ್ಳಿ ಸೇರಿಸಿತ್ತು. ಆದರೆ, ಮೂಲಸೌಕರ್ಯ ನೀಡಿರಲಿಲ್ಲ. ಈ ಬಾರಿ ಅದು ಪುರಾವರ್ತನೆ ಆಗಲಿದೆ. ಆರೋಗ್ಯ ಮೂಲಸೌಕರ್ಯ ಅಭಿವೃದ್ಧಿಯನ್ನೂ ಕಡೆಗಣಿಸಲಾಗಿದೆ. ಸಂಚಾರ ದಟ್ಟಣೆ ಕಡಿಮೆ ಮಾಡುವ ಯಾವುದೇ ಯೋಜನೆಗಳಿಲ್ಲ

ಗಂಗಾಂಬಿಕೆ

ಕಾವೇರಿಯಿಂದ ನೀರು ತರಲು ಮತ್ತೊಂದು ಯೋಜನೆ

ಅರ್ಕಾವತಿ ಮತ್ತು ಕಾವೇರಿ ನದಿಯ ಸಂಗಮದ ಸಮೀಪ ಕಾವೇರಿ ನದಿಗೆ ಅಡ್ಡಲಾಗಿ ಮೇಕೆದಾಟು ಸಮತೋಲನ ಜಲಾಶಯ ನಿರ್ಮಿಸುವ ₹ 9ಸಾವಿರ ಕೋಟಿ ವೆಚ್ಚದ ಯೋಜನೆಯನ್ನು ಪ್ರಸ್ತಾಪಿಸಲಾಗಿದೆ. ಬೆಂಗಳೂರು ನಗರಕ್ಕೆ ನೀರು ಪೂರೈಕೆಗೂ ಈ ಸಮತೋಲನ ಜಲಾಶಯವನ್ನು ಬಳಸಿಕೊಳ್ಳಲಾಗುತ್ತದೆ. ಕೇಂದ್ರ ಜಲ ಆಯೋಗದ ಅನುಮೋದನೆ ಸಿಕ್ಕ ತಕ್ಷಣವೇ ಯೋಜನೆಯನ್ನು ಆರಂಭಿಸಲಾಗುತ್ತದೆ ಎಂದು ಮುಖ್ಯಮಂತ್ರಿ ಹೇಳಿದ್ದಾರೆ.

234 ಕೆರೆಗಳಿಗೆ ಶುದ್ಧೀಕರಿಸಿದ ತ್ಯಾಜ್ಯನೀರು

ಕೆ.ಸಿ.ಕಣಿವೆ ಆವರಣದಲ್ಲಿರುವ, ನಿತ್ಯ 24.80 ಕೋಟಿ ಲೀಟರ್ ಸಾಮರ್ಥ್ಯದ ತ್ಯಾಜ್ಯನೀರು ಸಂಸ್ಕರಣಾ ಘಟಕದ (ಎಸ್‌ಟಿಪಿ) ಪುನರುಜ್ಜೀವನ ಮತ್ತು ಉನ್ನತೀಕರಣಕ್ಕೆ ₹ 450 ಕೋಟಿ ಅನುದಾನ ನೀಡಲಾಗಿದೆ. ಜಲಮಂಡಳಿಯು ಬಿಬಿಎಂಪಿ ಸಹಯೋಗದಲ್ಲಿ ಅಭಿವೃದ್ಧಿಪಡಿಸಲಿದೆ. ಕೊಳಚೆ ನೀರನ್ನು ಶುದ್ಧೀಕರಿಸಿ ಮರುಬಳಕೆ ಮಾಡುವ ನಿಟ್ಟಿನಲ್ಲಿ ಇದು ಉತ್ತಮ ಹೆಜ್ಜೆ.

ವೃಷಭಾವತಿ ಕಣಿವೆಯಲ್ಲಿ ನಿತ್ಯ 30.80 ಕೋಟಿ ಲೀಟರ್ ನೀರು ಸಂಸ್ಕರಿಸಿ ಬೆಂಗಳೂರು ನಗರ, ಗ್ರಾಮಾಂತರ, ತುಮಕೂರು, ಚಿಕ್ಕಬಳ್ಳಾಪುರ ಜಿಲ್ಲೆಗಳ 234 ಕೆರೆಗಳನ್ನು ತುಂಬಿಸುವ ಪ್ರಸ್ತಾಪ ಬಜೆಟ್‌ನಲ್ಲಿದೆ.

'ಮೈಸೂರ್ ಲ್ಯಾಂಪ್ಸ್' ಜಾಗದಲ್ಲಿ 'ಬೆಂಗಳೂರಿನ ಅನುಭವ'

ಮಲ್ಲೇಶ್ವರದಲ್ಲಿ ಮೈಸೂರು ಲ್ಯಾಂಪ್ಸ್ ವರ್ಕ್ಸ್ ನಿಯಮಿತ ಸಂಸ್ಥೆಯ ಪ್ರದೇಶವನ್ನು ಕರ್ನಾಟಕ ಸಂಸ್ಕೃತಿ ಪ್ರತಿಬಿಂಬಿಸುವ ಹಾಗೂ 'ಬೆಂಗಳೂರಿನ ಅನುಭವ' ಕಟ್ಟಿಕೊಡುವ ಕೇಂದ್ರವನ್ನಾಗಿ ಪರಿವರ್ತಿಸಲು ಸರ್ಕಾರ ಮುಂದಾಗಿದೆ. ಇದರಿಂದ ಬೆಂಗಳೂರಿನ ಉಸಿರುಗಟ್ಟಿಸುವ ವಾತಾವರಣದಿಂದ ಮುಕ್ತಿ ನೀಡುವಂತಹ ಪ್ರದೇಶವೊಂದು ಹೃದಯ ಭಾಗದಲ್ಲಿ ನಿರ್ಮಾಣವಾದಂತೆ ಆಗಲಿದೆ.

ಬೈಯಪ್ಪನಹಳ್ಳಿಯಲ್ಲಿ ಎನ್‌ಜಿಇಎಫ್ ಕಾರ್ಖಾನೆ ಕಟ್ಟಡಗಳನ್ನು ನಗರದ ಶ್ರೀಮಂತ ಪರಂಪರೆ ಸಂಸ್ಕೃತಿ ಹಾಗೂ ಕೈಗಾರಿಕಾ ವೈಭದ ಸಾರುವ ಉದ್ದೇಶಕ್ಕೆ ಬಳಸಲು ಸರ್ಕಾರ ಮುಂದಾಗಿದೆ.

ಒಂದು ರಾಷ್ಟ್ರ ಒಂದು ಕಾರ್ಡ್ ಆಗಸ್ಟ್‌ಗೆ ಸಿದ್ಧ

'ನಮ್ಮ ಮೆಟ್ರೊ' ಹಾಗೂ ಬಿಎಂಟಿಸಿಗಳೆರಡರಲ್ಲೂ ಬಳಸಬಹುದಾದ ಕಾರ್ಡ್ 2021ರ ಆಗಸ್ಟ್‌ನೊಳಗೆ ಲಭ್ಯವಾಗಲಿದೆ ಎಂದು ಮುಖ್ಯಮಂತ್ರಿ ಭರವಸೆ ನೀಡಿದ್ದಾರೆ. 'ಒಂದು ರಾಷ್ಟ್ರ ಒಂದು ಕಾರ್ಡ್' ಪರಿಕಲ್ಪನೆಯಲ್ಲಿ ಈ ಕಾರ್ಡ್ ರೂಪಿಸಲಾಗುತ್ತದೆ.

ಗಾರ್ಮೆಂಟ್ಸ್‌ಗಳಲ್ಲಿ ದುಡಿಯುವ ಮಹಿಳಾ ಕಾರ್ಮಿಕರಿಗೆ ರಿಯಾಯಿತಿ ದರದಲ್ಲಿ ಪ್ರಯಾಣಕ್ಕೆ ಅನುಕೂಲ ಕಲ್ಪಿಸುವ ವನಿತಾ ಸಂಗಾತಿ ಯೋಜನೆಯನ್ನು ಕಳೆದ ಬಜೆಟ್‌ನಲ್ಲಿ ಪ್ರಸ್ತಾಪಿಸಲಾಗಿತ್ತು. ಆದರೆ, ಅದು ಜಾರಿಯಾಗಿರಲಿಲ್ಲ. ಈ ಬಾರಿ ಈ ಕಾರ್ಯಕ್ರಮದ ಅನುಷ್ಠಾನಕ್ಕೆ ಮತ್ತೆ ₹ 30 ಕೋಟಿ ಕಾಯ್ದಿರಿಸಲಾಗಿದೆ. ಕಾರ್ಮಿಕ ಇಲಾಖೆ ನೆರವಿನಿಂದ ಬಿಎಂಟಿಸಿ ಈ ಕಾರ್ಯಕ್ರಮ ಅನುಷ್ಠಾನಗೊಳಿಸಲಿದೆ.

ಸ್ವಯಂಚಾಲಿತ ದರ ಸಂಗ್ರಹ ವ್ಯವಸ್ಥೆ (ಎಎಫ್‌ಸಿಎಸ್) ಜಾರಿಗೊಳಿಸುವ ಬಗ್ಗೆ ಬಜೆಟ್‌ನಲ್ಲಿ ಮತ್ತೆ ಪ್ರಸ್ತಾಪಿಸಿದ್ದಾರೆ.

ಹಳೆ ಕಾರ್ಯಕ್ರಮಗಳ ಮರುಪ್ರಸ್ತಾಪ

ಬೆಂಗಳೂರು ಮಿಷನ್- 2022 ಯೋಜನೆಯನ್ನು ಮೂರು ತಿಂಗಳ ಹಿಂದೆ ಮುಖ್ಯಮಂತ್ರಿ ಪ್ರಕಟಿಸಿದ್ದರು. ಈ ಯೋಜನೆಯ ಅಂಶಗಳನ್ನು ಬಜೆಟ್‌ನಲ್ಲಿ ಪುನರುಚ್ಚರಿಸಲಾಗಿದೆ. ಜನ ಕುಟುಂಬ ಸಮೇತರಾಗಿ ವಿರಾಮ ಸಮಯವನ್ನು ಹಸಿರು ಪರಿಸರದ ಮಧ್ಯೆ ಕಳೆಯಲು ಅನುಕೂಲವಾಗುವಂತೆ ನೈಸರ್ಗಿಕ ಪಥಗಳು, ಮಕ್ಕಳ ಆಟದ ಅಂಗಳ, ಕುಡಿಯುವ ನೀರಿನ ಸೌಲಭ್ಯಗಳಿರುವ ವೃಕ್ಷೋದ್ಯಾನ ಅಭಿವೃದ್ಧಿಪಡಿಸಲಾಗುತ್ತದೆ. ಬೈಯಪ್ಪನಹಳ್ಳಿಯಲ್ಲಿ ಎನ್‌ಜಿಇಎಫ್‌ಗೆ ಸೇರಿದ 105 ಎಕರೆ ಜಮೀನಿನಲ್ಲೂ ವೃಕ್ಷೋದ್ಯಾನ ನಿರ್ಮಿಸುವ ಪ್ರಸ್ತಾಪ ಬಜೆಟ್‌ನಲ್ಲಿದೆ.

'ಮಿಷನ್ ಬೆಂಗಳೂರು–2022' ಯೋಜನೆಯಲ್ಲಿ ಪ್ರಸ್ತಾಪಿಸಿರುವಂತೆ ಕೋರಮಂಗಲ ಕಣಿವೆಯ ರಾಜಕಾಲುವೆ ಅಭಿವೃದ್ಧಿ ಮತ್ತು ನಿರ್ವಹಣೆ (ಕೆ–100) ಯೋಜನೆಗೆ ₹ 169 ಕೋಟಿ ಒದಗಿಸಲಾಗಿದೆ. ರಾಜಕಾಲುವೆಯಲ್ಲಿ ಶುದ್ಧ ನೀರು ಮಾತ್ರ ಹರಿಯುವಂತೆ ಮಾಡಿ, ಅದನ್ನು ಪ್ರವಾಸಿ ತಾಣವನ್ನಾಗಿ ರೂಪಿಸುವ ಈ ಕಾರ್ಯಕ್ರಮವನ್ನು ಸರ್ಕಾರ ಕಳೆದ ಸಾಲಿನ ಬಜೆಟ್‌ನಲ್ಲೇ ಪ್ರಕಟಿಸಿತ್ತು.

ಬೆಂಗಳೂರು ನಗರದಲ್ಲಿ ಕಸ ಸಂಗ್ರಹಣೆ, ಸಾಗಣೆ ಮತ್ತು ಸಂಸ್ಕರಣೆಯ ಹೊಣೆ ನಿಭಾಯಿಸಲು ಪ್ರತ್ಯೇಕ ಕಂಪನಿ ಸ್ಥಾಪಿಸುವ ಪ್ರಸ್ತಾಪವನ್ನು ಬಜೆಟ್‌ನಲ್ಲಿ ಮಾಡಲಾಗಿದೆ. ಆದರೆ, ಇದಕ್ಕೆ ಸರ್ಕಾರದಿಂದ ಅನುದಾನ ನೀಡುವ ಉಲ್ಲೇಖವಿಲ್ಲ.

ಕೆಐಎಎಲ್ ಪಕ್ಕ ಸಿಗ್ನೇಚರ್ ಬ್ಯುಸಿನೆಸ್ ಪಾರ್ಕ್

ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಪಕ್ಕದಲ್ಲಿ ಜಾಗತಿಕ ಮಟ್ಟದ ಬೆಂಗಳೂರು ಸಿಗ್ನೇಚರ್ ಬ್ಯುಸಿನೆಸ್ ಪಾರ್ಕ್ ಅನ್ನು ನಿರ್ಮಿಸುವ ಯೋಜನೆಯನ್ನು ಪ್ರಸ್ತಾಪಿಸಲಾಗಿದೆ. ಕರ್ನಾಟಕ ರಾಜ್ಯ ಕೈಗಾರಿಕಾ ಮತ್ತು ಮೂಲಸೌಕರ್ಯ ಅಭಿವೃದ್ಧಿ ನಿಗಮ (ಕೆಎಸ್‌ಐಐಡಿಸಿ) ಇದನ್ನು ಅನುಷ್ಠಾನಗೊಳಿಸಲಿದೆ. ಈ ಯೋಜನೆಯ ಮೂಲಸೌಕರ್ಯಗಳನ್ನು ₹ 168 ಕೋಟಿ ವೆಚ್ಚದಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ.

ಶ್ರಮಿಕ ವರ್ಗ ಮರೆತ ಬಿಎಸ್‌ವೈ

ವಿಶ್ಲೇಷಣೆ
ವಿನಯ್ ಶ್ರೀನಿವಾಸ್

ಸಾರ್ವಜನಿಕ ಆರೋಗ್ಯಕ್ಕೆ ಮುಂಚೆಗಿಂತ ಸ್ವಲ್ಪ ಹೆಚ್ಚು ಒತ್ತು ಕೊಟ್ಟಿರುವುದು ಬಜೆಟ್‌ನ ಸ್ವಾಗತಾರ್ಹ ಅಂಶ. ಇದು ಬಿಟ್ಟರೆ ಶ್ರಮಿಕ ಸಮುದಾಯಕ್ಕೆ ಕೇವಲ ನಿರಾಶೆ ತರುವ ಬಜೆಟ್.

ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದ ಇತ್ತೀಚಿನ ಸಂಶೋಧನಾ ವರದಿಯ ಪ್ರಕಾರ, ನಗರದ ಅಸಂಘಟಿತ ಕ್ಷೇತ್ರದ ಕಾರ್ಮಿಕರಲ್ಲಿ ಶೇ 46ರಷ್ಟು ಮಂದಿಯ ಆದಾಯ ಕಡಿಮೆಯಾಗಿದೆ. ಈಗಲೂ ಶೇ 15ರಷ್ಟು ಕಾರ್ಮಿಕರು ಕೆಲಸವಿಲ್ಲದೆ ಇದ್ದಾರೆ. ಇದು ಇಡೀ ರಾಜ್ಯದ ಪರಿಸ್ಥಿತಿಯೂ ಹೌದು. ಈ ಸಮಸ್ಯೆ ಪರಿಹರಿಸುವ ಗೋಜಿಗೆ ಮುಖ್ಯಮಂತ್ರಿ ಹೋದಂತಿಲ್ಲ.

ನಗರದಲ್ಲಿ ಸಾವಿರಾರು ಮಕ್ಕಳು ಶಾಲೆ ಬಿಟ್ಟಿದ್ದಾರೆ - ಅವರನ್ನು ಮತ್ತೆ ಶಾಲೆಗೇ ಕರೆ ತರುವುದು ಹೇಗೆ ಎನ್ನುವುದರ ಬಗ್ಗೆ ಒಂದು ಪದವಿಲ್ಲ. ಒಂದು ವರ್ಷ ಕಲಿಕೆ ಕಳೆದುಕೊಂಡ ಮಕ್ಕಳ ಬಗ್ಗೆ ಸರ್ಕಾರಕ್ಕೆ ಯಾವುದೇ ಕಾಳಜಿಯಿಲ್ಲ. ಲಾಕ್‌ಡೌನ್ ಸಮಯದಲ್ಲಿ ಊರಿಗೆ ನಡೆದುಕೊಂಡೇ ಹೋಗುತ್ತಾ ಮೃತಪಟ್ಟ ಗಂಗಮ್ಮ ಅವರನ್ನು, ಲಕ್ಷಾಂತರ ವಲಸೆ ಕಾರ್ಮಿಕರನ್ನು ಸರ್ಕಾರ ಮರೆತಿದೆ. ಅವರಿಗೆ ಉತ್ತರ ಬೆಂಗಳೂರಿನಲ್ಲಿ ಒಂದು ಆಸ್ಪತ್ರೆಯನ್ನಷ್ಟೇ ಘೋಷಿಸಿದೆ. ಆದರೆ, ಅದಕ್ಕೆ ಎಷ್ಟು ಹಣ ಹಂಚಿಕೆ ಮಾಡಲಾಗಿದೆ ಎಂಬ ವಿವರವಿಲ್ಲ. ನೋಂದಾಯಿಸಿದ ಕಟ್ಟಡ ಕಾರ್ಮಿಕರಿಗೆ ಕೆಲವು ಸಣ್ಣ ಪುಟ್ಟ ಯೋಜನೆಗಳಿವೆ. ಲಕ್ಷಾಂತರ ಕಾರ್ಮಿಕರು ಮಂಡಳಿಯಲ್ಲಿ ನೋಂದಣಿ ಆಗಿಲ್ಲ. ಅವರ ಬಗ್ಗೆ ಚಕಾರ ಎತ್ತಿಲ್ಲ.

ಇಡೀ ಬಜೆಟ್‌ನಲ್ಲಿ ಶ್ರೀಮಂತರಿಗೆ ನೆರವಿನ ಘೋಷಣೆಗಳಿವೆ. ಬಡವರಿಗೆ ಚಿಕ್ಕಾಸಷ್ಟೇ ನೀಡಲಾಗಿದೆ. ಹೊರವರ್ತುಲ ರಸ್ತೆಯ ಮೆಟ್ರೊಗೆ ₹1600 ಕೋಟಿ ಬಿಡುಗಡೆ ಮಾಡಿದ ಸರ್ಕಾರ, ಬಿಎಂಟಿಸಿ ಬಸ್‌ಗಳ ಸಂಖ್ಯೆ ಹೆಚ್ಚಿಸಲು ಅಥವಾ ದರ ಕಡಿಮೆ ಮಾಡಲು ಆರ್ಥಿಕ ಸಹಾಯ ನೀಡಿಲ್ಲ. ಕಳೆದ ವರ್ಷಗಳಂತೆ ಗಾರ್ಮೆಂಟ್ಸ್ ಕಾರ್ಮಿಕರಿಗೆ ಕಡಿಮೆ ದರದ ಬಸ್ ಪಾಸ್ ಬಗ್ಗೆ ಘೋಷಣೆ ಇದೆ. ಈ ಹಣ ರಾಜ್ಯ ಸರ್ಕಾರದಲ್ಲ -ಅಸಂಘಟಿತ ಕಾರ್ಮಿಕರ ಕಲ್ಯಾಣ ನಿಗಮದ್ದು- ಅಂದರೆ ಕಾರ್ಮಿಕರದ್ದು!

ನವೋದ್ಯಮಗಳು, ಬೆಂಗಳೂರಿನ ವಿಮಾನ ನಿಲ್ದಾಣದ ಬಗ್ಗೆ ಮಾತನಾಡುವ ಬಜೆಟ್ - ಆಶಾ ಕಾರ್ಯಕರ್ತೆಯರು, ಅಂಗನವಾಡಿ ಕಾರ್ಮಿಕರು, ಪೌರಕಾರ್ಮಿಕರು, ಗೃಹ ಕಾರ್ಮಿಕರು, ಬೀದಿ ಬದಿ ವ್ಯಾಪಾರಿಗಳ ಕುರಿತು ಮೌನವಾಗಿದೆ. ಕೋವಿಡ್ ಸೋಂಕು ಹಾಗೂ ಲಾಕ್‌ಡೌನ್‌ನಿಂದ ನಗರದ ಬಡವರು ಇನ್ನೂ ನರಳುತ್ತಿದ್ದಾರೆ. ಅವರ ಬಗ್ಗೆ ಬಜೆಟ್‌ನಲ್ಲಿ ಗಮನವನ್ನೇ ನೀಡಿಲ್ಲ.

ಬೀದಿಬದಿ ವ್ಯಾಪಾರಿಗಳ ಸಂಘಟನೆ ಸದಸ್ಯ

ಬಿಬಿಎಂಪಿಗೆ ಕೊಡುಗೆ: ಸುಸ್ಥಿರ ಮಾದರಿ ಅಲ್ಲ



ವಿಶ್ಲೇಷಣೆ
ಶ್ರೀನಿವಾಸ ಅಲವಿಲ್ಲಿ

ಸಾರ್ವಜನಿಕ ಸಾರಿಗೆಯನ್ನು ಬಲಪಡಿಸಲು ತೋರಿದ ಬದ್ಧತೆಯೇ ಈ ಬಜೆಟ್‌ನ ಅತ್ಯಂತ ಪ್ರಮುಖ ಅಂಶ ಎಂಬುದು ನನ್ನ ಅನಿಸಿಕೆ; ಉಪನಗರ ರೈಲು ಯೋಜನೆಗೆ ಗಣನೀಯ ಮೊತ್ತವನ್ನು ನಿಗದಿ ಮಾಡಲಾಗಿದ್ದು, ಯೋಜನೆಯು ಕೊನೆಗೂ ಹಳಿಗೆ ಬರುವ ಲಕ್ಷಣ ಕಾಣಿಸುತ್ತಿದೆ. ಯಶವಂತಪುರ–ಚನ್ನಸಂದ್ರ ಮತ್ತು ಬೈಯ್ಯಪ್ಪನಹಳ್ಳಿ–ಹೊಸೂರು ರೈಲು ಮಾರ್ಗದ ದ್ವಿಪಥ ಕಾಮಗಾರಿಗೂ ಹಣ ನೀಡಿ ಅದನ್ನು 2023ರೊಳಗೆ ಪೂರ್ಣಗೊಳಿಸಲು ಮುಂದಾಗಿರುವುದು ಸಂತಸದ ವಿಚಾರ. ಲಕ್ಷಾಂತರ ನೌಕರರು ಸಾರ್ವಜನಿಕ ಸಾರಿಗೆಯ ಕೊರತೆಯಿಂದಾಗಿ ನಿತ್ಯದ ಪ್ರಯಾಣಕ್ಕೆ ಸ್ವಂತ ವಾಹನಗಳನ್ನೇ ಬಳಸುತ್ತಿದ್ದಾರೆ. ಹಾಗಾಗಿ, ಉಪನಗರ ರೈಲು ಜಾಲವು ಬೆಂಗಳೂರಿನ ಮಟ್ಟಿಗೆ ಬಹುದೊಡ್ಡ ಕೊಡುಗೆ ಆಗಲಿದೆ. ಹೊಸ ಮೇಲ್ಸೇತುವೆ ಅಥವಾ ಎತ್ತರಿಸಿದ ಮಾರ್ಗದ ಯೋಜನೆಯನ್ನು ಘೋಷಿಸದೇ ಇರುವ ಮೂಲಕ ಸರ್ಕಾರವು ಸಂದೇಶವೊಂದನ್ನು ರವಾನಿಸಿದಂತೆ ಕಾಣಿಸುತ್ತಿದೆ. ಇದೇ ನೀತಿಗೆ ಅಂಟಿಕೊಂಡರೆ ಮುಂದಿನ ಕೆಲವು ವರ್ಷಗಳಲ್ಲಿ ನಗರದ ವಾಹನ ದಟ್ಟಣೆ ಇಳಿಕೆಯಾಗಿ ವಾಯು ಗುಣಮಟ್ಟ ಉತ್ತಮಗೊಳ್ಳಲಿದೆ.

2021-22ನೇ ಸಾಲಿಗೆ ಬೆಂಗಳೂರಿನ ನಗರದ ಸಮಗ್ರ ಅಭಿವೃದ್ಧಿಗೆ ₹7,795 ಕೋಟಿ ಅನುದಾನ ನಿಗದಿ ಮಾಡಲಾಗಿದೆ; ಬೃಹತ್ ಬೆಂಗಳೂರು ಮಹಾನಗರಪಾಲಿಕೆಯು (ಬಿಬಿಎಂಪಿ) ತನ್ನ ಕಾರ್ಯಚಟುವಟಿಕೆಗಳಿಗೆ ರಾಜ್ಯ ಸರ್ಕಾರವನ್ನು ಯಾವ ರೀತಿ ಅವಲಂಬಿಸಿದೆ ಎಂಬುದನ್ನು ಈ ಮೊತ್ತವೇ ಬಿಚ್ಚಿಡುತ್ತದೆ. ಇದು ಆರೋಗ್ಯಕರವೂ ಅಲ್ಲ, ಸುಸ್ಥಿರವೂ ಅಲ್ಲ. ನಿಜಕ್ಕೂ ಇಲ್ಲಿಗೆ ಬೇಕಿರುವುದು ದಕ್ಷವಾದ ರಾಜ್ಯ ಹಣಕಾಸು ಆಯೋಗ- ಬೆಂಗಳೂರಿಗೆ ಮಾತ್ರವಲ್ಲ ರಾಜ್ಯದ ಎಲ್ಲ ನಗರಗಳಿಗೂ ವರಮಾನದ ನ್ಯಾಯಯುತ ಪಾಲು ದೊರಕಬೇಕು. ಕೇಂದ್ರ ಹಣಕಾಸು ಆಯೋಗದ ಮಾದರಿಯಲ್ಲಿಯೇ ವೈಜ್ಞಾನಿಕವಾದ ಸೂತ್ರ ಅನುಸರಿಸಿ ಈ ಹಂಚಿಕೆ ನಡೆಯಬೇಕು.

ತ್ಯಾಜ್ಯ ನಿರ್ವಹಣೆಗೆ ಪ್ರತ್ಯೇಕ ಸಂಸ್ಥೆಯೊಂದನ್ನು ಸ್ಥಾಪಿಸಿರುವುದು ದುರದೃಷ್ಟಕರ. ಸಾರ್ವಜನಿಕ ಉತ್ತರದಾಯಿತ್ವ ಇಲ್ಲದ ಇನ್ನೊಂದು ಸಂಸ್ಥೆ ಅಷ್ಟೇ ಆಗಿ ಇದು ಇರಬಹುದು.

ಬೆಂಗಳೂರಿನ ಪ್ರವಾಸೋದ್ಯಮಕ್ಕೆ ಒತ್ತು ನೀಡಿರುವುದು ಸ್ವಾಗತಾರ್ಹ. ನಗರ ಮತ್ತು ಸುತ್ತಲಿನ ಪ್ರದೇಶದಲ್ಲಿ ಪ್ರವಾಸೋದ್ಯಮ ಅಭಿವೃದ್ಧಿಯಿಂದ ದೊಡ್ಡ ಪ್ರಮಾಣದಲ್ಲಿ ವರಮಾನ ಮತ್ತು ಜೀವನೋಪಾಯ ಸೃಷ್ಟಿಗೆ ಅವಕಾಶ ಇದೆ.

ಜನಾಗ್ರಹ ಸಂಸ್ಥೆಯ ನಾಗರಿಕ ಸಹಭಾಗಿತ್ವ ವಿಭಾಗದ ಮುಖ್ಯಸ್ಥ

ರಾಜ್ಯ ಬಜೆಟ್ 2021-22

ಪ್ರಜಾವಾಣಿ
ಮಂಗಳವಾರ • ಮಾರ್ಚ್ 9, 2021

ಅತಿವೃಷ್ಟಿ, ಅನಾವೃಷ್ಟಿ ಮತ್ತು ಕೊರೊನಾ ಸಂಕಷ್ಟದ ಮಧ್ಯೆಯೂ ಹೊಸ ತೆರಿಗೆ ವಿಧಿಸದೇ ಅಭಿವೃದ್ಧಿಗೆ ಪೂರಕವಾದ, ಸಾಮಾಜಿಕ ನ್ಯಾಯದೊಂದಿಗೆ ಸದೃಢ ಸಮಾಜ ನಿರ್ಮಾಣಕ್ಕೆ ಮುನ್ನುಡಿ ಬರೆದ ಬಜೆಟ್. ಕೃಷಿ, ನೀರಾವರಿ, ಶಿಕ್ಷಣ ಮತ್ತು ಆರೋಗ್ಯಕ್ಕೆ ಆದ್ಯತೆ ನೀಡಲಾಗಿದೆ
ಗೋವಿಂದ ಕಾರಜೋಳ, ಉಪಮುಖ್ಯಮಂತ್ರಿ

- **₹500 ಕೋಟಿ** ಜನರಿಗೆ ಆರೋಗ್ಯಕರ ಕೃಷಿ, ತೋಟಗಾರಿಕಾ ಉತ್ಪನ್ನ ದೊರಕಿಸಲು, ಸಾವಯವ ಕೃಷಿಗೆ
- **0.60%** ರೈತರ ಹೊರೆ ತಗ್ಗಿಸಲು ಕೃಷಿ ಉತ್ಪನ್ನ ಮಾರುಕಟ್ಟೆ ಶುಲ್ಕ ಇಳಿಕೆ
- **₹50 ಕೋಟಿ** ಪ್ರಧಾನಮಂತ್ರಿಗಳ ಕಿರು ಆಹಾರ ಸಂಸ್ಕರಣೆ ಉದ್ದಿಮೆಗಳ ನಿಯಮಬದ್ಧಗೊಳಿಸುವಿಕೆ
- **₹75 ಕೋಟಿ** ಮಣ್ಣಿನಲ್ಲಿ ಸಾವಯವ ಇಂಗಾಲ ಹೆಚ್ಚಿಸುವ ಐದು ವರ್ಷಗಳ ಅಭಿಯಾನಕ್ಕೆ ವಿನಿಯೋಗ
- **₹4 ಕೋಟಿ** ಬ್ಯಾಡಗಿ ಕೃಷಿ ಉತ್ಪನ್ನ ಮಾರುಕಟ್ಟೆಯಲ್ಲಿ ಆಧುನಿಕ ಗುಣವಿಶ್ಲೇಷಣೆ ಘಟಕ ಸ್ಥಾಪನೆ ವೆಚ್ಚ
- **₹25 ಕೋಟಿ** ಅಡಕೆ ಹಳದಿಎಲೆ ರೋಗದ ಸಂಶೋಧನೆ ಹಾಗೂ ಪರ್ಯಾಯ ಬೆಳೆ ಪ್ರೋತ್ಸಾಹಿಸುವ ಕಾರ್ಯಕ್ರಮ
- **₹62 ಕೋಟಿ** ಪ್ರಧಾನಮಂತ್ರಿ ಮತ್ಸ್ಯ ಸಂಪದ ಯೋಜನೆಯಡಿ ಪ್ರಸಕ್ತ ವರ್ಷ ನೀಡಲಾಗುವ ಅನುದಾನ
- **₹150 ಕೋಟಿ** ಬೆಂಗಳೂರಿನ ಓಕಳಿಪುರಂನಲ್ಲಿ ರೇಷ್ಮೆ ಭವನ ನಿರ್ಮಾಣಕ್ಕೆ ಅನುದಾನ
- **100 ಎಕರೆ** ಬೆಂಗಳೂರಿನ ಹೆಸರಘಟ್ಟದಲ್ಲಿ ದೇಶೀಯ ಜಾನುವಾರು, ಕುಕ್ಕುಟ, ಕುರಿ, ಮೇಕೆ ತಳಿಗಳ ಥೀಮ್ ಪಾರ್ಕ್ ಸ್ಥಾಪನೆ
- **₹2 ಕೋಟಿ** ರಾಜ್ಯದಲ್ಲಿರುವ ಮೀನು ಉತ್ಪಾದನೆಯ 16 ಕೇಂದ್ರಗಳ ಉನ್ನತೀಕರಣಕ್ಕೆ ಅನುದಾನ

ಇಲ್ಲದ ಜನಪ್ರಿಯ ಘೋಷಣೆ: ಮೌಲ್ಯವರ್ಧನೆಗೆ ಒತ್ತು

• ಎಸ್. ರವಿಪ್ರಕಾಶ್

₹31,028 ಕೋಟಿ ಕೃಷಿ ಮತ್ತು ಪೂರಕ ಚಟುವಟಿಕೆಗಳ ವಲಯ

₹25,740 ಕೋಟಿ ಹಳ್ಳಿಗಳ ಸಗಟು ನೀರು ಸರಬರಾಜು

₹1,500 ಕೋಟಿ ವಿಶ್ವ ಬ್ಯಾಂಕ್ ನೆರವಿನ ಡ್ರಿಪ್ ಯೋಜನೆಯಡಿ ರಾಜ್ಯದ 58 ಅಣೆಕಟ್ಟುಗಳ ಪುನಶ್ಚೇತನ ಮತ್ತು ಅಭಿವೃದ್ಧಿಯ ಪ್ರಸ್ತಾವ

ಎಂದಿನಂತೇ ಹಸಿರು ಶಾಲು ಹೊದ್ದುಕೊಂಡು ಬಜೆಟ್ ಮಂಡಿಸಿದ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ರೈತರನ್ನು ಖುಷಿಪಡಿಸುವ ಯಾವುದೇ 'ಜನಪ್ರಿಯ' ಕಾರ್ಯಕ್ರಮಗಳನ್ನು ಪ್ರಕಟಿಸಿಲ್ಲ. ಬದಲಿಗೆ ಕೃಷಿ ಕ್ಷೇತ್ರವನ್ನು ಮತ್ತೊಂದು ಹಂತಕ್ಕೆ ಮೇಲಕ್ಕೆತ್ತುವ ಪ್ರಯತ್ನ ಬಜೆಟ್‌ನಲ್ಲಿ ಗೋಚರಿಸುತ್ತದೆ.

ಚುನಾವಣಾ ವರ್ಷ ಅಲ್ಲದ ಕಾರಣ ಜನಪ್ರಿಯ ಘೋಷಣೆಗಳಿಗೆ ಮೊರೆ ಹೋಗಿಲ್ಲ. ಸಾಲ ಮನ್ನಾ ಪ್ರಸ್ತಾಪವಿಲ್ಲ. ಬದಲಿಗೆ ರೈತರಿಗೆ ಹೆಚ್ಚಿನ ಆದಾಯ ತರಬಹುದಾದ ಹಣ್ಣು- ತರಕಾರಿ, ದ್ವಿದಳ ಧಾನ್ಯಗಳು, ಸಾವಯವ ಕೃಷಿ, ಸಿರಿಧಾನ್ಯ ಮತ್ತು ಹೈಬ್ರೀಡ್ ತಳಿಗಳಿಗೆ ಸಂಬಂಧಿಸಿದ ವಿಷಯಗಳಿಗೇ ಹೆಚ್ಚಿನ ಒತ್ತು ನೀಡಲಾಗಿದೆ. ಹೆಚ್ಚು ಆದಾಯ ತರಬಲ್ಲ ಕೃಷಿ ಉತ್ಪನ್ನಗಳನ್ನು ಆದ್ಯತೆಯಾಗಿ ಸರ್ಕಾರ ಪರಿಗಣಿಸಿದೆ. ಕೃಷಿ ಯಾಂತ್ರೀಕರಣ, ನವೋದ್ಯಮಗಳಿಗೆ ಆದ್ಯತೆ ನೀಡುವ ಮೂಲಕ ಸಂಶೋಧನೆಗೂ ಪ್ರೋತ್ಸಾಹ ನೀಡಲಾಗಿದೆ. ಒಟ್ಟಿನಲ್ಲಿ, ರಾಜ್ಯ ಸರ್ಕಾರ ಜಾರಿಗೆ ತಂದಿರುವ ಮೂರು ಕೃಷಿ ಸಂಬಂಧಿ ಕಾಯ್ದೆಗಳಿಗೆ ಪೂರಕವಾಗಿಯೇ ಬಜೆಟ್ ರೂಪುಗೊಂಡಿದೆ. ಕೃಷಿ ಮತ್ತು ಅದಕ್ಕೆ ಪೂರಕ ಚಟುವಟಿಕೆಗಳಿಗಾಗಿ ₹31,028 ಕೋಟಿ ಅನುದಾನ ನೀಡಿದೆ.

ರೈತರ ಜೇಬು ತುಂಬುವ ಕಾರ್ಯಕ್ರಮಗಳಿಗಿಂತ ಕೃಷಿ ಪದ್ಧತಿಯಲ್ಲಿ ನವೀನತೆ ಮತ್ತು ಉತ್ಪನ್ನಗಳ ಮೌಲ್ಯವರ್ಧನೆ ಹಾಗೂ ದೀರ್ಘ ಕಾಲದಲ್ಲಿ ಹೆಚ್ಚು ಆದಾಯ ತರುವ ಉತ್ಪನ್ನಗಳ ಬಗ್ಗೆ ಗಮನ ಕೇಂದ್ರೀಕರಿಸಿದಂತೆ ಕಾಣುತ್ತದೆ. ಹೀಗಾಗಿ ಸಾವಯವ ಮತ್ತು ಸಿರಿಧಾನ್ಯಗಳನ್ನು ವೈಜ್ಞಾನಿಕವಾಗಿ ಮಾರಾಟ ಮಾಡಲು ರೈತರಿಗೆ ಗರಿಷ್ಠ ಬೆಲೆ ದೊರಕಿಸಲು ರಾಷ್ಟ್ರೀಯ ಇ-ಮಾರುಕಟ್ಟೆ ಪ್ರೈವೇಟ್ ಲಿಮಿಟೆಡ್ ಮೂಲಕ ಅವಕಾಶ ನೀಡಲಾಗಿದೆ. ಆಧುನಿಕ ಕೃಷಿ ಮತ್ತು ಕೊಯ್ಲೋತ್ತರ ಯಂತ್ರೋಪಕರಣಗಳನ್ನು ರೈತರಿಗೆ ಒದಗಿಸುವುದು, ವಿವಿಧ ಕೃಷಿ ಬೆಳೆಗಳನ್ನು ಒಕ್ಕಲು ಮಾಡಲು ಕಂಬೈನ್ಡ್ ಹಾರ್ವೆಸ್ಟರ್‌ಗಳನ್ನೂ ಪೂರೈಸುವ ವಿಚಾರವನ್ನೂ ಪ್ರಸ್ತಾಪಿಸಲಾಗಿದೆ.

ಕೃಷಿ ಯಾಂತ್ರೀಕರಣ ಯೋಜನೆಯಡಿ ಸಹಾಯಧನ ಯೋಜನೆಯನ್ನು ಇನ್ನು ಮುಂದೆ 25-45 ಪಿಟಿಒ ಎಚ್‌ಪಿ ಟ್ರ್ಯಾಕ್ಟರ್‌ಗಳಿಗೆ ವಿಸ್ತರಿಸಲು ಮುಂದಾಗಿದೆ.

ದ್ವಿದಳ ಧಾನ್ಯಗಳ ಉತ್ಪಾದನೆಯನ್ನು ಹೆಚ್ಚಿಸಲು ಬೀಜ ಮತ್ತು ಹಸಿರೆಲೆ ಗೊಬ್ಬರ ವಿತರಣೆ ಮಾಡಿ ಸಾವಯವ ಇಂಗಾಲ ಹೆಚ್ಚಿಸುವ ಅಭಿಯಾನ ರಾಜ್ಯದಲ್ಲಿ ಆರಂಭಿಸಲಾಗುವುದು. ಇದಕ್ಕಾಗಿ ಐದು ವರ್ಷಗಳಿಗೆ ₹75 ಕೋಟಿ ನಿಗದಿ ಮಾಡಲಾಗಿದೆ. ಇದರಿಂದ ದ್ವಿದಳ ಧಾನ್ಯ ಮತ್ತು ಎಣ್ಣೆಕಾಳುಗಳ ಉತ್ಪಾದನೆಯನ್ನು ಹೆಚ್ಚಿಸಲು ರೈತರನ್ನು ಪ್ರೋತ್ಸಾಹಿಸುವುದು ಸರ್ಕಾರದ ಉದ್ದೇಶ.

ಅತಿ ಬೇಗನೆ ಹಾಳಾಗುವ ಕೃಷಿ ಉತ್ಪನ್ನಗಳನ್ನು ಸಂಸ್ಕರಿಸಿ, ಅವುಗಳನ್ನು ಹೆಚ್ಚು ಕಾಲ ಸಂಗ್ರಹಿಸಿಡುವುದು ಸವಾಲಿನ ಕೆಲಸ. ಇದಕ್ಕಾಗಿ ಶೀತಲಗೃಹ ನಿರ್ಮಾಣ, ಕೊಯ್ಲೋತ್ತರ ನಿರ್ವಹಣೆ ಮತ್ತು ಸಂಸ್ಕರಣಾ ಘಟಕಗಳ ಸ್ಥಾಪನೆಗೆ ಆತ್ಮ ನಿರ್ಭರ ಭಾರತ ಅಭಿಯಾನದಡಿ ಶೇ35 ರಷ್ಟು ಸಹಾಯಧನ ನೀಡಲಾಗುತ್ತಿದೆ. ಈ ಪ್ರಮಾಣವನ್ನು ಶೇ50 ಕ್ಕೆ ಹೆಚ್ಚಿಸಲು ರಾಜ್ಯ ಸರ್ಕಾರ ಶೇ15 ರಷ್ಟು ಹೆಚ್ಚುವರಿ ಸಹಾಯ ಧನ ನೀಡಲು ಪ್ರಸ್ತಾಪಿಸಿದೆ. ಅಲ್ಪ ಪ್ರಮಾಣದ ಬಂಡವಾಳ ಹೂಡಿ ಈ ರೀತಿಯ ಚಟುವಟಿಕೆಗಳಲ್ಲಿ ತೊಡಗುವವರಿಗೆ ಇದರಿಂದ ಅನುಕೂಲವಾಗಲಿದೆ.

ರೈತರೇ ಸ್ಥಾಪಿಸಿದ ಸಹಕಾರ ಸಂಸ್ಥೆಗಳು ಮಾರಾಟ ಮಾಡುವ ತೋಟಗಾರಿಕೆ ಉತ್ಪನ್ನಗಳಿಗೆ ಏಕರೂಪದ ಬ್ರ್ಯಾಂಡಿಂಗ್ ಮತ್ತು ಮಾರಾಟ ಸೌಲಭ್ಯ ಒದಗಿಸಿ ಬ್ರ್ಯಾಂಡ್ ವ್ಯಾಲ್ಯೂ ಹೆಚ್ಚಿಸಲು ಕ್ರಮ. ಸಣ್ಣ ಮತ್ತು ಅತಿ ಸಣ್ಣ ರೈತರು ಕಡಿಮೆ ಜಮೀನಿನಲ್ಲಿ ಕೃಷಿ ಮತ್ತು ತೋಟಗಾರಿಕೆ ಜತೆ ಉಪಕಸುಬುಗಳನ್ನು ಕೈಗೊಳ್ಳುವ ಮೂಲಕ ವರ್ಷವಿಡೀ ಆದಾಯ ಪಡೆಯಲು 'ಸಮಗ್ರ ಕೃಷಿ ಪದ್ಧತಿ' ಕಾರ್ಯಕ್ರಮ ಜಾರಿ ಮಾಡುವುದಾಗಿ ಹೇಳಿದೆ. ಹೈಬ್ರೀಡ್ ಬೀಜ ಮತ್ತು ಬೀಜ ತಂತ್ರಜ್ಞಾನ ರೈತರಿಗೆ ಒದಗಿಸಲು 'ಹೊಸ ಹೈಬ್ರೀಡ್ ಬೀಜ ನೀತಿ' ರೂಪಿಸುವ ಪ್ರಸ್ತಾಪವಿದೆ.

ಕೃಷಿ ವ್ಯಾಪ್ತಿ ಹೆಚ್ಚಿಸುವ ಆಶಯಕ್ಕೆ ಪೂರಕವಾಗಿ ನೀರಾವರಿ ಯೋಜನೆಗಳಿಗೂ ಆದ್ಯತೆ ನೀಡಲಾಗಿದೆ. ಆದರೆ ಇವ್ಯಾವುದೂ ಹೊಸ ಯೋಜನೆಗಳಲ್ಲ. ಭದ್ರಾ ಮೇಲ್ದಂಡೆ ಯೋಜನೆ, ಕೃಷ್ಣಾ ಮೇಲ್ದಂಡೆ ಯೋಜನೆ ಹಂತ-3, ಕಳಸಾ ಬಂಡೂರಿ ನಾಲಾ ತಿರುವು ಯೋಜನೆ, ಎತ್ತಿನ ಹೊಳೆ, ಬೇಡ್ತಿ-ವರದಾ ನದಿ ಜೋಡಣೆ, ನವಲಿ ಬಳಿ ಸಮಾನಾಂತರ ಜಲಾಶಯ ಬೃಹತ್ ಯೋಜನೆಗಳನ್ನು ಪ್ರಸ್ತಾಪಿಸಲಾಗಿದೆ. ವಿಶೇಷವೆಂದರೆ, ಐದು ಲಕ್ಷ ಹೆಕ್ಟೇರ್‌ಗೂ ಅಧಿಕ ಅಚ್ಚುಕಟ್ಟು ಪ್ರದೇಶಗಳಿಗೆ ಸೂಕ್ಷ್ಮ ಮತ್ತು ತುಂತುರು ನೀರಾವರಿ ಯೋಜನೆಗಳನ್ನು ಜಾರಿಗೊಳಿಸುವುದಾಗಿ ಹೇಳಿದೆ. ಇವುಗಳಲ್ಲಿ ಬಹುತೇಕ ಚಾಲ್ತಿಯಲ್ಲಿರುವ ಯೋಜನೆಗಳೇ ಆಗಿವೆ.

ಬೇಡ್ತಿ-ವರದಾ ನದಿಗಳ ಜೋಡಣೆ ಪ್ರಸ್ತಾಪ

ವಿವಿಧ ನೀರಾವರಿ ಯೋಜನೆಗಳಿಗೆ ₹20,996 ಕೋಟಿ ಅನುದಾನ ನೀಡಲಾಗಿದೆ. ವಿಶೇಷವಾಗಿ, ಬೇಡ್ತಿ-ವರದಾ ನದಿ ಜೋಡಣೆ ಯೋಜನೆಯನ್ನು ಪ್ರಸ್ತಾಪಿಸಿದ್ದು, ಇದರಿಂದ ಒಟ್ಟು 22 ಟಿಎಂಸಿ ಅಡಿ ನೀರು ಬಳಸಿಕೊಳ್ಳಲು ವಿವಿಧ ಯೋಜನಾ ವರದಿಯನ್ನು ಎನ್‌ಡಬ್ಲ್ಯುಡಿಎ ಸಿದ್ಧಪಡಿಸುತ್ತಿದೆ. ಈ ಯೋಜನೆಯಿಂದ ಉತ್ತರ ಕರ್ನಾಟಕ ಬರಪೀಡಿತ ಜಿಲ್ಲೆಗಳಿಗೆ ಶಾಶ್ವತ ನೀರು ಸರಬರಾಜಿಗೆ ಅವಕಾಶವಾಗುತ್ತದೆ ಎಂದು ಹೇಳಿದೆ.

₹5,600 ಕೋಟಿ ನೀರಾವರಿ ಕಾಮಗಾರಿ ಅನುಷ್ಠಾನಕ್ಕೆ ಕೃಷ್ಣಾ ಭಾಗ್ಯ ಜಲನಿಗಮ ನಿಯಮಿತಕ್ಕೆ ನೀಡಲಾಗುವ ಅನುದಾನ

ಅಲ್ಲದೆ, ಕೃಷ್ಣಾ ಮೇಲ್ದಂಡೆ ಯೋಜನೆ ಹಂತ-3 ನ್ನು'ರಾಷ್ಟ್ರೀಯ ಯೋಜನೆ'ಗೆ ಮಾನ್ಯತೆ ಪಡೆಯುವುದರ ಜತೆಗೆ, ನೀರಾವರಿ ಕಾಮಗಾರಿಗಳ ಅನುಷ್ಠಾನಕ್ಕಾಗಿ ರಾಜ್ಯ ಸರ್ಕಾರ ಕೃಷ್ಣಾ ಭಾಗ್ಯ ಜಲ ನಿಗಮಕ್ಕೆ ₹5,600 ಕೋಟಿ ಅನುದಾನ ಒದಗಿಸಲಿದೆ.

ವಿಶ್ವಬ್ಯಾಂಕ್ ನೆರವಿನ ಡ್ರಿಪ್ ಯೋಜನೆಯಡಿ ₹15,000 ಕೋಟಿ ವೆಚ್ಚದಲ್ಲಿ 58 ಅಣೆಕಟ್ಟುಗಳ ಪುನಶ್ಚೇತನ ಮತ್ತು ಅಭಿವೃದ್ಧಿಯನ್ನು ಕೈಗೆತ್ತಿಕೊಳ್ಳಲಾಗುವುದು. ಜಲಸಂಪನ್ಮೂಲ ಇಲಾಖೆಯಡಿ ಐದು ಲಕ್ಷ ಹೆಕ್ಟೇರ್‌ಗೂ ಅಧಿಕ ಅಣೆಕಟ್ಟು ಪ್ರದೇಶಗಳಿಗೆ ಸೂಕ್ಷ್ಮ ಮತ್ತು ತುಂತುರು ನೀರಾವರಿ ಯೋಜನೆಗಳನ್ನು ಕಾರ್ಯಗತಗೊಳಿಸಲಾಗುವುದು.

'ಪಶ್ಚಿಮವಾಹಿನಿ' ಯೋಜನೆಗೆಯಡಿ ₹3,986 ಕೋಟಿ ವೆಚ್ಚದಲ್ಲಿ 5 ವರ್ಷಗಳಲ್ಲಿ 1,348 ಕಿಂಡಿ ಅಣೆಕಟ್ಟುಗಳ ನಿರ್ಮಾಣ, ಕರಾವಳಿ ಮತ್ತು ಉತ್ತರಕನ್ನಡದಲ್ಲಿ ಸಮುದ್ರದ ಅಲೆಗಳಿಂದ ಉಪ್ಪು ನೀರು ಹಿಮ್ಮುಖವಾಗಿ ನುಗ್ಗುವುದನ್ನು ತಡೆಯಲು ₹300 ಕೋಟಿ ವೆಚ್ಚದಲ್ಲಿ ಖಾರ್ ಲ್ಯಾಂಡ್ ಯೋಜನೆ ಜಾರಿ.

ಜಮೆ-ರೂಪಾಯಿಯ ಎಷ್ಟು ಭಾಗ ಯಾವುದರಿಂದ



ವೆಚ್ಚ-ರೂಪಾಯಿಯ ಎಷ್ಟು ಭಾಗ ಯಾವುದಕ್ಕೆ



ಪ್ರವಾ ಗ್ರಾಫಿಕ್ಸ್

ಬಜೆಟ್: ಪ್ರಮುಖಾಂಶಗಳು

- ಕೃಷಿ ಆದಾಯವನ್ನು 2023ರ ಹೊತ್ತಿಗೆ ದ್ವಿಗುಣಗೊಳಿಸಲು ಸರ್ಕಾರ ಬದ್ಧ. ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ್ ಯೋಜನೆಯಡಿ ಈವರೆಗೆ 53 ಲಕ್ಷಕ್ಕೂ ಹೆಚ್ಚು ರೈತರಿಗೆ ಆರ್ಥಿಕ ನೆರವು ವರ್ಗಾಯಿಸಲಾಗಿದೆ.
- ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆಗೆ ₹ 900 ಕೋಟಿ ಹಾಗೂ ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆಗೆ ₹831 ಕೋಟಿ ಅನುದಾನ
- ಆರೋಗ್ಯಕರ ಮತ್ತು ರಾಸಾಯನಿಕ ಮುಕ್ತ ಕೃಷಿ ಮತ್ತು ತೋಟಗಾರಿಕಾ ಉತ್ಪನ್ನಗಳನ್ನು ದೊರಕಿಸಲು ಹಾಗೂ ಸಾವಯವ ಕೃಷಿ ಉತ್ತೇಜಿಸಲು ₹500 ಕೋಟಿ ಮೊತ್ತದ ಯೋಜನೆ
- ಕೃಷಿ ವಿಶ್ವವಿದ್ಯಾಲಯಗಳಲ್ಲಿ ರೈತರ ಮಕ್ಕಳಿಗೆ ನೀಡುತ್ತಿರುವ ಮೀಸಲಾತಿ ಪ್ರಮಾಣ ಶೇ 40 ರಿಂದ ಶೇ 50ಕ್ಕೆ ಹೆಚ್ಚಳ
- ತೋಟಗಾರಿಕಾ ಬೆಳೆಗಾರರ ಆರ್ಥಿಕ ಅಭಿವೃದ್ಧಿಗೆ ನೆರವು ನೀಡಲು ಕೊಪ್ಪಳ ತಾಲ್ಲೂಕಿನ ಸಿರಿವಾರ ಗ್ರಾಮದಲ್ಲಿ ತೋಟಗಾರಿಕೆ ತಂತ್ರಜ್ಞಾನ ಪಾರ್ಕ್ ಅಭಿವೃದ್ಧಿ
- ಸಮಗ್ರ ಕೃಷಿ ಪದ್ಧತಿ ಕಾರ್ಯಕ್ರಮ ಅನುಷ್ಠಾನ
- ಹೊಸ ಹೈಬ್ರೀಡ್ ಬೀಜ ನೀತಿ ಅಸ್ತಿತ್ವಕ್ಕೆ
- ಸುವಾಸನೆಯುಕ್ತ ಹಾಗೂ ವೈದ್ಯಕೀಯ ಗಿಡಗಳು, ತರಕಾರಿ, ಹಣ್ಣು-ಹಂಪಲು, ಸಾಂಬಾರ ಪದಾರ್ಥಗಳಿಗಾಗಿ ಹೊಸ ಕೃಷಿ ರಫ್ತು ವಲಯ ಸ್ಥಾಪನೆ. ರಫ್ತಿಗೆ ಅನುವಾಗುವ ನಿಟ್ಟಿನಲ್ಲಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಗಳಲ್ಲಿ ಅಗತ್ಯ ಸೌಲಭ್ಯ
- ಕರ್ನಾಟಕ ದ್ರಾಕ್ಷಾರಸ ಮಂಡಳಿಯನ್ನು ಕರ್ನಾಟಕ ದ್ರಾಕ್ಷಿ ಹಾಗೂ ದ್ರಾಕ್ಷಾರಸ ಮಂಡಳಿಯನ್ನಾಗಿ ಪುನರ್ ರಚನೆ
- ಸಾರ್ವಜನಿಕ-ಖಾಸಗಿ ಸಹಭಾಗಿತ್ವದಲ್ಲಿ ಚಾಮರಾಜನಗರದಲ್ಲಿ ಅರಿಶಿಣ ಮಾರುಕಟ್ಟೆ ಅಭಿವೃದ್ಧಿ
- ಕಳಸಾ- ಬಂಡೂರಿ ನಾಲಾ ತಿರುವು ಯೋಜನೆಗಳಿಗೆ ಹಂಚಿಕೆಯಾದ ನೀರಿನ ಬಳಕೆಗೆ ₹1677 ಕೋಟಿ ಮೊತ್ತದ ಯೋಜನಾ ವರದಿಗೆ ಆಡಳಿತಾತ್ಮಕ ಅನುಮೋದನೆ
- ಭದ್ರಾ ಮೇಲ್ದಂಡೆ ಯೋಜನೆಯ ₹21,474 ಕೋಟಿ ಮೊತ್ತದ ಪರಿಷ್ಕೃತ ಅಂದಾಜು ಮೊತ್ತಕ್ಕೆ ಆಡಳಿತಾತ್ಮಕ ಅನುಮೋದನೆ
- ನಿರ್ಮಾಣ ಕಾರ್ಮಿಕರಿಗೆ ವಸತಿ ಸೌಲಭ್ಯ
- ಗ್ರಾಮೀಣ ಪ್ರದೇಶದ ಯುವತಿಯರನ್ನು ಸಬಲರನ್ನಾಗಿ ಮಾಡುವ ನಿಟ್ಟಿನಲ್ಲಿ 1000 ಯುವತಿಯರಿಗೆ ಮೃದು ಕೌಶಲ (ಸಾಫ್ಟ್ ಸ್ಕಿಲ್), ಸಂವಹನ ಕೌಶಲ, ವ್ಯಕ್ತಿತ್ವ ವಿಕಸನ ತರಬೇತಿ
- ಗ್ರಾಮೀಣ ಪ್ರದೇಶಗಳಲ್ಲಿ ಕುಡಿಯುವ ನೀರಿನ ಪೂರೈಕೆಗೆ ಆದ್ಯತೆ. 2021-2022ನೇ ಸಾಲಿನಲ್ಲಿ 22 ಲಕ್ಷ ಗ್ರಾಮೀಣ ಕುಟುಂಬಗಳಿಗೆ ₹4316 ಕೋಟಿ ವೆಚ್ಚದಲ್ಲಿ ನಳಗಳ ಸಂಪರ್ಕ, 2022-2023ನೇ ಸಾಲಿನಲ್ಲಿ 21 ಲಕ್ಷ ಕುಟುಂಬಗಳಿಗೆ ₹3172 ಕೋಟಿ ವೆಚ್ಚದಲ್ಲಿ ನಳಗಳ ಸಂಪರ್ಕ. ₹25,740 ಕೋಟಿ ವೆಚ್ಚದಲ್ಲಿ ಶಾಶ್ವತ ನೀರಿನ ಮೂಲಗಳಿಂದ ಸಗಟು ನೀರು ಪೂರೈಕೆ
- 5622 ಗ್ರಾಮೀಣ ಗ್ರಂಥಾಲಯಗಳನ್ನು ಗ್ರಾಮೀಣ ಮಾಹಿತಿ ಮತ್ತು ಜ್ಞಾನ ಕೇಂದ್ರಗಳನ್ನಾಗಿ ಉನ್ನತೀಕರಣ
- ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯಿಂದ ಪರವಾನಗಿ ಪಡೆದ ಮಹಿಳೆಯರಿಗೆ ಸಮಿತಿ ಪ್ರಾಂಗಣದಲ್ಲಿ ನಿವೇಶನ, ಗೋದಾಮು, ಅಂಗಡಿ ಹಂಚಿಕೆಯಲ್ಲಿ ಶೇ 10ರಷ್ಟು ಮೀಸಲಾತಿ
- ರಾಜ್ಯದ ಕೃಷಿ ಪತ್ತಿನ ಸಂಘಗಳು, ಟಿಎಪಿಸಿಎಂಎಸ್‌ಗಳಲ್ಲಿ ಸಂಗ್ರಹಿಸಿದ ಕೃಷಿ ಉತ್ಪನ್ನಗಳ ಮೇಲೆ ಶೇ 11ರ ದರದಲ್ಲಿ ವಿತರಿಸಿದ ಅಡಮಾನ ಸಾಲ ಸೌಲಭ್ಯಕ್ಕೆ 6 ತಿಂಗಳ ಅವಧಿಗೆ ಸರ್ಕಾರದಿಂದ ಶೇ 4ರ ಬಡ್ಡಿ ಸಹಾಯಧನ ವಿತರಣೆ. ಇದಕ್ಕಾಗಿ ₹ 5 ಕೋಟಿ ಅನುದಾನ
- 'ಸಮಗ್ರ ಗೋಸಂಕುಲ ಸಮೃದ್ಧಿ' ಯೋಜನೆಯಡಿ₹ 1ಕೋಟಿ ವೆಚ್ಚದ್ಲಿ ರಾಜ್ಯದ ರೈತರಿಗೆ ಹೊರರಾಜ್ಯದ ದೇಶಿ ತಳಿಗಳನ್ನು ಪರಿಚಯಿಸಲು ಕ್ರಮ

₹30 ಕೋಟಿ ಮೀನು ಮಾರಾಟ ಘಟಕ ಮತ್ತು ಮತ್ಸ್ಯ ದರ್ಶಿನಿ ಸ್ಥಾಪನೆಗೆ ಅನುದಾನ

25% ರೈತರು ಗೋದಾಮುಗಳಲ್ಲಿ ಉತ್ಪನ್ನಗಳನ್ನು ಇರಿಸುವ ಸಂಗ್ರಹಣಾ ಶುಲ್ಕಕ್ಕೆ ಸಹಾಯಧನ

₹198 ಕೋಟಿ ರಾಜ್ಯದ 5,500 ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಲ್ಲಿ ಗಣಕೀಕರಣ ವ್ಯವಸ್ಥೆ

₹50 ಕೋಟಿ ಬೆಂಗಳೂರಿನ ಬೈಯಪ್ಪನಹಳ್ಳಿಯಲ್ಲಿ 8 ಎಕರೆಯಲ್ಲಿ ಹೂವಿನ ಮಾರುಕಟ್ಟೆ ನಿರ್ಮಾಣ

ಕೃಷಿ ಕ್ಷೇತ್ರ: ಸಮಗ್ರ ದೃಷ್ಟಿಕೋನದ ಕೊರತೆ, ರೈತ ಮಹಿಳೆಯ ಕಡೆಗಣನೆ

ವಿಶ್ಲೇಷಣೆ
ಚುಕ್ಕಿ ನಂಜುಂಡಸ್ವಾಮಿ

ಕೃಷಿ ಕ್ಷೇತ್ರ ಸದ್ಯ ಎದುರಿಸುತ್ತಿರುವ ಬಿಕ್ಕಟ್ಟು ಹಾಗೂ ಸವಾಲುಗಳಿಗೂ ರಾಜ್ಯ ಬಜೆಟ್‌ಗೂ ಸಂಬಂಧವೇ ಇಲ್ಲ. ರೈತರ ಅಭಿವೃದ್ಧಿಯ ಬಗ್ಗೆ ಸಮಗ್ರ ದೃಷ್ಟಿಕೋನದ ಕೊರತೆ ಬಜೆಟ್‌ನಲ್ಲಿ ಎದ್ದು ಕಾಣುತ್ತಿದೆ.

2023ರ ವೇಳೆ ರೈತರ ಆದಾಯ ದ್ವಿಗುಣಗೊಳಿಸುವ ಪ್ರಧಾನಿ ನರೇಂದ್ರ ಮೋದಿ ಅವರ ಕನಸನ್ನು ಸಾಕಾರಗೊಳಿಸುವ ನಿಟ್ಟಿನಲ್ಲಿ ರಾಜ್ಯ ಸರ್ಕಾರವು ಕೇಂದ್ರದ ಜೊತೆ ಕೈಜೋಡಿಸಲಿದೆ ಎಂದು ಮುಖ್ಯಮಂತ್ರಿ ಅವರು ಬಜೆಟ್‌ನಲ್ಲಿ ಹೇಳಿದ್ದಾರೆ. ಮೋದಿ ಅವರು ಅಧಿಕಾರಕ್ಕೆ ಬಂದಾಗಿನಿಂದಲೂ ಇದನ್ನು ಹೇಳುತ್ತಲೇ ಬಂದಿದ್ದಾರೆ. ಆದರೆ, ಆದಾಯ ದ್ವಿಗುಣ ಗೊಳಿಸುವುದು ಹೇಗೆ ಎಂಬ ಸ್ಪಷ್ಟ ಕಾರ್ಯಸೂಚಿಯನ್ನು ಸಿದ್ಧಪಡಿಸಿಲ್ಲ. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ತಮ್ಮ ಬಜೆಟ್‌ಗಳಲ್ಲಿ ಅದರ ಬಗ್ಗೆ ಪ್ರಸ್ತಾಪಿಸಿಲ್ಲ. ಸ್ಪಷ್ಟವಾದ ಸೂತ್ರ ಇಲ್ಲದೇ ಆದಾಯ ದ್ವಿಗುಣ ಗೊಳಿಸಲು ಸಾಧ್ಯವೇ?

ದ್ವಂದ್ವ ನಿಲುವು: ಕೃಷಿಗೆ ಸಂಬಂಧಿಸಿದ ಸರ್ಕಾರದ ದ್ವಂದ್ವ ನೀತಿ ಬಜೆಟ್‌ನಲ್ಲೂ ಸ್ಪಷ್ಟವಾಗಿ ಕಾಣಿಸುತ್ತದೆ. ಒಂದು ಕಡೆ, ಸಾವಯವ ಕೃಷಿಗೆ ಉತ್ತೇಜನಕ್ಕೆ ₹500 ಕೋಟಿ ಹಂಚಿಕೆ, ದೇಶಿ ಗೋತಳಿಗಳ ಸಂರಕ್ಷಣೆಗೆ ಒತ್ತು ಕೊಡುವುದಾಗಿ ಹೇಳುವ ಸರ್ಕಾರ, ಇನ್ನೊಂದೆಡೆ ಹೈಬ್ರೀಡ್ ಬೀಜ ನೀತಿ ಜಾರಿಗೊಳಿಸುವುದಾಗಿ ಹೇಳುತ್ತಿದೆ. ಕೇಂದ್ರ ಸರ್ಕಾರ ಹೈಬ್ರೀಡ್ ಬೀಜ ಮಸೂದೆಯನ್ನು ಸಿದ್ಧಪಡಿಸುತ್ತಿದೆ. ಇದಕ್ಕೆ ಪೂರಕವಾಗಿ ರಾಜ್ಯ ಸರ್ಕಾರ ಈ ನೀತಿಯನ್ನು ಜಾರಿಗೆ ತರುವುದಾಗಿ ಹೇಳಿದೆ. ಈಗಾಗಲೇ ರೈತರು ಬೀಜಗಳ ಮೇಲಿನ ನಿಯಂತ್ರಣ ಕಳೆದುಕೊಳ್ಳುತ್ತಿದ್ದಾರೆ. ಬಿತ್ತನೆ ಬೀಜಗಳ ಮೇಲೆ ರೈತರು ಹೊಂದಿರುವ ಹಿಡಿತವನ್ನು ಸಂಪೂರ್ಣವಾಗಿ ಬಿಡಿಸುವ ಯತ್ನ ಇದು.

ಅಂತರ್ಜಲ ಬಿಕ್ಕಟ್ಟು ಇಡೀ ರಾಜ್ಯವನ್ನು ಬಾಧಿಸುತ್ತಿದೆ. ಹಲವು ನೀರಾವರಿ ಯೋಜನೆಗಳ ಬಗ್ಗೆ ಪ್ರಸ್ತಾಪ ಮಾಡಿರುವ ಯಡಿಯೂರಪ್ಪ ಅವರು ಅಂತರ್ಜಲ ಸಂರಕ್ಷಣೆ ಬಗ್ಗೆ ಎಲ್ಲೂ ಚಕಾರ ಎತ್ತಿಲ್ಲ.

ಒಂದೊಳ್ಳೆ ಕೆಲಸ: ಸಾವಯವ ಇಂಗಾಲ ಹೆಚ್ಚಳಕ್ಕೆ ಪ್ರೋತ್ಸಾಹ ನೀಡಲು ಅಭಿಯಾನ ಹಮ್ಮಿಕೊಳ್ಳುವ ಪ್ರಸ್ತಾವ ಒಳ್ಳೆಯ ಬೆಳವಣಿಗೆ. ಈ ಅಭಿಯಾನ ತುರ್ತಾಗಿ ಆಗಬೇಕಿದೆ. ಇದು ಘೋಷಣೆಗೆ ಸೀಮಿತವಾಗದೆ, ಅದಕ್ಕೆ ನಿರ್ದಿಷ್ಟ ಕಾರ್ಯಸೂಚಿಯನ್ನು ಸಿದ್ಧಪಡಿಸಬೇಕು. ಐದು ವರ್ಷಗಳಲ್ಲಿ ಹಂತ ಹಂತವಾಗಿ ಸಾವಯವ ಇಂಗಾಲ ಹೆಚ್ಚು ಮಾಡಬಹುದು. ರೈತರೇ ಇದನ್ನು ಮಾಡಬಲ್ಲರು. ಇದರಲ್ಲೂ ಖಾಸಗಿಯವರಿಗೆ ಅವಕಾಶ ನೀಡಿ ಅಭಿಯಾನ ಹಾಳು ಮಾಡಲು ಸರ್ಕಾರ ಮುಂದಾಗಬಾರದು.

ವಿವಿಧ ಬೆಳೆಗಳಿಗೆ ಕೇಂದ್ರ ಸರ್ಕಾರ ಘೋಷಿಸುವ ಬೆಂಬಲ ಬೆಲೆಗೆ ಪೂರಕವಾಗಿ ರಾಜ್ಯ ಸರ್ಕಾರವೂ ಬೆಂಬಲಬೆಲೆ ನೀಡುವಂತೆ ಮಾಡಲು ಪ್ರತ್ಯೇಕ ಆವರ್ತನಿಧಿ ಸ್ಥಾಪಿಸಬೇಕು ಎಂದು ಹಲವು ವರ್ಷಗಳಿಂದ ಒತ್ತಾಯಿಸುತ್ತಲೇ ಬಂದಿದ್ದೇವೆ. ಅದು ಸಾಕಾರಗೊಂಡಿಲ್ಲ.

ರೈತ ಮಹಿಳೆಯರ ಕಡೆಗಣನೆ: ಮಹಿಳಾ ದಿನದಂದು ಅವರ ಬಗ್ಗೆ ಪ್ರಸ್ತಾಪಿಸುತ್ತಲೇ ಮುಖ್ಯಮಂತ್ರಿ ಅವರು ಬಜೆಟ್ ಭಾಷಣ ಆರಂಭಿಸಿದ್ದಾರೆ. ಆದರೆ, ರೈತ ಮಹಿಳೆಯರ ಬಗ್ಗೆ ಒಂದು ಅಂಶವೂ ಇಲ್ಲ. ಕೃಷಿಯಲ್ಲಿ 90 ಭಾಗ ಕೆಲಸ ಮಾಡುವವರು ಮಹಿಳೆಯರು. ಆದರೆ ಅವರಿಗೆ ಭೂಮಿಯ ಹಕ್ಕು ಇಲ್ಲ. ಶೇ 22ರಷ್ಟು ರೈತ ಮಹಿಳೆಯರು ಮಾತ್ರ ಭೂಮಿಯನ್ನು ಹೊಂದಿದ್ದಾರೆ. ಭೂಮಿಯ ಹಕ್ಕು ಹೊಂದಿಲ್ಲದ ಗ್ರಾಮೀಣ ಮಹಿಳೆಯರಿಗೆ ಉತ್ತೇಜನ ಸಿಗಬೇಕಿತ್ತು. ಅದು ಪ್ರಶಸ್ತಿ, ಸಮ್ಮಾನಕ್ಕೆ ಮಾತ್ರ ಸೀಮಿತವಾಗದೆ, ಪುರುಷರಿಗೆ ಸರಿ ಸಮಾನವಾಗಿ ಪ್ರೋತ್ಸಾಹ ಸಿಗಬೇಕಿತ್ತು. ಆದರೆ, ಬಜೆಟ್‌ನಲ್ಲಿ ಅದು ಸಿಕ್ಕಿಲ್ಲ. ಇದು ದೊಡ್ಡ ದುರಂತ.

ಲೇಖಕಿ: ರೈತ ನಾಯಕಿ

'ಸಂಕಟದ ಗಾತ್ರ ಅರಿವಿಲ್ಲದ ಬಜೆಟ್'

ವಿಶ್ಲೇಷಣೆ
ರಾಜಾರಾಂ ತಲ್ಲೂರು

ಕಾರ್ಮಿಕರು ಮತ್ತು ಗ್ರಾಮೀಣ ನಿವಾಸಿಗಳಿಗೆ ಈ ಬಜೆಟ್ ತನ್ನ ಹಂಚಿಕೆಯಲ್ಲೇ ಗಮನಾರ್ಹ ಇಳಿಕೆಯನ್ನು ತೋರಿಸಿದೆ. ಕಾರ್ಮಿಕರು, ಉದ್ಯೋಗ ಮತ್ತು ಕೌಶಲಾಭಿವೃದ್ಧಿಗಳಿಗೆ ಮೀಸಲಿಟ್ಟ ಹಣ ಕಳೆದ ವರ್ಷದ ₹ 61.3 ಕೋಟಿಯಿಂದ ಈ ವರ್ಷಕ್ಕೆ ₹ 59.5 ಕೋಟಿಗೆ ಇಳಿದಿದ್ದರೆ, ಗ್ರಾಮೀಣಾಭಿವೃದ್ಧಿ ವಿಶೇಷ ಕಾರ್ಯಕ್ರಮಗಳಿಗೆ ಹೂಡಿಕೆ ₹ 103.0 ಕೋಟಿಯಿಂದ ₹ 57.5 ಕೋಟಿಗೆ ಇಳಿದಿದೆ.

ಗ್ರಾಮೀಣ ಉದ್ಯೋಗಕ್ಕೆ ಹೂಡಿಕೆಯಲ್ಲಿ ದೊಡ್ಡ ಬದಲಾವಣೆ ಆಗಿಲ್ಲವಾದರೂ ಹೂಡಿಕೆ ತಗ್ಗಿದೆ. ಗ್ರಾಮೀಣ ಸ್ವಸಹಾಯ ಸಂಘಗಳ ಸಣ್ಣ ಉದ್ಯಮಕ್ಕೆ (ಸಂಜೀವಿನಿ) ಬೆಂಬಲ, ಗಾರ್ಮೆಂಟ್ ಕಾರ್ಮಿಕರಿಗೆ ರಿಯಾಯಿತಿ ಬಸ್‌ಪಾಸ್ (ವನಿತಾ ಸಂಗಾತಿ), ಕಟ್ಟಡ ಕಾರ್ಮಿಕರಿಗೆ ನೂರು (ಕಿತ್ತೂರು ರಾಣಿ ಚನ್ನಮ್ಮ) ಶಿಶುಪಾಲನಾ ಕೇಂದ್ರಗಳು, 25 ಸಂಚಾರಿ ಆರೋಗ್ಯ ತಪಾಸಣಾ ಕೇಂದ್ರಗಳು, 17 ತಾತ್ಕಾಲಿಕ ವಸತಿಗೃಹಗಳು, ಗ್ರಾಮೀಣ ಯುವತಿಯರಿಗೆ ಸಾಫ್ಟ್ ಸ್ಕಿಲ್ ತರಬೇತಿ ಹೀಗೆ ಕೆಲವು ಹೊರಪದರದ ಲಾಭಗಳನ್ನು ಹೊರತುಪಡಿಸಿದರೆ ಮಹತ್ವದ್ದೇನೂ ಇಲ್ಲ.

ಕೊರೊನೋತ್ತರ ಆರ್ಥಿಕತೆಯ ಕುಸಿತದ ಅಂದಾಜು ಸರ್ಕಾರಕ್ಕೆ ಇನ್ನೂ ಸಿಕ್ಕಂತಿಲ್ಲ. ವ್ಯಾಪಾರ ಇಲ್ಲದೇ ವರ್ಷವಿಡೀ ಕುಳಿತು ಸಂಕಟ ಅನುಭವಿಸಿದ ಬೀದಿಬದಿ ವ್ಯಾಪಾರಿಗಳು ಅಥವಾ ಕಾರ್ಮಿಕರು ಈ ಬಜೆಟ್‌ನಿಂದ ನಿರಾಶರಾಗಲಿದ್ದಾರೆ. ಕೃಷಿಯಿಂದ ಹೊರದೂಡಲಾಗುತ್ತಿರುವ ಭೂರಹಿತ ಕೃಷಿ ಕಾರ್ಮಿಕರಿಗೆ ಮತ್ತು ಬೇರೆ ಕೌಶಲರಹಿತ ಕಾರ್ಮಿಕರಿಗೆ ಬಲವಾದ ಬೆಂಬಲ ಮತ್ತು ಕೌಶಲ ಕಲಿಕೆ-ಉದ್ಯೋಗ ನೀಡಿಕೆಗಳತ್ತ ಸರ್ಕಾರ ಹೆಚ್ಚಿನ ಗಮನ ಹರಿಸಿದ್ದರೆ, ಅದಕ್ಕೊಂದು ಲಾಜಿಕಲ್ ಸಮರ್ಥನೆ ಇರುತ್ತಿತ್ತು. ಆ ಅವಕಾಶವನ್ನೂ ಸರ್ಕಾರ ಕಳೆದುಕೊಂಡಿದೆ.

ಒಂದು ಬದಿಯಿಂದ ಕೇಂದ್ರ ಸರ್ಕಾರದ ಯೋಜನೆಗಳ ರಾಜ್ಯ ಮಟ್ಟದ ಅನುಷ್ಠಾನವನ್ನೇ ಪ್ರಧಾನ ಉದ್ದೇಶವಾಗಿರಿಸಿಕೊಂಡು, ಇನ್ನೊಂದು ಬದಿಯಿಂದ ಎಲ್ಲ ಯೋಜನೆಗಳಿಗೂ 'ಖಾಸಗಿ ಸಹಭಾಗಿತ್ವ' ಬಯಸುತ್ತ, ಮಧ್ಯಮ-ಮೇಲುಮಧ್ಯಮ ವರ್ಗವನ್ನು, ಪ್ರಬಲ ಜಾತಿಗಳನ್ನು ಸಂತೃಪ್ತಿ ಪಡಿಸುವುದಕ್ಕೆ ಆದ್ಯತೆ ನೀಡುವುದರೊಂದಿಗೆ ರಾಜ್ಯ ಸರ್ಕಾರ ಒಕ್ಕೂಟ ವ್ಯವಸ್ಥೆಯಲ್ಲಿ ತನ್ನ ಸ್ವಂತ ಅಸ್ತಿತ್ವವನ್ನು ಮತ್ತು ಪ್ರಾದೇಶಿಕ ಅನನ್ಯತೆಯನ್ನು ಕಳೆದುಕೊಳ್ಳುತ್ತಿರುವುದು ವರ್ಷಗಳುರುಳಿದಂತೆ ನಿಚ್ಚಳವಾಗುತ್ತಿದೆ. ರಾಜ್ಯದಲ್ಲಿ ಆರ್ಥಿಕ ಅಭಿವೃದ್ಧಿಗೆ ಪ್ರಚೋದನೆ ನೀಡಲು 2021-22ನೇ ಸಾಲಿನಲ್ಲಿ ಸರ್ಕಾರ ಹಂಚಿಕೆ ಮಾಡಿರುವುದು ಕೇವಲ ₹ 52,529 ಕೋಟಿ. ₹ 2,46,206 ಕೋಟಿ ಗಾತ್ರದ ಬಜೆಟ್‌ನಲ್ಲಿ ಇದು ತೀರಾ ಅಲ್ಪಮೊತ್ತ. ಕೊರೊನಾ ಕಾಲದ ಸಂಕಟದ ಗಾತ್ರದ ಅರಿವಿಲ್ಲದ ಬಜೆಟ್ ಇದು ಎಂಬುದು ಸ್ಪಷ್ಟ.

ಲೇಖಕ: ರೈತಪರ ಚಿಂತಕ

ಪ್ರತಿ ಜಿಲ್ಲೆಗೊಂದು ಗೋಶಾಲೆ

ರಾಜ್ಯದಲ್ಲಿ ಗೋಹತ್ಯೆ ನಿಷೇಧ ಕಾನೂನು ಜಾರಿಗೆ ತಂದಿರುವ ಬೆನ್ನಲ್ಲೇ ಜಾನುವಾರು ಸಂರಕ್ಷಿಸಲು ಪ್ರತಿ ಜಿಲ್ಲೆಯಲ್ಲೂ ಗೋಶಾಲೆ ಸ್ಥಾಪಿಸುವುದಾಗಿ ಸರ್ಕಾರ ಪ್ರಕಟಿಸಿದೆ.



ದೇಶೀಯ ಜಾನುವಾರುಗಳ, ಕುರಿ, ಮೇಕೆ, ಕುಕ್ಕುಟ ತಳಿಗಳ ಶಾಶ್ವತ ಪ್ರದರ್ಶನ ಮತ್ತು ಪ್ರಾತ್ಯಕ್ಷಿಕೆಯೊಂದಿಗೆ ಮಾಹಿತಿ ನೀಡಲು ಬೆಂಗಳೂರಿನ ಹೆಸರಘಟ್ಟದಲ್ಲಿ 100 ಎಕರೆಯಲ್ಲಿ ಖಾಸಗಿ ಸಹಭಾಗಿತ್ವದ ಥೀಮ್ ಪಾರ್ಕ್ ಸ್ಥಾಪನೆ.

ರಾಜ್ಯದಲ್ಲಿ ಹೆಚ್ಚಿನ ಮಾಂಸ ಉತ್ಪಾದನೆ ಮತ್ತು ಅಧಿಕ ಮರಿಗಳನ್ನು ನೀಡುವ ನಂದಿದುರ್ಗ ಮೇಕೆ ತಳಿಗಳನ್ನು ಅಭಿವೃದ್ಧಿಪಡಿಸಿ ಉತ್ಕೃಷ್ಟ ದರ್ಜೆಯ ಹೋತಗಳನ್ನು ರೈತರಿಗೆ ವಿತರಿಸಲು ಹೊಸ ಯೋಜನೆ. ಹೊರ ರಾಜ್ಯದ ದೇಶಿ ತಳಿಗಳಾದ ಗಿರ್, ಸಾಹಿವಾಲ್, ಒಂಗೋಲ್, ಥಾರ್‌ಪಾರ್ಕ್ ಮತ್ತು ದೇವಣಿ ತಳಿಗಳನ್ನು ಅಭಿವೃದ್ಧಿಪಡಿಸಿ ರೈತರಿಗೆ ಪರಿಚಯಿಸಲು 'ಸಮಗ್ರ ಗೋಸಂಕುಲ ಸಮೃದ್ಧಿ' ಯೋಜನೆ ಜಾರಿ. ಆಕಸ್ಮಿಕವಾಗಿ ಕುರಿ ಮತ್ತು ಮೇಕೆಗಳು ಸತ್ತಾಗ ಪರಿಹಾರ ಧನ ನೀಡುವ 'ಅನುಗ್ರಹ' ಕಾರ್ಯಕ್ರಮ ಮುಂದುವರಿಕೆಗೆ ನಿರ್ಧಾರ. ಕೊಪ್ಪಳದಲ್ಲಿ ನಾರಿ ಸುವರ್ಣ ಕುರಿ ತಳಿಯ ಸಂವರ್ಧನಾ ಕೇಂದ್ರ ಸ್ಥಾಪನೆ.

ಪಶು ವೈದ್ಯಕೀಯ ವಿಜ್ಞಾನದಲ್ಲಿ ಆಯುರ್ವೇದ ಔಷಧಿಗಳ ಅಳವಡಿಕೆ ಉತ್ತೇಜಿಸಲು ಶಿವಮೊಗ್ಗದ ಪಶುವೈದ್ಯಕೀಯ ಕಾಲೇಜಿನಲ್ಲಿ ಹೊಸದಾಗಿ ಸಂಶೋಧನಾ ಕೇಂದ್ರ ಸ್ಥಾಪಿಸಲು ₹2 ಕೋಟಿ ಅನುದಾನ.

ಕಟ್ಟಡ ಕಾರ್ಮಿಕರಿಗೆ ಆರೋಗ್ಯ ಸೇವೆ, ಸೂರು

ನೋಂದಾಯಿತ ಕಟ್ಟಡ ಕಾರ್ಮಿಕರ ಮಕ್ಕಳ ರಕ್ಷಣೆಗಾಗಿ ಹೆಚ್ಚುವರಿ 100 'ಕಿತ್ತೂರು ರಾಣಿ ಚನ್ನಮ್ಮ ಶಿಶುಪಾಲನಾ' ಕೇಂದ್ರಗಳ ಸ್ಥಾಪನೆ, ಕಟ್ಟಡ ಕಾರ್ಮಿಕರು ಮತ್ತು ಅವರ ಅವಲಂಬಿತರ ವೈದ್ಯಕೀಯ ತಪಾಸಣೆ, ಚಿಕಿತ್ಸೆಗಾಗಿ ಆಯ್ದ ಕಾರ್ಯ ನಿರ್ವಹಣಾ ಸ್ಥಳಗಳಲ್ಲಿ 25 ಸಂಚಾರಿ ಆರೋಗ್ಯ ತಪಾಸಣಾ ಕೇಂದ್ರಗಳನ್ನು ಆರಂಭಿಸಲಾಗುವುದು.



ನಿರ್ಮಾಣ ಕಾರ್ಮಿಕರ ವಸತಿ ಸಮಸ್ಯೆಯನ್ನು ಬಗೆಹರಿಸುವ ಉದ್ದೇಶದಿಂದ ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ ನಾಲ್ಕು, ಮೈಸೂರು, ಶಿವಮೊಗ್ಗ, ಹುಬ್ಬಳ್ಳಿ, ಕಲಬುರ್ಗಿ, ಬಳ್ಳಾರಿ, ಹಾಸನ, ದಾವಣಗೆರೆ,ಗದಗ ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ತಲಾ ಒಂದು ಸುಸಜ್ಜಿತ ತಾತ್ಕಾಲಿಕ ವಸತಿ ಗೃಹ ಸೌಲಭ್ಯಗಳನ್ನು ಒದಗಿಸಲಾಗುವುದು.

ಕಾರ್ಮಿಕ ಸ್ನೇಹಿ ಹಾಗೂ ಉದ್ಯಮ ಸ್ನೇಹಿ ವಾತಾವರಣ ಸೃಷ್ಟಿಸುವ ಉದ್ದೇಶದಿಂದ ಕೇಂದ್ರದ ಕಾರ್ಮಿಕ ಕಾನೂನುಗಳ ನಾಲ್ಕು ಸಂಹಿತೆಗಳಿಗೆ, ರಾಜ್ಯ ಸರ್ಕಾರ ನಿಯಮಾವಳಿಗಳನ್ನು ರೂಪಿಸಿ ಜಾರಿಗೆ ತರಲಿದೆ.



ರಾಜ್ಯ ಬಜೆಟ್ 2021-22

ಒಟ್ಟು ಜನಸಂಖ್ಯೆಯ ಅರ್ಧಭಾಗದಷ್ಟಿರುವ ಮಹಿಳೆಯರು ರಾಷ್ಟ್ರ ನಿರ್ಮಾಣ ಹಾಗೂ ಆರ್ಥಿಕ ಚಟುವಟಿಕೆಯಲ್ಲಿ ತೊಡಗಿಸಿಕೊಂಡಾಗ ಸಮೃದ್ಧಿಯ ವಾತಾವರಣ ಮೂಡುವುದು ಕಠಿಣವಲ್ಲ. ಇದರಿಂದ ಮಹಿಳೆಯರ ಆತ್ಮಬಲವೂ ವೃದ್ಧಿಯಾಗಲಿದೆ. ಮಹಿಳೆಯರ ಸಮಾನತೆ ಮತ್ತು ಸಬಲೀಕರಣಕ್ಕೆ ನಮ್ಮ ಸರ್ಕಾರ ಬದ್ಧ
ಬಿ.ಎಸ್. ಯಡಿಯೂರಪ್ಪ, ಮುಖ್ಯಮಂತ್ರಿ

₹62,150 ಕೋಟಿ	₹37,527 ಕೋಟಿ	₹26,005 ಕೋಟಿ	₹24,580 ಕೋಟಿ	₹25,740 ಕೋಟಿ	₹12,655 ಕೋಟಿ	₹7,515 ಕೋಟಿ
ಸರ್ವೋದಯ ಮತ್ತು ಕ್ಷೇಮಾಭಿವೃದ್ಧಿ ವಲಯ	ಮಕ್ಕಳ ಉದ್ದೇಶಿತ ಯೋಜನೆ	ಎಸ್‌ಸಿಪಿ ಟಿಎಸ್‌ಪಿ ಯೋಜನೆಗಳಿಗೆ ಅನುದಾನ	ಅಬಕಾರಿ ವರಮಾನ ನಿರೀಕ್ಷೆ	ಹಳ್ಳಿಗಳ ಸಗಟು ನೀರು ಸರಬರಾಜು	ನೋಂದಣಿ ಮತ್ತು ಮುದ್ರಾಂಕ ತೆರಿಗೆ ನಿರೀಕ್ಷೆ	ಸಾರಿಗೆ ರಾಜಸ್ವ ಗುರಿ

ಸ್ತ್ರೀಯರಿಗೆ ಸಿ.ಎಂ ಸಲಾಮ್!

• ರಾಜೇಶ್ ರೈ ಚಟ್ಲ

ಬೆಂಗಳೂರು: ನಿತ್ಯ ಕಿವಿಗೆ ಅಪ್ಪಳಿಸುವ ಕೌಟುಂಬಿಕ ಹಿಂಸೆ, ತಾರತಮ್ಯ, ಅತ್ಯಾಚಾರ, ದೌರ್ಜನ್ಯ ಪ್ರಕರಣಗಳು ಹೆಣ್ಣು ಮಕ್ಕಳ ಸುರಕ್ಷತೆ, ಸಶಕ್ತೀಕರಣ, ಸಬಲೀಕರಣಕ್ಕೆ ಮತ್ತಷ್ಟು ಕ್ರಮ ಕೈಗೊಳ್ಳಬೇಕೆಂಬುದನ್ನು ಸಾರಿ ಹೇಳುತ್ತಿವೆ. ಮತ್ತೊಂದು ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಸಂದರ್ಭದಲ್ಲೂ ಎಲ್ಲೆಡೆ ಅದೇ ಮಾತು.

ಈ ನಡುವೆ, ಆಯವ್ಯಯ ಮಂಡಿಸಿದ ಬಿ.ಎಸ್. ಯಡಿಯೂರಪ್ಪ ಮಹಿಳೆಯರ ಸಮಾನತೆ ಮತ್ತು ಸಬಲೀಕರಣಕ್ಕೆ ಒತ್ತು ನೀಡುವ ಮೂಲಕ, ಮೊದಲ ಬಾರಿಗೆ ಮಹಿಳಾ ಸಮುದಾಯದ ಆರೈಕೆ- ಓಲೈಕೆಗೆ ಮುಂದಾಗಿದ್ದಾರೆ. ಮಹಿಳಾ ಉದ್ದೇಶಿತ ಯೋಜನೆಗಳಿಗೆ ₹ 37,188 ಕೋಟಿ ಅನುದಾನ ಒದಗಿಸಿದ್ದಾರೆ.

ಬೆಂಗಳೂರು ಸೇರಿದಂತೆ ಇತರ ಮಹಾನಗರಗಳಲ್ಲಿರುವ ಅಂಗನವಾಡಿಗಳನ್ನು ಶಿಶುಪಾಲನಾ ಕೇಂದ್ರಗಳಾಗಿ ಮೇಲ್ದರ್ಜೆಗೆ ಏರಿಸುವ ಮೂಲಕ ಹೊಸ ಸ್ವರೂಪ ನೀಡಲಾಗುವುದು. ಅಲ್ಲದೆ, ಜಿಲ್ಲಾ ಕೇಂದ್ರಗಳಲ್ಲಿ ತಲಾ ಎರಡು ಪ್ರಮುಖ ಸರ್ಕಾರಿ ಕಚೇರಿಗಳಲ್ಲಿ ಶಿಶುಪಾಲನಾ ಕೇಂದ್ರ ಆರಂಭಿಸಲಾಗುತ್ತಿದೆ. ದುಡಿಯುವ ಮಹಿಳೆಯರ ಮಕ್ಕಳನ್ನು ಗಮನದಲ್ಲಿಟ್ಟು ಈ ಕೇಂದ್ರಗಳನ್ನು ತೆರೆಯುವುದು ಸರ್ಕಾರದ ಉದ್ದೇಶ.

ಶೇ 4ರ ಬಡ್ಡಿ ದರದಲ್ಲಿ ಸಾಲ ಸೌಲಭ್ಯ ಒದಗಿಸುವ ಮೂಲಕ ಉದ್ಯಮ ಕ್ಷೇತ್ರದತ್ತ ಮಹಿಳೆಯರನ್ನು ಆಕರ್ಷಿಸಲು ಯೋಜನೆ ಬಜೆಟ್‌ನಲ್ಲಿದೆ. ಆಸ್ಪತ್ರೆ, ವೈದ್ಯಕೀಯ, ಆರೈಕೆ ಮತ್ತಿತರ ಸೇವಾ ವಲಯಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಮಹಿಳಾ ಉದ್ಯಮಿಗಳಿಗೆ ಮಹಿಳಾ ಅಭಿವೃದ್ಧಿ ನಿಗಮ ಅಥವಾ ಹಣಕಾಸು ಸಂಸ್ಥೆಯಿಂದ ಸರ್ಕಾರ ಸಾಲ ಸೌಲಭ್ಯ ಒದಗಿಸಲಿದೆ. ಗ್ರಾಮೀಣ ಮಹಿಳಾ ಸ್ವಸಹಾಯ ಸಂಘ, ಕೇಟರಿಂಗ್, ಸ್ವಚ್ಛತಾ ಕಾರ್ಯ, ಕೋಳಿ ಸಾಕಣೆ, ಕುರಿ ಸಾಕಣೆ, ನಿರ್ಮಾಣ ಕಾರ್ಯಗಳ ಮೂಲಕ ಸ್ವ ಉದ್ಯೋಗ ಕಲ್ಪಿಸಲು ಪಂಚಾಯತ್‌ರಾಜ್ ಸಂಸ್ಥೆಗಳ ಮೂಲಕ ಸರ್ಕಾರ ನೆರವು ನೀಡಲಿದೆ.

ಎಲ್ಲ ಪೊಲೀಸ್ ಠಾಣೆಗಳಲ್ಲಿ ನಿರ್ಭಯಾ ಯೋಜನೆಯಡಿ ಸಹಾಯ ಕೇಂದ್ರಗಳ ಸ್ಥಾಪನೆ, ಬೆಂಗಳೂರು ನಗರ ಸಾರ್ವಜನಿಕ ಸ್ಥಳಗಳಲ್ಲಿ ಕ್ಯಾಮೆರಾಗಳ ಅಳವಡಿಕೆ, ದೌರ್ಜನ್ಯಕ್ಕೆ ಒಳಗಾದ ಮಹಿಳೆಯರಿಗೆ ಸೂಕ್ತ ನೆರವು, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯಿಂದ ಪರವಾನಗಿ ಪಡೆದು ಕಾರ್ಯನಿರ್ವಹಿಸುವ ಮಹಿಳೆಯರಿಗೆ ನಿವೇಶನ, ಗೋದಾಮು, ಅಂಗಡಿ ಹಂಚಿಕೆಯಲ್ಲಿ ಶೇ10ರಷ್ಟು ಮೀಸಲಾತಿ, ಮಹಿಳಾ ವಾಣಿಜ್ಯ ಉದ್ಯಮಿಗಳನ್ನು ಬೆಂಬಲಿಸಲು ಎಲಿವೇಟ್ ವುಮೆನ್ ಎಂಟರ್‌ಪ್ರೀನರ್‌ಶಿಪ್ ಸೇರಿದಂತೆ ವಿವಿಧ ಯೋಜನೆಗಳಿಗೆ ಅನುದಾನ ಒದಗಿಸಲಾಗಿದೆ.

ಮಹಿಳೆಯರಿಗಾಗಿ ಉತ್ತೇಜನ

- 'ಸಂಜೀವಿನಿ' ಯೋಜನೆ ಅಡಿ ಗ್ರಾಮೀಣ ಮಹಿಳಾ ಸ್ವಸಹಾಯ ಸಂಘಗಳ ಮೂಲಕ 60 ಸಾವಿರ ಮಹಿಳೆಯರಿಗೆ ಸ್ವಯಂ ಉದ್ಯೋಗದ ಅವಕಾಶ
- ಹಪ್ಪಳ, ಉಪ್ಪಿನಕಾಯಿ, ರೊಟ್ಟಿ, ಮಸಾಲೆಪುಡಿ ಮತ್ತಿತರ ಆಹಾರ ಪದಾರ್ಥಗಳ ಸಣ್ಣ ಉದ್ಯಮಗಳಿಗೆ ಆಹಾರ ಸುರಕ್ಷತೆ, ಪ್ಯಾಕೆಜಿಂಗ್, ಬ್ರಾಂಡಿಂಗ್, ರಸ್ತೆ ಬದಿ ಮಳಿಗೆಗಳು ಮತ್ತು ಆನ್‌ಲೈನ್ ಮೂಲಕ ಮಾರುಕಟ್ಟೆ
- ಉದ್ಯೋಗಸ್ಥ ಮಹಿಳೆಯರ ಮಕ್ಕಳ ಪಾಲನೆಗೆ ಜಿಲ್ಲಾ ಮಟ್ಟದಲ್ಲಿ 2 ಶಿಶುಪಾಲನಾ ಕೇಂದ್ರ ಸ್ಥಾಪನೆ
- ಮಹಿಳಾ ಉದ್ಯಮಿಗಳನ್ನು ಪ್ರೋತ್ಸಾಹಿಸಲು ಶೇ 4 ಬಡ್ಡಿ ದರದಲ್ಲಿ ಸಾಲ ಸೌಲಭ್ಯ
- ಸರ್ಕಾರಿ ನೌಕರರಿಯಲ್ಲಿರುವ ಮಹಿಳೆಯರಿಗೆ ಹೆರಿಗೆ ರಜೆ 6 ತಿಂಗಳು ಜೊತೆಗೆ ಸೇವಾವಧಿಯಲ್ಲಿ 6 ತಿಂಗಳು ಮಕ್ಕಳ ಆರೈಕೆ ರಜೆ
- 'ವನಿತಾ ಸಂಗಾತಿ'- ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರಿಗೆ ರಿಯಾಯಿತಿ ದರದಲ್ಲಿ ಬಸ್ ಪಾಸ್
- ಎಲ್ಲಾ ಪೊಲೀಸ್ ಠಾಣೆಗಳಲ್ಲಿ ನಿರ್ಭಯಾ ಸಹಾಯ ಕೇಂದ್ರ
- ಪ್ರತಿ ತಾಲ್ಲೂಕಿನಲ್ಲಿ 10ರಂತೆ 2,260 ಕಿರು ಉದ್ದಿಮೆ ಮೂಲಕ ಉತ್ತೇಜನ.

'ಆರೋಗ್ಯ'ಕ್ಕೆ ಏನೇನು?

- ಶಿವಮೊಗ್ಗ ಮತ್ತು ಮೈಸೂರಿನಲ್ಲಿ ₹100 ಕೋಟಿ ವೆಚ್ಚದಲ್ಲಿ ಪ್ರಾದೇಶಿಕ ಕ್ಯಾನ್ಸರ್ ಚಿಕಿತ್ಸಾ (ಕಿದ್ವಾಯಿ ಸಂಸ್ಥೆಯ ಮಾದರಿಯಲ್ಲಿ) ಕೇಂದ್ರಗಳ ಆರಂಭ.
- ಮಹಿಳೆಯರಲ್ಲಿ ಪ್ರಾರಂಭಿಕ ಹಂತದಲ್ಲೇ ಕ್ಯಾನ್ಸರ್ ಪತ್ತೆ ಮಾಡಬೇಕೆಂಬ ಉದ್ದೇಶದಿಂದ ರಾಜ್ಯದಲ್ಲಿ ಮೂರು ಸುಸಜ್ಜಿತ ಸಂಚಾರಿ ಪ್ರಯೋಗಾಲಯಗಳ ಆರಂಭ. ಇದಕ್ಕಾಗಿ ₹11 ಕೋಟಿ ವೆಚ್ಚ.
- ಕೋವಿಡ್-19 ಅವಧಿಯಲ್ಲಿ ಸೃಜಿಸಿದ ವೈದ್ಯಕೀಯ ಸೌಕರ್ಯಗಳ ಸದ್ಬಳಕೆಗಾಗಿ ರಾಜ್ಯದ 19 ಜಿಲ್ಲಾ ಹಾಗೂ 100 ತಾಲ್ಲೂಕು ಆಸ್ಪತ್ರೆಗಳಲ್ಲಿ ಕ್ರಮವಾಗಿ 25 ಮತ್ತು 6 ಹಾಸಿಗೆ ಸಾಮರ್ಥ್ಯವುಳ್ಳ ತೀವ್ರ ನಿಗಾ ಘಟಕಗಳ ಸ್ಥಾಪನೆ. ಇದಕ್ಕೆ ₹60 ಕೋಟಿ ಅನುದಾನ.
- ಎನ್.ಎ.ಬಿ.ಎಲ್. ಮಾನಕಗಳಿಗೆ ಅನುಸಾರವಾಗಿ ₹ 2 ಕೋಟಿ ವೆಚ್ಚದಲ್ಲಿ ರಾಜ್ಯದ ನಾಲ್ಕು ಪ್ರಾದೇಶಿಕ ಆಹಾರ ಸುರಕ್ಷತಾ ಪ್ರಯೋಗಾಲಯಗಳನ್ನು ಮೇಲ್ದರ್ಜೆಗೇರಿಸಲು ಒತ್ತು.
- ₹1 ಕೋಟಿ ವೆಚ್ಚದಲ್ಲಿ ಆ್ಯಂಟಿ-ಮೈಕ್ರೋಬಿಯಲ್ ರೆಸಿಸ್ಟೆನ್ಸ್ ಘಟಕ ಪ್ರಾರಂಭ.
- ಕೋವಿಡ್ ಸಂದರ್ಭದಲ್ಲಿ ಆರಂಭಿಸಲಾದ ಟೆಲಿ-ಐಸಿಯು ಸೌಲಭ್ಯಗಳನ್ನು ಬಲಪಡಿಸಿ, ವಿಶೇಷ ತಜ್ಞರ ಕೊರತೆ ನೀಗಿಸಲು ₹ 2 ಕೋಟಿ ಅನುದಾನ ಮೀಸಲು.
- 2021-22ನೇ ಸಾಲಿನಲ್ಲಿ ಬೆಂಗಳೂರು, ಮೈಸೂರು, ಬಳ್ಳಾರಿ ಮತ್ತು ಹುಬ್ಬಳ್ಳಿಯ ವೈದ್ಯಕೀಯ ವಿಜ್ಞಾನ ಸಂಸ್ಥೆಗಳಲ್ಲಿ ತುರ್ತು ಚಿಕಿತ್ಸಾ ವಿಭಾಗಗಳ ಆರಂಭ. ಇದಕ್ಕಾಗಿ ₹ 5 ಕೋಟಿ ಹಂಚಿಕೆ.
- ದಾವಣಗೆರೆಯಲ್ಲಿ ₹ 20 ಕೋಟಿ ವೆಚ್ಚದಲ್ಲಿ ಜಯದೇವ ಹೃದ್ರೋಗ ವಿಜ್ಞಾನ ಸಂಸ್ಥೆಯ ಉಪಕೇಂದ್ರ ಸ್ಥಾಪನೆ. ಇದು 50 ಹಾಸಿಗೆಗಳ ಸಾಮರ್ಥ್ಯ ಹೊಂದಿರಲಿದೆ.
- ಮೈಸೂರು ವೈದ್ಯಕೀಯ ವಿಜ್ಞಾನ ಸಂಸ್ಥೆಯಲ್ಲಿ ಟ್ರಾಮಾ ಕೇರ್ ಕೇಂದ್ರ
- ಚಿತ್ರದುರ್ಗ ಜಿಲ್ಲೆಯಲ್ಲಿ ವೈದ್ಯಕೀಯ ಕಾಲೇಜು ಸ್ಥಾಪನೆ.

100 ಪೊಲೀಸ್ ಠಾಣೆಗಳಿಗೆ ಹೊಸ ಕಟ್ಟಡ

- ಮುಂದಿನ ಐದು ವರ್ಷಗಳಲ್ಲಿ ₹ 200 ಕೋಟಿ ವೆಚ್ಚದಲ್ಲಿ 100 ಪೊಲೀಸ್ ಠಾಣೆಗಳಿಗೆ ಹೊಸ ಕಟ್ಟಡ ನಿರ್ಮಾಣ ಗುರಿ. ಇದಕ್ಕಾಗಿ ಪ್ರಸಕ್ತ ವರ್ಷ ₹ 25 ಕೋಟಿ ಅನುದಾನ
- ಪೊಲೀಸ್ ಕ್ಷೇಮಾಭಿವೃದ್ಧಿಗಾಗಿ ₹2,740 ಕೋಟಿ ಮೊತ್ತದಲ್ಲಿ ಪೊಲೀಸ್ ಗೃಹ-2025 ಯೋಜನೆ ಪ್ರಾರಂಭವಾಗಿದ್ದು, 10,032 ವಸತಿಗೃಹಗಳ ನಿರ್ಮಾಣ ಗುರಿ
- ಹಾವೇರಿ ಜಿಲ್ಲೆಯ ಶಿಗ್ಗಾಂವಿ ತಾಲ್ಲೂಕಿನಲ್ಲಿರುವ ರಾಜ್ಯ ಮೀಸಲು ಪೊಲೀಸ್ ಪಡೆಯ (ಕೆಎಸ್‌ಆರ್‌ಪಿ) 10ನೇ ಬೆಟಾಲಿಯನ್ ಅಭಿವೃದ್ಧಿಗೆ ₹ 8 ಕೋಟಿ ಅನುದಾನ
- ಕೊಡಗು ಮತ್ತು ಹಾವೇರಿ ಜಿಲ್ಲೆಯಲ್ಲಿ ನೂತನ ಪೊಲೀಸ್ ಸಂಕೀರ್ಣ ನಿರ್ಮಿಸಲು ತಲಾ ₹ 8 ಕೋಟಿ ಹಂಚಿಕೆ
- ರಾಜ್ಯ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆಯಲ್ಲಿ ಕೆ-ಸೇಫ್ 2 ಯೋಜನೆ ಪರಿಷ್ಕರಿಸಿ, ಮುಂದಿನ ಐದು ವರ್ಷಗಳಲ್ಲಿ ಅನುಷ್ಠಾನ
- ಕರಾವಳಿ ಕಾವಲು ಪಡೆಯನ್ನು ಆಧುನಿಕ ತಂತ್ರಜ್ಞಾನದ ಮೂಲಕ ಬಲಪಡಿಸಲು ₹ 2 ಕೋಟಿ ಅನುದಾನ
- ಕಾರಾಗೃಹಗಳಿಂದಲೇ ವಿಡಿಯೊ ಕಾನ್ಫರೆನ್ಸ್ ಮೂಲಕ ಕೈದಿಗಳನ್ನು ನ್ಯಾಯಾಲಯ ಕಲಾಪಕ್ಕೆ ಹಾಜರುಪಡಿಸಲು ಬೇಕಾದ ತಾಂತ್ರಿಕ ವ್ಯವಸ್ಥೆ ರೂಪಿಸಲು ₹ 15 ಕೋಟಿ ಅನುದಾನ
- ಮಾದಕ ವಸ್ತುಗಳ ವಿರುದ್ಧ ಸಾರ್ವಜನಿಕರಿಗೆ ಅರಿವು ಮೂಡಿಸಲು ಹೊಸ ಕಾರ್ಯಕ್ರಮ
- ಹುಬ್ಬಳ್ಳಿ ಹಾಗೂ ಬಳ್ಳಾರಿಯಲ್ಲಿ ವಿಧಿ ವಿಜ್ಞಾನ ಪ್ರಯೋಗಾಲಯದ ಪ್ರಾದೇಶಿಕ ಕೇಂದ್ರಗಳ ಆರಂಭ

ಸಾರಿಗೆ ಇಲಾಖೆ

- ವಾಹನಗಳ ಮಾಲೀಕತ್ವ ವರ್ಗಾವಣೆ, ಸರಕು ಸಾಗಣೆ ರಹದಾರಿ ಹಾಗೂ ವಾಹನಗಳ ಅರ್ಹತಾ ಪತ್ರ ನೀಡುವ ಸೇವೆಗಳನ್ನು ಸಂಪರ್ಕರಹಿತ ಹಾಗೂ ನಗದುರಹಿತವಾಗಿ ಮಾಡಲು ಕ್ರಮ
- ವಾಹನ ನೋಂದಣಿ ಹಾಗೂ ಅನುಜ್ಞಾ ಪತ್ರ ಸೇವೆಗಳನ್ನು ಸಾರ್ವಜನಿಕರಿಗೆ ಒದಗಿಸಲು ಖಾಸಗಿ ಸಹಭಾಗಿತ್ವದಲ್ಲಿ ಕೇಂದ್ರಗಳ ಸ್ಥಾಪನೆ ಉದ್ದೇಶ
- ಸಾರಿಗೆ ಇಲಾಖೆಯ 66 ಕಚೇರಿಗಳ ಹಳೆ ದಾಖಲಾತಿಗಳನ್ನು ಡಿಜಿಟಲೀಕರಣಗೊಳಿಸಿ, ಕಾಗದ ರಹಿತ ಕಚೇರಿ ಮಾಡುವ ಉದ್ದೇಶ
- ಕೇಂದ್ರ ಸರ್ಕಾರದ ಮಾರ್ಗಸೂಚಿ ಅನ್ವಯ ವಾಹನಗಳ ಗುಜರಿ ಸೌಲಭ್ಯ ಕಲ್ಪಿಸಲು ರಾಜ್ಯ ಸರ್ಕಾರದಿಂದ ಕ್ರಮ

'ರಾಷ್ಟ್ರೀಯ ಶಿಕ್ಷಣ ನೀತಿ'ಗೆ ಸಿಗದ ಮನ್ನಣೆ

ಶಿಕ್ಷಣ ಕ್ರಮವನ್ನೇ ಬದಲಿಸು ಉದ್ದೇಶಿತ 'ರಾಷ್ಟ್ರೀಯ ಹೊಸ ಶಿಕ್ಷಣ ನೀತಿ'ಯ ಅನುಷ್ಠಾನ ವಿಚಾರದಲ್ಲಿ ಆಯವ್ಯಯದಲ್ಲಿ ಯಾವುದೇ ಪ್ರಸ್ತಾವ ಇಲ್ಲದಿರುವುದು ಅಚ್ಚರಿ ಮೂಡಿಸಿದೆ. ಅಷ್ಟೇ ಅಲ್ಲ, ಪ್ರಸಕ್ತ ಸಾಲಿನಲ್ಲಿ ಶೈಕ್ಷಣಿಕ ಕ್ಷೇತ್ರದ ಅಭಿವೃದ್ಧಿಗೆ ಆದ್ಯತೆ ನೀಡುವಂತೆ ಶಿಕ್ಷಣ ಇಲಾಖೆ ಮುಂದಿಟ್ಟದ್ದ ಯಾವುದೇ ಪ್ರಸ್ತಾವನೆಗಳ ಬಗ್ಗೆಯೂ ಉಲ್ಲೇಖ ಇಲ್ಲ.

'ನೀತಿಯ ಬಗ್ಗೆ ಶಿಕ್ಷಣ ಇಲಾಖೆಯ ಸಿಬ್ಬಂದಿಗೆ ಅರಿವು ಮೂಡಿಸುವ ಕಾರ್ಯಾಗಾರ ಹಮ್ಮಿಕೊಳ್ಳಲಾಗುವುದು' ಎಂದು ಬಜೆಟ್ ಭಾಷಣದಲ್ಲಿ ಹೇಳಿರುವುದು ಬಿಟ್ಟರೆ, ನೀತಿಯ ಅಳವಡಿಕೆ ನಿಟ್ಟಿನಲ್ಲಿ ನೀತಿ ನಿರೂಪಣೆಗೆ 'ಶಿಕ್ಷಣ ಆಯೋಗ' ಸ್ಥಾಪಿಸುವ ಬಗ್ಗೆ ಪ್ರಸ್ತಾಪಿಸಿಲ್ಲ. ಶೈಕ್ಷಣಿಕವಾಗಿ ಹಿಂದುಳಿದ ಕಲ್ಯಾಣ ಕರ್ನಾಟಕ ಭಾಗಕ್ಕೆ ಶಿಕ್ಷಕರ ನೇಮಕ, 50 ವರ್ಷ ಹಳೆಯದಾದ 14613 ಸರ್ಕಾರಿ ಕಿರಿಯ ಪ್ರಾಥಮಿಕ ಶಾಲಾ ಕಟ್ಟಡಗಳ ಹಾಗೂ 634 ಸರ್ಕಾರಿ ಪ್ರೌಢಶಾಲೆಗಳ ಕಟ್ಟಡ ನಿರ್ವಹಣೆಗೆ ಅನುದಾನ, ವಾರ್ಡ್ ಪಬ್ಲಿಕ್ ಶಾಲೆಗಳ ಸ್ಥಾಪನೆಗೆ ಕ್ರಮ ವಹಿಸುವುದು, ರಾಜ್ಯ ಸಾಕ್ಷರತಾ ಅಭಿಯಾನ ಕಾರ್ಯಕ್ರಮದ ಮೂಲಕ 30 ಸಾವಿರ ಅನಕ್ಷರಸ್ಥರಿಗೆ ವಿಶೇಷ ಅಭಿವೃದ್ಧಿ ಯೋಜನೆಯಡಿ ಸಾಕ್ಷರತಾ ಕಾರ್ಯಕ್ರಮ ರೂಪಿಸುವಂತೆ ಶಿಕ್ಷಣ ಇಲಾಖೆಯಿಂದ ಪ್ರಸ್ತಾವನೆ ಸಲ್ಲಿಸಲಾಗಿತ್ತು.

2020-21ನೇ ಸಾಲಿನಲ್ಲಿ ಶಿಕ್ಷಣ ಇಲಾಖೆಗೆ ₹ 24 ಸಾವಿರ ಕೋಟಿ ಹಂಚಿಕೆ ಮಾಡಲಾಗಿತ್ತು. ಕೋವಿಡ್ ಕಾರಣಕ್ಕೆ ಅದರಿಂದ ₹ 2 ಸಾವಿರ ಕೋಟಿ ಕಡಿತಗೊಳಿಸಲಾಗಿತ್ತು. ಈಬಾರಿಯೂ ₹ 24 ಸಾವಿರ ಕೋಟಿ ಹಂಚಿಕೆ ಮಾಡಲಾಗಿದೆ. ಅದರಲ್ಲಿ ₹ 21 ಸಾವಿರ ಕೋಟಿ ಯೋಜನೇತರಕ್ಕೆ ವೆಚ್ಚವಾಗುತ್ತದೆ.

ಕ್ವಾಂಟಂ ತಂತ್ರಜ್ಞಾನ ಅಭಿವೃದ್ಧಿಗೆ ₹ 10 ಕೋಟಿ ಮೀಸಲಿಟ್ಟು 'ಸಂಶೋಧನಾ ಪಾರ್ಕ್' ಸ್ಥಾಪನೆಗೆ ನಿರ್ಧರಿಸಲಾಗಿದೆ. ಗ್ರಾಮೀಣ ಮತ್ತು ನಗರ ಪ್ರದೇಶಗಳ ಮಕ್ಕಳ ನಡುವೆ ಡಿಜಿಟಲ್ ಅಂತರ ಅಳಿಸಿಹಾಕುವ ಹಾಗೂ ಸ್ಮಾರ್ಟ್‌ಕ್ಲಾಸ್ ರೂಮ್‌ಗಳನ್ನು ಅಭಿವೃದ್ಧಿಪಡಿಸುವ ಅಂಶವನ್ನು ಮುಂಗಡ ಪತ್ರದಲ್ಲಿ ಘೋಷಿಸಲಾಗಿದೆ. ಸಮಗ್ರ ಕಲಿಕಾ ನಿರ್ವಹಣಾ ವ್ಯವಸ್ಥೆ (ಎಲ್‌ಎಂಎಸ್) ಅನುಷ್ಠಾನಕ್ಕೆ ಅನುಕೂಲ. ಈ ಕಾರ್ಯಕ್ರಮಕ್ಕೆ ₹ 50 ಕೋಟಿ ಅನುದಾನ ಘೋಷಿಸಲಾಗಿದೆ.

ಸಾಮರ್ಥ್ಯ-ಸಾರಥ್ಯ ಕಾರ್ಯಕ್ರಮ: ಕೇಂದ್ರ ಮತ್ತು ರಾಜ್ಯ ಆಡಳಿತ ಸೇವೆಗಳಲ್ಲಿ ಹಾಗೂ ರೈಲ್ವೆ-ಬ್ಯಾಂಕಿಂಗ್ ನೇಮಕಾತಿಗಳಲ್ಲಿ ಕನ್ನಡಿಗರಿಗೆ ಹೆಚ್ಚೆಚ್ಚು ಅವಕಾಶ ಸಿಗುವಂತೆ ಮಾಡಲು 'ಸಾಮರ್ಥ್ಯ-ಸಾರಥ್ಯ' ಎಂಬ ವಿನೂತ ಕಾರ್ಯಕ್ರಮವನ್ನು ಬಜೆಟ್‌ನಲ್ಲಿ ಪ್ರಕಟಿಸಲಾಗಿದೆ. ಐದು ಲಕ್ಷ ವಿದ್ಯಾರ್ಥಿಗಳಿಗೆ ತರಬೇತಿ ನೀಡಲು ₹ 5 ಕೋಟಿ ಅನುದಾನ ಘೋಷಿಸಲಾಗಿದೆ. ಇನ್ನು ಉದ್ಯೋಗ ಮಾಡಿಕೊಂಡು ವ್ಯಾಸಂಗ ಮಾಡುವವರಿಗಾಗಿ ಆಯ್ದ ಮಹಾನಗರಪಾಲಿಕೆಗಳ ವ್ಯಾಪ್ತಿಯಲ್ಲಿ ಸಂಜೆ ಕಾಲೇಜುಗಳನ್ನು ಆರಂಭಿಸುವ ಬಗ್ಗೆ ಘೋಷಿಸಿರುವುದು ಮಹತ್ವದ ನಿರ್ಧಾರ.

ಮಹಿಳಾ ಕೇಂದ್ರಿತ ಯೋಜನೆಗಳ ಅನುದಾನಕ್ಕೆ ಕತ್ತರಿ

ಅಂತರರಾಷ್ಟ್ರೀಯ ಮಹಿಳಾ ದಿನದಂದು ಬಜೆಟ್ ಮಂಡಿಸಿರುವ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು, ಮಹಿಳೆಯರಿಗಾಗಿ ಹಲವು ಹೊಸ ಯೋಜನೆಗಳನ್ನು ಘೋಷಿಸಿದ್ದಾರೆ. ಆದರೆ, ಮಹಿಳೆಯರೇ ನೇರವಾಗಿ ಫಲಾನುಭವಿಗಳಾಗಿರುವ ಕಾರ್ಯಕ್ರಮಗಳಿಗೆ ಈ ಹಿಂದಿನ ಬಜೆಟ್‌ಗಳಲ್ಲಿ ಘೋಷಿಸಿದ್ದಕ್ಕಿಂತ ಕಡಿಮೆ ಅನುದಾನವನ್ನು 2021-22ರ ಬಜೆಟ್‌ನಲ್ಲಿ ಘೋಷಿಸಿದ್ದಾರೆ



* ಪರಿಶಿಷ್ಟ ಜಾತಿಯವರಿಗೆ ಸ್ವಸಹಾಯ ಗುಂಪುಗಳ ಮೂಲಕ ವಿಸ್ತೃತ ಸಾಲ ಸಹಾಯ
** ಪರಿಶಿಷ್ಟ ಪಂಗಡದವರಿಗೆ ಸ್ವಸಹಾಯ ಗುಂಪುಗಳ ಮೂಲಕ ವಿಸ್ತೃತ ಸಾಲ ಸಹಾಯ

ಮಾಹಿತಿ: ಜಯಸಿಂಹ ಆರ್. ಗ್ರಾಫಿಕ್ಸ್: ಶಶಿಕಿರಣ ದೇಸಾಯಿ ಬಿ.
ಆಧಾರ: ಮಹಿಳಾ ಉದ್ದೇಶಿತ ಆಯವ್ಯಯ 2021-22

'ಪರ್ವ' ನಾಟಕ ಪ್ರದರ್ಶನಕ್ಕೆ ₹ 1 ಕೋಟಿ

ಕಾದಂಬರಿಕಾರ ಎಸ್.ಎಲ್. ಭೈರಪ್ಪ ಅವರ 'ಪರ್ವ' ಕಾದಂಬರಿಯ ನಾಟಕ ಪ್ರದರ್ಶನಕ್ಕೆ ಸರ್ಕಾರವು ಈ ಬಾರಿಯ ಬಜೆಟ್‌ನಲ್ಲಿ ₹ 1 ಕೋಟಿ ಅನುದಾನ ಘೋಷಿಸಿದೆ.

ರಂಗಾಯಣ ಘಟಕಗಳ ಮೂಲಕ ರಾಜ್ಯದಾದ್ಯಂತ ಈ ನಾಟಕದ ಪ್ರದರ್ಶನ ಏರ್ಪಡಿಸಲಾಗುವುದು ಎಂದು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ತಿಳಿಸಿದ್ದಾರೆ. ಮೈಸೂರು ರಂಗಾಯಣದ ನಿರ್ದೇಶಕ ಅಡ್ಡಂಡ ಸಿ. ಕಾರ್ಯಪ್ಪ ಅವರು ಈ ಯೋಜನೆಯ ರೂವಾರಿಯಾಗಿದ್ದಾರೆ. ರಂಗಭೂಮಿ ಕಲಾವಿದ, ನಟ ಪ್ರಕಾಶ್ ಬೆಳವಾಡಿ ಅವರು 'ಪರ್ವ' ಕಾದಂಬರಿಯನ್ನು ರಂಗಭೂಮಿಗೆ ತರುವ ಜವಾಬ್ದಾರಿ ವಹಿಸಿಕೊಂಡಿದ್ದಾರೆ.

- ಆದಿಕವಿ ಪಂಪನಿಂದ ಮುದ್ರಣ ಕಾಲಘಟ್ಟದವರೆಗಿನ ಎಲ್ಲ ಕೃತಿಗಳನ್ನು ಡಿಜಿಟಲೀಕರಿಸಿ, ವಿಕಿಪೀಡಿಯಾ-ವಿಕಿಸೋರ್ಸ್‌ಗೆ ಅಳವಡಿಕೆ.
- ಹಾವೇರಿಯಲ್ಲಿ ನಡೆಯಲಿರುವ 86ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಸಹಕಾರ.
- ಹಿಂದೂಸ್ತಾನಿ ಸಂಗೀತ ಕ್ಷೇತ್ರದಲ್ಲಿ ಅನನ್ಯ ಸೇವೆ ಸಲ್ಲಿಸಿರುವ ಭೀಮಸೇನ್ ಜೋಶಿಯವರ 100ನೇ ಜನ್ಮದಿನಾಚರಣೆ ಅಂಗವಾಗಿ ರಾಷ್ಟ್ರೀಯ ಸಂಗೀತೋತ್ಸವ ಹಾಗೂ ವಿಚಾರಸಂಕಿರಣ ಆಯೋಜನೆ.

ನಾಲ್ಕು ವಿಭಾಗಗಳಲ್ಲಿ 'ತಾಯಂದಿರ ಎದೆಹಾಲಿನ ಬ್ಯಾಂಕ್'

ಪ್ರಸಕ್ತ ಸಾಲಿನ ಬಜೆಟ್‌ನಲ್ಲಿ ಮಕ್ಕಳ ಉದ್ದೇಶಿತ ಯೋಜನೆಗಳಿಗೆ ಒಟ್ಟು ₹37,527 ಕೋಟಿ ಅನುದಾನ ಒದಗಿಸಲಾಗಿದೆ. ತಾಯಿ ಹಾಲಿನ ಕೊರತೆ ಪರಿಣಾಮ ನವಜಾತ ಶಿಶುಗಳು ಅಪೌಷ್ಟಿಕತೆಯಿಂದ ಬಳಲುವುದನ್ನು ತಡೆಗಟ್ಟುವ ಸಲುವಾಗಿ ರಾಜ್ಯದ ನಾಲ್ಕು ವಿಭಾಗಗಳಲ್ಲಿ ಒಟ್ಟು ₹ 2.5 ಕೋಟಿ ವೆಚ್ಚದಲ್ಲಿ 'ತಾಯಂದಿರ ಎದೆಹಾಲಿನ ಬ್ಯಾಂಕ್' ಸ್ಥಾಪಿಸಲು ಒತ್ತು ನೀಡಲಾಗಿದೆ.

- ಗರ್ಭಿಣಿಯರ ಸ್ಕ್ಯಾನಿಂಗ್ ಉತ್ತೇಜಿಸಲು 'ಚಿಗುರು' ಕಾರ್ಯಕ್ರಮ. ಇದಕ್ಕಾಗಿ ₹ 10 ಕೋಟಿ.
- ನವಜಾತ ಶಿಶುಗಳಲ್ಲಿ ಕಂಡುಬರುವ ಅನುವಂಶೀಯ ಮೆಟಾಬಾಲಿಕ್ ಕಾಯಿಲೆಯನ್ನು ಮೂಲದಲ್ಲೇ ಪತ್ತೆ ಮಾಡಲು ಬಳ್ಳಾರಿ ಮತ್ತು ಬೆಂಗಳೂರಿನಲ್ಲಿ ಪ್ರಯೋಗಾಲಯಗಳ ಸ್ಥಾಪನೆ. ಇದಕ್ಕೆ ₹10 ಕೋಟಿ ಅನುದಾನ.
- ತಾಯಿ ಮತ್ತು ಮಗುವನ್ನು ಅಪೌಷ್ಟಿಕತೆಯಿಂದ ರಕ್ಷಿಸಲು ₹5 ಕೋಟಿ ವೆಚ್ಚದಲ್ಲಿ 'ಪೋಷಣೆ ಮತ್ತು ಜೀವನೋಪಾಯ' ಕಾರ್ಯಕ್ರಮ.
- ಶೇ 75ಕ್ಕಿಂತ ಹೆಚ್ಚಿನ ಮನೋವೈಕಲ್ಯ ಹೊಂದಿರುವ ಮಕ್ಕಳಿಗೆ ಸದ್ಯ ನೀಡುತ್ತಿರುವ ಮಾಸಾಶನವನ್ನು ₹ 1,400 ರಿಂದ ₹ 2,000ಕ್ಕೆ ಹೆಚ್ಚಿಸುವುದು.

ಸರ್ಕಾರಿ ಶಾಲೆ-ಕಾಲೇಜು: ಏನೇನು ಯೋಜನೆ, ಎಷ್ಟು ಅನುದಾನ?

- ಸರ್ಕಾರಿ ಪ್ರೌಢಶಾಲೆ ಮತ್ತು ಪದವಿಪೂರ್ವ ಕಾಲೇಜುಗಳ ಮೂಲಸೌಕರ್ಯ ಅಭಿವೃದ್ಧಿಗೆ ₹150 ಕೋಟಿ
- ಸರ್ಕಾರಿ ಶಾಲೆಗಳಿಗೆ ಪೀಠೋಪಕರಣಗಳು ಮತ್ತು ಕಲಿಕಾ ಸಾಮಗ್ರಿಗಳ ವಿತರಣೆಗೆ ₹50 ಕೋಟಿ
- ಆಯ್ದ 50 ಶಾಲೆಗಳ ಅಭಿವೃದ್ಧಿಗೆ ₹ 100 ಕೋಟಿ.
- 4,687 ಪ್ರೌಢಶಾಲೆಗಳಿಗೆ ಲ್ಯಾಪ್‌ಟಾಪ್ ಮತ್ತು ಪ್ರೊಜೆಕ್ಟರ್‌ಗಳನ್ನು ಈಗಾಗಲೇ ನೀಡಲಾಗಿದ್ದು 2,351 ಸರ್ಕಾರಿ ಶಾಲೆಗಳಲ್ಲಿ ₹8 ಲಕ್ಷ ವೆಚ್ಚದಲ್ಲಿ ಕಂಪ್ಯೂಟರ್ ಲ್ಯಾಬ್‌ಗಳನ್ನು ಸ್ಥಾಪಿಸಲಾಗಿದೆ. ಉಳಿದ ಸರ್ಕಾರಿ ಶಾಲೆಗಳಿಗೂ ಈ ಸೌಲಭ್ಯ ವಿಸ್ತರಣೆ.
- ಎಂಟು ಜ್ಞಾನಪೀಠ ಪುರಸ್ಕೃತರು ಕಲಿತ ಶಾಲೆಗಳ ಸಮಗ್ರ ಅಭಿವೃದ್ಧಿ.
- ಜಿಲ್ಲಾ ಕೇಂದ್ರಗಳಲ್ಲಿ ₹50 ಕೋಟಿ ವೆಚ್ಚದಲ್ಲಿ ಮೆಟ್ರಿಕ್ ನಂತರದ ಹಂತದ 50 ವಸತಿ ನಿಲಯ ಆರಂಭ. 5 ಸಾವಿರ ವಿದ್ಯಾರ್ಥಿಗಳಿಗೆ ಅನುಕೂಲ
- ದೃಷ್ಟಿ ದೋಷವುಳ್ಳ ವಿದ್ಯಾರ್ಥಿಗಳಿಗೆ ನೆರವಾಗಲು ಸರ್ಕಾರದ ಬ್ರೈಲ್ ಮುದ್ರಣಾಲಯದಲ್ಲಿ 'ಸುಶ್ರಾವ್ಯ' ಹೆಸರಿನ ಡಿಜಿಟಲ್ ಪುಸ್ತಕಗಳ ಬ್ಯಾಂಕ್ ಸ್ಥಾಪಿಸಿ ಶಾಲೆಗಳಿಗೆ ಪುಸ್ತಕ ಪೂರೈಕೆ
- ಪರಿಶಿಷ್ಟ ಪಂಗಡದವರ ಆಶ್ರಮ ಶಾಲೆಗಳಿಗೆ 'ವಾಲ್ಮೀಕಿ ಆಶ್ರಮ ಶಾಲೆ' ಎಂದು ಮರುನಾಮಕರಣ.
- ಬಿಬಿಎಂಪಿ ವ್ಯಾಪ್ತಿಯ ಸರ್ಕಾರಿ ಶಾಲೆಗಳ ನವೀಕರಣ ಮತ್ತು ದುರಸ್ತಿಗೆ ₹ 33 ಕೋಟಿ ಅನುದಾನ.
- ಕಟ್ಟಡ ನಿರ್ಮಾಣ ಕಾರ್ಮಿಕರ ಮಕ್ಕಳಿಗಾಗಿ 100 ಕಿತ್ತೂರು ರಾಣಿ ಶಿಶುಪಾಲನಾ ಕೇಂದ್ರ.
- ಕೃಷಿ ವಿವಿಯಲ್ಲಿ ರೈತರ ಮಕ್ಕಳಿಗೆ ಶೇ 50ರಷ್ಟು ಮೀಸಲಾತಿ
- ಶಿವಮೊಗ್ಗದ ಆಯುರ್ವೇದ ಕಾಲೇಜು ಆಯುಷ್ ವಿಶ್ವವಿದ್ಯಾಲಯವಾಗಿ ಉನ್ನತೀಕರಣ
- ರಾಜ್ಯದ 4 ವಿಭಾಗಗಳಲ್ಲಿ ಮೊರಾರ್ಜಿ ವಸತಿ ಶಾಲೆ.
- ರಾಜ್ಯದ 400 ಸರ್ಕಾರಿ ಉರ್ದು ಶಾಲೆಗಳಲ್ಲಿ ಇಂಗ್ಲಿಷ್ ಮಾಧ್ಯಮ ಬೋಧನೆಗೆ ಅವಕಾಶ

ಉನ್ನತ ಶಿಕ್ಷಣ

- 430 ಸರ್ಕಾರಿ ಪ್ರಥಮ ದರ್ಜೆ ಕಾಲೇಜು, 87 ಸರ್ಕಾರಿ ಪಾಲಿಟೆಕ್ನಿಕ್, 14 ಸರ್ಕಾರಿ ಎಂಜಿನಿಯರಿಂಗ್ ಕಾಲೇಜುಗಳಲ್ಲಿ ಡಿಜಿಟಲ್ ಕಲಿಕೆಗೆ ಅನುಕೂಲವಾಗುವಂತೆ ಸ್ಮಾರ್ಟ್ ಕ್ಲಾಸ್ ರೂಮ್‌ಗಳಾಗಿ ಪರಿವರ್ತಿಸಲು ₹50 ಕೋಟಿ
- ನುರಿತ ಮಾನವ ಸಂಪನ್ಮೂಲ ಅಭಿವೃದ್ಧಿಗೆ ಹಬ್ ಮತ್ತು ಸ್ಪೋಕ್ ಮಾದರಿಯಲ್ಲಿ 150 ಸರ್ಕಾರಿ ತರಬೇತಿ ಸಂಸ್ಥೆಗಳಿಗೆ ₹ 4,636 ಕೋಟಿ ಅನುದಾನ. ಇದರಲ್ಲಿ ₹ 4,080 ಕೋಟಿ ಟಾಟಾ ಟೆಕ್ನಾಲಜೀಸ್ ಲಿಮಿಟೆಡ್ ಭರಿಸಲಿದೆ.
- ಶಿಕ್ಷಕರ ತರಬೇತಿ ಕೇಂದ್ರಕ್ಕೆ ₹ 18 ಕೋಟಿ

ಸಾಮಾನ್ಯ ಮಹಿಳೆಗೆ ಸಹಾಯವಿಲ್ಲ

ವಿಶ್ಲೇಷಣೆ
ಶಿವಬಾಳಮ್ಮ ಕೊಂಡಗುಳಿ

ಈ ಬಜೆಟ್‌ನಲ್ಲಿ ಮಹಿಳಾ ಉದ್ಯಮಶೀಲತೆಗೆ ಹೆಚ್ಚು ಒತ್ತು ನೀಡಲಾಗಿದೆ. ಆದರೆ, ಸಾಮಾನ್ಯ ಮತ್ತು ಆರ್ಥಿಕವಾಗಿ ಸಂಕಷ್ಟದಲ್ಲಿರುವ ಮಹಿಳೆಯರಿಗೆ ಯಾವ ರೀತಿಯಿಂದಲೂ ಸಹಾಯವಾಗಲಾರದು.

ಪ್ರಸ್ತುತ ಕೋವಿಡ್ ಮತ್ತು ಖಾಸಗೀಕರಣದ ದಿನಗಳಲ್ಲಿ ಬಡ ಕುಟುಂಬದವರು ಹಾಗೂ ಮಹಿಳೆಯರು ದಿನನಿತ್ಯ ಹೊಟ್ಟೆ ತುಂಬಿಸಿಕೊಳ್ಳಲು ಪರದಾಡುತ್ತಿದ್ದಾರೆ. ಅವರಿಗಾಗಿ ಯಾವ ಯೋಜನೆಯೂ ಬಜೆಟ್‌ನಲ್ಲಿ ಇಲ್ಲ.

ಬೇರೆ ಬೇರೆ ಇಲಾಖೆಯಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಕೆಲಸ ಮಾಡುತ್ತಿರುವ ಆಶಾ, ಅಂಗನವಾಡಿ, ಬಿಸಿಯೂಟದ ಕಾರ್ಯಕರ್ತೆಯರು, ಸಫಾಯಿ ಕರ್ಮಚಾರಿಗಳಾಗಿ ದುಡಿಯುತ್ತಿರುವ ಮಹಿಳೆಯರಿಗೆ ಕನಿಷ್ಠ ವೇತನವನ್ನೂ ನೀಡದೆ ದುಡಿಸಿಕೊಳ್ಳಲಾಗುತ್ತಿದೆ. ಇದಕ್ಕೆ ಬಜೆಟ್‌ನಲ್ಲಿ ಪರಿಹಾರ ಸಿಕ್ಕಿಲ್ಲ.

ಮನೆಗೆಲಸ ಮಾಡಿ, ಕೂಲಿ ಮಾಡಿ ಬದುಕುವ ಮಹಿಳೆಯರು ಕೊರೊನಾದಿಂದಾಗಿ ವರ್ಷದಿಂದ ಕೆಲಸವಿಲ್ಲದೇ ಸಂಕಷ್ಟಕ್ಕೆ ಸಿಲುಕಿದ್ದಾರೆ. ಅಂತಹ ಮಹಿಳೆಯರಿಗೆ ಸಹಾಯವಾಗಲು ಉಚಿತ ಆರೋಗ್ಯ ಮತ್ತು ಉದ್ಯೋಗವನ್ನು ಖಾತ್ರಿ ಪಡಿಸುವ ಯಾವುದೇ ಅಂಶ ಇಲ್ಲ.

ದುಬಾರಿಯಾದ ಖಾಸಗಿ ಶಿಕ್ಷಣವನ್ನು ಪಡೆಯುವುದು ಮಹಿಳೆಯರಿಗೆ ಕಷ್ಟವಾಗಿದೆ. ಶಾಲಾ, ಕಾಲೇಜುಗಳಲ್ಲಿ ಬೋಧನಾ ಶುಲ್ಕ ಬಿಟ್ಟು ಬೇರೆಬೇರೆ ಶುಲ್ಕವೆಂದು ದುಡ್ಡು ಕಟ್ಟಿಸಿಕೊಳ್ಳುತ್ತಾರೆ. ಹೀಗಾಗಿ ಪೂರ್ಣವಾದ ಉಚಿತ ಶಿಕ್ಷಣ ಮಹಿಳೆಯರಿಗೆ ಇನ್ನೂ ತಲುಪುತ್ತಿಲ್ಲ. ಈ ಬಗ್ಗೆ ಬಜೆಟ್‌ನಲ್ಲಿ ಯಾವುದೇ ಪ್ರಸ್ತಾಪವಿಲ್ಲ.

ಅಲ್ಲದೆ, ಎಷ್ಟೇ ಕಷ್ಟಪಟ್ಟು ಕಲಿತರೂ ಉದ್ಯೋಗ ಖಾತ್ರಿ ಇಲ್ಲ. ವರ್ಷದಿಂದ ವರ್ಷಕ್ಕೆ ಉದ್ಯೋಗಾಕಾಂಕ್ಷಿಗಳು ಹೆಚ್ಚುತ್ತಿದ್ದಾರೆ. ಸರ್ಕಾರ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಬೇಕು ಮತ್ತು ಉದ್ಯೋಗಗಳನ್ನು ಸೃಷ್ಟಿಸಬೇಕು. ಈ ವಿಚಾರವಾಗಿಯೂ ಬಜೆಟ್ ಮೌನವಾಗಿದೆ.

ಬಹಳ ಜನ ಹೆಣ್ಣು ಮಕ್ಕಳು ಅಪೌಷ್ಟಿಕತೆ ಸೇರಿದಂತೆ ವಿವಿಧ ಗಂಭೀರ ಆರೋಗ್ಯ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಸರ್ಕಾರಿ ಆಸ್ಪತ್ರೆಯಲ್ಲಿ ಸೌಲಭ್ಯಗಳ ಕೊರತೆ ಎದ್ದು ಕಾಣುತ್ತಿದೆ. ಇದನ್ನು ಸರಿಪಡಿಸಲು ಆದ್ಯತೆ ನೀಡಬೇಕಾಗಿತ್ತು.

(ಲೇಖಕಿ: ಜಿಲ್ಲಾ ಸಂಚಾಲಕಿ, ಅಖಿಲ ಭಾರತ ಮಹಿಳಾ ಸಾಂಸ್ಕೃತಿಕ ಸಂಘಟನೆ, ವಿಜಯಪುರ)

ಅವೈಜ್ಞಾನಿಕ ಲಾಕ್‌ಡೌನ್‌ನ ಕರಿನೆರಳು

ವಿಶ್ಲೇಷಣೆ
ಡಾ. ಬಿ.ಶ್ರೀನಿವಾಸ ಕಕ್ಕಿಲ್ಲಾಯ

ಕೊರೊನಾ ಸೋಂಕಿನ ನೆಪದಲ್ಲಿ ಮಾಡಲಾದ ಅತ್ಯಾತುರದ, ಅತಿ ದೀರ್ಘ, ಅತಿ ಕಠಿಣ, ಅವೈಜ್ಞಾನಿಕ ಲಾಕ್‌ಡೌನ್‌ನ ಕರಿನೆರಳು ಮುಂಗಡ ಪತ್ರವನ್ನು ಇಡಿಯಾಗಿ ವ್ಯಾಪಿಸಿದೆ. ಬಹಳ ವರ್ಷಗಳ ಬಳಿಕ ರಾಜ್ಯವು ₹15,000 ಕೋಟಿಗೂ ಹೆಚ್ಚು ತೆರಿಗೆ ವರಮಾನವನ್ನು ಕಳೆದುಕೊಂಡಿದೆ. ಕೇಂದ್ರದಿಂದ ಬರಬೇಕಾದ ಹಣವೂ ಬಾರದಾಗಿದೆ. ಅಭಿವೃದ್ಧಿಯು ಶೇ 2.6ಕ್ಕೆ ಕುಸಿದಿದೆ. ಸಾಲದ ಹೊರೆ ಇನ್ನಷ್ಟು ಏರಿದೆ. ಇವಕ್ಕೆಲ್ಲ ಕೊರೊನಾ ವೈರಸ್ ಯಾ ಕೋವಿಡ್ ರೋಗ ಕಾರಣವಲ್ಲ, ಬದಲಿಗೆ ಲಾಕ್‌ಡೌನ್ ಎಂಬ ತಪ್ಪು ನಿರ್ಧಾರವೇ ಕಾರಣ.

ಎಲ್ಲ ತೆರಿಗೆಗಳನ್ನು ಕೇಂದ್ರವೇ ಏರಿಸುತ್ತಿರುವುದರಿಂದ ರಾಜ್ಯಕ್ಕೆ ಇನ್ನಷ್ಟು ಏರಿಸಲು ಅವಕಾಶ ಇಲ್ಲವಾಗಿ, ಹಣವನ್ನು ಕ್ರೋಡೀಕರಿಸುವುದು ಕಷ್ಟವಾಗಿದೆ. ಹೊಸ ಯೋಜನೆಗಳಿಗೆ ಹಣ ಇಲ್ಲದಂತಾಗಿದೆ.

ಕೊರೊನಾ ಹೆಸರಿನಲ್ಲಿ ₹5,300 ಕೋಟಿ ವೆಚ್ಚವಾಗಿದೆ ಎಂದು ಹೇಳಲಾಗಿದ್ದರೂ, ಅತಿ ಗಂಭೀರವಾಗಿ ಸಮಸ್ಯೆಗೀಡಾಗಿದ್ದ ಹೆಚ್ಚಿನ ರೋಗಿಗಳು ಖಾಸಗಿ ಆಸ್ಪತ್ರೆಗಳಲ್ಲಿ ಸ್ವಂತ ಖರ್ಚಿನಲ್ಲೇ ಚಿಕಿತ್ಸೆ ಪಡೆದಿರುವುದು ಎಲ್ಲರಿಗೂ ತಿಳಿದಿದೆ. ಆದ್ದರಿಂದ ಈ ಬಗ್ಗೆ ಶ್ವೇತಪತ್ರ ಬರಬೇಕಿದೆ.

ಪ್ರತೀ ವರ್ಷದಂತೆ ಕೆಲವು ಆರೋಗ್ಯ ಕೇಂದ್ರಗಳು ಹಾಗೂ ಆಸ್ಪತ್ರೆಗಳ ಸೌಲಭ್ಯವನ್ನು ಮೇಲ್ದರ್ಜೆಗೆ ಏರಿಸುವ ಬಗ್ಗೆ ಬಜೆಟ್‌ನಲ್ಲಿ ಹೇಳಲಾಗಿರುವುದನ್ನು ಬಿಟ್ಟರೆ, ಆರೋಗ್ಯ ಇಲಾಖೆಗೆ ಯಾವುದೇ ಗಣನೀಯ ಏರಿಕೆಯು ಕಂಡುಬರುತ್ತಿಲ್ಲ. ಲಾಕ್‌ಡೌನ್, ಶಾಲೆಗಳನ್ನು ಮುಚ್ಚುವುದು, ಬಿಸಿಯೂಟ ನಿಲ್ಲಿಸಿದ್ದರಿಂದ ರಾಜ್ಯದ ಮಕ್ಕಳು ಬಹಳಷ್ಟು ನರಳಿದ್ದು, ಮಕ್ಕಳ ಕುಪೋಷಣೆಯಲ್ಲಿ ಬಹಳಷ್ಟು ಏರಿಕೆಯಾಗಿದೆ. ಆದರೆ, ಅವರಿಗೆ ಇನ್ನಷ್ಟು ಪೌಷ್ಟಿಕವಾದ ಆಹಾರವನ್ನು, ಬಿಸಿಯೂಟದಲ್ಲಿ ಮೊಟ್ಟೆಯನ್ನು ನೀಡುವುದಕ್ಕೆ ಯಾವ ಆಲೋಚನೆಯೂ ಈ ಮುಂಗಡ ಪತ್ರದಲ್ಲಿ ಕಾಣುವುದಿಲ್ಲ.

ಹಾಗೆಯೇ, ಲಾಕ್‌ಡೌನ್‌ನಿಂದ ಸಂಕಷ್ಟಕ್ಕೀಡಾಗಿರುವ ಕಾರ್ಮಿಕರು, ಸಣ್ಣ ಹಾಗೂ ಮಧ್ಯಮ ಉದ್ದಿಮೆದಾರರು, ಬಾಡಿಗೆ ವಾಹನ ಚಾಲಕರು, ಸಂಬಳ ಕಳೆದುಕೊಂಡ ಶಿಕ್ಷಕರು, ದಾದಿಯರು, ವೈದ್ಯರು ಮುಂತಾದ ಎಲ್ಲ ವರ್ಗಗಳಿಗೂ ಸಂಪೂರ್ಣ ಪರಿಹಾರವನ್ನು ಒದಗಿಸಬೇಕಾಗಿತ್ತಾದರೂ, ಈ ಬಾರಿಯ ಬಜೆಟ್ ಆ ಬಗ್ಗೆ ಮೌನವಾಗಿದೆ.

ಮೊದಲೆಲ್ಲ ಬಜೆಟ್‌ಗಳಲ್ಲಿ ಇಲಾಖಾವಾರು ಅನುದಾನವಿದ್ದದ್ದು, ಈಗ ಓಟು ಬ್ಯಾಂಕುವಾರು ಅನುದಾನವಿದ್ದಂತಿದೆ.

(ಲೇಖಕ: ವೈದ್ಯ ಮತ್ತು ಸಾಮಾಜಿಕ ಕಾರ್ಯಕರ್ತ)

ಕೈಗಾರಿಕಾಭಿವೃದ್ಧಿಗೆ ಸಂಕಲ್ಪ • ಪ್ರಾದೇಶಿಕ ಅಸಮತೋಲನ ನಿವಾರಿಸಲು ಆದ್ಯತೆ

7ರೈಲು ಮಾರ್ಗ, ಹಾಸನಕ್ಕೆ ಏರ್‌ಪೋರ್ಟ್

• ಮಂಜುನಾಥ ಹೆಬ್ಬಾರ್

ಬೆಂಗಳೂರು: 'ರಾಜ್ಯದ ಆರ್ಥಿಕ ಅಭಿವೃದ್ಧಿಗೆ ಪೂರಕ ವಾತಾವರಣ ಸೃಷ್ಟಿಸಲು ನಮ್ಮ ಸರ್ಕಾರ ಆದ್ಯತೆ ನೀಡಿದೆ' ಎಂದು ಹೇಳಿಕೊಂಡಿರುವ ಬಿ.ಎಸ್.ಯಡಿಯೂರಪ್ಪ, ಹೊಸ ವಿಮಾನ ನಿಲ್ದಾಣಗಳ ಸ್ಥಾಪನೆ, ಹೆದ್ದಾರಿಗಳ ಅಭಿವೃದ್ಧಿ, ವಿದ್ಯುತ್ ಸ್ವಾವಲಂಬನೆ, ರೈಲ್ವೆ ಯೋಜನೆಗಳು ಹಾಗೂ ಇತರ ವಲಯಗಳ ಅಭಿವೃದ್ಧಿಗೆ ಚಿತ್ತ ಹರಿಸಿದ್ದಾರೆ.

ಆರ್ಥಿಕ ಅಭಿವೃದ್ಧಿಯ ಪ್ರಚೋದನಾ ಚಟುವಟಿಕೆಗಳಿಗೆ ಕಳೆದ ಸಾಲಿನಲ್ಲಿ ₹55,732 ಕೋಟಿ ಮೀಸಲಿಟ್ಟಿದ್ದರೆ, ಈ ಸಲ ಈ ಮೊತ್ತ ₹52,529 ಕೋಟಿಗೆ ಇಳಿದಿದೆ.

ಪ್ರಾದೇಶಿಕ ಅಸಮತೋಲನ ನಿವಾರಿಸಲು ಹಿಂದುಳಿದ ತಾಲ್ಲೂಕುಗಳ ಅಭಿವೃದ್ಧಿಗೆ 2020–21ರ ಬಜೆಟ್‌ನಲ್ಲಿ ₹3,060 ಕೋಟಿ ಅನುದಾನ ನೀಡಿದ್ದರೆ, ಈ ಸಲ ₹3,000 ಕೋಟಿ ನೀಡಲಾಗಿದೆ.

ರಾಜ್ಯದ ರೈಲ್ವೆ ಜಾಲ ವಿಸ್ತರಿಸಿ ಮೂಲಸೌಕರ್ಯ ಅಭಿವೃದ್ಧಿಗೆ ಇನ್ನಷ್ಟು ಒತ್ತು ನೀಡಲು ಯೋಜಿಸಲಾಗಿದೆ. ಕೇಂದ್ರ ಹಾಗೂ ರಾಜ್ಯದ ನಡುವೆ ಸಮನ್ವಯ ಕೊರತೆ, ಅನುದಾನದ ಅಲಭ್ಯತೆ ಹಾಗೂ ಭೂಸ್ವಾಧೀನದ ಕಾರಣದಿಂದ ಹಲವು ರೈಲು ಯೋಜನೆಗಳು ಕುಂಟುತ್ತಿರುವ ಹೊತ್ತಿನಲ್ಲೇ ಹೊಸ ಯೋಜನೆಗಳನ್ನು ಪ್ರಕಟಿಸಲಾಗಿದೆ.

ಒಟ್ಟು 1,173 ಕಿ.ಮೀ. ಉದ್ದದ ಹೊಸ ಏಳು ರೈಲು ಮಾರ್ಗಗಳು ನಿರ್ಮಾಣವಾಗಲಿವೆ. ಈ ಕಾಮಗಾರಿಗಳ ಅಂದಾಜು ವೆಚ್ಚ ₹7,984 ಕೋಟಿಗಳಾಗಿದ್ದರೆ, ಇದರಲ್ಲಿ ರಾಜ್ಯ ಸರ್ಕಾರ ₹3,991 ಕೋಟಿಗಳನ್ನು ರಾಜ್ಯ ಸರ್ಕಾರ ಭರಿಸಲಿದೆ. ಈ ರೈಲು ಮಾರ್ಗಗಳ ಭೂಸ್ವಾಧೀನಕ್ಕೆ ರಾಜ್ಯ ಸರ್ಕಾರ ₹2,630 ಕೋಟಿ ವೆಚ್ಚ ಮಾಡಲಿದೆ. ಆದರೆ, ಈ ಏಳು ಮಾರ್ಗಗಳು ಯಾವುವು ಎಂಬುದನ್ನು ಉಲ್ಲೇಖಿಸಿಲ್ಲ.

ಕೇಂದ್ರದ ಸಚಿವರಾಗಿದ್ದ ಸುರೇಶ್ ಅಂಗಡಿಯವರ ಕನಸಿನ ಧಾರವಾಡ– ಕಿತ್ತೂರು– ಬೆಳಗಾವಿ (73 ಕಿ.ಮೀ) ಹೊಸ ರೈಲು ಮಾರ್ಗವನ್ನು ಸಾಕಾರಗೊಳಿಸಲು ಯಡಿಯೂರಪ್ಪ ಹೆಜ್ಜೆ ಇಟ್ಟಿದ್ದಾರೆ. ಈ ಯೋಜನೆಗೆ ₹927 ಕೋಟಿ ವೆಚ್ಚ ಮಾಡಲಾಗುತ್ತದೆ. ಈ ಯೋಜನೆಯ ಒಟ್ಟು ವೆಚ್ಚದ ಶೇ 50ರಷ್ಟನ್ನು ಹಾಗೂ ಭೂಸ್ವಾಧೀನದ ಸಂಪೂರ್ಣ ವೆಚ್ಚವನ್ನು ರಾಜ್ಯ ಸರ್ಕಾರ ಭರಿಸಲಿದೆ. ಈ ಮಾರ್ಗಕ್ಕೆ ರಾಜ್ಯ ಸರ್ಕಾರ ₹463 ಕೋಟಿ ಅನುದಾನ ನೀಡಲಿದೆ.

ಜೆಡಿಎಸ್ ವರಿಷ್ಠ ಎಚ್.ಡಿ.ದೇವೇಗೌಡರ ಕನಸಿನ ಕೂಸಾದ ಹಾಸನ ವಿಮಾನ ನಿಲ್ದಾಣದ ಕಾಮಗಾರಿ ಆರಂಭಿಸಲು ಯಡಿಯೂರಪ್ಪ ಭರಪೂರ ಅನುದಾನ ನೀಡಿದ್ದಾರೆ. ದೇವೇಗೌಡರು ಮುಖ್ಯಮಂತ್ರಿಯಾಗಿದ್ದಾಗ ವಿಮಾನ ನಿಲ್ದಾಣ ನಿರ್ಮಿಸುವುದಾಗಿ ಪ್ರಕಟಿಸಿದ್ದರು. ಭೂಸ್ವಾಧೀನ ಪ್ರಕ್ರಿಯೆಯೂ ಪೂರ್ಣಗೊಂಡಿತ್ತು. ನಂತರ ಯೋಜನೆ ನನೆಗುದಿಗೆ ಬಿದ್ದಿತ್ತು. ಈ ಸಾಲಿನಲ್ಲಿ ₹175 ಕೋಟಿ ವೆಚ್ಚದಲ್ಲಿ ಯೋಜನೆಯ ಕಾಮಗಾರಿ ಆರಂಭಿಸಲಾಗುತ್ತದೆ. ಶಿವಮೊಗ್ಗ ಹಾಗೂ ವಿಜಯಪುರದಲ್ಲಿ ತಲಾ ₹384 ಕೋಟಿ ಹಾಗೂ ₹220 ಕೋಟಿ ವೆಚ್ಚದಲ್ಲಿ ವಿಮಾನ ನಿಲ್ದಾಣಗಳ ಕಾಮಗಾರಿ ಆರಂಭವಾಗಿದ್ದು, ಕಾರ್ಯಾಚರಣೆಯೂ ಶೀಘ್ರವೇ ಆರಂಭವಾಗಲಿದೆ.

ಸರ್ಕಾರಿ ಸ್ವಾಮ್ಯದ ವಿಮಾನ ನಿಲ್ದಾಣಗಳ ಅಭಿವೃದ್ಧಿ ಹಾಗೂ ಕಾರ್ಯಾಚರಣೆಗಾಗಿ ರಾಜ್ಯ ಹಾಗೂ ವಿಮಾನ ನಿಲ್ದಾಣ ಪ್ರಾಧಿಕಾರದ ನಡುವೆ ಜಂಟಿ ಉದ್ಯಮ ಕಂಪನಿ ರಚಿಸಲಾಗುತ್ತದೆ. ಇದರಿಂದ ರಾಜ್ಯದಲ್ಲಿ ವಿಮಾನ ನಿಲ್ದಾಣಗಳು, ಹೆಲಿಪ್ಯಾಡ್‌ಗಳು ಮತ್ತು ವಾಟರ್ ಏರೋಡ್ರೋಮ್‌ಗಳನ್ನು ಶೀಘ್ರವಾಗಿ ನಿರ್ಮಿಸಲು ಸಾಧ್ಯವಾಗುತ್ತದೆ.

ಆತ್ಮನಿರ್ಭರಕ್ಕೆ ಆನ್‌ಲೈನ್ ವೇದಿಕೆ: ಕೇಂದ್ರ ಸರ್ಕಾರದ ಆತ್ಮನಿರ್ಭರ್ ಯೋಜನೆಯಡಿ ವಿವಿಧ ಇಲಾಖೆಗಳ ಖಾಸಗಿ ಸಹಭಾಗಿತ್ವದ ಮಾದರಿಯ ಪ್ರಸ್ತಾವನೆಗಳನ್ನು ಸಂಯೋಜಿಸಲು ಹಾಗೂ ಮೇಲ್ವಿಚಾರಣೆ ಮಾಡಲು ಆನ್‌ಲೈನ್ ವೇದಿಕೆ ರಚಿಸಲಾಗುವುದು. ರಾಜ್ಯದ ವಿವಿಧ ಯೋಜನೆಗಳನ್ನು ಪರಿಣಾಮಕಾರಿಯಾಗಿ ಜನಸ್ನೇಹಿಯಾಗಿ ಅನುಷ್ಠಾನಗೊಳಿಸಲು ಹಲವು ಯೋಜನೆಗಳನ್ನು ಒಂದೇ ವ್ಯವಸ್ಥೆಯಡಿಗೆ ತರಲಾಗುತ್ತದೆ.

ಕಲ್ಯಾಣ ಕರ್ನಾಟಕಕ್ಕೆ ₹1500 ಕೋಟಿ

ಕಲ್ಯಾಣ ಕರ್ನಾಟಕದ ಸಮಗ್ರ ಅಭಿವೃದ್ಧಿಗೆ ಕಳೆದ ವರ್ಷದಷ್ಟೇ ಅನುದಾನ ಮೀಸಲಿಡಲಾಗಿದೆ. ಕಲ್ಯಾಣ ಕರ್ನಾಟಕ ಅಭಿವೃದ್ಧಿ ಮಂಡಳಿಗೆ ₹1500 ಕೋಟಿ ಕೊಡಲಾಗಿದೆ. ಇದರಡಿ ಹೆಚ್ಚಿನ ಗಾತ್ರದ ಯೋಜನೆಗಳಿಗೆ ಆದ್ಯತೆ ನೀಡಲು ಸರ್ಕಾರ ನಿರ್ಧರಿಸಿದೆ.

ಕರಾವಳಿ ಪ್ರದೇಶದ ಸಮಗ್ರ ಅಭಿವೃದ್ಧಿಗಾಗಿ ಯೋಜನೆಗಳನ್ನು ರೂಪಿಸಿ ಮೂಲಸೌಕರ್ಯಗಳನ್ನು ಕಲ್ಪಿಸಲಾಗುತ್ತದೆ. ಕರಾವಳಿ ಅಭಿವೃದ್ಧಿ ಪ್ರಾಧಿಕಾರವನ್ನು ಕರಾವಳಿ ಅಭಿವೃದ್ಧಿ ಮಂಡಳಿಯನ್ನಾಗಿ ಪುನರ್ ರಚಿಸಲು ಮಸೂದೆ ತರಲು ಸರ್ಕಾರ ತೀರ್ಮಾನಿಸಿದೆ. ₹100 ಕೋಟಿಗಿಂತ ಅಧಿಕ ವೆಚ್ಚದ ಬೃಹತ್ ಯೋಜನೆಗಳನ್ನು ಕಡ್ಡಾಯವಾಗಿ ಮೌಲ್ಯಮಾಪನ ಮಾಡಲಾಗುತ್ತದೆ.

ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್‌ರಾಜ್ ಇಲಾಖೆಗಳಲ್ಲಿರುವ ವಿವಿಧ ಎಂಜಿನಿಯರಿಂಗ್ ವಿಭಾಗಗಳನ್ನು ಒಗ್ಗೂಡಿಸಿ ಒಂದೇ ವಿಭಾಗವನ್ನಾಗಿಸುವ ಮೂಲಕ ಆಡಳಿತಾತ್ಮಕ ವೆಚ್ಚ ಕಡಿಮೆ ಮಾಡಲಾಗುತ್ತದೆ. ಈ ಮೂಲಕ ಆಡಳಿತ ಯಂತ್ರದಲ್ಲಿ ದಕ್ಷತೆ ಹೆಚ್ಚಿಸಬಹುದು ಎಂಬುದು ಮುಖ್ಯಮಂತ್ರಿ ಅವರ ಆಲೋಚನೆ.



ಪಿಪಿಪಿ ಅಡಿ ಕೈಗಾರಿಕಾ ಟೌನ್‌ಶಿಪ್ ನಿರ್ಮಾಣ

ರಾಜ್ಯದಲ್ಲಿ ಕೈಗಾರಿಕೆಗಳ ಸ್ಥಾಪನೆಗೆ ಅನುಕೂಲ ಆಗುವಂತೆ ಕೈಗಾರಿಕಾ ಟೌನ್‌ಶಿಪ್ ಸ್ಥಾಪನೆ, ನಗರ ಸ್ಥಳೀಯ ಸಂಸ್ಥೆಗಳಲ್ಲಿ ಕೈಗಾರಿಕೆಗಳಿಗೆ ಪ್ರತ್ಯೇಕ ಆಸ್ತಿ ತೆರಿಗೆ ಸ್ಲ್ಯಾಬ್ ಸೇರಿದಂತೆ ಇನ್ನೂ ಹಲವು ಅಂಶಗಳನ್ನು ಬಜೆಟ್‌ನಲ್ಲಿ ಪ್ರಸ್ತಾಪಿಸಲಾಗಿದೆ.

ಬೆಂಗಳೂರು–ಮುಂಬೈ ಮತ್ತು ಬೆಂಗಳೂರು–ಚೆನ್ನೈ ಕೈಗಾರಿಕಾ ಕಾರಿಡಾರ್‌ಗಳಲ್ಲಿ ಲಭ್ಯವಿರುವ ಅವಕಾಶಗಳನ್ನು ಬಳಸಿಕೊಂಡು ಎರಡೂ ಕಡೆಗಳಲ್ಲಿ ತಲಾ ಕನಿಷ್ಠ 500 ಎಕರೆ ಜಾಗದಲ್ಲಿ ಮುಖ್ಯಮಂತ್ರಿಗಳ ಮೆಗಾ ಸಂಯೋಜಿತ ಕೈಗಾರಿಕಾ ಟೌನ್‌ಶಿಪ್‌ಗಳ ಸ್ಥಾಪನೆಯಾಗಲಿದೆ. ಸಾರ್ವಜನಿಕ–ಖಾಸಗಿ ಸಹಭಾಗಿತ್ವದಲ್ಲಿ ಇದು ನಿರ್ಮಾಣ ಆಗಲಿದೆ. ಮೂರು ವರ್ಷಗಳಲ್ಲಿ ಸುಮಾರು ₹ 10 ಸಾವಿರ ಕೋಟಿ ಬಂಡವಾಳ ಆಕರ್ಷಣೆ ಹಾಗೂ ಐದು ಲಕ್ಷ ಉದ್ಯೋಗಾವಕಾಶ ಸೃಷ್ಟಿಯ ನಿರೀಕ್ಷೆ ಹೊಂದಲಾಗಿದೆ.

ಯಾದಗಿರಿ ಜಿಲ್ಲೆಯ ಕಡೇಚೂರಿನಲ್ಲಿ ₹ 1478 ಕೋಟಿ ವೆಚ್ಚದಲ್ಲಿ ಕೇಂದ್ರ ಸರ್ಕಾರದ ನೆರವಿನೊಂದಿಗೆ ವಿಶ್ವ ದರ್ಜೆಯ 'ಬಲ್ಕ್ ಡ್ರಗ್ ಪಾರ್ಕ್' ಅಭಿವೃದ್ಧಿಪಡಿಸಲು ಉದ್ದೇಶಿಸಲಾಗಿದೆ. ಉತ್ಪಾದನಾ ವಲಯವನ್ನು ಆಕರ್ಷಿಸುವ ಉದ್ದೇಶದಿಂದ ಪೀಣ್ಯ ಕೈಗಾರಿಕಾ ಟೌನ್‌ಶಿಪ್ ಸ್ಥಾಪನೆ, ಕೈಗಾರಿಕಾ ಸ್ಥಾಪನೆಯನ್ನು ಪ್ರೋತ್ಸಾಹಿಸಲು ನಗರ ಸ್ಥಳೀಯ ಸಂಸ್ಥೆಗಳಲ್ಲಿ ಕೈಗಾರಿಕೆಗಳಿಗೆ ಪ್ರತ್ಯೇಕ ಆಸ್ತಿ ತೆರಿಗೆ ಸ್ಲ್ಯಾಬ್, ಮಂಗಳೂರಿನ ಗಂಜಿಮಠದಲ್ಲಿ 100 ಎಕರೆ ಭೂಮಿಯಲ್ಲಿ ₹ 66 ಕೋಟಿ ವೆಚ್ಚದಲ್ಲಿ ಕೇಂದ್ರ ಸರ್ಕಾರದ ನೆರವಿನೊಂದಿಗೆ 'ಪ್ಲಾಸ್ಟಿಕ್ ಪಾರ್ಕ್' ಅಭಿವೃದ್ಧಿಯಾಗಲಿದೆ.

ಕಲಬುರ್ಗಿ ಬಳಿ ಸೌರಶಕ್ತಿ ಪಾರ್ಕ್ ಸ್ಥಾಪನೆ

ರಾಜ್ಯದ ವಿದ್ಯುತ್ ವಲಯಕ್ಕೆ ಸಂಬಂಧಿಸಿದಂತೆ ಕೆಪಿಟಿಸಿಎಲ್‌ನ ವಹಿವಾಟಿನಲ್ಲಿ ಪಾರದರ್ಶಕತೆ, ಉಪಕರಣಗಳ ನವೀಕರಣ, ಹೊರ ರಾಜ್ಯಗಳಿಗೆ ವಿದ್ಯುತ್ ಮಾರಾಟ, ಪಂಪ್ಡ್ ಹೈಡ್ರೊ ಸ್ಟೊರೇಜ್ ಪ್ಲಾಂಟ್ ನಿರ್ಮಾಣದಂತಹ ಕ್ರಮಗಳನ್ನು ಘೋಷಿಸಲಾಗಿದೆ.

ಅಂತರ್‌ರಾಜ್ಯ ಪ್ರಸರಣ ವ್ಯವಸ್ಥೆಯಡಿಯಲ್ಲಿ ಹೊರ ರಾಜ್ಯಗಳಿಗೆ ವಿದ್ಯುತ್ ಮಾರಾಟ ಮಾಡಲು ಕಲಬುರ್ಗಿ ತಾಲ್ಲೂಕಿನ ಫಿರೋಜಾಬಾದ್‌ನಲ್ಲಿ 500 ಮೆಗಾವಾಟ್ ಸಾಮರ್ಥ್ಯದ ಸೌರಶಕ್ತಿ ಪಾರ್ಕ್ ಸ್ಥಾಪಿಸಲು ಉದ್ದೇಶಿಸಲಾಗಿದೆ. ಪವರ್ ಕಂಪನಿ ಆಫ್ ಕರ್ನಾಟಕ ಲಿಮಿಟೆಡ್ ಒಡೆತನದಲ್ಲಿರುವ 1,551 ಎಕರೆ ಜಮೀನಿನಲ್ಲಿ ಖಾಸಗಿ ಅಭಿವೃದ್ಧಿದಾರರ ಬಂಡವಾಳದೊಂದಿಗೆ ಕ್ರೆಡಲ್ ಸಂಸ್ಥೆಯು ಈ ಪಾರ್ಕ್ ಸ್ಥಾಪಿಸಲಿದೆ.

ಈ ಸೋಲಾರ್ ಪಾರ್ಕ್ ಸ್ಥಾಪನೆಯಿಂದ ಸ್ಥಳೀಯರಿಗೆ ಉದ್ಯೋಗಾವಕಾಶ ಕಲ್ಪಿಸುವ ಮೂಲಕ ಸ್ಥಳೀಯ ಪ್ರದೇಶಾಭಿವೃದ್ಧಿಗೆ ನೆರವು ನೀಡಿದಂತಾಗಲಿದೆ ಎಂದು ಬಜೆಟ್‌ನಲ್ಲಿ ತಿಳಿಸಲಾಗಿದೆ.

ಕೆಪಿಸಿಎಲ್‌ನ 400/200 ಕಿಲೊವಾಟ್ ಉಪಕೇಂದ್ರಗಳಲ್ಲಿರುವ ಉಪಕರಣಗಳ ಬದಲಾವಣೆಯೊಂದಿಗೆ ನವೀಕರಣ ಮತ್ತು ಆಧುನೀಕರಣ ಕೈಗೆತ್ತಿಕೊಳ್ಳಲಾಗಿದ್ದು, ಮೊದಲ ಹಂತ ಮುಕ್ತಾಯವಾಗಿದೆ. ಎರಡನೇ ಹಂತದ ಯೋಜನೆಯನ್ನು ಕೇಂದ್ರದ ಅನುಮತಿಯೊಂದಿಗೆ ₹ 100 ಕೋಟಿ ವೆಚ್ಚದಲ್ಲಿ ಪ್ರಾರಂಭಿಸಲು ಸರ್ಕಾರ ಉದ್ದೇಶಿಸಿದೆ. ಕೇಂದ್ರ ಸರ್ಕಾರದ 'ಸಮಸ್ತ' ಯೋಜನೆಯಡಿ ಕೆಪಿಟಿಸಿಎಲ್‌ನ ವಿದ್ಯುಚ್ಛಕ್ತಿ ವಹಿವಾಟು, ಮೀಟರಿಂಗ್ ಮತ್ತು ಲೆಕ್ಕಪರಿಶೋಧನೆಯ ಪ್ರಕ್ರಿಯೆಯನ್ನು ಸ್ವಯಂಚಾಲಿತಗೊಳಿಸಲು ಹಾಗೂ ವಿದ್ಯುತ್ ವ್ಯವಹಾರ, ಬಿಲ್ಲಿಂಗ್ ವರದಿಯನ್ನು ಅಂತರ್ಜಾಲದ ಮೂಲಕ ಎಲ್ಲರಿಗೂ ಮುಕ್ತವಾಗಿ ಸಿಗುವಂತೆ ಮಾಡಲು ನಿರ್ಧರಿಸಲಾಗಿದೆ.



ಇದು ಬರೀ ಬ್ರೀಫ್‌ಕೇಸ್ ಅಲ್ಲ..

ಬಜೆಟ್ ಮಂಡಿಸಲು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಕೈಯಲ್ಲಿ ಬ್ರೀಫ್‌ಕೇಸ್ ಹಿಡಿದು ಸದನಕ್ಕೆ ಹೊರಟಿದ್ದು ಹೀಗೆ...
ಪ್ರಜಾವಾಣಿ ಚಿತ್ರ: ಎಸ್.ಕೆ. ದಿನೇಶ್

ಮೂಲಸೌಕರ್ಯ ಅಭಿವೃದ್ಧಿಗೆ ಒತ್ತು

ರಾಜ್ಯದ ಗ್ರಾಮೀಣ, ಪಟ್ಟಣ ಮತ್ತು ನಗರ ಪ್ರದೇಶಗಳಲ್ಲಿ ಮೂಲಸೌಕರ್ಯ ಅಭಿವೃದ್ಧಿಗೆ 2021–22ನೇ ಸಾಲಿನ ಬಜೆಟ್‌ನಲ್ಲಿ ಒತ್ತು ನೀಡಲಾಗಿದೆ. ಗ್ರಾಮೀಣ ಪ್ರದೇಶದಲ್ಲಿ ಮನೆಮನೆಗೆ ನಲ್ಲಿ ನೀರಿನ ಸಂಪರ್ಕ ಕಲ್ಪಿಸಲು ಹೆಚ್ಚು ಅನುದಾನ ಮೀಸಲಿರಿಸಲಾಗಿದೆ. ಕೆಲವು ಯೋಜನೆಗಳನ್ನು ಕೇಂದ್ರ ಸರ್ಕಾರದ ನೆರವಿನೊಂದಿಗೆ ಜಾರಿಗೆ ತರಲಾಗುತ್ತಿದೆ.

91 ಲಕ್ಷ ಗ್ರಾಮೀಣ ಕುಟುಂಬಗಳಿಗೆ ಕುಡಿಯುವ ನೀರಿನ ಸಂಪರ್ಕ. ಕೇಂದ್ರ ಸರ್ಕಾರದ ರಾಷ್ಟ್ರೀಯ ಜಲ ಜೀವನ್ ಮಿಷನ್ ಮತ್ತು ರಾಜ್ಯ ಸರ್ಕಾರದ ಮನೆಮನೆಗೆ ಗಂಗೆ ಯೋಜನೆ ಅಡಿ ಅನುಷ್ಠಾನ

₹4,316 ಕೋಟಿ 21 ಲಕ್ಷ ಗ್ರಾಮೀಣ ಕುಟುಂಬಗಳಿಗೆ ನಲ್ಲಿ ಸಂಪರ್ಕ ಕಲ್ಪಿಸಲು ಮೀಸಲಿರಿಸಿರುವ ಅನುದಾನ

5,622 ಗ್ರಾಮೀಣ ಗ್ರಂಥಾಲಯಗಳನ್ನು ಗ್ರಾಮೀಣ ಮಾಹಿತಿ ಮತ್ತು ಜ್ಞಾನ ಕೇಂದ್ರಗಳನ್ನಾಗಿ ಉನ್ನತೀಕರಿಸಲಾಗುತ್ತದೆ

₹900 ಕೋಟಿ ನಗರ ಮತ್ತು ಪಟ್ಟಣಗಳಿಗೆ ಶಾಶ್ವತ ಕುಡಿಯುವ ನೀರು ಮತ್ತು ಒಳಚರಂಡಿ ವ್ಯವಸ್ಥೆ ಕಲ್ಪಿಸಲು ಮೀಸಲಿರಿಸಿದ ಅನುದಾನ

₹3,000 ಕೋಟಿ ಹಿಂದುಳಿದ ತಾಲ್ಲೂಕುಗಳ ಅಭಿವೃದ್ಧಿಗಾಗಿ ವಿಶೇಷ ಅಭಿವೃದ್ಧಿ ಯೋಜನೆಗೆ ಮೀಸಲಿರಿಸಿದ ಅನುದಾನ

₹60 ಕೋಟಿ ಕಾಳಿ, ನೇತ್ರಾವತಿ, ಗುರುಪುರ ಹಾಗೂ ಉಡುಪಿಯ ಹಂಗಾರಕಟ್ಟಾದಿಂದ ಮಣಿಪಾಲದವರೆಗೆ, ಬಾಗಲಕೋಟೆಯ ಆಲಮಟ್ಟಿ ಜಲಾಶಯದಿಂದ ಬಾಗಲಕೋಟೆಗೆ ಜಲಮಾರ್ಗಗಳ ಅಭಿವೃದ್ಧಿಗೆ ಮೀಸಲಿರಿಸಿದ ಅನುದಾನ. ಪ್ರವಾಸೋದ್ಯಮಕ್ಕೆ ಪೂರಕವಾಗಿ ಅಭಿವೃದ್ಧಿ

10 ಮಹಾನಗರಪಾಲಿಕೆಗಳು, **59** ನಗರಸಭೆಗಳಲ್ಲಿ **89** ಸಮುದಾಯ ಮಿಶ್ರಗೊಬ್ಬರ ಘಟಕಗಳನ್ನು **₹2.50** ಕೋಟಿ ವೆಚ್ಚದಲ್ಲಿ ಅಭಿವೃದ್ಧಿಪಡಿಸಲಾಗುತ್ತದೆ

ಮೂಲಸೌಕರ್ಯ ಕಾಮಗಾರಿಗಳಿಗೆ ಅಗತ್ಯ ಜಮೀನು ಪಡೆಯಲು ಭೂಸ್ವಾಧೀನ ಪ್ರಕ್ರಿಯೆಗೆ ವೇಗ ನೀಡಲಾಗುವುದು

ಮಲೆನಾಡು, ಕರಾವಳಿಯಲ್ಲಿ ಕಾಲುಸಂಕಕ್ಕೆ 'ಗ್ರಾಮಬಂಧ ಸೇತುವೆ' ₹100 ಕೋಟಿ ವೆಚ್ಚದಲ್ಲಿ ಅನುಷ್ಠಾನ

ರಾಯಚೂರು ನಗರದಲ್ಲಿ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ನೆರವಿನೊಂದಿಗೆ ರಿಂಗ್ ರಸ್ತೆ ಅಭಿವೃದ್ಧಿ

ಕೈಗಾರಿಕಾ ತರಬೇತಿ ಸಂಸ್ಥೆಗಳಲ್ಲಿ 23 ಅಲ್ಪಾವಧಿ ಹಾಗೂ 11 ದೀರ್ಘಾವಧಿ ಕೋರ್ಸ್‌ಗಳ ಪ್ರಾರಂಭ

ಕಬಿನಿ ಅಣೆಕಟ್ಟೆಯ ಕೆಳ ಭಾಗದಲ್ಲಿ ಉದ್ಯಾನ ನಿರ್ಮಿಸಲು ₹50 ಕೋಟಿ ನಿಗದಿ

ವಸತಿ ಯೋಜನೆಯಡಿ 3 ವರ್ಷದಲ್ಲಿ 9.74 ಲಕ್ಷ ಮನೆಗಳ ನಿರ್ಮಾಣಕ್ಕೆ ₹10,194 ಕೋಟಿ ನಿಗದಿ

ಪ್ರವಾಸೋದ್ಯಮ ಉತ್ತೇಜನಕ್ಕೆ ₹500 ಕೋಟಿ

ಪ್ರವಾಸೋದ್ಯಮದ ಉತ್ತೇಜನಕ್ಕೆ 'ಒಂದು ರಾಜ್ಯ-ಹಲವು ಜಗತ್ತು' ಘೋಷವಾಕ್ಯದಡಿ ₹500 ಕೋಟಿ ಅನುದಾನ ನೀಡಲಾಗಿದೆ.

- ಕಡಲತೀರಗಳನ್ನು ಅಂತರರಾಷ್ಟ್ರೀಯ ದರ್ಜೆಗೇರಿಸಲು ಒತ್ತು ನೀಡಲು ಉದ್ದೇಶಿಸಲಾಗಿದೆ. ಈ ಹಿನ್ನೆಲೆಯಲ್ಲಿ ₹10 ಕೋಟಿ ವೆಚ್ಚದಲ್ಲಿ ಉಡುಪಿಯ ತ್ರಾಸಿ, ಮರವಂತೆ, ಒತ್ತಿನೆಣೆ ಹಾಗೂ ಇತರ ಕಡಲತೀರಗಳ ಸಮಗ್ರ ಅಭಿವೃದ್ಧಿಪಡಿಸಲು ಉದ್ದೇಶಿಸಲಾಗಿದೆ.
- ಬೈಂದೂರು ತಾಲ್ಲೂಕಿನ ಸೋಮೇಶ್ವರ ಕಡಲ ತೀರದಲ್ಲಿ ಪ್ರವಾಸೋದ್ಯಮ ಅಭಿವೃದ್ಧಿಗೆ ₹10 ಕೋಟಿ ನಿಗದಿಪಡಿಸಲಾಗಿದೆ.
- ಬಿ.ಟಿ.ಪಿ.ಎಸ್ ಮತ್ತು ತೋರಣಗಲ್ಲು ನಡುವಣ ಕುಡುತಿನಿ ಬೂದಿ ದಿಬ್ಬದ ಅಭಿವೃದ್ಧಿಗೆ ಒಟ್ಟು ₹5 ಕೋಟಿ ಮೀಸಲು.
- ಕಿತ್ತೂರು ಕೋಟೆ ಆವರಣದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ₹50 ಕೋಟಿ ಅನುದಾನ ನೀಡಲು ಪ್ರಸ್ತಾಪಿಸಲಾಗಿದೆ.
- ತದಡಿಯಲ್ಲಿ 1 ಸಾವಿರ ಎಕರೆ ಪ್ರದೇಶದಲ್ಲಿ ಪರಿಸರ ಪ್ರವಾಸೋದ್ಯಮ ಉದ್ಯಾನ ಅಭಿವೃದ್ಧಿಪಡಿಸಲು ಉದ್ದೇಶಿಸಲಾಗಿದೆ.

ಬರೀ ನೋಟ, ಸಾಲದ ಆಟ

ಒಂದನೇ ಪುಟದಿಂದ

ಆದರೆ, ಪರಿಶಿಷ್ಟ ಜಾತಿ ಉಪ ಯೋಜನೆ (ಎಸ್‌ಸಿಪಿ) ಮತ್ತು ಬುಡಕಟ್ಟು ಉಪ ಯೋಜನೆ (ಟಿಎಸ್‌ಪಿ) ಉಪ ಯೋಜನೆಗಳ ಅನುದಾನಕ್ಕೆ ಕತ್ತರಿ ಹಾಕಿದ್ದಾರೆ.

ನೀರಾವರಿ, ಗ್ರಾಮೀಣಾಭಿವೃದ್ಧಿ, ಲೋಕೋಪಯೋಗಿ, ಶಿಕ್ಷಣ ಇಲಾಖೆಗಳಿಗೆ ಬಜೆಟ್‌ನಲ್ಲಿ ನಿರೀಕ್ಷಿತ ಆದ್ಯತೆ ದೊರಕಿಲ್ಲ. ಕೃಷ್ಣಾ ಮೇಲ್ದಂಡೆ ಯೋಜನೆ, ಮಹದಾಯಿ ಯೋಜನೆಗಳಿಗಷ್ಟೇ ಅನುದಾನ ಹಂಚಿಕೆ ಮಾಡಲಾಗಿದೆ. ಎತ್ತಿನಹೊಳೆ ಯೋಜನೆಯಡಿ ಆರಂಭವಾಗಿರುವ ಕಾಮಗಾರಿಗಳನ್ನು ಪೂರ್ಣಗೊಳಿಸುವ ಭರವಸೆ ಮಾತ್ರ ಬಜೆಟ್‌ನಲ್ಲಿದೆ.

ಸ್ತ್ರೀ ಶಕ್ತಿಗೆ ಬಲ: ಅಂತರರಾಷ್ಟ್ರೀಯ ಮಹಿಳಾ ದಿನದಂದೇ ಬಜೆಟ್ ಮಂಡಿಸಿದ ಯಡಿಯೂರಪ್ಪ, ಮಹಿಳೆಯರ ಸಬಲೀಕರಣಕ್ಕೆ ಆದ್ಯತೆ ನೀಡಿದ್ದಾರೆ. ಮಹಿಳಾ ಉದ್ಯಮಿಗಳಿಗೆ ಕಡಿಮೆ ಬಡ್ಡಿ ದರದಲ್ಲಿ ಸಾಲ, ಮಹಿಳಾ ಉದ್ಯಮಿಗಳು ತಯಾರಿಸುವ ಉತ್ಪನ್ನಗಳಿಗೆ ಮಾರುಕಟ್ಟೆ ಮತ್ತು ಬ್ರ್ಯಾಂಡಿಂಗ್ ಒದಗಿಸುವುದು, ಉದ್ಯೋಗ ಸೃಷ್ಟಿಗೆ ಒತ್ತು ನೀಡುವ ಮೂಲಕ ಅಲಕ್ಷಿತ ಮಹಿಳಾ ಸಮುದಾಯಕ್ಕೆ ಮೊದಲ ಬಾರಿಗೆ 'ಆರ್ಥಿಕತೆ'ಯ ಬಲ ಕೊಡುವತ್ತ ಹೆಜ್ಜೆ ಇಟ್ಟಿದ್ದಾರೆ.

ಕೃಷಿ ಮತ್ತು ಪೂರಕ ವಲಯಕ್ಕೆ ಬಜೆಟ್‌ನಲ್ಲಿ ಹೆಚ್ಚಿನ ಪ್ರಾತಿನಿಧ್ಯ ನೀಡಲಾಗಿದೆ. ಕೃಷಿ ಮತ್ತು ಪೂರಕ ವಲಯಗಳಿಗೆ ಸಂಬಂಧಿಸಿದಂತೆ ದೊಡ್ಡ ಯೋಜನೆಗಳನ್ನೇನೂ ಪ್ರಕಟಿಸಿಲ್ಲ. ಆದರೆ, ಸ್ಥಳೀಯ ಬೇಡಿಕೆಗಳಿಗೆ ಅನುಗುಣವಾಗಿ ದೂರದೃಷ್ಟಿಯ ಯೋಜನೆಗಳನ್ನು ಘೋಷಿಸಿದ್ದಾರೆ. ಆರೋಗ್ಯ ಸೇವೆಯನ್ನು ರಾಜ್ಯದ ಬೇರೆ ಬೇರೆ ಭಾಗಗಳಿಗೆ ವಿಸ್ತರಿಸುವ ಪ್ರಯತ್ನಕ್ಕೆ ಪೂರಕವಾದ ಯೋಜನೆಗಳು ಬಜೆಟ್‌ನಲ್ಲಿವೆ.

ಡಾ.ಡಿ.ಎಂ. ನಂಜುಂಡಪ್ಪ ಸಮಿತಿ ವರದಿ ಪ್ರಕಾರ, ಹಿಂದುಳಿದಿರುವ ತಾಲ್ಲೂಕುಗಳ ಅಭಿವೃದ್ಧಿ ಹಾಗೂ ಕಲ್ಯಾಣ ಕರ್ನಾಟಕ ಅಭಿವೃದ್ಧಿ ಮಂಡಳಿಗೆ ಕಳೆದ ವರ್ಷದಷ್ಟೇ ಅನುದಾನ ಒದಗಿಸಲಾಗಿದೆ.

ಖನಿಜ ನೀತಿಗೆ ನಿರ್ಧಾರ

ಗಣಿಗಾರಿಕೆ ಕ್ಷೇತ್ರದಲ್ಲಿ ಇನ್ನಷ್ಟು ಸುಧಾರಣೆಗಳನ್ನು ತರಲು ರಾಷ್ಟ್ರೀಯ ಖನಿಜ ಕಾರ್ಯನೀತಿಗೆ ಸಮಾನವಾಗಿ 'ರಾಜ್ಯ ಖನಿಜ ನೀತಿ 2021-26' ರೂಪಿಸಲಾಗುವುದು ಎಂದು ಬಿ.ಎಸ್. ಯಡಿಯೂರಪ್ಪ ಘೋಷಿಸಿದ್ದಾರೆ.

ರಾಜ್ಯವು 2008ರಲ್ಲಿಯೇ ಖನಿಜ ನೀತಿಯನ್ನು ಜಾರಿಗೆ ತಂದಿದೆ. ಅದನ್ನು ಮತ್ತಷ್ಟು ಸುಧಾರಿಸಲು ಈಗ ಕ್ರಮ ಕೈಗೊಂಡಂತಾಗಿದೆ. ಗಣಿ, ಕಲ್ಲು ಗಣಿ ಗುತ್ತಿಗೆ ಮತ್ತು ಕ್ರಷರ್ ಲೈಸನ್ಸ್ ಕೋರಿ ಸಲ್ಲಿಸುವ ಅರ್ಜಿಗಳನ್ನು ನಿಗದಿತ ಸಮಯದೊಳಗೆ ವಿಲೇವಾರಿ ಮಾಡಲು ಏಕಗವಾಕ್ಷಿ ವ್ಯವಸ್ಥೆ ಜಾರಿಗೊಳಿಸುವುದಾಗಿ ಬಜೆಟ್‌ನಲ್ಲಿ ಘೋಷಿಸಲಾಗಿದೆ. ಇದರೊಂದಿಗೆ ಲೈಸನ್ಸ್ ಸಂಬಂಧಿತ ಕುಂದು–ಕೊರತೆಗಳನ್ನು ಶೀಘ್ರವಾಗಿ ಬಗೆಹರಿಸಲು ರಾಜ್ಯದ ನಾಲ್ಕು ಕಂದಾಯ ವಿಭಾಗಗಳಲ್ಲಿ 'ಗಣಿ ಅದಾಲತ್'ಗಳನ್ನು ಪ್ರಾರಂಭಿಸುವುದಾಗಿ ಯಡಿಯೂರಪ್ಪ ಹೇಳಿದ್ದಾರೆ.

ನೀರು–ಒಳಚರಂಡಿ ಯೋಜನೆಗೆ ₹900 ಕೋಟಿ: ರಾಜ್ಯದ ನಗರಗಳಲ್ಲಿ ಹೊಸದಾಗಿ ಕುಡಿಯುವ ನೀರು ಮತ್ತು ಒಳಚರಂಡಿ ವ್ಯವಸ್ಥೆ ಯೋಜನೆಗಳನ್ನು ₹900 ಕೋಟಿ ವೆಚ್ಚದಲ್ಲಿ ಅನುಷ್ಠಾನಗೊಳಿಸಲಾಗುವುದು ಎಂದು ಮುಖ್ಯಮಂತ್ರಿ ಘೋಷಿಸಿದ್ದಾರೆ.

ಜಾಗತಿಕ ಎಂಜಿನಿಯರಿಂಗ್ ಕ್ಷೇತ್ರದಲ್ಲಿ ಕೈಗಾರಿಕೆಗಳ ಅಗತ್ಯಕ್ಕೆ ತಕ್ಕಂತೆ ನುರಿತ ಮಾನವ ಸಂಪನ್ಮೂಲವನ್ನು ಸೃಷ್ಟಿಸಲು ಟಾಟಾ ಟೆಕ್ನಾಲಜೀಸ್ ಲಿಮಿಟೆಡ್ ಸಹಯೋಗದೊಂದಿಗೆ ಹಬ್ ಮತ್ತು ಸ್ಪೋಕ್ ಮಾದರಿಯಲ್ಲಿ 150 ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗಳನ್ನು ₹4,636 ಕೋಟಿ ಹೂಡಿಕೆಯೊಂದಿಗೆ ಉನ್ನತೀಕರಿಸಲು ಕ್ರಮ ತೆಗೆದುಕೊಳ್ಳಲಾಗಿದೆ. ರಾಜ್ಯದಲ್ಲಿ ವಿದ್ಯುತ್ ವಾಹನಗಳ ಬಳಕೆಯನ್ನು ಉತ್ತೇಜಿಸಲು ಹಾಗೂ ವಾಯುಮಾಲಿನ್ಯವನ್ನು ನಿಯಂತ್ರಿಸಲು ಒಂದು ಸಾವಿರ

ರಾಜ್ಯದ ₹100 ಕೋಟಿ ಮೇಲೆ ಇರುವಂತಹ ಬೃಹತ್ ಯೋಜನೆಗಳನ್ನು ಕಡ್ಡಾಯವಾಗಿ ಮೌಲ್ಯಮಾಪನ ಮಾಡಲಾಗುವುದು ಎಂದೂ ಘೋಷಿಸಿದ್ದಾರೆ.

ಖಾಸಗಿ ಸಹಭಾಗಿತ್ವದಲ್ಲಿ ಜಲವಿದ್ಯುತ್ ಶೇಖರಣಾ ಘಟಕ

ಸ್ವಚ್ಛ ಶಕ್ತಿ ಆಧಾರಿತ ನಿರಂತರ ವಿದ್ಯುತ್ ಸರಬರಾಜಿಗಾಗಿ ಸಾವಿರ ಮೆಗಾವಾಟ್ ಸಾಮರ್ಥ್ಯದ ಜಲವಿದ್ಯುತ್ ಶೇಖರಣಾ ಘಟಕ (ಪಂಪ್ಡ್ ಹೈಡ್ರೊ ಸ್ಟೋರೇಜ್ ಪ್ಲಾಂಟ್) ಯೋಜನೆಯನ್ನು ₹4,000 ಕೋಟಿ ಖಾಸಗಿ ಹೂಡಿಕೆಯ ಆಧಾರದ ಮೇಲೆ ಅನುಷ್ಠಾನಗೊಳಿಸಲಾಗುತ್ತದೆ ಎಂದು ಯಡಿಯೂರಪ್ಪ ಘೋಷಿಸಿದರು.

ರಾಜ್ಯದಲ್ಲಿ ವಿದ್ಯುತ್ ವಾಹನಗಳ ಬಳಕೆಯನ್ನು ಉತ್ತೇಜಿಸಲು ಒಂದು ಸಾವಿರ ವಿದ್ಯುತ್ ಚಾಲಿತ ವಾಹನಗಳ ಚಾರ್ಜಿಂಗ್ ಕೇಂದ್ರಗಳನ್ನು ಸಾರ್ವಜನಿಕ–ಖಾಸಗಿ ಸಹಭಾಗಿತ್ವದಲ್ಲಿ ಸ್ಥಾಪಿಸುವುದಾಗಿ ಬಜೆಟ್‌ನಲ್ಲಿ ಘೋಷಿಸಲಾಗಿದೆ.

ಆರ್ಥಿಕ ಪುನಶ್ಚೇತನ: ಕೈತಪ್ಪಿದ ಅವಕಾಶ

ವಿಶ್ಲೇಷಣೆ
ಪ್ರೊ. ಕೃಷ್ಣರಾಜ್

ಕೈಗಾರಿಕೆ, ಸೇವಾ ವಲಯ ರಾಜ್ಯದಲ್ಲಿ ಹೆಚ್ಚು ಉದ್ಯೋಗ ಸೃಷ್ಟಿಸಿವೆ, ಜಿಎಸ್‌ಡಿಪಿ ಬೆಳವಣಿಗೆಗೆ ಕೊಡುಗೆ ನೀಡುತ್ತಿವೆ. ಐ.ಟಿ., ಐ.ಟಿ. ಆಧಾರಿತ ಸೇವಾ ವಲಯ, ಬಿ.ಟಿ., ರಸ್ತೆ ಮೂಲಸೌಕರ್ಯ ಅಭಿವೃದ್ಧಿಯಂತಹ ಕ್ಷೇತ್ರಗಳಲ್ಲಿ ಎಫ್‌ಡಿಐ ಆಕರ್ಷಿಸಲು ಅಗತ್ಯವಿರುವ ಸೌಲಭ್ಯ ರಾಜ್ಯದಲ್ಲಿಲ್ಲ ಎಂಬುದನ್ನು 2020–21ನೆ ಸಾಲಿನ ಆರ್ಥಿಕ ಸಮೀಕ್ಷೆ ಗುರುತಿಸಿದೆ. ಕೇಂದ್ರ ಸರ್ಕಾರದ ಆತ್ಮನಿರ್ಭರ ಭಾರತ ಯೋಜನೆಯು ರಾಜ್ಯ ಬಜೆಟ್‌ನಲ್ಲಿ ಕೂಡ ಕಾಣಿಸಿದೆ. ಆದರೆ, ಮೂಲಸೌಕರ್ಯ ಅಭಿವೃದ್ಧಿ, ಕೈಗಾರಿಕೆ ಮತ್ತು ಲೋಕೋಪಯೋಗಿ ಇಲಾಖೆಗಳ ಕೆಲಸಗಳಿಗೆ ಆದ್ಯತೆ ನೀಡಿ ಉದ್ಯೋಗ ಸೃಷ್ಟಿಗೆ ಒತ್ತು ನೀಡಿರುವುದು ದೊಡ್ಡ ಪ್ರಮಾಣದಲ್ಲಿಲ್ಲ.

ಕರಾವಳಿ ಅಭಿವೃದ್ಧಿ ಮಂಡಳಿ ಮೂಲಕ, ಕರಾವಳಿ ಭಾಗದಲ್ಲಿ ಮೂಲಸೌಕರ್ಯ ಅಭಿವೃದ್ಧಿಗೆ ಕೆಲವು ಕ್ರಮಗಳನ್ನು ತುರ್ತಾಗಿ ಕೈಗೊಳ್ಳಬೇಕಾಗಿತ್ತು. ಅಲ್ಲಿ ಪ್ರವಾಸೋದ್ಯಮವನ್ನು ಅಭಿವೃದ್ಧಿಪಡಿಸಲು ಇದು ನೆರವಾಗುತ್ತದೆ. ಮಣ್ಣಿನಲ್ಲಿ ಕರಗದ ತ್ಯಾಜ್ಯಗಳನ್ನು ಸುರಕ್ಷಿತವಾಗಿ ವಿಲೇವಾರಿ ಮಾಡುವ ಮೂಲಸೌಕರ್ಯ ಕಲ್ಪಿಸಲು ಒಟ್ಟು ₹ 11 ಕೋಟಿ ತೆಗೆದಿರಿಸಿರುವುದು ಕೂಡ ಪ್ರಶಂಸಾರ್ಹ.

ಹಲವು ಜಿಲ್ಲೆಗಳಲ್ಲಿ ವಿಮಾನ ನಿಲ್ದಾಣ ನಿರ್ಮಿಸುವ ಪ್ರಸ್ತಾವ ಇದೆಯಾದರೂ, ಈ ಯೋಜನೆಗಳು ಪೂರ್ಣಗೊಳ್ಳಲು ಬಹಳ ಸಮಯ ತೆಗೆದುಕೊಳ್ಳುತ್ತದೆ. ಔಷಧ ಪಾರ್ಕ್, ಪ್ಲಾಸ್ಟಿಕ್ ಪಾರ್ಕ್ ಹಾಗೂ ಜವಳಿ ಪಾರ್ಕ್‌ಅನ್ನು ಕೇಂದ್ರ ಸರ್ಕಾರದ ನೆರವಿನೊಂದಿಗೆ ಆರಂಭಿಸುವುದು ಕೈಗಾರಿಕೆಗಳಿಗೆ ಉತ್ತೇಜನ ನೀಡುವ ನಿಟ್ಟಿನಲ್ಲಿ ಪ್ರಮುಖ ಹೆಜ್ಜೆಗಳು. ವಿದ್ಯುತ್ ಚಾಲಿತ ವಾಹನಗಳಿಗೆ ಆದ್ಯತೆ ನೀಡಿರುವುದು ಒಳ್ಳೆಯ ನಡೆ. ಬೆಂಗಳೂರು–ಮುಂಬೈ ಹಾಗೂ ಬೆಂಗಳೂರು-ಚೆನ್ನೈ ಕೈಗಾರಿಕಾ ಕಾರಿಡಾರ್‌ಗಳಲ್ಲಿ ಟೌನ್‌ಶಿಪ್ ನಿರ್ಮಾಣದ ಪ್ರಸ್ತಾವ ಇದೆ. ಇದು ಕಾರ್ಯರೂಪಕ್ಕೆ ಬಂದರೆ, ಬೆಂಗಳೂರಿನ ಜನಸಂದಣಿ ತಗ್ಗಿಸಲು ಸಾಧ್ಯವಾಗಬಹುದು. ಆದರೆ, ಖಾಸಗಿ ಸಹಭಾಗಿತ್ವದಲ್ಲಿ ಈ ಯೋಜನೆ ಸಕಾಲದಲ್ಲಿ ಅನುಷ್ಠಾನಕ್ಕೆ ತರುವುದು ಸವಾಲಿನ ಕೆಲಸ.

ಬಂಡವಾಳ ವೆಚ್ಚ ಈ ಬಜೆಟ್‌ನಲ್ಲಿ ಕಡಿಮೆಯಾಗಿದೆ. ಆರ್ಥಿಕ ಮೂಲಸೌಕರ್ಯವನ್ನು ಉತ್ತಮಪಡಿಸಲು ಗಮನ ನೀಡಿ, ಆರ್ಥಿಕ ಪುನಶ್ಚೇತನಕ್ಕೆ ಮತ್ತಷ್ಟು ವೇಗ ನೀಡಬಹುದಿತ್ತು. ಆದರೆ, ಅದಕ್ಕೆ ಸಂಬಂಧಿಸಿದ ಪ್ರಯತ್ನಗಳು ತೀರಾ ಕಡಿಮೆ.

(ಲೇಖಕ: ಅರ್ಥಶಾಸ್ತ್ರ ಪ್ರಾಧ್ಯಾಪಕ, ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆ ಅಧ್ಯಯನ ಸಂಸ್ಥೆ, ಬೆಂಗಳೂರು)

ಜನಪ್ರಿಯ, ಜನಪರ ಮಿಶ್ರಣದ ಬಜೆಟ್



ವಿಶ್ಲೇಷಣೆ
ಪ್ರೊ. ಎಸ್.ಆರ್. ಕೇಶವ

ಕೋವಿಡ್‌ನಿಂದ ಸರ್ಕಾರವು ಆರ್ಥಿಕ ಸಂಕಷ್ಟಕ್ಕೆ ಸಿಲುಕಿರುವ ಕಾರಣ ಈ ಬಾರಿ ಜಾತಿ ಆಧಾರಿತ ನಿಗಮಗಳು ಹಾಗೂ ಧಾರ್ಮಿಕ ಕೇಂದ್ರಗಳಿಗೆ ಅನುದಾನ ಕಡಿತ ಮಾಡಿ ಆ ಹಣವನ್ನು ಮೂಲಸೌಕರ್ಯ ಕಲ್ಪಿಸಲು ಒದಗಿಸಬಹುದಾಗಿತ್ತು. ಮಹಿಳಾ ಸಬಲೀಕರಣದ ಬಗ್ಗೆ ಈ ಹಿಂದಿನಿಂದಲೂ ಸರ್ಕಾರಗಳು ಉಚ್ಚರಿಸುತ್ತಿದ್ದರೂ ಆ ನಿಟ್ಟಿನಲ್ಲಿ ಆದ್ಯತೆ ದೊರೆತಿರಲಿಲ್ಲ. ಈ ಬಾರಿ ಮಹಿಳೆಯರ ಶ್ರೇಯೋಭಿವೃದ್ಧಿಗೆ ಹಲವು ಕೊಡುಗೆಗಳನ್ನು ನೀಡಲಾಗಿದೆ. ಒಟ್ಟಾರೆ ಇದು ಜನಪ್ರಿಯ ಮತ್ತು ಜನಪರ ಮಿಶ್ರಣ ಹೊಂದಿರುವ ಬಜೆಟ್ ಆಗಿದೆ.

ರಾಜ್ಯದ ಒಟ್ಟಾರೆ ಆಂತರಿಕ ಉತ್ಪನ್ನವು (ಜಿಎಸ್‌ಡಿಪಿ) ಕಳೆದ ಸಾಲಿಗೆ ಹೋಲಿಸಿದಲ್ಲಿ ಶೇ (–) 2.6ರಷ್ಟು ಕುಸಿತ ಕಾಣಲಿದೆ. ಕೈಗಾರಿಕಾ ವಲಯವು ಶೇ(–) 5.1ರಷ್ಟು ಹಾಗೂ ಸೇವಾ ವಲಯವು ಶೇ(–) 3.1ರಷ್ಟು ಇಳಿಕೆ ಕಾಣಬಹುದು ಎಂದು ಆರ್ಥಿಕ ಸಮೀಕ್ಷೆ ಹೇಳಿದೆ. ಕೋವಿಡ್‌ನಿಂದಾಗಿ ಆರ್ಥಿಕ ಚಟುವಟಿಕೆಗಳು ಸಂಪೂರ್ಣ ಸ್ಥಗಿತಗೊಂಡಿದ್ದ ಕಾರಣ ರಾಜ್ಯ ಹಾಗೂ ಕೇಂದ್ರ ಸರ್ಕಾರದ ತೆರಿಗೆ ಸಂಗ್ರಹವು ಬಜೆಟ್ ಅಂದಾಜಿಗಿಂತ ಕಡಿಮೆಯಾಗಿದೆ. ಈ ಸಂದರ್ಭದಲ್ಲಿ ನಿಗಮ ಮಂಡಳಿಗಳು ಸೇರಿದಂತೆ ವಿವಿಧ ಸಮುದಾಯಗಳು ಹಾಗೂ ಧಾರ್ಮಿಕ ಕೇಂದ್ರಗಳಿಗೆ ಸುಮಾರು ₹ 3 ಸಾವಿರ ಕೋಟಿ ನೀಡಲಾಗಿದೆ. ಈ ಹಣವನ್ನು ಧಾರ್ಮಿಕ ಕೇಂದ್ರಗಳಿಗೆ ಅಗತ್ಯವಿರುವ ರಸ್ತೆ, ಸಾರಿಗೆ ಸೇರಿದಂತೆ ಮೂಲಸೌಕರ್ಯಕ್ಕೆ ನೀಡಿದರೂ ಧಾರ್ಮಿಕ ಪ್ರವಾಸೋದ್ಯಮ ಬೆಳವಣಿಗೆ ಹೊಂದುತ್ತಿತ್ತು.

ಮಹಿಳೆಯರಿಗೆ ಮತ್ತು ಪ್ರವಾಸೋದ್ಯಮಕ್ಕೆ ಆದ್ಯತೆ ನೀಡಿರುವುದು ಉತ್ತಮವಾದ ನಡೆ. ಮಹಿಳಾ ಉದ್ಯಮಿಗಳನ್ನು ಪ್ರೋತ್ಸಾಹಿಸುವ ಉದ್ದೇಶದಿಂದ ₹ 2 ಕೋಟಿವರೆಗೆ ಶೇಕಡ 4ರ ರಿಯಾಯಿತಿ ಬಡ್ಡಿದರದಲ್ಲಿ ಸಾಲಸೌಲಭ್ಯ ಒದಗಿಸುತ್ತಿರುವುದು ಮಹಿಳೆಯರಿಗೆ ನೆರವಾಗಲಿದೆ. ಹಪ್ಪಳ, ಉಪ್ಪಿನಕಾಯಿ ಸೇರಿದಂತೆ ವಿವಿಧ ಆಹಾರ ಪದಾರ್ಥಗಳು ಬ್ರ್ಯಾಂಡಿಂಗ್ ಇಲ್ಲದೆಯೇ ಸೊರಗಿದ್ದವು. ಅವುಗಳ ಬಗ್ಗೆ ಕೂಡ ಯೋಚಿಸಿ, ಇ–ಮಾರುಕಟ್ಟೆಯ ಪರಿಕಲ್ಪನೆಯನ್ನೂ ಮುಂಚೂಣಿಗೆ ತರಲಾಗುತ್ತಿರುವುದು ಸ್ವಾಗತಾರ್ಹ.

ಯಾವಾಗಲೂ ಜನರ ಜೀವನ ಮಟ್ಟ ಹಸನುಗೊಳಿಸಲು ಬೆಲೆಯನ್ನು ಮಿತಿಯಲ್ಲಿ ಇಡಬೇಕು. ಪೆಟ್ರೋಲ್, ಡೀಸೆಲ್ ಕರವು ನೇರವಾಗಿ ಸರ್ಕಾರಕ್ಕೆ ಹೋಗುತ್ತದೆ. ಅದನ್ನು ಹೆಚ್ಚಿಸದಿರುವುದು ಸಮಾಧಾನ.

(ಲೇಖಕ: ಅರ್ಥಶಾಸ್ತ್ರ ಪ್ರಾಧ್ಯಾಪಕ, ಬೆಂಗಳೂರು ವಿ.ವಿ)

ಆಸ್ತಿ ವಂಚನೆ ತಡೆಗೆ ಬ್ಲಾಕ್‌ಚೈನ್

‘ಜನಸ್ನೇಹಿ ಮತ್ತು ಕ್ರಿಯಾಶೀಲ ಆಡಳಿತ ಸರ್ಕಾರದ ಧ್ಯೇಯ’ ಎಂದು ಹೇಳಿಕೊಂಡಿರುವ ಮುಖ್ಯಮಂತ್ರಿ ಬಿ.ಎಸ್‌.ಯಡಿಯೂರಪ್ಪ, ಆಡಳಿತ ಹಾಗೂ ಸಾರ್ವಜನಿಕ ಸೇವೆ ಸುಧಾರಣೆಗಾಗಿ ಹಲವಾರು ಕಾರ್ಯಕ್ರಮಗಳನ್ನು ಪ್ರಕಟಿಸಿದ್ದಾರೆ. ‘ಸರ್ಕಾರದ ಸೇವೆ ಹಾಗೂ ಸೌಲಭ್ಯಗಳನ್ನು ಜನರ ಮನೆ ಬಾಗಿಲಿಗೇ ತಲುಪಿಸಲು, ತಂತ್ರಜ್ಞಾನ ಬಳಸಿ ನಿಖರ, ಪಾರದರ್ಶಕ ಆಡಳಿತ ಮತ್ತು ತ್ವರಿತ ಸೇವೆ ಒದಗಿಸಲು ಕ್ರಮಕೈಗೊಳ್ಳುತ್ತೇವೆ’ ಎಂದು ಭರವಸೆ ನೀಡಿದ್ದಾರೆ.

ಆಸ್ತಿ ನೋಂದಣಿಯಲ್ಲಿ ವಂಚನೆ ಹಾಗೂ ದಾಖಲೆ ತಿರುಚುವ ಪ್ರಕರಣಗಳಿಗೆ ಕಡಿವಾಣ ಹಾಕಲು ಅತ್ಯಾಧುನಿಕ ‘ಬ್ಲಾಕ್‌ಚೈನ್ ತಂತ್ರಜ್ಞಾನ’ದ ಮೊರೆ ಹೋಗಲು ಸರ್ಕಾರ ಮುಂದಾಗಿದೆ. ಆಸ್ತಿ ನೋಂದಣಿ ಪ್ರಕ್ರಿಯೆ ಸುಧಾರಣೆಗೆ ಕಾನ್ಪುರದ ಭಾರತೀಯ ತಂತ್ರಜ್ಞಾನ ಸಂಸ್ಥೆ ನೆರವಿನಿಂದ ಪ್ರಾಯೋಗಿಕ ಯೋಜನೆ ರೂಪಿಸಲು ₹ 1 ಕೋಟಿ ಕಾಯ್ದಿರಿಸಿದೆ. ಆಸ್ತಿ ಕುರಿತ ಗೊಂದಲಗಳನ್ನು ಪರಿಹರಿಸುವಲ್ಲಿ ಇದು ಮಹತ್ತರ ಹೆಜ್ಜೆ.

ವಿವಿಧ ಇಲಾಖೆಗಳು ಭೂ ಸಂಬಂಧಿ ಚಟುವಟಿಕೆಗಳಿಗೆ ಪ್ರತ್ಯೇಕ ತಂತ್ರಾಂಶ ಹೊಂದಿವೆ. ಒಂದೇ ಜಮೀನಿಗೆ ಒಂದಕ್ಕಿಂತ ಹೆಚ್ಚು ಗುರುತುಗಳ ಸೃಷ್ಟಿಗೆ ಇದು ಕಾರಣವಾಗುತ್ತಿದೆ. ಇದನ್ನು ತಪ್ಪಿಸಲು ಏಕೀಕೃತ ಭೂ ನಿರ್ವಹಣಾ ವ್ಯವಸ್ಥೆ ಜಾರಿಗೊಳಿಸುವುದಾಗಿ ಸರ್ಕಾರ ಹೇಳಿದೆ.

ಕ್ರಮಬದ್ಧ ಅಭಿವೃದ್ಧಿಗೆ ಉತ್ತೇಜನ ನೀಡುವ ಸಲುವಾಗಿ ‘ನಗರ ಮಹಾ ಯೋಜನೆ’ ಅಥವಾ ಯೋಜನಾ ಪ್ರಾಧಿಕಾರದ ಮಂಜೂರಾತಿಯನ್ವಯ ಕೃಷಿ ಭೂಮಿ ಅನ್ಯ ಉದ್ದೇಶಗಳಿಗೆ ಪರಿವರ್ತಿಸುವ ಪ್ರಕ್ರಿಯೆ ಸರಳೀಕರಿಸಲು ಭೂ ಕಂದಾಯ ಕಾಯ್ದೆಗೆ ತಿದ್ದುಪಡಿ ಮಾಡುವುದಾಗಿ ಮುಖ್ಯಮಂತ್ರಿ ತಿಳಿಸಿದ್ದಾರೆ. ಇದನ್ನು ಯಾವ ರೀತಿ ಮಾಡಲಾಗುತ್ತದೆ ಎಂದು ವಿವರಿಸಿಲ್ಲ. ಕೃಷಿ ಭೂಮಿ ರಿಯಲ್ ಎಸ್ಟೇಟ್ ಉದ್ದೇಶಕ್ಕೆ ಬಳಕೆಯಾಗುವುದಕ್ಕೆ ಉತ್ತೇಜನ ಸಿಗದಂತೆ ಸರ್ಕಾರ ಎಚ್ಚರವಹಿಸಬೇಕು. ವಿಪತ್ತುಗಳ ಸಂದರ್ಭದಲ್ಲೂ ಸರ್ಕಾರದ ಡೇಟಾ ಸುರಕ್ಷಿತವಾಗಿಡು-ವುದು ದೊಡ್ಡ ಸವಾಲು. ವಿಪತ್ತಿನ ಬಳಿಕವೂ ಅಗತ್ಯ ದತ್ತಾಂಶವನ್ನು ಮತ್ತೆ ಲಭ್ಯವಾಗುವಂತೆ ಮಾಡಿಕೊಳ್ಳಲು ಅನುಕೂಲವಾಗುವಂತೆ ‘ರಾಜ್ಯ ದತ್ತಾಂಶ ಕೇಂದ್ರದ ವಿಪತ್ತು ಚೇತರಿಕೆ ಮತ್ತು ವ್ಯವಹಾರ ಮುಂದುವರಿಕೆ ತಾಣ’ ರೂಪಿಸಲು ₹ 35 ಕೋಟಿ ನೀಡಿರುವುದು ಸ್ವಾಗತಾರ್ಹ.

ರಾಜ್ಯದ ಎಲ್ಲ ಶಿಕ್ಷಣ ಸಂಸ್ಥೆಗಳ ಶೈಕ್ಷಣಿಕ ದಾಖಲೆಗಳನ್ನು ಆನ್‌ಲೈನ್‌ನಲ್ಲಿ ಸಂಗ್ರಹಿಸಿ, ಪ್ರಕಟಿಸಲು ರಾಷ್ಟ್ರೀಯ ಶೈಕ್ಷಣಿಕ ಡೆಪಾಸಿಟರಿ ಅನುಷ್ಠಾನಕ್ಕೆ ₹ 3 ಕೋಟಿ ಕಾಯ್ದಿರಿಸಲಾಗಿದೆ. ಶೈಕ್ಷಣಿಕ ದಾಖಲೆಗಳ ಸತ್ಯಾಸತ್ಯತೆ ಪರಿಶೀಲನೆ ಸುಲಭಗೊಳಿಸಲು ಈ ಕ್ರಮದ ಅನಿವಾರ್ಯ ಇತ್ತು.

ರಾಜ್ಯದ 5.5 ಕೋಟಿ ನಿವಾಸಿಗಳ ಕೌಟುಂಬಿಕ ಗುರುತು ಸರ್ಕಾರದ ಬಳಿ ಲಭ್ಯವಿದೆ. ಸರ್ಕಾರವು ಸ್ವಯಂಪ್ರೇರಣೆಯಿಂದ ನಾಗರಿಕ ಸೇವೆ ಮತ್ತು ಸೌಲಭ್ಯ ಒದಗಿಸಲು ಸಾಮಾಜಿಕ ನೋಂದಣಿ ಪುಸ್ತಕ ಮತ್ತು ಅರ್ಹತಾ ನಿರ್ವಹಣೆ ವ್ಯವಸ್ಥೆ ಜಾರಿಗೆ ತರುವ ಪ್ರಸ್ತಾಪ ಬಜೆಟ್‌ನಲ್ಲಿದೆ. ಈ ವ್ಯವಸ್ಥೆಯನ್ನು ಫಲಾನುಭವಿ ನಿರ್ವಹಣೆ ವ್ಯವಸ್ಥೆ, ಆರ್ಥಿಕ ಸೌಲಭ್ಯ ನೇರ ವರ್ಗಾವಣೆ (ಡಿಬಿಟಿ) ವೇದಿಕೆ ಮತ್ತು ಸಾರ್ವಜನಿಕ ಕುಂದುಕೊರತೆ ಪರಿಹಾರ ವ್ಯವಸ್ಥೆಗ-ಳೊಂದಿಗೆ ಸಂಯೋಜಿಸಲಾಗುತ್ತದೆ. ಎಲ್ಲ ಇಲಾಖೆಗಳು ತಮ್ಮ ವ್ಯವಸ್ಥೆಯಲ್ಲಿ ಕೌಟುಂಬಿಕ ಗುರುತುಗಳನ್ನು ದಾಖಲಿಸಲು ಕ್ರಮವಹಿಸಲಾಗುತ್ತದೆ. ಈ ಯೋಜನೆಗೆ ಸರ್ಕಾರ ₹ 15 ಕೋಟಿ ಅನುದಾನ ಮೀಸಲಿಟ್ಟಿದೆ.

ಪ್ರಸ್ತುತ 90 ಯೋಜನೆಗಳಡಿ ಆರ್ಥಿಕ ಸೌಲಭ್ಯವನ್ನು ಫಲಾನುಭವಿಗಳಿಗೆ ನೇರವಾಗಿ ಪಾವತಿ ಮಾಡಲಾಗುತ್ತಿದೆ. ಇನ್ನುಳಿದ ಯೋಜನೆಗಳನ್ನೂ ಡಿಬಿಟಿ ವೇದಿಕೆಯಡಿ ತರುತ್ತಿರುವುದು ಒಳ್ಳೆಯದೇ. ಫಲಾನುಭವಿ ಅದಲು ಬದಲಾಗುವುದು, ಸಕಾಲದಲ್ಲಿ ಸೌಲಭ್ಯ ತಲುಪದಿರುವುದು ಸೇರಿದಂತೆ ಹಲವಾರು ತಾಂತ್ರಿಕ ಲೋಪಗಳೂ ಈ ವ್ಯವಸ್ಥೆಯಲ್ಲಿವೆ. ಇಂತಹ ಲೋಪಗಳನ್ನು ಬಗೆಹರಿಸಲೂ ಕ್ರಮಕೈಗೊಳ್ಳಬೇಕು. ಮೂಲಗೇಣಿದಾರರು, ಕುಮ್ಕಿ, ಖಾನೆ, ಬಾನೆ, ಡೀಮ್ಡ್ ಅರಣ್ಯ ಸಾಗುವಳಿದಾರರ ಸಮಸ್ಯೆಗಳ ಅಧ್ಯಯನ ನಡೆಸಿ ಪರಿಹಾರೋಪಾಯ ಕಂಡುಕೊಳ್ಳಲು ಸಮಿತಿ ರಚಿಸುವ ಬಗ್ಗೆ ಪ್ರಸ್ತಾಪಿಸಲಾಗಿದೆ. ದಶಕಗಳ ಈ ಗೊಂದಲಗಳಿಗೆ ಈ ಸಮಿತಿ ತಾರ್ಕಿಕ ಅಂತ್ಯ ಕಾಣಿಸುತ್ತದೆಯೋ ಕಾದು ನೋಡಬೇಕು.

ಸರ್ಕಾರಿ ನೌಕರರ ಸೌಲಭ್ಯ ಮತ್ತು ಸೇವೆಗಳನ್ನು ಆನ್‌ಲೈನ್‌ನಲ್ಲಿ ಒದಗಿಸಲು ಎಚ್‌ಆರ್‌ಎಂಎಸ್‌–2 ಯೋಜನೆಯನ್ನು ಹಾಗೂ ಜ್ಯೋತಿ ಸಂಜೀವಿನಿ ಯೋಜನೆಯಡಿ ನಗದುರಹಿತ ಚಿಕಿತ್ಸೆ ಒದಗಿಸುವ ಹಳೆ ಯೋಜನೆಗಳನ್ನು 2021–22ರಲ್ಲಿ ಜಾರಿಗೊಳಿಸುವು-ದಾಗಿ ಮುಖ್ಯಮಂತ್ರಿ ಭರವಸೆ ನೀಡಿದ್ದಾರೆ. ಕರ್ನಾಟಕ ಸರ್ಕಾರಿ ನೌಕರರ ವಿಮಾ ಇಲಾಖೆಯ ಎಲ್ಲ ಪ್ರಕ್ರಿಯೆಗಳನ್ನು ಕಂಪ್ಯೂಟರೀಕರಿಸುವುದಾಗಿಯೂ ಹೇಳಿದ್ದಾರೆ.

ಆಡಳಿತ ಸುಧಾರಣೆ ಕಾರ್ಯಕ್ರಮಗಳು

- ರಾಜ್ಯದ ಡೇಟಾ ಕೇಂದ್ರದ ಸೈಬರ್ ಸುರಕ್ಷತೆ ಬಲಪಡಿಸಲು ಸುಸಜ್ಜಿತ ಭದ್ರತಾ ಕಾರ್ಯಾಚರಣೆ ಕೇಂದ್ರದ ಸ್ಥಾಪನೆಗೆ ₹ 2 ಕೋಟಿ
- ಜನರಿಗೆ ನಿಖರ ಹಾಗೂ ತ್ವರಿತ ಭೂದಾಖಲೆ ಒದಗಿಸಲು ಗಣಕೀಕೃತ ಆಕಾರ್‌ಬಂದ್ ಮಾಹಿತಿ ಹಾಗೂ ಪಹಣಿ ಮಾಹಿತಿ ಸಂಯೋಜನೆ.
- ಗ್ರಾಮೀಣ ಜನವಸತಿ ಪ್ರದೇಶಗಳಲ್ಲಿ ಹಕ್ಕು ದಾಖಲೆ ವಿತರಿಸುವ ‘ಸ್ವಾಮಿತ್ವ’ ಯೋಜನೆ ತ್ವರಿತ ಜಾರಿಗೆ ₹ 25 ಕೋಟಿ.
- 48 ನಗರ ಮತ್ತು ಪಟ್ಟಣಗಳಲ್ಲಿ ನಗರ ಮಾಪನ ದಾಖಲೆಗಳನ್ನು ಸ್ಕ್ಯಾನ್ ಮಾಡಿ ಸಂರಕ್ಷಿಸುವುದು
- ಸರ್ಕಾರದ ಜಾಹೀರಾತು ನಿರ್ವಹಣೆಗೆ ಬ್ರ್ಯಾಂಡ್ ಪ್ರೊಮೋಷನ್ ಕೌನ್ಸಿಲ್ ರಚನೆ
- ಸಿನಿಮಾ ಚಿತ್ರೀಕರಣಕ್ಕೆ ಅನುಮತಿ ನೀಡುವ ಪ್ರಕ್ರಿಯೆಗೆ ಸೇವಾಸಿಂಧು ಪೋರ್ಟಲ್ ಮೂಲಕ ಏಕಗವಾಕ್ಷಿ ವ್ಯವಸ್ಥೆ

ಬಸವೇಶ್ವರರ ಸ್ಮರಣೆ

ಕೋವಿಡ್ ಕಾರಣದಿಂದ ಆರ್ಥಿಕವಾಗಿ ಸಂಕಷ್ಟಕ್ಕೆ ಈಡಾಗಿದ್ದರಿಂದ ಹೆಚ್ಚಿನ ಅನುದಾನ ನೀಡಬೇಕು ಎಂದು ಕೆಲವು ಮಠಾಧೀಶರು ಮನವಿ ಮಾಡಿಕೊಂಡಿದ್ದರು. ನಿರೀಕ್ಷಿಸಿದ ಮಟ್ಟದಲ್ಲಿ ಆ ಮನವಿಗೆ ಸ್ಪಂದನೆ ಸಿಕ್ಕಿಲ್ಲದಿದ್ದರೂ, ಜಗಜ್ಯೋತಿ ಬಸವಣ್ಣನವರ ಹುಟ್ಟೂರು ಮತ್ತು ಹೊಸ ಅನುಭವ ಮಂಟಪ ನಿರ್ಮಾಣಕ್ಕೆ ಹೆಚ್ಚು ಅನುದಾನ ಒದಗಿಸಲಾಗಿದೆ.

ಬಸವ ಕಲ್ಯಾಣದಲ್ಲಿ ನಿರ್ಮಾಣವಾಗುತ್ತಿರುವ ಹೊಸ ಅನುಭವ ಮಂಟಪಕ್ಕೆ ಕಳೆದ ಬಾರಿ ₹100 ಕೋಟಿ ಒದಗಿಸಿದ್ದರೆ, ಈ ಬಾರಿ ₹200 ಕೋಟಿ ತೆಗೆದಿರಿಸಲಾಗಿದೆ. ಒಟ್ಟು ₹500 ಕೋಟಿ ವೆಚ್ಚದಲ್ಲಿ ಅನುಭವ ಮಂಟಪ ನಿರ್ಮಾಣವಾಗುತ್ತಿದೆ.

ಜನ್ಮಸ್ಥಳ ಅಭಿವೃದ್ಧಿಗೆ ₹5 ಕೋಟಿ: ಜಗಜ್ಯೋತಿ ಬಸವೇಶ್ವರರ ಜನ್ಮಸ್ಥಳವಾದ ಇಂಗಳೇಶ್ವರ ಗ್ರಾಮದ ಅಭಿವೃದ್ಧಿಗೆ ₹5 ಕೋಟಿ ನೀಡಲಾಗಿದೆ. ವಿಜಯಪುರದ ಬಸವನ ಬಾಗೇವಾಡಿ ತಾಲ್ಲೂಕಿನಲ್ಲಿ ಈ ಗ್ರಾಮವಿದೆ. ಶ್ರವಣಬೆಳಗೊಳ ಸೇರಿದಂತೆ ಜೈನ ಪುಣ್ಯಕ್ಷೇತ್ರಗಳ ಮೂಲಸೌಕರ್ಯ ಅಭಿವೃದ್ಧಿಗೆ ₹50 ಕೋಟಿ ಒದಗಿಸಲಾಗಿದೆ. ಇದಲ್ಲದೆ, ತುಮಕೂರಿನಲ್ಲಿ ಶಿವಕುಮಾರ ಸ್ವಾಮೀಜಿ ಮತ್ತು ಉಡುಪಿಯಲ್ಲಿ ಪೇಜಾವರ ಶ್ರೀ ವಿಶ್ವೇಶತೀರ್ಥ ಸ್ವಾಮೀಜಿಯವರ ಗೌರವಾರ್ಥ ತಲಾ ₹2 ಕೋಟಿ ವೆಚ್ಚದಲ್ಲಿ ಸ್ಮೃತಿವನ ನಿರ್ಮಿಸುವುದಾಗಿ ಮುಖ್ಯಮಂತ್ರಿ ಘೋಷಿಸಿದ್ದಾರೆ.



ರಾಜ್ಯದಿಂದ ಅಯೋಧ್ಯೆಗೆ ಭೇಟಿ ನೀಡುವ ಭಕ್ತರಿಗಾಗಿ ಯಾತ್ರಿ ನಿವಾಸ ನಿರ್ಮಾಣಕ್ಕೆ ಪ್ರಸಕ್ತ ಸಾಲಿನಲ್ಲಿ ₹10 ಕೋಟಿಯನ್ನು ಬಜೆಟ್‌ನಲ್ಲಿ ಮೀಸಲಿಡಲಾಗಿದೆ.

ಹಲವು ಜಿಲ್ಲೆಗಳಿಗೆ ವಿಶೇಷ ಯೋಜನೆಗಳು

■ ವಿಶೇಷ ಯೋಜನೆ ಘೋಷಿಸಲಾದ ಜಿಲ್ಲೆಗಳು □ ವಿಶೇಷ ಯೋಜನೆ ದೊರೆಯದ ಜಿಲ್ಲೆಗಳು



- ಬಸವಣ್ಣನವರ ಜನ್ಮಸ್ಥಳವಾದ ವಿಜಯಪುರ ಜಿಲ್ಲೆಯ ಬಸವನ ಬಾಗೇವಾಡಿಯ ಇಂಗಳೇಶ್ವರ ಗ್ರಾಮದ ಅಭಿವೃದ್ಧಿಗೆ ₹ **5** ಕೋಟಿ
- ಬೀದರ್‌ನಲ್ಲಿ ಕೃಷಿ ಉಪಕರಣಗಳ ತಯಾರಿಕಾ ಕ್ಲಸ್ಟರ್ ಸ್ಥಾಪನೆ
- ಕಲಬುರ್ಗಿ ಜಿಲ್ಲೆಯ ಫಿರೋಜಾಬಾದ್‌ನಲ್ಲಿ 1,551 ಎಕರೆ ವಿಸ್ತೀರ್ಣದಲ್ಲಿ 500 ಮೆಗಾವಾಟ್ ಸಾಮರ್ಥ್ಯದ ಸೌರಶಕ್ತಿ ಪಾರ್ಕ್ ಸ್ಥಾಪನೆ
- ಬಾಗಲಕೋಟೆಯ ಬಾದಾಮಿಯ ಗುಳೇದಗುಡ್ಡ ನಗರದಲ್ಲಿ ಜವಳಿ ಪಾರ್ಕ್ ಸ್ಥಾಪನೆ
- ಯಾದಗಿರಿ ಜಿಲ್ಲೆಯ ಕಡೆಚೂರು ಕೈಗಾರಿಕಾ ಪ್ರದೇಶ 1,500 ಎಕರೆ ಭೂಮಿಯಲ್ಲಿ ₹ **1,478** ಕೋಟಿ ವೆಚ್ಚದಲ್ಲಿ ‘ಬಲ್ಕ್ ಡ್ರಗ್ ಪಾರ್ಕ್’ ಅಭಿವೃದ್ಧಿ. ಕೇಂದ್ರ ಸರ್ಕಾರದ ನೆರವಿನೊಂದಿಗೆ ಅನುಷ್ಠಾನ
- ಬೆಳಗಾವಿ ಜಿಲ್ಲೆಯ ನಿಪ್ಪಾಣಿಯಲ್ಲಿ ‘ಕೊಲ್ಹಾಪುರಿ’ ಪಾದರಕ್ಷೆಗಳ ಕ್ಲಸ್ಟರ್ ಪ್ರಾರಂಭ
- ಕೊಪ್ಪಳದಲ್ಲಿ ನಾರಿ ಸುವರ್ಣ ಕುರಿ ತಳಿ ಸಂವರ್ಧನಾ ಕೇಂದ್ರ ಸ್ಥಾಪನೆ
- ಉತ್ತರ ಕನ್ನಡ ಜಿಲ್ಲೆಯ ಕರಾವಳಿ ಪ್ರದೇಶದ ನದಿಗಳಲ್ಲಿ ಪ್ರವಾಹ ಉಂಟಾದಾಗ ಮತ್ತು ಭಾರಿ ಅಲೆಗಳಿಂದ ಉಪ್ಪುನೀರು ಹಿಮ್ಮುಖವಾಗಿ ನುಗ್ಗುವುದನ್ನು ತಡೆಯಲು ಫ್ಲ್ಯಾಪ್ ಗೇಟ್ ಮುಖಾಂತರ ತಡೆಗಟ್ಟುವ ಖಾರಾಲ್ಯಾಂಡ್ ಯೋಜನೆಯ ಅನುಷ್ಠಾನಕ್ಕೆ ₹ **300** ಕೋಟಿ
- ಬಳ್ಳಾರಿಯ ಆಲದಹಳ್ಳಿಯಲ್ಲಿ ಅತ್ಯಾಧುನಿಕ ಸೌಲಭ್ಯವುಳ್ಳ ಒಣಮೆಣಸಿನಕಾಯಿ ಮಾರುಕಟ್ಟೆಯನ್ನು ಸಾರ್ವಜನಿಕ–ಖಾಸಗಿ ಸಹಭಾಗಿತ್ವದಲ್ಲಿ ಸ್ಥಾಪಿಸಲಾಗುತ್ತದೆ
- ದಾವಣಗೆರೆಯಲ್ಲಿ 50 ಹಾಸಿಗೆ ಸಾಮರ್ಥ್ಯದ ಜಯದೇವ ಹೃದ್ರೋಗ ವಿಜ್ಞಾನ ಸಂಸ್ಥೆಯ ಉಪಕೇಂದ್ರ ಸ್ಥಾಪನೆ. ₹ **20** ಕೋಟಿ ವೆಚ್ಚ
- ಚಿತ್ರದುರ್ಗದಲ್ಲಿ, ಕೇಂದ್ರ ಪಾದರಕ್ಷಾ ತರಬೇತಿ ಸಂಸ್ಥೆಯ ವಿಸ್ತರಣಾ ಕೇಂದ್ರ ಪ್ರಾರಂಭ
- ಶಿವಮೊಗ್ಗ ಜಿಲ್ಲೆಯ ಆಯುರ್ವೇದ ಕಾಲೇಜನ್ನು ಆಯುಷ್ ವಿಶ್ವವಿದ್ಯಾಲಯವನ್ನಾಗಿ ಮೇಲ್ದರ್ಜೆಗೆ ಏರಿಸಲಾಗುತ್ತದೆ.
- ತುಮಕೂರಿನಲ್ಲಿ ಶ್ರೀ ಶಿವಕುಮಾರ ಸ್ವಾಮೀಜಿ ಗೌರವಾರ್ಥ ಸ್ಮೃತಿವನ ಅಭಿವೃದ್ಧಿಗೆ ₹ **2** ಕೋಟಿ
- ಉಡುಪಿಯ ಬೈಂದೂರಿನ ಸೋಮೇಶ್ವರ ಕಡಲ ತೀರ ಅಭಿವೃದ್ಧಿಗೆ ₹ **10** ಕೋಟಿ
- ಡಾ.ಹೆಚ್.ನರಸಿಂಹಯ್ಯ ಅವರ ಹೆಸರಿನಲ್ಲಿ, ಅವರ ಹುಟ್ಟೂರಾದ ಚಿಕ್ಕಬಳ್ಳಾಪುರ ಜಿಲ್ಲೆಯ ಗೌರಿಬಿದನೂರಿನ ಹೊಸೂರಿನಲ್ಲಿ 200 ಎಕರೆ ವಿಸ್ತೀರ್ಣದ ಅಂತರರಾಷ್ಟ್ರೀಯ ವಿಜ್ಞಾನ ಕೇಂದ್ರ ಸ್ಥಾಪನೆ. ಈ ಸಾಲಿನಲ್ಲಿ ₹ **10** ಕೋಟಿ ಅನುದಾನ
- ಮಂಗಳೂರಿನ ಗಂಜಿಮಠ ಪ್ರದೇಶದಲ್ಲಿ 100 ಎಕರೆ ವಿಸ್ತೀರ್ಣದಲ್ಲಿ, ₹ **66** ಕೋಟಿ ವೆಚ್ಚದಲ್ಲ ಪ್ಲಾಸ್ಟಿಕ್ ಪಾರ್ಕ್ ಸ್ಥಾಪನೆ
- ಹಾಸನದ ಶ್ರವಣಬೆಳಗೊಳದಲ್ಲಿ ಮೂಲಸೌಕರ್ಯ ಅಭಿವೃದ್ಧಿಗೆ ₹ **50** ಕೋಟಿ ಘೋಷಣೆ. ಈ ಸಾಲಿನಲ್ಲಿ ₹ **20** ಕೋಟಿ ಮೀಸಲು
- ಬೆಂಗಳೂರು ನಗರ ಜಿಲ್ಲೆಯ ಓಕಳೀಪುರದಲ್ಲಿ ರೇಷ್ಮೆ ಇಲಾಖೆಯ ಜಮೀನಿನಲ್ಲಿ ಇಲಾಖೆಯ ಎಲ್ಲಾ ಕಚೇರಿಗಳು, ಸಂಬಂಧಿತ ಸಂಸ್ಥೆಗಳು, ವಾಣಿಜ್ಯ ಮಳಿಗೆಗಳನ್ನು ಒಳಗೊಂಡ ರೇಷ್ಮೆ ಭವನ ನಿರ್ಮಾಣ. ಖಾಸಗಿ ಸಹಭಾಗಿತ್ವದಲ್ಲಿ ₹ **150** ಕೋಟಿ ವೆಚ್ಚ
- ಮಂಡ್ಯ ನಗರ ಕ್ರೀಡಾಂಗಣದ ಅಭಿವೃದ್ಧಿಗೆ ₹ **10** ಕೋಟಿ ಮೀಸಲು
- ಚಾಮರಾಜನಗರ ಜಿಲ್ಲೆಯ ಗೋಪಿನಾಥಂನಲ್ಲಿ ₹ **5** ಕೋಟಿ ವೆಚ್ಚದಲ್ಲಿ ವನ್ಯಜೀವಿ ಸಫಾರಿ ಆರಂಭ. ಜಿಲ್ಲೆಯ ಬೂದಿಪಡಗದಲ್ಲಿ ₹ **1** ಕೋಟಿ ವೆಚ್ಚದಲ್ಲಿ ಆನೆಶಿಬಿರ ಆರಂಭ
- ರಾಮನಗರದಲ್ಲಿ ಹೈಟೆಕ್ ರೇಷ್ಮೆಗೂಡು ಮಾರುಕಟ್ಟೆ. ನಬಾರ್ಡ್ ಸಹಭಾಗಿತ್ವದಲ್ಲಿ ₹ **75** ಕೋಟಿ ವೆಚ್ಚದಲ್ಲಿ ನಿರ್ಮಾಣ
- ಶಿವಮೊಗ್ಗ ಮತ್ತು ಮೈಸೂರು ಜಿಲ್ಲೆಯಲ್ಲಿ ಒಟ್ಟು ₹ **100** ಕೋಟಿ ವೆಚ್ಚದಲ್ಲಿ ಕಿದ್ವಾಯಿ ಮಾದರಿಯ ಪ್ರಾದೇಶಿಕ ಕ್ಯಾನ್ಸರ್ ಚಿಕಿತ್ಸಾ ಕೇಂದ್ರಗಳ ಸ್ಥಾಪನೆ

ಪ್ರಜಾವಾಣಿ ಗ್ರಾಫಿಕ್ಸ್: ಶಿಲ್ಪಾ ಕಬ್ಬಿಣಕಂತಿ

ಆಲೆಮಾರಿ ಸಮುದಾಯಕ್ಕೆ ಸಿಗದ ಆರ್ಥಿಕ ಆಸರೆ

ಪ್ರಬಲ ವರ್ಗಗಳತ್ತ ಲಕ್ಷ್ಯ ತಳಸಮುದಾಯ ನಿರ್ಲಕ್ಷ್ಯ

• ವಿಜಯಕುಮಾರ್ ಎಸ್.ಕೆ

ಬೆಂಗಳೂರು: ‘ಸಾಮಾಜಿಕ ನ್ಯಾಯದೊಂದಿಗೆ ಸಮ ಸಮಾಜ ನಿರ್ಮಾಣಕ್ಕೆ ಬುನಾದಿ’ ಎಂದು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ಬಜೆಟ್‌ನಲ್ಲಿ ಉದ್ಘೋಷಿಸಿದ್ದಾರೆ. ಆದರೆ ಅನುದಾನ ಹಂಚಿಕೆ ಮಾಡುವಾಗ ತಳ ಸಮುದಾಯಕ್ಕೆ ಸಂಬಂಧಿಸಿದ 16 ನಿಗಮಗಳಿಗೆ ₹500 ಕೋಟಿ ನಿಗದಿ ಮಾಡಿದರೆ, ಒಕ್ಕಲಿಗ, ವೀರಶೈವ ಲಿಂಗಾಯತ ಸಮುದಾಯಗಳಿಗೆ ತಲಾ ₹500 ಕೋಟಿ ಕೊಡುವುದಾಗಿ ಘೋಷಿಸಿದ್ದಾರೆ. ಅಲ್ಪಸಂಖ್ಯಾತರಿಗೆ ₹1,500 ಕೋಟಿ ನಿಗದಿ ಮಾಡಿ ಓಲೈಸುವ ಪ್ರಯತ್ನವನ್ನೂ ಮಾಡಿದ್ದಾರೆ. ಆದರೆ, ಧ್ವನಿ ಇಲ್ಲದ ಅಲೆಮಾರಿ ಸಮುದಾಯಗಳನ್ನು ಸರ್ಕಾರ ಎಂದಿನಂತೆ ಮೂಲೆಗುಂಪು ಮಾಡಿದೆ.

ರಾಜ್ಯದ ಒಟ್ಟು ಬಜೆಟ್ ಗಾತ್ರ ಹೆಚ್ಚಾಗಿದ್ದರೂ ಪರಿಶಿಷ್ಟ ಜಾತಿ ಮತ್ತು ಬುಡಕಟ್ಟು ಉಪಯೋಜ-ನೆಗಳಿಗೆ ಕಳೆದ ವರ್ಷಕ್ಕಿಂತ ₹925 ಕೋಟಿ ಕಡಿಮೆ ಅನುದಾನ ನಿಗದಿ ಮಾಡಲಾಗಿದೆ. ಕಳೆದ ಸಾಲಿನಲ್ಲಿ ₹26,930 ಕೋಟಿ ನಿಗದಿ ಮಾಡಲಾಗಿತ್ತು. ಈ ವರ್ಷ ₹26,005 ಕೋಟಿ ನಿಗದಿಪಡಿಸಲಾಗಿದೆ. ಬದ್ಧ ವೆಚ್ಚಗಳಾದ ವೇತನ, ಗೌರವಧನ, ಅಸಲು ಮತ್ತು ಬಡ್ಡಿ ಪಾವತಿ, ಪಿಂಚಣಿ ಮೊತ್ತ ಕಳೆದ ಸಾಲಿಗಿಂತ ₹13,400 ಕೋಟಿ ಹೆಚ್ಚಳವಾಗಿರುವ ಕಾರಣ ಎಸ್‌ಟಿಪಿ ಮತ್ತು ಟಿಎಸ್‌ಪಿ ಹಂಚಿಕೆ ಕಡಿಮೆಯಾಗಿದೆ ಎಂಬ ಸಮರ್ಥನೆ ನೀಡಲಾಗಿದೆ.

ಜಿಲ್ಲಾ ಕೇಂದ್ರಗಳಲ್ಲಿ ವಿದ್ಯಾರ್ಥಿ ನಿಲಯಗಳಿಗೆ ಬೇಡಿಕೆ ಇದ್ದು, ಮೆಟ್ರಿಕ್ ನಂತರದ 50 ವಿದ್ಯಾರ್ಥಿ ನಿಲಯಗಳನ್ನು ಒಟ್ಟು ₹50 ಕೋಟಿ ವೆಚ್ಚದಲ್ಲಿ ಪ್ರಾರಂಭಿಸಲು ನಿರ್ಧರಿಸಲಾಗಿದೆ. ಇದರಿಂದ ಸುಮಾರು 5 ಸಾವಿರ ವಿದ್ಯಾರ್ಥಿಗಳಿಗೆ ಅನುಕೂಲ ಆಗಲಿದೆ. ನಾಲ್ಕು ವಿಭಾಗಗಳಲ್ಲಿ ತಲಾ ಒಂದು ಮೊರಾರ್ಜಿ ದೇಸಾಯಿ ಶಾಲೆಯನ್ನು ಅದ್ವಿತೀಯ ಕ್ರೀಡಾ ಶಾಲೆ ಎಂದು ಉನ್ನತೀಕರಿಸಿ ಎಸ್‌ಸಿಎಸ್‌ಟಿ ವಿದ್ಯಾರ್ಥಿಗಳಿಗೆ ಕ್ರೀಡಾ ತರಬೇತಿ ನೀಡಲಾಗುವುದು.

ಸಾಂದರ್ಭಿಕ ಚಿತ್ರ

ಈ ಉದ್ದೇಶಕ್ಕೆ ₹5 ಕೋಟಿ ಮೀಸಲಿಡಲಾಗಿದೆ.

ಎಸ್‌ಸಿ/ಎಸ್‌ಟಿ ಉದ್ಯಮಿಗಳಿಗೆ ಹಾಲಿ ಜಾರಿಯಲ್ಲಿರುವ ಶೇ 4ರಷ್ಟು ಬಡ್ಡಿ ಸಹಾಯಧನ ಯೋಜನೆಯನ್ನು ವಾಣಿಜ್ಯ ಮತ್ತು ವ್ಯಾಪಾರ ಚಟುವ-ಟಿಕೆಗಳಿಗೂ ವಿಸ್ತರಿಸಲಾಗಿದೆ. ಗರಿಷ್ಠ ₹1 ಕೋಟಿ ತನಕ ಸಾಲ ಪಡೆಯಲು ಅವಕಾಶ ಕಲ್ಪಿಸಲಾಗುವುದು ಎಂಬ ಭರವಸೆ ದೊರೆತಿದೆ.

ಪರಿಶಿಷ್ಟ ಪಂಗಡದ ಆಶ್ರಮ ಶಾಲೆಗಳನ್ನು ‘ವಾಲ್ಮೀಕಿ ಆಶ್ರಮ ಶಾಲೆ’ ಎಂದು ಮರು ನಾಮಕರಣ, ವೀರಶೈವ ಲಿಂಗಾಯತ ಅಭಿವೃದ್ಧಿ ನಿಗಮಕ್ಕೆ ₹500 ಕೋಟಿ ನಿಗದಿ ಮಾಡಿ, ₹100 ಕೋಟಿ ಬಿಡುಗಡೆ ಮಾಡಿದೆ. ಒಕ್ಕಲಿಗ ಸಮುದಾಯದ ಅಭಿವೃದ್ಧಿಗೂ ನಿಗಮ ಸ್ಥಾಪಿಸಿ ₹500 ಕೋಟಿ ನಿಗದಿ ಮಾಡುವ ಭರವಸೆ ನೀಡಲಾಗಿದೆ.

ಅಲ್ಪಸಂಖ್ಯಾತರ ಏಳಿಗೆಗಾಗಿ ₹1,500 ಕೋಟಿ, ಚರ್ಚ್‌ಗಳ ನವೀಕರಣ ಮತ್ತು ದುರಸ್ತಿ, ಕ್ರಿಶ್ಚಿಯನ್ ಸಮುದಾಯಭವನ, ಅನಾಥಾಶ್ರಮ ಮತ್ತು ವೃದ್ಧಾ-ಶ್ರಮಗಳಿಗೆ ನೆರವು ಕಾರ್ಯಕ್ರಗಳಿಗೆ ₹200 ಕೋಟಿ ನೀಡಲಾಗಿದೆ. ಅಂಬೇಡ್ಕರ್ ಅಭಿವೃದ್ಧಿ ನಿಗಮ, ವಾಲ್ಮೀಕಿ ಅಭಿವೃದ್ಧಿ ನಿಗಮ, ಭೋವಿ ಅಭಿವೃದ್ಧಿ ನಿಗಮ, ತಾಂಡಾ ಅಭಿವೃದ್ಧಿ ನಿಗಮ, ಬಾಬು ಜಗಜೀವನ್ ರಾಮ್ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮ, ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ, ಮಡಿವಾಳ ಮಾಚಿದೇವ ಅಭಿವೃದ್ಧಿ ನಿಗಮ, ಉಪ್ಪಾರ ಅಭಿವೃದ್ಧಿ ನಿಗಮ, ಆರ್ಯವೈಶ್ಯ ಸಮಯದಾಯ ಅಭಿವೃದ್ಧಿ ನಿಗಮ, ವಿಶ್ವಕರ್ಮ ಅಭಿವೃದ್ಧಿ ನಿಗಮ, ಮರಾಠ ಅಭಿವೃದ್ಧಿ ನಿಗಮ, ಅಂಬಿಗರ ಚೌಡಯ್ಯ ಅಭಿವೃದ್ಧಿ ನಿಗಮ, ಕಾಡುಗೊಲ್ಲರ ಅಭಿವೃದ್ಧಿ ನಿಗಮ, ಸವಿತಾ ಸಮಾಜ ಅಭಿವೃದ್ಧಿ ನಿಗಮ ಸೇರಿ 16 ನಿಗಮಗಳಿಗೆ ಒಟ್ಟಾರೆ ₹500 ಕೋಟಿ ನಿಗದಿ ಮಾಡಲಾಗಿದೆ. ಬ್ರಾಹ್ಮಣ ಅಭಿವೃದ್ಧಿ ಮಂಡಳಿಗೆ ಪ್ರತ್ಯೇಕವಾಗಿ ₹50 ಕೋಟಿ ನೀಡಲಾಗಿದೆ.

ಎಸ್‌ಸಿಎಸ್‌ಟಿ ಅಲೆಮಾರಿ ಸಮುದಾಯಗಳ ಏಳಿಗೆಗೆ ಪ್ರತ್ಯೇಕ ನಿಗಮ ಸ್ಥಾಪಿಸಿ ಕನಿಷ್ಠ ₹250 ಕೋಟಿ ನಿಗದಿ ಮಾಡಬೇಕು ಎಂಬ ಬೇಡಿಕೆಗೆ ಈ ಬಾರಿಯೂ ಮನ್ನಣೆ ದೊರೆತಿಲ್ಲ. ಅಲೆಮಾರಿ ಸಮುದಾಯಗಳ ವಿಷಯವೇ ಬಜೆಟ್‌ನಲ್ಲಿ ಕಾಣೆಯಾಗಿದೆ.

ಯಾರಿಗೆ ಏನೇನು?

- ಪ್ರತಿ ವಿಭಾಗದಲ್ಲಿ ₹ 5 ಕೋಟಿ ವೆಚ್ಚದಲ್ಲಿ ‘ಅದ್ವಿತೀಯ ಕ್ರೀಡಾ ಶಾಲೆ’ಯಾಗಿ ಮೊರಾರ್ಜಿ ದೇಸಾಯಿ ವಸತಿ ಶಾಲೆ ಮೇಲ್ದರ್ಜೆಗೆ
- ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಡಿ 150 ವಿದ್ಯಾರ್ಥಿನಿಲಯಗಳ ಕಟ್ಟಡ ನಿರ್ಮಾಣ
- ಪರಿಶಿಷ್ಟ ಜಾತಿ/ಪಂಗಡದ ಉದ್ಯಮಿಗಳಿಗೆ ನೀಡುತ್ತಿರುವ ಶೇ 4ರಷ್ಟು ಬಡ್ಡಿದರದ ಸಹಾಯಧನ ಸೌಲಭ್ಯದಡಿ ಮಳಿಗೆ/ಡೀಲರ್‌ಶಿಪ್/ಫ್ರಾಂಚೈಸಿ ಹಾಗೂ ಹೋಟೆಲ್ ಆರಂಭಿಸಲು ವಿಸ್ತರಣೆ
- ಪರಿಶಿಷ್ಟ ಜಾತಿ/ಪಂಗಡದ ಉದ್ಯಮಿಗಳು ಶೇ 4ರಷ್ಟು ಬಡ್ಡಿದರದ ಸಹಾಯಧನ ಸೌಲಭ್ಯದಡಿ ಗರಿಷ್ಠ ₹ 1 ಕೋಟಿ ವರೆಗೆ ಸಾಲ ಪಡೆಯಲು ಅವಕಾಶ
- ಕಾಲ ಮಿತಿಯೊಳಗೆ ಗಂಗಾಕಲ್ಯಾಣ ಯೋಜನೆ ಅನುಷ್ಠಾನ-ಕ್ಕಾಗಿ ‘ಅನುಷ್ಠಾನದ ವಿವೇಚನೆ ಫಲಾನುಭವಿ ಕೈಗೆ’ ಎಂಬ ನೂತನ ವಿಧಾನ ಜಾರಿಗೆ

ಎರಡು ಗಂಟೆ ಬಜೆಟ್ ವಾಚಿಸಿದ ಬಿಎಸ್‌ವೈ

ಹಸಿರು ಶಾಲು ಧರಿಸಿ ಸೋಮವಾರ ಸದನಕ್ಕೆ ಬಂದಿದ್ದ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ಎರಡು ಗಂಟೆಗಳ ಕಾಲ ಬಜೆಟ್ ಪ್ರತಿಯನ್ನು ಓದಿದರು. ಅಧಿಕೃತ ವಿರೋಧ ಪಕ್ಷವಾದ ಕಾಂಗ್ರೆಸ್ ಗೈರಿನಲ್ಲಿ ನಡೆದ ಕಲಾಪದಲ್ಲಿ, ಬಿಜೆಪಿ ಸದಸ್ಯರು ಆಗಾಗ ಮೇಜುಕುಟ್ಟಿ ಮುಖ್ಯಮಂತ್ರಿಯನ್ನು ಹುರಿದುಂಬಿಸಿದರು.

ಮಧ್ಯಾಹ್ನ 12.05ಕ್ಕೆ ಬಜೆಟ್ ಓದಲು ಆರಂಭಿಸಿದ ಯಡಿಯೂರಪ್ಪ, 2.05ಕ್ಕೆ 105 ಪುಟಗಳನ್ನೂ ಓದಿ ಮುಗಿಸಿದರು. ಮಧ್ಯದಲ್ಲಿ ಕೆಲವೊಮ್ಮೆ ಬಳಲಿದಂತೆ ಕಂಡರೂ, ತೆರಿಗೆ ಪ್ರಸ್ತಾವ ಮತ್ತು ರಾಜಸ್ವ ಸಂಗ್ರಹದ ವಿಷಯಕ್ಕೆ ಬರುತ್ತಿದ್ದಂತೆಯೇ ಏರು ದನಿಯಲ್ಲಿ ಓದಲಾ-ರಂಭಿಸಿದರು.

ಗೋಶಾಲೆಗಳ ಆರಂಭ, ಅಯೋಧ್ಯೆಯಲ್ಲಿ ವಸತಿ ಗೃಹ ನಿರ್ಮಾಣ ಸೇರಿದಂತೆ ಕೆಲವು ಪ್ರಮುಖ ಯೋಜನೆಗಳನ್ನು ಪ್ರಕಟಿಸಿದಾಗ ಬಿಜೆಪಿ ಸದಸ್ಯರು ಮೇಜುಕುಟ್ಟಿ ಸ್ವಾಗತಿಸಿದರು. ಬಜೆಟ್ ಪ್ರತಿಯಲ್ಲಿದ್ದ ಇಂಗ್ಲಿಷ್‌ನ ಕೆಲವು ಪದಗಳ ಉಚ್ಚಾರ ಕಷ್ಟವಾದಾಗ ಪಕ್ಕದಲ್ಲಿದ್ದ ಬಿಜೆಪಿ ಸದಸ್ಯರು ನೆರವಿಗೆ ಬಂದರು.

ಕಾಂಗ್ರೆಸ್ ಸಭಾತ್ಯಾಗ ಮಾಡಿದ್ದರಿಂದ ವಿರೋಧ ಪಕ್ಷದ ಸಾಲಿನ ಹೆಚ್ಚಿನ ಆಸನಗಳು ಖಾಲಿ ಇದ್ದವು. ಜೆಡಿಎಸ್ ಸದಸ್ಯರು ಬಜೆಟ್ ಮಂಡನೆ ವೇಳೆ ಸದನದಲ್ಲಿ ಹಾಜರಿದ್ದರು. ಆದರೆ, ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಕಲಾಪಕ್ಕೆ ಗೈರಾಗಿದ್ದರು.

ಪ್ರಜಾವಾಣಿ ನೋಡಿಯೊ

ಕನ್ನಡ ಪರಿಕರಗಳ ಸೂಟ್

ಕನ್ನಡ ಭಾಷೆಗೆ ತಾಂತ್ರಿಕ ಪರಿಕರಗಳ ಸೂಟ್ ಅಭಿವೃದ್ಧಿಪಡಿಸಲು ₹ 2 ಕೋಟಿ ಒದಗಿಸಲಾಗಿದೆ. ಕನ್ನಡದ ಕಾಗುಣಿತ ಪರಿಶೀಲನೆ, ಪಠ್ಯದಿಂದ ಪಠಣ, ಪಠಣದಿಂದ ಪಠ್ಯಕ್ಕೆ ಪರಿವರ್ತಿಸುವ ತಂತ್ರಾಂಶ, ಯಾಂತ್ರಿಕ ಅನುವಾದ, ಲಿಪ್ಯಂತರ ಹೈಫನ್‌ಗಳ ಬಳಕೆ, ಅಕ್ಷರಗಳನ್ನು ಸ್ಕ್ಯಾನ್ ಮಾಡಿ ಡಿಜಿಟಲ್ ರೂಪಕ್ಕೆ ಪರಿವರ್ತಿಸುವ ಒಸಿಆರ್ ಉಪಕರಣ, ಕನ್ನಡ ಅಕ್ಷರಗಳ ಶೈಲಿಯ ಸಮೂಹ ಮತ್ತು ಕನ್ನಡ ಚಾಟ್ ಬಾಟ್, ಕನ್ನಡ ಶಬ್ದಕೋಶ, ಇ- ಕನ್ನಡ ಕಲಿಕಾ ಅಕಾಡೆಮಿ ಪೋರ್ಟಲ್‌ಗಳ ಸ್ಥಾಪನೆ ಮೊದಲಾದ ಅಂಶಗಳು ಇದರಲ್ಲಿ ಸೇರಿವೆ.

ಕನ್ನಡ ಲಿಪಿ ಆಧರಿತ ಯುಆರ್‌ಎಲ್‌ಗಳು ಮತ್ತು ಕನ್ನಡ ಇ- ಮೇಲ್ ಸೇವೆ ಒದಗಿಸುವ ಪ್ರಸ್ತಾಪವೂ ಬಜೆಟ್‌ನಲ್ಲಿವೆ. ಕನ್ನಡವನ್ನು ಈಗಿನ ಕಾಲಕ್ಕೆ ಒಗ್ಗಿಸಿಕೊ-ಳ್ಳುವುದಕ್ಕೆ ಹಾಗೂ ತಂತ್ರಜ್ಞಾನದ ನಾಗಾಲೋಟದಲ್ಲಿ ಕನ್ನಡ ಹಿಂದುಳಿಯದಂತೆ ನೋಡಿಕೊಳ್ಳಲು ಇವುಗಳ ಅಗತ್ಯವಿತ್ತು.

- ಅಲ್ಪಸಂಖ್ಯಾತರ ಏಳಿಗೆಗಾಗಿ **₹1,500** ಕೋಟಿ ಮೀಸಲು
- ಕ್ರೈಸ್ತ ಸಮುದಾಯದ ಅಭಿವೃದ್ಧಿಗಾಗಿ **₹200** ಕೋಟಿ
- ಅನುಸೂಚಿತ ಜಾತಿಗಳ ಉಪಯೋಜನೆ ಮತ್ತು ಬುಡಕಟ್ಟು ಉಪಯೋಜನೆ (ಎಸ್‌ಸಿಎಸ್‌ಪಿ/ಟಿಎಸ್‌ಪಿ) ಯೋಜನೆ ಅಡಿ ಒಟ್ಟಾರೆ **₹26,005** ಕೋಟಿ
- ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಹಾಸ್ಟೆಲ್‌ಗಳಲ್ಲಿನ ಸಂಖ್ಯಾಬಲ ಶೇ **5**ರಷ್ಟು ಹೆಚ್ಚಳ
- ಹಾಸನದಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ಸ್ಮಾರಕ ಭವನ ನಿರ್ಮಾಣಕ್ಕೆ ₹**1** ಕೋಟಿ
- ವೀರಶೈವ ಲಿಂಗಾಯತ ಅಭಿವೃದ್ಧಿ ನಿಗಮಕ್ಕೆ **₹100** ಕೋಟಿ ಅನುದಾನ ಬಿಡುಗಡೆ
- ಬ್ರಾಹ್ಮಣ ಅಭಿವೃದ್ಧಿ ಮಂಡಳಿಯ ಚಟುವಟಿಕೆಗೆ **₹50** ಕೋಟಿ

ಪ್ರಾದೇಶಿಕ ತಾರತಮ್ಯದ ಪರಾಕಾಷ್ಠೆ

ವಿಶ್ಲೇಷಣೆ

ರಜಾಕ್ ಉಸ್ತಾದ್

ಐದು ವರ್ಷಗಳಲ್ಲಿ ಬಜೆಟ್ ಗಾತ್ರ ದುಪ್ಪಟ್ಟಾಗಿದೆ. ಆದರೆ, ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಗೆ (ಕೆಕೆಆರ್‌ಡಿಬಿ) ₹1500 ಕೋಟಿ ಮಾತ್ರ ಅನುದಾನ ಇಟ್ಟಿದ್ದಾರೆ. ಈ ಬಾರಿ ಕನಿಷ್ಠ ₹ 2,500 ಕೋಟಿ ಕೊಡಬೇಕು ಎಂಬ ಬೇಡಿಕೆ ಇತ್ತು. ವರ್ಷದಿಂದ ವರ್ಷಕ್ಕೆ ಮಾರುಕಟ್ಟೆ ದರ ಹೆಚ್ಚಾಗುತ್ತಿದೆ ಎನ್ನುವುದನ್ನೇ ಸರ್ಕಾರ ಪರಿಗಣಿಸಿಲ್ಲ.

ಮೈಸೂರು, ಶಿವಮೊಗ್ಗದಲ್ಲಿ ಕ್ಯಾನ್ಸರ್ ಆಸ್ಪತ್ರೆ ಹಾಗೂ ದಾವಣಗೆರೆಯಲ್ಲಿ ಜಯದೇವ ಆಸ್ಪತ್ರೆಯ ಶಾಖೆಗೆ ಸರ್ಕಾರವೇ ಅನುದಾನ ಕೊಡುತ್ತದೆ. ಆದರೆ, ಕಲಬುರ್ಗಿಯ ಜಿಮ್ಸ್‌ನಲ್ಲಿ ಸುಟ್ಟ ಗಾಯಗಳ ಚಿಕಿತ್ಸಾ ಘಟಕ ಆರಂಭಿಸಲು ಕೆಕೆಆರ್‌ಡಿಬಿ ಅನುದಾನ ನೀಡಬೇಕಂತೆ! ಇದಕ್ಕೂ ಸರ್ಕಾರ ಪ್ರತ್ಯೇಕ ಅನುದಾನ ನೀಡಬೇಕಿತ್ತಲ್ಲವೇ?

ಡಾ.ನಂಜುಂಡಪ್ಪ ವರದಿ ಶಿಫಾರಸುಗಳ ಅನುಷ್ಠಾನಕ್ಕೆ ಏಳು ವರ್ಷಗಳಿಂದ ₹ 3000 ಕೋಟಿ ಇಡುತ್ತಿದ್ದಾರೆ. ಕನಿಷ್ಠ ₹ 10 ಸಾವಿರ ಕೋಟಿ ನೀಡಿ ಎಂಬ ಬೇಡಿಕೆ ಇತ್ತು. ಒಟ್ಟು 114 ತಾಲ್ಲೂಕುಗಳ ಅಭಿವೃದ್ಧಿಗೆ ದಶಕದಿಂದಲೂ ಇಷ್ಟೇ ಅನುದಾನ ನೀಡುತ್ತಿರುವುದು ಯಾವ ಲೆಕ್ಕಾಚಾರ?

ಬೀದರ್‌ನಲ್ಲಿ ಕೃಷಿ ಸಲಕರಣೆಗಳ ಕ್ಲಸ್ಟರ್ ಘೋಷಣೆ ಮಾಡಿದ್ದಾರೆ. ಇದನ್ನು 2018ರಲ್ಲಿ ಕುಮಾರಸ್ವಾಮಿ ಸರ್ಕಾರವೇ ಘೋಷಣೆ ಮಾಡಿತ್ತು. ಬಸವಕಲ್ಯಾಣದ ಅನುಭವ ಮಂಟಪದ ಪ್ರಸ್ತಾವ ಮೂರು ವರ್ಷಗಳಿಂದ ಪ್ರತಿ ಬಜೆಟ್‌ನಲ್ಲಿ ಆಗುತ್ತಲೇ ಇದೆ. ಹಿಂದಿನ ಕಾಮಗಾರಿಗಳ ಬಗ್ಗೆಯೇ ಪದೇಪದೇ ಹೇಳುವ ಮೂಲಕ ಈ ಭಾಗದ ಜನರಿಗೆ ಮಂಕುಬೂದಿ ಎರಚಿದ್ದಾರೆ.

ರಾಯಚೂರು ರಿಂಗ್ ರಸ್ತೆ ನಿರ್ಮಿಸುವುದು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ. ಯಾದಗಿರಿ ಜಿಲ್ಲೆಯ ಕಡೇಚೂರಿನಲ್ಲಿ ಬಲ್ಕ್ ಡ್ರಗ್ ಪಾರ್ಕ್ ನಿರ್ಮಿಸಬೇಕಾ-ಗಿರುವುದು ಕೇಂದ್ರ ಸರ್ಕಾರ. ಆದರೆ, ಇವರೆಡನ್ನೂ ರಾಜ್ಯ ಬಜೆಟ್‌ನಲ್ಲಿ ಏಕೆ ಸೇರಿಸಿದ್ದಾರೋ ಗೊತ್ತಿಲ್ಲ. ರಾಯಚೂರಿಗೆ ವಿಮಾನ ನಿಲ್ದಾಣ, ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ, ರಾಯಚೂರು ವಿಶ್ವವಿದ್ಯಾಲಯಕ್ಕೆ ಅನುದಾನ ನೀಡುವುದು ಸೇರಿ ಯಾವುದೇ ಬೇಡಿಕೆ ಈಡೇರಿಲ್ಲ. ಇದು ಮೈಸೂರು, ಶಿವಮೊಗ್ಗ, ಬೆಂಗಳೂರು, ಹಾಸನಕ್ಕೆ ಮಾತ್ರ ಸೀಮಿತವಾದ ಬಜೆಟ್.

ಭದ್ರಾ ಮೇಲ್ದಂಡೆ ಯೋಜನೆ ಕೇವಲ 20 ಟಿಎಂಸಿ ಅಡಿ ನೀರಿಗೆ ಸೀಮಿತವಾಗಿದ್ದು, ಇದಕ್ಕೆ ₹ 21 ಸಾವಿರ ಕೋಟಿ ಡಿಪಿಆರ್‌ಗೆ ಅನುಮೋದನೆ ನೀಡಿದ್ದಾರೆ. ರಾಜ್ಯದ ಅತ್ಯಂತ ದೊಡ್ಡ ನೀರಾವರಿ ಯೋಜನೆಯಾದ ಕೃಷ್ಣಾ ಮೇಲ್ದಂಡೆ ಯೋಜನೆ ಕಡೆಗಣಿಸಿದ್ದಾರೆ. ತಾರತಮ್ಯಕ್ಕೆ ಇದಕ್ಕಿಂತ ದೊಡ್ಡ ಉದಾಹರಣೆ ಬೇಕೆ?

(ಲೇಖಕ: ಹೈದರಾಬಾದ್ ಕರ್ನಾಟಕ ಹೋರಾಟ ಸಮಿತಿಯ ಉಪಾಧ್ಯಕ್ಷ)

ಪರಿಶಿಷ್ಟರಿಗೆ ಅನುದಾನ ಕಡಿತ ನ್ಯಾಯವೇ?

ವಿಶ್ಲೇಷಣೆ

ವಿಕಾಸ್ ಆರ್ ಮೌರ್ಯ

ಕೋವಿಡ್ ನಂತರದ ಆರ್ಥಿಕ ಸಂಕಷ್ಟದಿಂದಾಗಿ ಇಡೀ ದೇಶವೇ ತತ್ತರಿಸಿದೆ. ದೇಶದಲ್ಲಿ ಅತಿ ಹೆಚ್ಚು ದಲಿತರು ತತ್ತರಿಸಿದ್ದಾರೆ. ಇದು ನಮ್ಮ ರಾಜ್ಯದ ವಿಚಾರದಲ್ಲಿಯೂ ಅಷ್ಟೇ ಸತ್ಯ.

ನಮ್ಮ ರಾಜ್ಯದಲ್ಲಿನ ಅಸಂಘಟಿತ ಕಾರ್ಮಿಕರಲ್ಲಿ ದಲಿತರದ್ದೇ ಹೆಚ್ಚು ಪಾಲು. ನಂತರದ್ದು ಹಿಂದುಳಿದ ಜಾತಿಗಳದ್ದು. ಬಡತನ ರೇಖೆಗಿಂತ ಕೆಳಗಿರುವವರಲ್ಲಿಯೂ ಅಷ್ಟೆ. ಲಾಕ್ ಡೌನ್ ನಂತರ ಅತಿ ಹೆಚ್ಚು ಬಾಧಿತವಾಗಿರುವುದು ಈ ಸಮುದಾಯಗಳೇ. ಇಂತಹ ಪರಿಸ್ಥಿತಿಯಲ್ಲಿ ಅವರಿಗೆ ಹೆಚ್ಚು ಅನುದಾನದ ಅವಶ್ಯಕತೆ ಇತ್ತು. ಆದರೆ, ಈ ಸಾಲಿನ ಬಜೆಟ್‌ನಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಹಿಂದುಳಿದ ವರ್ಗದವರಿಗೆ ಸರ್ಕಾರ ಬಹಳ ನಿರಾಸೆಯನ್ನುಂಟು ಮಾಡಿದೆ.

ಪರಿಶಿಷ್ಟರ ಉಪಯೋಜನೆಗೆ ₹50 ಸಾವಿರ ಕೋಟಿ ಮೀಸಲಿಡಬೇಕೆಂದು ದಲಿತ ಸಂಘಟನೆಗಳು ಸರ್ಕಾರವನ್ನು ಒತ್ತಾಯಿಸಿದ್ದವು. ಆದರೆ, ಇದಕ್ಕೆ ತಣ್ಣೀರೆರಚಿರುವ ಮುಖ್ಯಮಂತ್ರಿ ಅವರು ಹೆಚ್ಚು ಅನುದಾನ ಕೊಡುವುದಿರಲಿ, ಕಾಯ್ದೆಬದ್ಧವಾಗಿ ಕೊಡಬೇಕಾದದ್ದನ್ನೇ ಕೊಟ್ಟಿಲ್ಲ. ತಮ್ಮ ಬಜೆಟ್ ಭಾಷಣದಲ್ಲಿಯೇ ಪರಿಶಿಷ್ಟರಿಗೆ ನೀಡಬೇಕಾದ ಉಪಯೋಜನೆ (SCSP/ TSP) ಮೀಸಲು ಅನುದಾನದಲ್ಲಿ ₹4 ಸಾವಿರ ಕೋಟಿ ಕಡಿಮೆ ನೀಡಿರುವುದಾಗಿ ಘೋಷಿಸಿದ್ದಾರೆ. ಇದಕ್ಕೆ ಅವರು ನೀಡಿರುವ ಕಾರಣ ಆರ್ಥಿಕ ಸಂಕಷ್ಟ. ಇದೇ ಕಾರಣದಿಂದಾಗಿ ಎಸ್ಸಿ,ಎಸ್ಟಿ, ಒಬಿಸಿ ಬೃಹತ್ ಸಮೂಹದ ವಿವಿಧ ಅಭಿವೃದ್ಧಿ ನಿಗಮಗಳಿಗೆ ಒಟ್ಟಾರೆಯಾಗಿ ಕೇವಲ ₹ 500 ಕೋಟಿ ನೀಡಲಾಗಿದೆ.

ಆದರೆ, ವೀರಶೈವ ಲಿಂಗಾಯತ ಅಭಿವೃದ್ಧಿ ನಿಗಮಕ್ಕೆ ₹ 500 ಕೋಟಿ ಮತ್ತು ಹೊಸದಾಗಿ ಒಕ್ಕಲಿಗ ಅಭಿವೃದ್ಧಿ ನಿಗಮಕ್ಕೆ ₹ 500 ಕೋಟಿ ನೀಡಲು ಯಾವುದೇ ಸಂಕಷ್ಟ ಉಂಟಾಗಿಲ್ಲ.

ಬಸವ ಕಲ್ಯಾಣದ ಅನುಭವ ಮಂಟಪಕ್ಕೆ ₹ 200 ಕೋಟಿ ನೀಡಿದ್ದರೆ, ಅಂಬೇಡ್ಕರ್ ರವರು ಭೇಟಿ ನೀಡಿದ್ದ ಹಾಸನ ನಗರದ ಏಕೆ ಬೋರ್ಡಿಂಗ್ ಹೋಂ ಸ್ಥಳದಲ್ಲಿನ ಸ್ಮಾರಕಕ್ಕೆ ಕೇವಲ ₹1 ಕೋಟಿ ನೀಡಲಾಗಿದೆ. ಇದ್ಯಾವ ನ್ಯಾಯ? ಮೇಲ್ಜಾತಿ ಸಮೂಹಗಳಿಗಿಲ್ಲದ ಆರ್ಥಿಕ ಸಂಕಷ್ಟ ದಲಿತರು, ಹಿಂದುಳಿದ ಜಾತಿಗಳಿಗೆ ಮಾತ್ರ ಹೇಗೆ ಉಂಟಾಗುತ್ತದೆ?

ಯಾವುದೇ ಸರ್ಕಾರವಿರಲಿ ಪರಿಶಿಷ್ಟರಿಗೆ ಮೀಸಲಿಡುವ ಅನುದಾನವನ್ನು ಪ್ರತಿ ವರ್ಷವೂ ಸಮರ್ಪಕವಾಗಿ ಬಳಸಿಕೊಳ್ಳುವುದಿಲ್ಲ. ಒಂದೋ ಅನುದಾನವನ್ನೇ ನೀಡುವುದಿಲ್ಲ. ನೀಡಿದರೂ ಅದನ್ನು ಬಳಸುವುದಿಲ್ಲ. ಬಳಕೆ ಮಾಡಿದರೂ ಪರಿಶಿಷ್ಟರ ಬದುಕಿಗೆ ಸಂಬಂಧವೇ ಇಲ್ಲದ ಕ್ಷೇತ್ರದಲ್ಲಿ ಹೆಚ್ಚು ಬಳಸಲಾಗುತ್ತದೆ. ಕಳೆದ ವರ್ಷ 11 ಜಿಲ್ಲೆಗಳ 73 ಶಾಸಕರು ಮತ್ತು 16 ಜಿಲ್ಲೆಗಳ 36 ಎಂಎಲ್‌ಸಿಗಳು ಪರಿಶಿಷ್ಟರ ಅನುದಾನ ಬಳಕೆಗೆ ಕ್ರಿಯಾಯೋಜನೆಯ-ನ್ನೇ ಸಿದ್ಧಪಡಿಸಿರಲಿಲ್ಲ. ಇದರ ವಿರುದ್ಧ ಸದನದಲ್ಲಿ ಆಕ್ರೋಶವೂ ವ್ಯಕ್ತವಾಗಿತ್ತು.

ಇಂತಹ ಪರಿಸ್ಥಿತಿಯಲ್ಲಿ ಹೆಚ್ಚು ಅನುದಾನವನ್ನು ನೀಡಿ ಪರಿಶಿಷ್ಟರ ಅಭಿವೃದ್ಧಿಗೆ ಶ್ರಮಿಸುವ ಬದಲು ಪರಿಶಿಷ್ಟರ ಅನುದಾನವನ್ನೇ ಕಡಿತಗೊಳಿಸಿರುವುದು ಬೇಲಿಯೇ ಎದ್ದು ಹೊಲ ಮೇಯ್ದಂತೆ ಆಗಿದೆ. ಮುಖ್ಯಮಂತ್ರಿ ಅವರು ಇವ ನಮ್ಮವ.. ಇವ ನಮ್ಮವ.. ಎನ್ನದೇ ಇವನಾರವ.. ಇವನಾರವ.. ಎಂದು ಬಗೆದಿದ್ದಾರೆ.

(ಲೇಖಕ: ದಲಿತ ಸಂಘರ್ಷ ಸಮಿತಿ ಕಾರ್ಯಕರ್ತ)

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಸುಭಾಷಿತ

ಪ್ರಾಮಾಣಿಕತೆ ಎಂಬುದು ಅತ್ಯಂತ ದುಬಾರಿಯಾದ ಕೊಡುಗೆ. ಕೀಳುಮಟ್ಟದ ಅಭಿರುಚಿಯ ಜನರಿಂದ ಅದನ್ನು ನಿರೀಕ್ಷಿಸಬೇಡಿ. -ವಾರನ್ ಬಫೆಟ್

ಬಜೆಟ್: ಮುಂದುವರಿದ ಸಂಪ್ರದಾಯ ಕಾಣದ ಆಸ್ಥೆ, ಕೈತಪ್ಪಿದ ಅವಕಾಶ

ಒಂದೊಂದು ತಲೆಮಾರು ಒಂದೊಂದು ಬಗೆಯ ದುರಂತಕ್ಕೆ ಸಾಕ್ಷಿಯಾಗುತ್ತದೆ ಎಂಬ ಮಾತಿದೆ. ದುರಂತವನ್ನು ಕಂಡ ತಲೆಮಾರು, ಮುಂದೆ ಅಂತಹ ಸನ್ನಿವೇಶ ಎದುರಾಗದಂತೆ ನೋಡಿಕೊಳ್ಳುವುದು ಹೇಗೆ ಎಂಬ ಬಗ್ಗೆ ಆಲೋಚಿಸುವುದು ಸಹಜ. ಇಂದಿನ ತಲೆಮಾರು ಕೊರೊನಾ ವೈರಾಣು ತಂದಿತ್ತ ಆರ್ಥಿಕ ಸಂಕಷ್ಟದ ಸ್ಥಿತಿಗೆ ಸಾಕ್ಷಿಯಾಗಿದೆ. ಜೀವನದಿಗಳಂತಿದ್ದ ಆದಾಯ ಮೂಲಗಳು ಇದ್ದಕ್ಕಿದ್ದಂತೆ ಬತ್ತಿದವು. ಇಂತಹ ವಿಚಿತ್ರ ಹಾಗೂ ಸಂಕಷ್ಟಕರ ಸಂದರ್ಭಕ್ಕೆ ಸಾಕ್ಷಿಯಾದ ತಲೆಮಾರು, ಸರ್ಕಾರ ಮಂಡಿಸುವ ಬಜೆಟ್‌ನಲ್ಲಿ ಆ ಸಂಕಷ್ಟಗಳಿಗೆ ಒಂದು ಸ್ಪಂದನ ಇರಲಿ ಎಂದು ಬಯಸುವುದು ಸಹಜ. ಆದರೆ, ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಮಂಡಿಸಿದ 2021-22ನೇ ಸಾಲಿನ ಬಜೆಟ್‌ನಲ್ಲಿ ಅಂತಹ ಸ್ಪಂದನ ಮೇಲ್ನೋಟಕ್ಕಂತೂ ಕಾಣಿಸುತ್ತಿಲ್ಲ. ಕೊರೊನಾ ಸೃಷ್ಟಿಸಿದ ಆರ್ಥಿಕ ವಿಕೋಪಗಳಿಗೆ ಮುಲಾಮು ಹಚ್ಚುವುದಕ್ಕಿಂತಲೂ ಹೆಚ್ಚಾಗಿ ಸಂಪ್ರದಾಯವನ್ನು ಮುಂದುವರಿಸಿಕೊಂಡು ಹೋಗುವುದಕ್ಕೆ ಈ ಬಜೆಟ್ ಆದ್ಯತೆ ನೀಡಿರುವಂತೆ ಕಾಣುತ್ತಿದೆ. ಲಾಕ್‌ಡೌನ್ ಕಾರಣದಿಂದಾಗಿ ಆರ್ಥಿಕ ಚಲನೆಯೇ ಇಲ್ಲದ ಸಂದರ್ಭದ ನಂತರ ಮಂಡನೆಯಾಗಿರುವ ಈ ಬಜೆಟ್, ಈ ಹಿಂದಿನ ಕೆಲವು ಸಂದರ್ಭಗಳಲ್ಲಿ ನೀಡಿದಷ್ಟು ಅಲ್ಲದಿದ್ದರೂ ಮಠ-ದೇವಸ್ಥಾನಗಳಿಗೆ ಒಂದಿಷ್ಟು ಅನುದಾನ ಒದಗಿಸಿದೆ, ಜಾತಿ-ಸಮುದಾಯ ಆಧಾರಿತವಾಗಿ ಅಷ್ಟಿಷ್ಟು ಹಣ ಹಂಚಿಕೆ ಮಾಡುವುದಕ್ಕೆ ಗಮನ ನೀಡಿದೆ. ರಾಜ್ಯದ ಆರ್ಥಿಕ ಸಂಪನ್ಮೂಲಗಳನ್ನು ಗಟ್ಟಿ ಮಾಡಿಕೊಳ್ಳುವ, ರಾಜ್ಯದ ಜನರ ಆರ್ಥಿಕ ಸ್ಥಿತಿಗತಿಯನ್ನು ಇಂತಿಷ್ಟು ವರ್ಷಗಳಲ್ಲಿ ಇಷ್ಟರಮಟ್ಟಿಗೆ ಸುಧಾರಿಸಬೇಕು ಎಂಬ ಗುರಿಯನ್ನು ಕಟ್ಟಿಕೊಡುವ ಮುಂಗಾಣ್ಕೆಗಿಂತಲೂ, ಇರುವ ಹಣವನ್ನು 'ಎಲ್ಲರಿಗೂ ಒಂದಿಷ್ಟು' ಎಂಬ ಸೂತ್ರದ ಅಡಿಯಲ್ಲಿ ಹಂಚಿಕೆ ಮಾಡಲು ಆದ್ಯತೆ ನೀಡಿರುವಂತೆ ಗೋಚರಿಸುತ್ತಿದೆ.

ಬಿಕ್ಕಟ್ಟಿನ ಸಂದರ್ಭಗಳಿಂದ ಪಾಠ ಕಲಿಯುವ ಆಸ್ಥೆ ಆಳುವವರಿಗೆ ಇರುವುದು ಈ ಬಜೆಟ್‌ನ ಪಠ್ಯದಲ್ಲಿ ಕಾಣುತ್ತಿಲ್ಲ. ಕೆಲವು ಒಳ್ಳೆಯ ಕ್ರಮಗಳನ್ನು ಒಳಗೊಂಡಿರುವ ಈ ಬಜೆಟ್, ಅವಕಾಶಗಳನ್ನು ಕೈಚೆಲ್ಲಿರುವುದೂ ಹೌದು

ಲಾಕ್‌ಡೌನ್ ನಂತರದ ಸಂದರ್ಭದಲ್ಲಿ ಜನ ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದಾರೆ ಎಂಬುದರಲ್ಲಿ ಎರಡು ಮಾತಿಲ್ಲ. ಇದನ್ನು ಗಮನಿಸಿ ಈ ಬಾರಿಯ ಬಜೆಟ್ ಯಾವ ವರ್ಗದ ಮೇಲೆಯೂ ಹೆಚ್ಚುವರಿ ಆರ್ಥಿಕ ಹೊರೆಯನ್ನು ಹೇರಿಲ್ಲ. ಇದು ಸಮಾಧಾನ ತರುವಂಥದ್ದು. ಆದರೆ, ಜನ ಮತ್ತೆ ಆರ್ಥಿಕ ಸಂಕಷ್ಟಕ್ಕೆ ಸಿಲುಕುವುದನ್ನು ತಡೆಯುವ ಸಾಮಾಜಿಕ ಭದ್ರತಾ ಯೋಜನೆಗಳ ಬಗ್ಗೆ ಈ ಸಂದರ್ಭದಲ್ಲೂ ರಾಜ್ಯವು ಆಲೋಚಿಸಿದಂತೆ ತೋರುವುದಿಲ್ಲ. ಸೇವಾ ವಲಯದಲ್ಲಿ ಮಹಿಳಾ ಉದ್ಯಮಿಗಳು ಮುಂದೆ ಬರಬೇಕು ಎಂಬ ಉದ್ದೇಶದಿಂದ ಅವರಿಗೆ ವಾರ್ಷಿಕ ಶೇಕಡ 4ರ ಬಡ್ಡಿದರದಲ್ಲಿ ಸಾಲ ನೀಡಲು ಮುಂದಾಗಿರುವುದು ಸ್ವಾಗತಾರ್ಹವೂ ಅತ್ಯಂತ ಸೂಕ್ತವೂ ಆದ ಕ್ರಮ. ಉದ್ಯಮ ವಲಯದಲ್ಲಿ ಮಹಿಳೆಯರ ಪ್ರಾತಿನಿಧ್ಯ ಹೆಚ್ಚಾದರೆ ಉದ್ಯೋಗ ಸೃಷ್ಟಿಯೂ ಹೆಚ್ಚುತ್ತದೆ, ರಾಷ್ಟ್ರದ ಜಿಡಿಪಿ ಕೂಡ ಏರಿಕೆ ಕಾಣುತ್ತದೆ ಎಂದು ಅಧ್ಯಯನಗಳು ಈಗಾಗಲೇ ಹೇಳಿವೆ. ಆದರೆ, ಮಹಿಳೆಯರನ್ನು ಉದ್ದೇಶಿಸಿ ಘೋಷಿಸಿರುವ ಇತರ ಕೆಲವು ಕ್ರಮಗಳು ಬಜೆಟ್ ಮೂಲಕ ಅನುಷ್ಠಾನಕ್ಕೆ ತರಬೇಕಾದಂಥ-ವಲ್ಲ. ಅವುಗಳನ್ನು ಆಡಳಿತಾತ್ಮಕವಾಗಿ ಯಾವುದೇ ಸಂದರ್ಭದಲ್ಲಿ ಜಾರಿಗೆ ತರಬಹುದಿತ್ತು. ಈಚಿನ ವರ್ಷಗಳಲ್ಲಿ ಪ್ರತೀ ಬಜೆಟ್‌ನಲ್ಲೂ ಒಂದಲ್ಲ ಒಂದು ಸಮುದಾಯದ ಸಾಲಗಳನ್ನು ಮನ್ನಾ ಮಾಡುವ ಪರಿಪಾಟ ಬೆಳೆದು ಬಂದಿದ್ದರೂ ಈ ಬಾರಿಯ ಬಜೆಟ್ ಅದಕ್ಕೆ ವಿರಾಮ ನೀಡಿದೆ. ಆರ್ಥಿಕ ಶಿಸ್ತನ್ನು ಕಾಯ್ದುಕೊಳ್ಳಲು ಇದು ಬಹಳ ಮುಖ್ಯ. ಸಾಲ ಮನ್ನಾ ಎಂಬುದು ಯಾವುದೇ ಸ್ವರೂಪದಲ್ಲಿದ್ದರೂ ಅದು ಆರ್ಥಿಕ ಶಿಸ್ತಿಗೆ ವಿರುದ್ಧ. ಈ ಬಾರಿ ಸಾಲ ಮನ್ನಾ ಘೋಷಣೆಗೆ ಸರ್ಕಾರ ಮುಂದಾಗದಿರುವುದಕ್ಕೆ ಒಂದು ಕಾರಣ ವರಮಾನ ಕೊರತೆ. ಲಾಕ್‌ಡೌನ್ ನಂತರದಲ್ಲಿ ಬೇರೆ ಬೇರೆ ಉದ್ಯಮ ವಲಯಗಳು ತಮ್ಮ ನೌಕರರಿಗೆ ಮನೆಗಳಿಂದಲೇ, ಪುಟ್ಟ ಹಳ್ಳಿಗಳಿಂದಲೇ ಕೆಲಸ ಮಾಡುವ ಸೌಲಭ್ಯವನ್ನು ಕಲ್ಪಿಸಿವೆ. ಇದು ಒಂದು ಹಂತದವರೆಗೆ ಯಶಸ್ವಿಯೂ ಆಗಿದೆ. ಇದನ್ನು ಒಂದು ಪಾಠವಾಗಿ ಪರಿಗಣಿಸಿ, ರಾಜ್ಯದ ಹಳ್ಳಿ-ಹಳ್ಳಿಗಳಲ್ಲೂ ಮೂಲಸೌಕರ್ಯ ಕಲ್ಪಿಸಿ, ಹಳ್ಳಿಗಳಿಂದಲೇ ಕೆಲಸ ಮಾಡುವಂತಹ ಅನುಕೂಲ ಸೃಷ್ಟಿಸುವ ಕೆಲಸಗಳನ್ನೂ ಸರ್ಕಾರ ಮಾಡಬಹುದಿತ್ತು. ಆದರೆ, ಒಂದು ಬಿಕ್ಕಟ್ಟಿನ ಸಂದರ್ಭವನ್ನು ಇಂತಹ ಪಾಠಗಳನ್ನು ಕಲಿಯಲು ಬಳಸಿಕೊಳ್ಳುವ ಆಸ್ಥೆ ಆಳುವವರಿಗೆ ಇರುವುದು ಈ ಬಜೆಟ್‌ನ ಪಠ್ಯದಲ್ಲಿ ಕಾಣುತ್ತಿಲ್ಲ. ಕೆಲವು ಒಳ್ಳೆಯ ಕ್ರಮಗಳನ್ನು ಒಳಗೊಂಡಿರುವ ಈ ಬಜೆಟ್, ಹಲವು ಅವಕಾಶಗಳನ್ನು ಕೈಚೆಲ್ಲಿರುವುದೂ ಹೌದು.

ಕರ್ನಾಟಕ ರಾಜಕೀಯದ ಹಾದಿಯನ್ನು ರೂಪಿಸುವಲ್ಲಿ ಮುಂದಿನ ಎರಡು ವರ್ಷಗಳು ಮಹತ್ವದ್ದಾಗಿರುತ್ತವೆ

ವಿಧಾನಸಭೆ: ಅರ್ಧಹಾದಿಯಲ್ಲಿ ಕಂಡಿದ್ದು...

ಜನರಾಜಕಾರಣ

ಪ್ರೊ. ಸಂದೀಪ್ ಶಾಸ್ತ್ರಿ

ಕರ್ನಾಟಕ ವಿಧಾನಸಭೆಯು ಹಾಲಿ ಅವಧಿಯ 60 ತಿಂಗಳುಗಳ ಪೈಕಿ 33 ತಿಂಗಳುಗಳನ್ನು ಫೆಬ್ರುವರಿಯಲ್ಲಿ ಪೂರ್ಣಗೊಳಿಸಿದೆ. ಹಾಲಿ ಅವಧಿಯಲ್ಲಿ ಇನ್ನುಳಿದಿರುವುದು 27 ತಿಂಗಳುಗಳು ಮಾತ್ರ. 2018ರಲ್ಲಿ ರಚನೆಯಾದ ಈಗಿನ ವಿಧಾನಸಭೆಯು ತನ್ನ ಅರ್ಧದಷ್ಟು ಅವಧಿಯಲ್ಲಿ ಕಂಡಿರುವ ಏಳುಬೀಳುಗಳನ್ನು ಗಮನಿಸುವುದು ಈ ಸಂದರ್ಭದಲ್ಲಿ ಆಸಕ್ತಿಕರ ಅನ್ನಿಸಬಹುದು.

ಈ ವಿಧಾನಸಭೆಯು ಮೂವರು ಮುಖ್ಯಮಂತ್ರಿಗಳನ್ನು ಕಂಡಿದೆ. ಈ ಅವಧಿಯಲ್ಲಿ ವಿಧಾನಸಭೆಯ 21 ಕ್ಷೇತ್ರಗಳಿಗೆ ಉಪಚುನಾವಣೆ ನಡೆದಿದೆ, ಮೂರು ಕ್ಷೇತ್ರಗಳು ಈಗಲೂ ಖಾಲಿ ಇದ್ದು ಉಪಚುನಾವಣೆ ನಡೆಯಬೇಕಿದೆ. ನಡೆದಿರುವ ಉಪಚುನಾವಣೆಗಳು ರಾಜ್ಯದ ರಾಜಕೀಯದಲ್ಲಿ ದೂರಗಾಮಿ ಪರಿವರ್ತನೆಗಳನ್ನು ತಂದಿವೆ. ವಿಧಾನಸಭೆಯ ಸಮೀಕರಣದ ಬದಲಾವಣೆಗಳ ಮೂಲಕ, 33 ತಿಂಗಳ ಅವಧಿಯಲ್ಲಿನ ಕಠಿಣ ಸನ್ನಿವೇಶಗಳ ಪರಿಶೀಲನೆ ನಡೆಸಬಹುದು.

ಕಳೆದ ಎಂಟು ವಿಧಾನಸಭೆಗಳನ್ನು (1985ರ ನಂತರದ 35 ವರ್ಷಗಳ ಅವಧಿ) ಗಮನಿಸಿದರೆ, ಎರಡು ಅವಧಿಗಳಲ್ಲಿ ಮಾತ್ರ (1999ರಿಂದ 2004 ಹಾಗೂ 2013ರಿಂದ 2018) ಮುಖ್ಯಮಂತ್ರಿಗಳು ಪೂರ್ಣ ಅವಧಿಯನ್ನು ಪೂರೈಸಿದ್ದು ಕಂಡುಬರುತ್ತದೆ (ಎಸ್.ಎಂ.ಕೃಷ್ಣ ಹಾಗೂ ಸಿದ್ದರಾಮಯ್ಯ). ಎರಡು ಬಾರಿ ಒಂದೇ ಅವಧಿಯಲ್ಲಿ ಇಬ್ಬರು ಮುಖ್ಯಮಂತ್ರಿಗಳು ಆಗಿಹೋಗಿದ್ದಾರೆ (ರಾಮಕೃಷ್ಣ ಹೆಗಡೆ ಮತ್ತು ಎಸ್.ಆರ್. ಬೊಮ್ಮಾಯಿ- 1985-89; ಎಚ್.ಡಿ. ದೇವೇಗೌಡ ಮತ್ತು ಜೆ.ಎಚ್. ಪಟೇಲ್ 1994-99). ವಿಧಾನಸಭೆಯ ನಾಲ್ಕು ಅವಧಿಗಳಲ್ಲಿ ಪ್ರತೀ ಬಾರಿಯೂ ತಲಾ ಮೂವರು ಮುಖ್ಯ-ಮಂತ್ರಿಗಳನ್ನು ರಾಜ್ಯ ಕಂಡಿದೆ (ವೀರೇಂದ್ರ ಪಾಟೀಲ, ಎಸ್. ಬಂಗಾರಪ್ಪ, ವೀರಪ್ಪ ಮೊಯಿಲಿ 1989-94; ಎನ್. ಧರ್ಮಸಿಂಗ್ ಎಚ್.ಡಿ. ಕುಮಾರಸ್ವಾಮಿ, ಬಿ.ಎಸ್. ಯಡಿಯೂರಪ್ಪ 2004-2007; ಯಡಿಯೂರಪ್ಪ, ಡಿ.ವಿ. ಸದಾನಂದ ಗೌಡ, ಜಗದೀಶ ಶೆಟ್ಟರ್ 2008-13; 2018ರಿಂದ ಇದುವರೆಗೆ ಯಡಿಯೂರಪ್ಪ ಅವರು ಎರಡು ಬಾರಿ, ಕುಮಾರಸ್ವಾಮಿ ಒಂದು ಬಾರಿ ಮುಖ್ಯಮಂತ್ರಿಯಾಗಿದ್ದಾರೆ).

ರಾಜ್ಯ ಸರ್ಕಾರದ ನಾಯಕತ್ವ ಬದಲಾಗುತ್ತದೆ ಎಂಬ ಬಲವಾದ ಗಾಳಿಸುದ್ದಿಗಳಿಗೆ ಬೆಲೆ ಕೊಡುವುದೇ ಆದಲ್ಲಿ, ಈ ವಿಧಾನಸಭೆಯು ಹಿಂದಿನ ದಾಖಲೆಗಳನ್ನು ಮುರಿಯುವ ಸಾಧ್ಯತೆಯೂ ಇದೆ. ಮುಖ್ಯಮಂತ್ರಿಗಳ ಅಧಿಕಾರಾವಧಿಯು ಕರ್ನಾಟಕದಲ್ಲಿ ಸ್ಥಿರವಾಗಿದ್ದುದು ಕಡಿಮೆಯೇ. ಮುಖ್ಯಮಂತ್ರಿ ಬದಲಾಗಿದ್ದಕ್ಕೆ ಕಾರಣ ಆಡಳಿತಾರೂಢ ಪಕ್ಷವು ಬಹುಮತ ಕಳೆದುಕೊಂಡಿದ್ದಷ್ಟೇ ಅಲ್ಲ. ಬಹುತೇಕ ಸಂದರ್ಭಗಳಲ್ಲಿ ಇದಕ್ಕೆ ಕಾರಣ ಆಳುವ ಪಕ್ಷದ ಆಂತರಿಕ ಬದಲಾವಣೆಗಳು. ಕಳೆದ ಮೂರೂವರೆ ದಶಕಗಳ ಅವಧಿಯಲ್ಲಿ ಯಾವ ನಾಯಕನೂ ವಿಧಾನ ಸಭಾ ಚುನಾವಣೆ ನಂತರ ಅಧಿಕಾರದಲ್ಲಿ ಉಳಿದುಕೊಂಡಿದ್ದಿಲ್ಲ, ಇಬ್ಬರು ಮಾತ್ರ ಅಧಿಕಾರದ ಪೂರ್ಣ ಅವಧಿಯನ್ನು ಪೂರೈಸಿದ್ದಾರೆ. ಈ ರಾಜಕೀಯ ಅಸ್ಥಿರತೆಯು ಆಡಳಿತದಲ್ಲಿ ಮತ್ತೆ ಮತ್ತೆ ಪ್ರತಿಫಲಿತವಾಗಿದೆ.

ರಾಜಕೀಯ ಪಕ್ಷಗಳ ಅದೃಷ್ಟ ಬದಲಾಗಿದ್ದು ಉಪ ಚುನಾವಣೆಗಳಲ್ಲಿ ಕೂಡ ಕಾಣಿಸಿದೆ. ಈಗಿನ ವಿಧಾನಸಭೆಗೆ 21 ಕ್ಷೇತ್ರಗಳಿಗೆ ನಡೆದ ಉಪಚುನಾವಣೆಯಲ್ಲಿ ಮೊದಲು ಗೆದ್ದಿದ್ದ ಪಕ್ಷದ ಬದಲು ಇನ್ನೊಂದು ಪಕ್ಷದ ಅಭ್ಯರ್ಥಿ ಗೆಲುವು ಕಂಡ 17 ಕ್ಷೇತ್ರಗಳ ಪೈಕಿ, ಬಿಜೆಪಿ 15ರಲ್ಲಿ ಜಯ ಸಾಧಿಸಿದೆ. ಇದರ ಪರಿಣಾಮವಾಗಿ ಬಿಜೆಪಿಯು 2018ರಲ್ಲಿ ಗೆದ್ದಿದ್ದ 104 ಸ್ಥಾನಗಳನ್ನು ಈಗ 119ಕ್ಕೆ ಹೆಚ್ಚಿಸಿಕೊಂಡಿದೆ. 80 ಸ್ಥಾನ ಹೊಂದಿದ್ದ ಕಾಂಗ್ರೆಸ್ ಈಗ 67ಕ್ಕೆ, 37 ಸ್ಥಾನ ಹೊಂದಿದ್ದ ಜೆಡಿಎಸ್ ಈಗ 32ಕ್ಕೆ ಕುಸಿದಿವೆ. ಉಪಚುನಾವಣೆಗಳು ಬಿಜೆಪಿ ನೇತೃತ್ವದ ಸರ್ಕಾರಕ್ಕೆ ಒಂದಿಷ್ಟು ಸ್ಥಿರತೆ ತಂದುಕೊಟ್ಟಿವೆ. ಕಾಂಗ್ರೆಸ್, ಜೆಡಿಎಸ್ ಶಾಸಕರು ತಮ್ಮ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿ ಬಿಜೆಪಿಯಿಂದ ಪುನಃ ಸ್ಪರ್ಧಿಸಿದಾಗ ಜನ ಅವರನ್ನು ಮತ್ತೆ ಆಯ್ಕೆ ಮಾಡಿದ್ದಕ್ಕೆ ಕಾರಣ ರಾಜಕೀಯ ಸ್ಥಿರತೆಯನ್ನು ತಂದುಕೊಡುವುದಾಗಿತ್ತೇ ವಿನಾ ಪಕ್ಷಾಂತರವನ್ನು ಬೆಂಬಲಿಸಿ ಜನ ಮತ ಚಲಾಯಿಸಿದ್ದರು ಎನ್ನಲಾಗದು.

ಯಡಿಯೂರಪ್ಪ ನೇತೃತ್ವದ 32 ಸದಸ್ಯರ ಸಂಪುಟದಲ್ಲಿನ 11 ಜನ ಸದಸ್ಯರು ಹಾಲಿ ವಿಧಾನಸಭಾ ಅವಧಿಯಲ್ಲೇ ತಮ್ಮ ರಾಜಕೀಯ ನಿಷ್ಠೆಯನ್ನು ಬದಲಾಯಿಸಿದವರು ಎಂಬುದನ್ನು ಗಮನಿಸಬೇಕು. ಸಂಪುಟ ಸದಸ್ಯರಾದ ಪ್ರತೀ ಹತ್ತು ಜನರ ಪೈಕಿ ಸರಿಸುಮಾರು ನಾಲ್ಕು ಜನ 2018ರಲ್ಲಿ ಕಾಂಗ್ರೆಸ್, ಜೆಡಿಎಸ್ ಅಭ್ಯರ್ಥಿಗಳಾಗಿ ಅಥವಾ ಸ್ವತಂತ್ರವಾಗಿ ಜಯ ಸಾಧಿಸಿ, ಈಗ ರಾಜಕೀಯ ನಿಷ್ಠೆ ಬದಲಾಯಿಸಿದ್ದಾರೆ ಎಂದರೆ, ವಿಧಾನಸಭೆಯ ಸಮೀಕರಣದಲ್ಲಿ ಆಗಿರುವ ನಾಟಕೀಯ ಬದಲಾವಣೆಗಳನ್ನು ಅದು ತೋರಿಸುತ್ತದೆ. ಅಧಿಕಾರಕ್ಕೆ ಬರಲು ಹಾಗೂ ಅಧಿಕಾರವನ್ನು ಉಳಿಸಿಕೊಳ್ಳಲು ಆಳುವ ಪಕ್ಷಕ್ಕೆ ಬೇರೆ ರಾಜಕೀಯ ಪಕ್ಷಗಳ ವ್ಯಕ್ತಿಗಳನ್ನು ಸೇರಿಸಿಕೊಳ್ಳುವುದು ಅಗತ್ಯವಾಗಿತ್ತು ಎಂಬುದನ್ನು ಕೂಡ ಇದು ಸೂಚಿಸುತ್ತಿದೆ. ಈಗ ಸಚಿವರಾಗಿರುವ ಇಬ್ಬರ ಪೈಕಿ ಒಬ್ಬರು ಉಪಚುನಾವಣೆಯಲ್ಲಿ ಸೋತರೂ, ಅವರನ್ನು ಸಚಿವರನ್ನಾಗಿಸುವ ಮೊದಲು ವಿಧಾನ ಪರಿಷತ್ ಸದಸ್ಯರನ್ನಾಗಿಸಿದ್ದು, ಇನ್ನೊಬ್ಬರು ಹಾಲಿ ಸಚಿವರು ಉಪಚುನಾವಣೆ ಎದುರಿಸುವ ಗೊಡವೆಯೇ ಬೇಡವೆಂದಾಗ ಅವರನ್ನು ಪರಿಷತ್ತಿನ ಸದಸ್ಯರನ್ನಾಗಿಸಿದ್ದು ತಮ್ಮ ಪಕ್ಷದವರಲ್ಲದ ವ್ಯಕ್ತಿಗಳಿಗೆ ಜಾಗ ಕೊಡುವುದರ ಹಿಂದಿನ ಹತಾಶೆ ಕಾಣಿಸುತ್ತದೆ. ಸರ್ಕಾರವನ್ನು ಮುನ್ನಡೆಸುವ ಸಂದರ್ಭದಲ್ಲಿ ಎದುರಾಗುವ ಅನಿವಾರ್ಯ ಒತ್ತಡಗಳು, ಕಾಲೆಳೆಯುವಿಕೆಗಳು ಎದ್ದು ಕಾಣುತ್ತಿವೆ.

ಲೋಕಸಭಾ ಚುನಾವಣೆ ಹಾಗೂ ವಿಧಾನಸಭಾ ಚುನಾವಣೆಗಳ ನಡುವೆ ನಡೆಯುವ ರಾಜಕೀಯ ಬದಲಾವಣೆಗಳು ರಾಜ್ಯದಲ್ಲಿ ಅಸ್ಥಿರತೆಗೆ ಕಾರಣವಾಗಿವೆ. ಸರ್ಕಾರಗಳಿಗೆ ಆಡಳಿತದ ಮೇಲೆ ಗಮನ ಕೇಂದ್ರೀಕರಿಸುವುದು ಕಷ್ಟವಾಗುವಂತೆ ಮಾಡಿವೆ. 1985ರ ನಂತರ ಯಾವ ರಾಜಕೀಯ ಪಕ್ಷಕ್ಕೂ ಅಧಿಕಾರವನ್ನು ಉಳಿಸಿಕೊಳ್ಳಲು ಆಗದಿದ್ದುದು ಏಕೆ ಎಂಬುದನ್ನು ಇದು ವಿವರಿಸುತ್ತದೆ. ಕಳೆದ ಮೂರು ದಶಕಗಳ ಅವಧಿಯಲ್ಲಿ ಬಹುತೇಕ ವಿಧಾನಸಭೆಗಳು ಇಬ್ಬರು ಅಥವಾ ಮೂವರು ಮುಖ್ಯಮಂತ್ರಿಗಳನ್ನು ಕಂಡಿದ್ದರ ಕಾರಣದಿಂದಾಗಿ, ಯೋಜನೆಗಳಿಗೆ ನೀಡುವ ಆದ್ಯತೆಯಲ್ಲಿ ನಿರಂತರತೆ ಕಾಯ್ದುಕೊಳ್ಳಲು ಹೆಚ್ಚು ಅವಕಾಶ ಸಿಕ್ಕಿಲ್ಲ, ಆಡಳಿತಾತ್ಮಕ ಸ್ಪಷ್ಟತೆ ಕೂಡ ಒಂದೇ ಬಗೆಯಲ್ಲಿ ಇರಲಿಲ್ಲ.

ಇದಕ್ಕೆ ಮುಖ್ಯ ಕಾರಣ ಬಿಜೆಪಿ, ಜೆಡಿಎಸ್ ಹಾಗೂ ಕಾಂಗ್ರೆಸ್ ಪಕ್ಷಗಳ ಆಂತರಿಕ ರಾಜಕೀಯದಲ್ಲಿನ ಬದಲಾವಣೆಗಳು. ರಾಜಕೀಯ ಶಕ್ತಿಯಾಗಿ ಜೆಡಿಎಸ್ ಕುಂದಿದೆ, ಈಚಿನ ವರ್ಷಗಳಲ್ಲಿ ಅದು ಇತರ ಎರಡು ಪಕ್ಷಗಳ ಪೈಕಿ ಯಾವುದಾದರೊಂದು ಪಕ್ಷದ ಹೆಗಲ ಮೇಲೆ ಕುಳಿತು ಅಧಿಕಾರದತ್ತ ನೋಟ ಹರಿಸಲು ಸಾಧ್ಯವಾಗಿದೆ. ಕಾಂಗ್ರೆಸ್ ಪಕ್ಷದಲ್ಲಿನ ಹೈಕಮಾಂಡ್ ಸಂಸ್ಕೃತಿ ಹಾಗೂ 2014ರ ಲೋಕಸಭಾ ಚುನಾವಣೆಯ ಸೋಲಿನ ನಂತರ ಆ ಪಕ್ಷದಲ್ಲಿನ ಬದಲಾವಣೆಗಳ ಕಾರಣದಿಂದಾಗಿ, ಪಕ್ಷದ ರಾಜ್ಯ ಘಟಕವು ಬಣಗಳಿಂದ ತುಂಬಿಹೋಗಿದೆ, ಒಗ್ಗಟ್ಟಿನ ಕೊರತೆ ಕಾಡುತ್ತಿದೆ. ವಿಂಧ್ಯ ಪರ್ವತದ ದಕ್ಷಿಣದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದಿದ್ದು ಕರ್ನಾಟಕದಲ್ಲಿ ಮಾತ್ರ. 2008-13ರಲ್ಲಿ ಹಾಗೂ ಈಗಿನ ಅವಧಿಯಲ್ಲಿ ಪಕ್ಷವು ಅಧಿಕಾರ ಹಿಡಿಯಲು ಹೆಚ್ಚಾಗಿ ನಂಬಿಕೊಂಡಿದ್ದು, ಚುನಾವಣೆಯ ನಂತರ ತನ್ನ ಕಡೆ ಬಂದವರನ್ನು. ಇದು ತನ್ನದೇ ಆದ ರಾಜಕೀಯ ಅಸ್ಥಿರತೆ, ಒತ್ತಡಗಳನ್ನು ಸೃಷ್ಟಿಸಿದೆ.

ಇಡೀ ಪ್ರಕ್ರಿಯೆಯಲ್ಲಿ ಕರ್ನಾಟಕದ ಮತದಾರನಿಗೆ ಮೋಸ ಆಗಿದೆ. ಮತದಾರನ ಪ್ರತಿಕ್ರಿಯೆಗಳು ನಂತರದ ವಿಧಾನಸಭಾ ಚುನಾವಣೆಗಳಲ್ಲಿ ಕಂಡುಬಂದಿವೆ. ಬಿಜೆಪಿಯು 2023ರ ಮೊದಲೇ ತನ್ನ ಹಾದಿಯನ್ನು ಸರಿಪಡಿಸಿಕೊಳ್ಳಲಿದೆಯೇ? ಮುಂದಿನ ಬಾರಿ ಅಧಿಕಾರ ಹಿಡಿಯಲು ಕಾಂಗ್ರೆಸ್ ಸೂಕ್ತ ಸಿದ್ಧತೆಗಳನ್ನು ಮಾಡಿಕೊಳ್ಳುತ್ತಿದೆಯೇ? ಮುಂದಿನ ಎರಡು ವರ್ಷಗಳು ಕರ್ನಾಟಕ ರಾಜಕೀಯದ ಹಾದಿಯನ್ನು ರೂಪಿಸುವಲ್ಲಿ ಮಹತ್ವದ್ದಾಗಿರುವಂತೆ ಕಾಣುತ್ತಿದೆ.

ಚುರುಮುರಿ

ಬೇತಾಳ ಷಡ್ಯಂತ್ರ

• ಲಿಂಗರಾಜು ಡಿ.ಎಸ್.

ಬೆಂಗಳೂರು ರೋಡುಗಳ ರಿಪೇರಿ ಕಾಮಗಾರಿ ಬೇಗ ಮುಗೀತದಾ ಇಲ್ಲಾ ಈ ಶನ್ಯೇಸಿ ನನ ಆಟುಗಳ್ಳ ಬೇತಾಳನ ಹೊತ್ತುಕೋಗೂ ಕೆಲಸ ಮೊದಲು ಮುಗೀತದಾ ಗೊತ್ತಾಗ್ನಿಲ್ಲ. ಆದರೂ ನಾನಾ ಪಾದಯಾತ್ರೆಗಳ ನಡಂತರದಗೆ ಜಾಗ ಮಾಡಿಕ್ಯಂಡು ಈ ಶನಿಗೇಡಿ ನನ ಮಗಂದು ಎಲ್ಲ್ಯದೆ ಅಂತ ಹುಡುಕಿದ್ರೆ, ಹೋಗಿ ಬೆಳಗಾವಿ ಸುವರ್ಣಸೌಧಕ್ಕೆ ತಲೆಕೆಳಮಕನಾಗಿ ನ್ಯಾತಾಕ್ಕಂಡು 'ನಾನು ಬಂದೆ, ನಾನು ನೋಡಿದೆ, ನಾನು ಗೆದ್ದೆ' ಅಂತ ಗಂಟಲು ಹರಕತಿತ್ತು. ಯಾರು ಬಂದ್ರು, ಗೆದ್ರು ತಿಳಕಳನ ಅಂದ್ರೆ ಮಾತಾಡಂಗಿಲ್ಲ!

'ಬಾ ಬೊಡ್ಡಿಹೈದ್ನೆ, ವ್ಯಾಕ್ಸೀನ್ ತಗಂಡುದಯಾ ಇಲ್ಲವಾ?' ನನ್ನ ಕಂಡೇಟಿಗೆ ವಿಚಾರಿಸಿಗ್ಯತ್ತು. ಸಿಕ್ಕು ಬಿಡಿಸಿ ಕೆಳಕ್ಕಿಳಿಸಿ ಹೆಗಲಿ-ಗಾಕ್ಯಂದು ಅಲ್ಲಿಂದ ಕಡದೆ.

'ಲೋ, ಕೋವಿಡ್ ಟೈಮಲ್ಲೇ ಮಹಿಳೆಯರ ಮೇಲಿನ ದೌರ್ಜನ್ಯ ಜಾಸ್ತಿಯಾಗ್ಯದೆ ಅಂದದಲ್ಲೋ ಆಯೋಗ?' ಕಂಡೋರ ಸಮಾಚಾರ ನಮಗ್ಯಾಕೆ ಅಂತ ಸುಮ್ಮನಿದ್ದೆ.

'ಜೀವನ ನಿರ್ವಹಣೆಗೆ ದೇಶದಲ್ಲೇ ಬೆಂಗಳೂರು ಉತ್ತಮವಂತೆ ಕಲಾ, ಹೌದೇನೋ?' ಬೆಂಗಳೂರಾದ ಬೆಂಗಳೂರು ರೋಡೆಲ್ಲಾ ಅಗೆದು ಅದ್ವಾನೆಬ್ಬಿಸವ್ರೆ, ಅದೇನು ಉತ್ತಮವಾಗ್ಯದೋ ತಿಳೀದೆ ಸಿಟ್ಟು ಬಂದು ಕತ್ತಿ ತುದೀಲಿ ತಿವಿದೆ. ವಯಕ್ ಅಂದು ಸುಮ್ಮಗಾಗಿ ಎರಡು ಸೆಕೆಂಡಿಗೇ ಮತ್ತೆ ಸಾರಣೆ ಶುರುವಚ್ಚಿಗ್ಯತು.

'ಅದೇನ್ಲಾ, ಒನ್ ನೇಶನ್ ಒನ್ ಕಲೆಕ್ಷನ್ ಅಂದ್ರೆ?' ಅದರ ಪ್ರಶ್ನೆ ಕೇಳಿ ನನಗೆ ಬಲು ನಗ ಬಂದ್ರೂ ತಡಕ ಸುಮ್ನಾದೆ.

'ರಾಜಾವುಲಿ ಬಜೆಟ್ ಸಮಾಚಾರ ಏನಪ್ಪಾ? ತಿರಗಾ ನಿನ್ನ ಬುಡಕೆ ಬಿಸಿನೀರು ತಂದವ್ರಾ? ಬಳೀಲಿಲ್ಲ-ಬಾಚಲಿಲ್ಲ ಎಲ್ಲಾ ಬಂದು ತಲೆಗೇ ಹೊಡಿತವಲ್ಲೋ! ನಾವೂ ಬೇತಾಳಗಳಿಗೆ ಅಸೆಂಬ್ಲೀಲಿ ಮೀಸಲಾತಿ ಕೊಡಿ ಅಂತ ರ್‍ಯಾಲಿ ಮಾಡಬಕು ಅಂತಿದೀವಿ ಕನೋ' ಅಂತು. 'ಬಡ್ಡೆತ್ತುದೇ, ಬೊಂಬೂಸವಾರಿಯಾದ ಮ್ಯಾಲೆ ನಿನಗೆ ಸಿದ್ದಣ್ಣನ ಅಕ್ಕೀನೂ ಸಿಕ್ಕಕುಲ್ಲ' ಅಂದು ಕುಂಡಿಮ್ಯಾಲೆ ನಾಲ್ಕು ಬಾರಿಸಿದೆ. 'ನೀನು ಮಾತಾಡಿಬುಟ್ಟೆ' ಅಂತ ಬಾಲವ ಸುತ್ತಿಗ್ಯಂಡು ಕುಣೀತಾ ಸೀದಿ ಥರಾ ಪಣ್ಣನೆ ನೆಗೆದು ಹೊಂಟೋಯ್ತು!

ದಿನದ ಟ್ವೀಟ್

ಉದ್ಯಮಶೀಲತೆ ಪ್ರೋತ್ಸಾಹಿಸಿ

ನಾವೆಲ್ಲರೂ ಮಹಿಳೆಯರಲ್ಲಿ ಉದ್ಯಮಶೀಲತೆಯನ್ನು ಪ್ರೋತ್ಸಾಹಿಸಬೇಕಾದ ಅಗತ್ಯವಿದೆ. ಮಹಿಳೆಯ ಸಬಲೀಕರಣಕ್ಕಾಗಿ ಆಕೆಗೆ ಆರ್ಥಿಕ ಸ್ವಾತಂತ್ರ್ಯ ಅತ್ಯಗತ್ಯ; ಇದು ನಮ್ಮ ರಾಷ್ಟ್ರವನ್ನು ಆತ್ಮನಿರ್ಭರ ಮಾಡುವುದಕ್ಕೆ ಹಾಗೂ ಲಿಂಗಸಮಾನತೆಗೆ ಕೊಡುಗೆ ನೀಡುತ್ತದೆ.

ಸೋನಲ್ ಗೋಯಲ್, ಐಎಎಸ್ ಅಧಿಕಾರಿ

25 ವರ್ಷಗಳ ಹಿಂದೆ

ಶನಿವಾರ, 9-3-1996

• ಹವಾಲ: ಸಿಬಿಐ ಕಾರ್ಯದಲ್ಲಿ ಹಸ್ತಕ್ಷೇಪ ಇಲ್ಲ- ಪಿವಿಎನ್

ನವದೆಹಲಿ, ಮಾರ್ಚ್ 8 (ಪಿಟಿಐ, ಯುಎನ್‌ಐ)- ಹವಾಲ ಪ್ರಕರಣದ ಬಗ್ಗೆ ಸಿಬಿಐ ನಡೆಸಿರುವ ತನಿಖೆಯಲ್ಲಿ ಸರ್ಕಾರ ಎಂಥದ್ದೇ ಸಂದರ್ಭದಲ್ಲೂ ಹಸ್ತಕ್ಷೇಪ ಮಾಡುವುದಿಲ್ಲ ಎಂದು ಪ್ರಧಾನಿ ಪಿ.ವಿ.ನರಸಿಂಹ ರಾವ್ ಅವರು ಇಂದು ಲೋಕಸಭೆಯಲ್ಲಿ ಘೋಷಿಸಿದರು.

ಈ ವಿಷಯದಲ್ಲಿ ಆರಂಭದಿಂದಲೂ ಸುಪ್ರೀಂ ಕೋರ್ಟ್ ನಿರ್ದೇಶನದಲ್ಲಿಯೇ ಸಿಬಿಐ ಕಾರ್ಯ ನಿರ್ವಹಿಸು-ತ್ತಿದೆ. ಕೆಲವನ್ನು ಮಾಡದಂತೆ ಸಿಬಿಐಗೆ ಸುಪ್ರೀಂ ಕೋರ್ಟ್ ತಿಳಿಸಿತ್ತು. ಸಿಬಿಐ ಅದೇ ರೀತಿ ನಡೆದುಕೊಂಡಿದೆ, ಈಗಲೂ ನಡೆದುಕೊಳ್ಳುತ್ತಿದೆ ಮತ್ತು ಮುಂದೆಯೂ ನಡೆದುಕೊಳ್ಳುತ್ತದೆ. ಅಲ್ಲದೆ ಕಾನೂನಿನ ನಿಯಮಗಳನ್ನು ಸರ್ಕಾರ ಎಂದಿಗೂ ಮೀರುವುದಿಲ್ಲ ಎಂದು ಅವರು ಆಡಳಿತ ಪಕ್ಷದ ಸದಸ್ಯರ ಹರ್ಷೋದ್ಗಾರದ ಮಧ್ಯೆ ಸದನಕ್ಕೆ ಭರವಸೆ ನೀಡಿದರು.

• ಸರ್ಪಕಾವಲಿನ ಮಧ್ಯೆ ಇಂದು ಕ್ರಿಕೆಟ್ ಪಂದ್ಯ

ಬೆಂಗಳೂರು, ಮಾರ್ಚ್ 8- ಚಿನ್ನಸ್ವಾಮಿ ಕ್ರೀಡಾಂಗಣಕ್ಕೆ ಇದೀಗ ಪೊಲೀಸರ ಸರ್ಪಕಾವಲು. ನಾಳೆ ಇಲ್ಲಿ ನಡೆಯಲಿರುವ ಭಾರತ ಮತ್ತು ಪಾಕಿಸ್ತಾನ ನಡುವಣ ವಿಲ್ಸ್ ವಿಶ್ವಕಪ್ ಕ್ರಿಕೆಟ್ ಕ್ವಾರ್ಟರ್ ಫೈನಲ್ ಪಂದ್ಯದ ವೇಳೆ ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಪೊಲೀಸರು ಮುನ್ನೆಚ್ಚರಿಕೆಯ ಕ್ರಮ ಕೈಗೊಂಡಿದ್ದಾರೆ.

ಈ ಕ್ರೀಡಾಂಗಣದ ಸುತ್ತಲೂ ಹೆಜ್ಜೆ ಹೆಜ್ಜೆಗೂ ಪೊಲೀಸರೇ. ಕ್ರೀಡಾಂಗಣದ ಒಳಾಂಗಣ ಕೂಡಾ ಇದಕ್ಕಿಂತ ಭಿನ್ನವಲ್ಲ.

ಶಿವಸೇನೆಯ ಬೆದರಿಕೆಯ ಹಿನ್ನೆಲೆಯಲ್ಲಿ, ಕ್ರಿಕೆಟ್ ತಂಡಗಳು ಇಳಿದುಕೊಂಡಿರುವ ಪಂಚತಾರಾ ಹೋಟೆಲ್‌ನಲ್ಲಿಯೇ ಕ್ಷಿಪ್ರ ಕಾರ್ಯಪಡೆಯ ಭದ್ರತೆ ಒದಗಿಸಲಾಗಿದೆ. ಈ ಹೋಟೆಲ್‌ನ ಎದುರು ಇದೀಗ ಎರಡು ಪೊಲೀಸ್ ವ್ಯಾನುಗಳನ್ನು ನಿಲ್ಲಿಸಲಾಗಿದೆ.

50 ವರ್ಷಗಳ ಹಿಂದೆ

ಮಂಗಳವಾರ, 9-3-1971

• ಪೂರ್ವ ಪಾಕ್ ಸ್ವಾತಂತ್ರ್ಯ ಸಂಗ್ರಾಮ ಉಗ್ರರೂಪ ತಳೆಯುವ ಸಂಭವ

ಕರಾಚಿ, ಮಾರ್ಚ್ 8- ಅವಾಮಿ ಲೀಗ್ ನಾಯಕ ಮುಜೀಬುರ್ ರೆಹಮಾನರ ಬೇಡಿಕೆಗಳನ್ನು ಅಧ್ಯಕ್ಷ ಯಾಹ್ಯಾಖಾನರು ಪೂರೈಸದಿದ್ದಲ್ಲಿ ಪೂರ್ವ ಪಾಕಿಸ್ತಾನದಲ್ಲಿ ಸ್ವಾತಂತ್ರ್ಯ ಹೋರಾಟ ಮತ್ತಷ್ಟು ಉಗ್ರ ಸ್ವರೂಪ ತಳೆಯುವ ನಿರೀಕ್ಷೆಯಿದೆ.

ರಾಷ್ಟ್ರೀಯ ಅಸೆಂಬ್ಲಿಯಲ್ಲಿ ಭಾಗವಹಿಸಲು ಪೂರ್ವ ಪಾಕಿಸ್ತಾನದ ನಾಯಕ ಷೇಖ್ ಮುಜೀಬುರ್ ರೆಹಮಾನರು ಒಡ್ಡಿರುವ ಷರತ್ತುಗಳನ್ನು ಅಧ್ಯಕ್ಷ ಯಾಹ್ಯಾಖಾನರು ಒಪ್ಪುವರೇ ಇಲ್ಲವೇ ಎಂಬುದರ ಮೇಲೆ ಪಾಕಿಸ್ತಾನದಲ್ಲಿ ಈಗ ತಲೆದೋರಿರುವ ಬಿಕ್ಕಟ್ಟಿನ ಪರಿಹಾರ ಅವಲಂಬಿತವಾಗಿದೆ ಎಂದು ಅಧಿಕೃತ ಮೂಲಗಳು ಇಂದು ತಿಳಿಸಿದವು.

• ನಾಳೆ ಮತ ಎಣಿಕೆ; ಶನಿವಾರದ ಹೊತ್ತಿಗೆ ಪೂರ್ಣ ಫಲಿತಾಂಶ

ನವದೆಹಲಿ, ಮಾರ್ಚ್ 8- ಪಶ್ಚಿಮ ಬಂಗಾಳ, ಕೇರಳ ಮತ್ತು ಕೆಲವು ಮತಗಟ್ಟೆಗಳ ಹೊರತು ಎಲ್ಲ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಮತದಾನ ಮುಗಿದಿದ್ದು, ಬುಧವಾರ ಬೆಳಿಗ್ಗೆ ಮತಗಳ ಎಣಿಕೆ ಪ್ರಾರಂಭವಾಗುತ್ತದೆ.

ಲೋಕಸಭೆ ಮತ್ತು ವಿಧಾನಸಭೆ ಕ್ಷೇತ್ರಗಳ ಎಲ್ಲ ಫಲಿತಾಂಶ ಮಾರ್ಚ್ 13ರಂದು ಸಂಜೆ ವೇಳೆಗೆ ದೊರೆಯಬಹುದೆಂದು ಉಪ ಪ್ರಧಾನ ಚುನಾವಣಾ ಕಮಿಷನರ್ ಶ್ರೀ ಪಿ.ಐ.ಜೇಕಬ್ ಹೇಳಿದ್ದಾರೆ.

ಸಂಗತ

ಹೀಗೂ ಸಾಧ್ಯ ಪರಿವರ್ತನೆ!

ಮಹಾರಾಷ್ಟ್ರ– ಕರ್ನಾಟಕದ ಗಡಿ ಭಾಗದಲ್ಲಿನ ಪೆಡ್ಡ ಎಂಬ ಗ್ರಾಮದಲ್ಲಿ ಅಸ್ಪೃಶ್ಯತೆ ಪಿಡುಗನ್ನು ಪೂರ್ಣವಾಗಿ ತೊಡೆದು ಹಾಕಲಾಗಿದೆ. ಅದು ಸಾಧ್ಯವಾದದ್ದಾದರೂ ಹೇಗೆ?

• ಮಲ್ಲಿಕಾರ್ಜುನ ಹೆಗ್ಗಳಗಿ

ಬಾಗಲಕೋಟೆ ಜಿಲ್ಲೆಯ ಮುಧೋಳದಲ್ಲಿ ಚನ್ನದಾಸ ಸಮಾಜದ ಸಮಾವೇಶ ಈಚೆಗೆ ನಡೆಯಿತು. ಅತ್ಯಂತ ಕೆಳಸ್ತರಕ್ಕೆ ಸೇರಿದ, ಕಡುಬಡತನದ ಬದುಕು ಸಾಗಿಸುವ ಚನ್ನದಾಸ ಸಮಾಜದ ಸಾವಿರಾರು ಕುಟುಂಬಗಳು ಈ ಭಾಗದಲ್ಲಿವೆ. ಇವರೆಲ್ಲ ಸೇರಿ ಏರ್ಪಡಿಸಿದ್ದ ಈ ಸಮಾವೇಶ ಉದ್ಘಾಟಿಸಿ ಮಾತನಾಡಿದ ಉಪ ಮುಖ್ಯಮಂತ್ರಿ ಗೋವಿಂದ ಕಾರಜೋಳ- 'ನಾನು ಕೂಡ ವೃತ್ತಿಯಿಂದ ದಾಸಯ್ಯನೇ. ನಾನು ಸರ್ಕಾರಿ ನೌಕರಿಗೆ ಸೇರುವ ಮೊದಲು ದಾಸಯ್ಯನ ವೃತ್ತಿ ಮಾಡುತ್ತಿದ್ದೆ. ಗೋಪಾಳ ಬುಟ್ಟಿ ಹಿಡಿದು ಮನೆ ಮನೆಗೆ ತಿರುಗುತ್ತಿದ್ದೆ. ನಿಮ್ಮ ಕಷ್ಟ-ನೋವುಗಳಲ್ಲಿ ಹಾದು ಬಂದಿದ್ದೇನೆ' ಎಂದು ತುಂಬ ಭಾವುಕರಾಗಿ ತಮ್ಮ ಬಾಲ್ಯದ ದಿನಗಳನ್ನು ಸ್ಮರಿಸಿಕೊಂಡು, ತಾವು ಎಲ್ಲ ನೆರವು ಕಲ್ಪಿಸುವುದಾಗಿ ಭರವಸೆ ನೀಡಿದರು.

ಈ ಸಂದರ್ಭದಲ್ಲಿ ನನಗೆ, ದಲಿತ ಸಮುದಾಯಕ್ಕೆ ಸೇರಿದ ಯುವಕನೊಬ್ಬ ತುಂಬಾ ಪರಿಶ್ರಮದಿಂದ ದೊಡ್ಡ ಉದ್ಯಮಿಯಾಗಿ ಬೆಳೆದು ಒಂದು ಒಳ್ಳೆಯ ಪರಿವರ್ತನೆಗೆ ಕಾರಣನಾದ ಅಪರೂಪದ ಸಂಗತಿ ಇಲ್ಲಿ ನೆನಪಾಗುತ್ತದೆ.

ಆ ಯುವಕನ ಹೆಸರು ಪ್ರಕಾಶ ಖಾಡೆ. ಓದಿದ್ದು ಐ.ಟಿ.ಐ. ಮಹಾರಾಷ್ಟ್ರದ ಸಾಂಗ್ಲಿ ಜಿಲ್ಲೆಯ ತಾಸಗಾಂವ್ ತಾಲ್ಲೂಕಿನಲ್ಲಿ ಪೆಡ್ಡ ಎಂಬ ಹಳ್ಳಿ ಪ್ರಕಾಶ ಖಾಡೆಯವರ ಹುಟ್ಟೂರು. ಕರ್ನಾಟಕದ ಗಡಿಗೆ ಹೊಂದಿಕೊಂಡಿರುವ ಈ ಊರಿನಲ್ಲಿ ಅರ್ಧಕ್ಕೂ ಹೆಚ್ಚು ಮಂದಿ ಕನ್ನಡ ಮಾತನಾಡುವವರು. ಈ ಗ್ರಾಮದ ಮಧ್ಯದಲ್ಲಿ ನೂರಾರು ವರ್ಷಗಳ ಹಿಂದೆ ಕಟ್ಟಿದ ಸಿದ್ಧೇಶ್ವರ ದೇವಾಲಯವಿದೆ. ಈ ಗುಡಿಯ ಕಟ್ಟಡ ತುಂಬ ಶಿಥಿಲಗೊಂಡಿದ್ದರಿಂದ ಜೀರ್ಣೋದ್ಧಾರಕ್ಕೆ ಗ್ರಾಮಸ್ಥರು ನಿರ್ಧರಿಸಿದರು.

ಈ ಗ್ರಾಮದಲ್ಲಿಯೇ ಹುಟ್ಟಿ ಬೆಳೆದ ಖಾಡೆ ದೊಡ್ಡ ಉದ್ಯಮಿಯಾಗಿ ಬೆಳೆದಿದ್ದಾರೆ. ಮುಂಬೈನಲ್ಲಿ ವಾರ್ಷಿಕ ₹ 1,600 ಕೋಟಿ ವ್ಯವಹಾರ ನಡೆಸುವ ಬೃಹತ್ ಸಂಸ್ಥೆಯನ್ನು ಕಟ್ಟಿದ್ದಾರೆ. ಅವರು ಸ್ಥಾಪಿಸಿದ ದಾಸ್ ಆಫ್‌ಶೋರ್ ಎಂಜಿನಿಯರಿಂಗ್ ಕಂಪನಿಯಲ್ಲಿ 4,500 ಜನ ಕೆಲಸ ಮಾಡುತ್ತಿದ್ದಾರೆ. ಈ ಸಂಸ್ಥೆ ದೇಶ ವಿದೇಶಗಳಲ್ಲಿ ತೈಲ ಬಾವಿ ತೋಡುವುದು, ಮೇಲ್ಸೇತುವೆ ನಿರ್ಮಾಣ, ಕಟ್ಟಡ ನಿರ್ಮಾಣದಂತಹ ಕೆಲಸಗಳನ್ನು ಮಾಡುತ್ತಿದೆ. ಅವರಿಂದ ಗುಡಿಯ ಜೀರ್ಣೋದ್ಧಾರಕ್ಕೆ ₹ 10 ಲಕ್ಷ ದೇಣಿಗೆ ಕೇಳಲು ಜೀರ್ಣೋದ್ಧಾರ ಸಮಿತಿಯ ಕೆಲವು ಹಿರಿಯರು ಮುಂಬೈಗೆ ತೆರಳಿದ್ದರು.

ತಮ್ಮ ಹುಟ್ಟೂರಿನಿಂದ ಬಂದಿದ್ದ ಹಿರಿಯರನ್ನು ಪ್ರಕಾಶ ಖಾಡೆ ತುಂಬ ಪ್ರೀತಿ, ಗೌರವದಿಂದ ಸ್ವಾಗತಿಸಿದರು. ಸ್ವತಃ ಉಪಾಹಾರ, ಟೀ ಕೊಟ್ಟು ಅತಿಥಿ ಸತ್ಕಾರ ಮಾಡಿದರು. ಹಿರಿಯರು ತಾವು ಬಂದ ಉದ್ದೇಶ ವಿವರಿಸಿ, ದೇವಸ್ಥಾನದ ಜೀರ್ಣೋದ್ಧಾರಕ್ಕೆ ₹ 10 ಲಕ್ಷ ದೇಣಿಗೆ ನೀಡಬೇಕು ಎಂದು ಮನವಿಪತ್ರ ಸಲ್ಲಿಸಿದರು.

ಪ್ರಕಾಶ ₹ 1 ಕೋಟಿಯ ಚೆಕ್ ಬರೆದು ಹಿರಿಯರ ಕೈಗೆ ನೀಡಿದರು. ₹ 10 ಲಕ್ಷ ಕೇಳಿದರೆ ₹ 5 ಲಕ್ಷ ಆದರೂ ಕೊಡಬಹುದು ಎಂಬ ನಿರೀಕ್ಷೆಯಲ್ಲಿದ್ದ ಹಿರಿಯರಿಗೆ ತುಂಬ ಅಚ್ಚರಿಯಾಯಿತು. 'ಸಿದ್ಧೇಶ್ವರ ದೇವಸ್ಥಾನದ ಜೀರ್ಣೋದ್ಧಾರ ಚೆನ್ನಾಗಿ ಆಗಬೇಕು. ಇನ್ನೂ ಹೆಚ್ಚಿಗೆ ಹಣ ಬೇಕಾದರೆ ಕೊಡಲು ಸಿದ್ಧ' ಎಂದು ಪ್ರಕಾಶ ಹೇಳಿದರು. ಸ್ವಲ್ಪ ತಡೆದು 'ನನ್ನದೊಂದು ಸಣ್ಣ ಸಲಹೆ ಇದೆ. ನೀವು ಹಿರಿಯರು ಮನಸಾರೆ ಪಾಲಿಸಬೇಕು' ಎಂದು ಕೇಳಿಕೊಂಡರು.

'ಖಂಡಿತವಾಗಿ ಪಾಲಿಸುತ್ತೇವೆ ಹೇಳಿ' ಎಂದು ಹಿರಿಯರು ಒಂದೇ ಧ್ವನಿಯಲ್ಲಿ ಕೇಳಿದರು. ಪ್ರಕಾಶ ಒಂದು ಕ್ಷಣ ಮೌನವಾಗಿ ಕಣ್ಣಂಚಿನಲ್ಲಿ ನೀರು ತಂದುಕೊಂಡು ನಿಧಾನವಾಗಿ ಹೇಳಿದರು. 'ನಮ್ಮದು ದಲಿತ ಕುಟುಂಬ. ನಾನು ಚಮ್ಮಾರನ ಮಗ ಎಂಬ ಕಾರಣಕ್ಕೆ ಸಿದ್ಧೇಶ್ವರ ಗುಡಿಯ ಪ್ರವೇಶಕ್ಕೆ ಬಿಟ್ಟಿರಲಿಲ್ಲ. ನನಗೆ ಸಿದ್ಧೇಶ್ವರನ ದರ್ಶನವೇ ಆಗಿಲ್ಲ. ನನ್ನ ತಂದೆಗೆ ಈ ಗುಡಿಯ ರಸ್ತೆಯಲ್ಲಿ ಬರಲೂ ಅವಕಾಶ ಸಿಗಲಿಲ್ಲ. 'ಗುಡಿಯಲ್ಲಿ ಎಲ್ಲರ ಪ್ರವೇಶಕ್ಕೆ ಮುಕ್ತ ಅವಕಾಶ ಮಾಡಿರಿ' ಎಂದು ಪ್ರಕಾಶ ಹೇಳಿದರು.

ಜೀರ್ಣೋದ್ಧಾರದ ಕೆಲಸ ಸಕಾಲಕ್ಕೆ ಮುಗಿಯಿತು. ಈಗ ಗುಡಿಯಲ್ಲಿ ಎಲ್ಲರಿಗೂ ಮುಕ್ತ ಪ್ರವೇಶ ಲಭ್ಯವಾಗಿದೆ. ಊರ ಹಿರಿಯರೆಲ್ಲ ಸೇರಿ ಪ್ರಕಾಶ ಅವರನ್ನು ಗ್ರಾಮಕ್ಕೆ ಆಮಂತ್ರಿಸಿ ಗುಡಿಯಲ್ಲಿಯೇ ಸನ್ಮಾನಿಸಿದರು. ವಿದ್ಯಾರ್ಥಿಯಾಗಿದ್ದಾಗ ಗುಡಿ ಪ್ರವೇಶ ನಿರಾಕರಿಸಿದವರೇ ಈಗ ಗುಡಿಯ ಒಳಗಡೆ ಕರೆದು ಸನ್ಮಾನಿಸಿದ್ದಕ್ಕೆ ಪ್ರಕಾಶ ಅವರಿಗೆ ಬಹಳ ಸಂತೋಷವಾಗಿದೆ. ಅವರು ಗ್ರಾಮದ ನೂರಾರು ಬಡ ಮಕ್ಕಳ ಓದಿಗೆ ಆರ್ಥಿಕ ನೆರವು ನೀಡುತ್ತಿದ್ದಾರೆ. ಈ ಗ್ರಾಮದಲ್ಲಿ ಅಸ್ಪೃಶ್ಯತೆ ಆಚರಣೆಯನ್ನು ಪೂರ್ಣ ತೊಡೆದು ಹಾಕಲಾಗಿದೆ.

ಪ್ರಕಾಶ ಅವರ ತಂದೆ ಮೋಚಿಯಾಗಿ ಕೆಲಸ ಮಾಡಿ ಬದುಕು ಸಾಗಿಸಿದವರು. ಒಂದು ಮರದ ಕೆಳಗೆ ಕುಳಿತು ಅವರು ಕೆಲಸ ಮಾಡುತ್ತಿದ್ದರು. ಪ್ರಕಾಶ ಇಂದಿಗೂ ಆ ಮರವನ್ನು ಸ್ಮರಿಸುತ್ತಾರೆ ಮತ್ತು ಆರಾಧಿಸುತ್ತಾರೆ.

ಮುಂಬೈ ವಿಶ್ವವಿದ್ಯಾಲಯ ಪ್ರಕಾಶ ಅವರಿಗೆ ಈಚೆಗೆ ಗೌರವ ಡಾಕ್ಟರೇಟ್ ಪದವಿ ನೀಡಿ ಗೌರವಿಸಿದೆ. ಈಗ ಅವರು ಕರ್ನಾಟಕ- ಮಹಾರಾಷ್ಟ್ರದ ಗಡಿಭಾಗದ ಹಳ್ಳಿಗಳಿಗೆ ಹೋಗಿ ಅಲ್ಲಿಯ ದಲಿತ ಯುವಕರು ಉದ್ಯಮಿಗಳಾಗುವುದಕ್ಕೆ ಪ್ರೋತ್ಸಾಹ ನೀಡುತ್ತಿದ್ದಾರೆ. ದಲಿತರು ಆರ್ಥಿಕವಾಗಿ ಸಬಲರಾದರೆ ಎಲ್ಲ ಸಂಕೋಲೆಗಳನ್ನು ಕಳಚಿಕೊಳ್ಳಬಹುದು ಎಂಬುದು ಅವರ ಸಂದೇಶವಾಗಿದೆ.

ವಾಚಕರ ವಾಣಿ

ಮಾರ್ಕೆಟಿಂಗ್ ಟೂಲ್ ಆಗದಿರಲಿ

ಸುಲಲಿತ ಜೀವನ ನಿರ್ವಹಣೆ ಸೂಚ್ಯಂಕದಲ್ಲಿ ದೇಶದಲ್ಲೇ ಬೆಂಗಳೂರಿಗೆ ಮೊದಲ ಸ್ಥಾನ ದೊರಕಿರುವುದು ಹೆಮ್ಮೆಯ ವಿಚಾರ. ಆದರೆ ಇದನ್ನು ರಿಯಲ್ ಎಸ್ಟೇಟ್ ಉದ್ಯಮದವರು ಮಾರ್ಕೆಟಿಂಗ್ ಟೂಲ್ ಆಗಿ ಪರಿವರ್ತಿಸಿ, ವಲಸಿಗರು ಈ ನಗರಕ್ಕೆ ದೇಶದ ಮೂಲೆ ಮೂಲೆಯಿಂದ ದಾಂಗುಡಿ ಇಟ್ಟು, ಮುಂದೆ ಈ ನಗರ ವಾಸಿಸಲು ಯೋಗ್ಯವಲ್ಲದಂತೆ ಮಾಡದಿರಲಿ ಎಂದು ಬೆಂಗಳೂರಿಗರು ಆಶಿಸುತ್ತಿದ್ದಾರೆ.

ಪಿಂಚಣಿದಾರರ ಸ್ವರ್ಗ, ಉದ್ಯಾನಗಳ ನಗರ, ಹವಾನಿಯಂತ್ರಿತ ನಗರ, ಮಧ್ಯಮವರ್ಗದವರ ತಾಣ, ಸಿಲಿಕಾನ್ ವ್ಯಾಲಿ, ಪಬ್ ಸಿಟಿ, ಕಾಸ್ಮೊಪಾಲಿಟನ್ ನಗರ ಎಂದೆಲ್ಲಾ ಬೆಂಗಳೂರನ್ನು ಮಾರ್ಕೆಟಿಂಗ್ ಮಾಡಿ ಈಗಾಗಲೇ ಅದರ ಜನಸಂಖ್ಯೆ ಕೋಟಿಯನ್ನು ಮೀರಿದೆ. ನಗರದ ಧಾರಣಾಶಕ್ತಿ ಕಟ್ಟೊಡೆ-ಯುತ್ತಿದ್ದು ದಿನದಿಂದ ದಿನಕ್ಕೆ ಇಲ್ಲಿನವರ ಬದುಕು ದುಸ್ತರವಾಗುತ್ತಿದೆ. ಇನ್ನು ಸುಲಲಿತ ಜೀವನ ನಿರ್ವಹಣೆಗೆ ಉತ್ತಮ ನಗರ ಎನ್ನುವ ಕಿರೀಟವು ಬದುಕನ್ನು ಇನ್ನಷ್ಟು ಹೈರಾಣಾಗಿಸಬಹುದು ಎಂಬುದು ಬೆಂಗಳೂರಿಗರ ಆತಂಕವಾಗಿದೆ. ಹಾಗಾಗದಿರಲಿ ಎಂದು ಅವರು ಹಾರೈಸುತ್ತಿದ್ದಾರೆ.

ರಮಾನಂದ ಶರ್ಮಾ, ಬೆಂಗಳೂರು

ಏರಿಕೆ–ಹೆದರಿಕೆ

ದಿನನಿತ್ಯ ದಿನಪತ್ರಿಕೆಯಲ್ಲಿ
ಪ್ರಕಟವಾಗುತ್ತಿರುವ ಸುದ್ದಿ,
ಚಿನ್ನದ ಬೆಲೆ ಇಳಿಕೆ
ತೈಲ ಬೆಲೆ ಏರಿಕೆ,
ಎರಡರಿಂದಲೂ ಮನೆ
ಯಜಮಾನನಿಗೆ ಹೆದರಿಕೆ!

ಮಹಾಂತೇಶ ಮಾಗನೂರ
ಬೆಂಗಳೂರು

ಐಪಿಎಲ್: ಪ್ರವೇಶ ನಿಷೇಧ ಅವಶ್ಯವೇ?

ಐಪಿಎಲ್ ಪಂದ್ಯಗಳಿಗೆ ಪ್ರೇಕ್ಷಕರಿಗೆ ಪ್ರವೇಶ ನಿಷೇಧಿಸಿರುವುದು ಅತ್ಯಂತ ಬೇಸರದ ಸಂಗತಿ. ದೇಶದ ನಾಲ್ಕು ರಾಜ್ಯಗಳು ಮತ್ತು ಒಂದು ಕೇಂದ್ರಾಡಳಿತ ಪ್ರದೇಶದಲ್ಲಿ ಪ್ರಸ್ತುತ ನಡೆಯಲಿರುವ ಚುನಾವಣೆ ಕಾರಣದಿಂದ ಅನೇಕ ಬೃಹತ್ ಸಮಾವೇಶಗಳು ಮತ್ತು ರ್‍ಯಾಲಿಗಳು ನಡೆಯುತ್ತಿವೆ. ಇವುಗಳಲ್ಲಿ ಲಕ್ಷಾಂತರ ಜನ ಭಾಗವಹಿಸುವುದಕ್ಕೆ ಅವಕಾಶ ಇರುವಾಗ, ಮನರಂಜನೆ ನೀಡುವ ಐಪಿಎಲ್ ಕ್ರೀಡೆಗೆ ಯಾಕೆ ಈ ನಿಷೇಧ? ರ್‍ಯಾಲಿ ಮತ್ತು ಸಮಾವೇಶಗಳಿಗೆ ಅನ್ವಯಿಸದ ಕೋವಿಡ್ ನಿಯಮ ಐಪಿಎಲ್‌ಗೆ ಮಾತ್ರ ಯಾಕೆ?

ಪ್ರಶಾಂತ್ ರೆಡ್ಡಿ ಎಸ್., ಚಿಕ್ಕಗೊಂಡನಹಳ್ಳಿ, ಚಿತ್ರದುರ್ಗ

ವಿಚಿತ್ರ ಅಡ್ಡ ಹೆಸರು

'ರೌಡಿ ಚೆಡ್ಡಿಗೆ ಗುಂಡೇಟು' ಎಂಬ ಶೀರ್ಷಿಕೆಯನ್ನು ಕೆಲವು ಪತ್ರಿಕೆಗಳಲ್ಲಿ ಓದಿದೊಡನೆ ಅಚ್ಚರಿಯಾಯಿತು. ಕಾಲಿಗೆ ಗುಂಡು, ಬೆನ್ನಿಗೆ ಗುಂಡು, ಹೊಟ್ಟೆಗೆ ಗುಂಡು, ತಲೆಗೆ ಗುಂಡು ಮುಂತಾಗಿ ಓದಿದ್ದವರಿಗೆ ಈ 'ಚೆಡ್ಡಿಗೆ ಗುಂಡು' ಎಂಬ ಸುದ್ದಿ ಕುತೂಹಲ ತಂದಿತು. ಓದು ಮುಂದುವರಿಸಿದಂತೆ ತಿಳಿದಿದ್ದು 'ಚೆಡ್ಡಿ' ಎಂಬುದು ಆ ರೌಡಿಯ ಅಡ್ಡ ಹೆಸರು. ಮಚ್ಚ, ಚೂರಿ, ಬಾಂಬ್, ಗನ್... ಎಂತೆಂತಹ ಅಡ್ಡ ಹೆಸರುಗಳಿವೆಯೋ?

ಮಕ್ಕಳಿಗೆ ಮುದ್ದಿನಿಂದ ಚಿನ್ನ, ರನ್ನ, ಮುದ್ದು, ಪುಟ್ಟು, ಕಂದ, ಬಂಗಾರಿ, ಅಮ್ಮು ಮುಂತಾದ ಹತ್ತು ಹಲವು ಹೆಸರುಗಳನ್ನು ಇಟ್ಟು ಕರೆಯುತ್ತಾ ಸಂತೋಷಪಡುತ್ತೇವೆ. ಆದರೆ ಪಾತಕಲೋಕದಲ್ಲಿನ ಅಡ್ಡಹೆಸರುಗಳು ವಿಚಿತ್ರ-ವಾಗಿದ್ದು ಅಚ್ಚರಿ ಮೂಡಿಸುತ್ತವೆ. ಮಾಧ್ಯಮಗಳಲ್ಲೂ ಇಂತಹ ಅಡ್ಡಹೆಸರುಗಳೇ ಮುಂಚೂಣಿಗೆ ಬಂದು ಮೂಲ ಹೆಸರುಗಳು ಗೌಣವಾಗುವುದು ವಿಚಿತ್ರ.

ಪತ್ತಂಗಿ ಎಸ್. ಮುರಳಿ, ಬೆಂಗಳೂರು

ಕಸ್ಟಮ್ಸ್ ಅಧಿಕಾರಿಗಳ ಕೈಚಳಕ

ಕಸ್ಟಮ್ಸ್ ಅಧಿಕಾರಿಗಳು ತೀವ್ರತರ ಪರಿಶೋಧನೆ ಮಾಡುತ್ತಾರೆ ಎನ್ನುವುದರಲ್ಲಿ ಯಾವ ಸಂದೇಹವೂ ಬೇಡ. ಭಟ್ಕಳದ ವ್ಯಕ್ತಿಯೊಬ್ಬರ ₹ 48 ಲಕ್ಷ ಮೌಲ್ಯದ ಕೈಗಡಿಯಾರವನ್ನು ಚಿನ್ನ ಅಡಗಿಸಿಟ್ಟು ಸಾಗಿಸುತ್ತಿದ್ದರೆಂಬ ಅನುಮಾನದ ಮೇಲೆ ಕೇರಳದಲ್ಲಿ ಕಸ್ಟಮ್ಸ್ ಅಧಿಕಾರಿಗಳು ಒಡೆದು ಹಾಕಿರುವುದೇ (ಪ್ರ.ವಾ., ಮಾರ್ಚ್ 8) ಇದಕ್ಕೆ ನಿದರ್ಶನ! ಆದರೂ ಕೈ ಗಡಿಯಾರದಲ್ಲಿ ಎಷ್ಟು ಬಂಗಾರ ಇಡಬಹುದು ಹಾಗೂ ಈ ವಾಚು ಬೇರೆ ವಾಚಿಗಿಂತ ಎಷ್ಟು ಹೆಚ್ಚು ಮೌಲ್ಯದ್ದು ಎಂಬ ಸಾಮಾನ್ಯ ಜ್ಞಾನವೂ ಈ ಅಧಿಕಾರಿಗಳಿಗೆ ಇಲ್ಲದಿದ್ದುದು ಬಯಲಾಗಿದೆ. ವಾಚಿನ ಒಳಗೆ ಇರಬಹುದಾದ ಚಿನ್ನವನ್ನು ಆ ವಾಚನ್ನು ಒಡೆದುಹಾಕಿಯೇ ಪರಿಶೀಲಿಸಬೇಕೇ? ಅದನ್ನು ಪುಡಿಮಾಡುವ ಅಗತ್ಯವೇನಿತ್ತು? ಅಧಿಕಾರಿಗಳು ಇನ್ನು ಮುಂದಾದರೂ ಇಂತಹ ಇಕ್ಕಟ್ಟಿಗೆ ಸಿಲುಕದೆ ಮುಂದಾಲೋಚಿಸಿ ಕಾರ್ಯ ನಿರ್ವಹಿಸುವುದು ಒಳ್ಳೆಯದು.

ಬಾಲಕೃಷ್ಣ ಎಂ.ಆರ್., ಬೆಂಗಳೂರು

ಮೀಸಲಾತಿಗೆ ಆಗ್ರಹಿಸುವ ಮುನ್ನ...

ತಮ್ಮ ಸಮುದಾಯದ ಹಿಂದುಳಿದವರ ಬಗ್ಗೆ ಅತೀವ ಕಾಳಜಿಯಿಂದ ಮೈಕೊಡವಿಕೊಂಡು ಎದ್ದು ಮೀಸಲಾತಿಗಾಗಿ ಆಗ್ರಹಿಸುತ್ತಿರುವ ಆಯಾ ಸಮುದಾಯದ ನೇತಾರರಿಗೆ ಅಭಿನಂದನೆಗಳು. ಸರ್ಕಾರಕ್ಕೆ ಮೀಸಲಾತಿಗಾಗಿ ಗಡುವು ನೀಡುವ ಮುನ್ನ ತಮ್ಮ ಸಮುದಾಯದವರ ಒಂದು ಸಮಿತಿ ರಚಿಸಿ, ಅದರ ಮೂಲಕ ಆರ್ಥಿಕ ಸಮೀಕ್ಷೆ ಮಾಡಿಸಲಿ. ಸಮುದಾಯದ ಉಳ್ಳವರು ತಮ್ಮಲ್ಲಿರುವ ಸಂಪತ್ತಿನ ಸ್ವಲ್ಪ ಭಾಗವನ್ನು ಆ ಸಮುದಾಯದ ಹಿಂದುಳಿದವರೊಂದಿಗೆ ಹಂಚಿಕೊಳ್ಳಲಿ. ಈ ಕಾರ್ಯಕ್ಕೆ ನೇತಾರರು ಉಳ್ಳವರ ಮನವೊಲಿಸಲಿ. ಆ ನಂತರವೂ ಸಮುದಾಯದವರು ಹಿಂದುಳಿದರೆ ಮೀಸಲಾತಿಗಾಗಿ ಹೋರಾಡಲಿ.

ಮಲ್ಲಿಕಾರ್ಜುನ, ಸುರಧೇನುಪುರ

ಪ್ರಾರ್ಥನೆ ಪುನರಾರಂಭವಾಗಲಿ

ಕೋವಿಡ್-19ರ ತೀವ್ರತೆ ಕಡಿಮೆಯಾಗಿ ಇದೀಗ ರಾಜ್ಯದಾದ್ಯಂತ ಶಾಲೆಗಳಲ್ಲಿ ಕೆಲವು ತರಗತಿಗಳಿಗೆ ಪಾಠ-ಪ್ರವಚನಗಳು ಪುನರಾರಂಭವಾಗಿವೆ. ಯಾವುದೇ ಶಾಲೆಯಲ್ಲಿ ಬೆಳಗಿನ ಸಮಯ ಪ್ರಾರ್ಥನೆ ಮಾಡಿ, ಬಳಿಕ ವಿದ್ಯಾರ್ಥಿಗಳು ತರಗತಿ ಕೋಣೆಗಳಿಗೆ ಹೋಗುವುದು ವಾಡಿಕೆ. ಆದರೆ ಶಾಲೆಗಳಲ್ಲಿ ಇತ್ತೀಚೆಗೆ ಪ್ರಾರ್ಥನೆ ಮಾಡದೆ ಮಕ್ಕಳು ನೇರವಾಗಿ ತರಗತಿಗಳಿಗೆ ಹೋಗುತ್ತಿದ್ದಾರೆ. ಆನ್‌ಲೈನ್‌ನಲ್ಲೂ ಮೊದಲ ತರಗತಿ ಆರಂಭಕ್ಕೆ ಮುನ್ನ ಪ್ರಾರ್ಥನೆ ಮಾಡಿಸುವ ರೂಢಿ ಇರುವಾಗ, ಶಾಲೆಗಳಲ್ಲಿ ಪ್ರಾರ್ಥನೆಗೆ ಅವಕಾಶವಿಲ್ಲ ಏಕೆ? ಶಾಲೆಗಳಲ್ಲಿ ಪ್ರಾರ್ಥನೆ ಮುಗಿಸಿ ತರಗತಿಯ ಒಳಗೆ ಹೋದಾಗ ವಿದ್ಯಾರ್ಥಿಗಳ ಮನಸ್ಸು ಪ್ರಫುಲ್ಲವಾಗಿ ಪಾಠ-ಪ್ರವಚನಗಳನ್ನು ಕೇಳಲು ಸನ್ನದ್ಧವಾ-ಗಿರುತ್ತದೆ. ಮೆದುಳು ಚುರುಕಾಗಿ ಕ್ರಿಯಾಶೀಲವಾಗಿರುತ್ತದೆ. ಹೀಗಾಗಿ, ಶಾಲೆಗಳಲ್ಲಿ ನಿಂತು ಹೋಗಿರುವ ಪ್ರಾರ್ಥನೆಯನ್ನು ಮೊದಲಿನಂತೆ ಶುರು ಮಾಡುವುದು ಒಳ್ಳೆಯದು.

ಎಚ್.ಎಸ್.ಟಿ.ಸ್ವಾಮಿ, ಚಿತ್ರದುರ್ಗ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಗಗನಕ್ಕೇರಿದ ಪೆಟ್ರೋಲಿಯಂ ಉತ್ಪನ್ನಗಳ ಬೆಲೆ: ಸಂಸತ್‌ನಲ್ಲಿ ಚರ್ಚೆಗೆ ಅವಕಾಶ ಕೋರಿದ ಕಾಂಗ್ರೆಸ್

ಹೋರಾಟ ಮುಂದುವರಿಯಲಿದೆ: ಖರ್ಗೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಹಣದುಬ್ಬರ ಮತ್ತು ಪೆಟ್ರೋಲಿಯಂ ಉತ್ಪನ್ನಗಳ ಬೆಲೆ ಏರಿಕೆಗೆ ಸಂಬಂಧಿಸಿದಂತೆ ಸಂಸತ್‌ನಲ್ಲಿ ವಿಸ್ತೃತ ಚರ್ಚೆಗೆ ಅವಕಾಶ ನೀಡುವಂತೆ ಕೋರಿರುವ ಕಾಂಗ್ರೆಸ್, ಜನಸಾಮಾನ್ಯರ ಪರ ಪ್ರತಿಭಟನೆ ಮುಂದುವರಿಸುವುದಾಗಿ ಹೇಳಿದೆ.

ರಾಜ್ಯಸಭೆಯಲ್ಲಿ ಆರಂಭವಾದ ಬಜೆಟ್ ಅಧಿವೇಶನದ ದ್ವಿತೀಯಾರ್ಧದ ಮೊದಲ ದಿನವಾದ ಸೋಮವಾರ ಈ ಕುರಿತು ಚರ್ಚೆಗೆ ಅವಕಾಶ ಸಿಗದೇ ಹೋಗಿದ್ದರಿಂದ ಕಾಂಗ್ರೆಸ್ ಸದಸ್ಯರು ಪ್ರತಿಭಟನೆ ನಡೆಸಿದರು.

ಪೆಟ್ರೋಲ್, ಡೀಸೆಲ್ ಮತ್ತು ಅಡುಗೆ ಅನಿಲದ ಬೆಲೆ ಏರಿಕೆಯಿಂದ ಜನಸಾಮಾನ್ಯರು ತೀವ್ರ ಸಮಸ್ಯೆ ಎದುರಿಸುವಂತಾಗಿದೆ. ಈ ಕುರಿತು ಚರ್ಚೆಗೆ ನಿಯಮಾನುಸಾರ ಅವಕಾಶ ಕೋರಿದರೂ ಸಭಾಪತಿ ಪರಿಗಣಿಸಲಿಲ್ಲ. ಹಾಗಾಗಿ ಮೊದಲ ದಿನದ ಕಲಾಪ ನಡೆಯಲಿಲ್ಲ ಎಂದು ರಾಜ್ಯಸಭೆಯ ವಿರೋಧ ಪಕ್ಷದ ನಾಯಕ

ಮಲ್ಲಿಕಾರ್ಜುನ ಖರ್ಗೆ

ಮಲ್ಲಿಕಾರ್ಜುನ ಖರ್ಗೆ ಸುದ್ದಿಗಾರರಿಗೆ ತಿಳಿಸಿದರು.

'ಜನರ ಆಕ್ರೋಶಕ್ಕೆ ಕಾರಣವಾಗಿರುವ ಬೆಲೆ ಏರಿಕೆಯ ವಿರುದ್ಧ ಸಂಸತ್‌ನ ಉಭಯ ಸದನಗಳಲ್ಲಿ ದನಿ ಎತ್ತಿ, ವಿಸ್ತೃತ ಚರ್ಚೆಯನ್ನು ಬಯಸಿದ್ದೇವೆ. ಆದರೆ, ಸರ್ಕಾರ ಅದಕ್ಕೆ ಒಪ್ಪಿಗೆ ಸೂಚಿಸಿಲ್ಲ. ಬೇಡಿಕೆ ಈಡೇರುವವರೆಗೂ ನಮ್ಮ ಪ್ರತಿಭಟನೆ ಮುಂದುವರಿಯಲಿದೆ' ಎಂದು ಘೋಷಿಸಿದರು.

'ಕಳೆದ ಆರು ವರ್ಷಗಳಲ್ಲಿ ಪೆಟ್ರೋಲಿಯಂ ಉತ್ಪನ್ನಗಳ ಬೆಲೆ ಏರಿಕೆಯಿಂದಲೇ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಬೊಕ್ಕಸಕ್ಕೆ ಬಂದಿರುವ ಅಂದಾಜು ₹ 21 ಲಕ್ಷ ಕೋಟಿ ಹಣ ಎಲ್ಲಿ ಹೋಯಿತು' ಎಂದು ಪ್ರಶ್ನಿಸಿದರು.

ಕೃಷಿ ಕಾಯ್ದೆ ತಿದ್ದುಪಡಿ ವಿರೋಧಿಸಿ ನಡೆದ ಪ್ರತಿಭಟನೆಯಲ್ಲಿ ಭಾಗವಹಿಸಿದ್ದವರಲ್ಲಿ 273 ರೈತರು ಸಾವಿಗೀಡಾಗಿದ್ದಾರೆ. ಅವರಿಗೆ ಶ್ರದ್ಧಾಂಜಲಿ ಸಲ್ಲಿಸಿ ಸಂಸತ್‌ನಲ್ಲಿ ಗೌರವ ಸಲ್ಲಿಸಬೇಕು ಎಂಬುದು ಕಾಂಗ್ರೆಸ್‌ನ ಮನವಿಯಾಗಿತ್ತು. ಆದರೆ, ಇಂಥ ಮಹತ್ವದ ವಿಷಯದ ಕುರಿತು ಚರ್ಚೆಗೆ ಸಭಾಪತಿ ಎಂ.ವೆಂಕಯ್ಯ ನಾಯ್ಡು ಅವಕಾಶ ನೀಡಲಿಲ್ಲ ಎಂದು ರಾಜ್ಯಸಭೆ ಸದಸ್ಯ ನಾಸಿರ್ ಹುಸೇನ್ ಹೇಳಿದರು.

ಕಲಾಪ ಮುಂದಕ್ಕೆ: ಇಂಧನ ದರ ಏರಿಕೆಯ ಬಗ್ಗೆ ಚರ್ಚೆ ನಡೆಯಬೇಕು ಎಂಬ ವಿರೋಧ ಪಕ್ಷಗಳ ಒತ್ತಾಯಕ್ಕೆ ಸರ್ಕಾರ ಮಣೆ ಹಾಕದ್ದರಿಂದ ವಿರೋಧ ಪಕ್ಷಗಳು ಗದ್ದಲ ಎಬ್ಬಿಸಿದವು. ಇದರಿಂದ ಸೋಮವಾರ ರಾಜ್ಯಸಭೆಯ ಕಲಾಪ ಎರಡು ಬಾರಿ ಮುಂದಕ್ಕೆ ಹೋಗಿ ಕೊನೆಗೆ ಇಡೀ ದಿನದ ಮಟ್ಟಿಗೆ ಕಲಾಪ ಬಲಿಯಾಯಿತು.

ಸೋಮವಾರ ಬಜೆಟ್ ಅಧಿವೇಶನದ ಎರಡನೇ ಅವಧಿಯ ಕಲಾಪ ಆರಂಭವಾಗುತ್ತಿದ್ದಂತೆಯೇ ನಿಗದಿತ ಕಲಾಪ ಸೂಚಿಯ ಬದಲಿಗೆ ಇಂಧನ ದರ ಏರಿಕೆಯನ್ನೇ ಮೊದಲಿಗೆ ಚರ್ಚೆಗೆ ಕೈಗೆತ್ತಿಕೊಳ್ಳಬೇಕು ಎಂದು ವಿರೋಧ ಪಕ್ಷಗಳ ಪಟ್ಟು ಹಿಡಿದವು. ಇದಕ್ಕೆ ಸಭಾಧ್ಯಕ್ಷರು ಒಪ್ಪಿಗೆ ಕೊಡಲಿಲ್ಲ. ಆಗ ಗದ್ದಲ ಉಂಟಾದ್ದರಿಂದ ಕಲಾಪವನ್ನು ಎರಡು ಸಲ ಮುಂದೂಡಲಾಯಿತು. ಮೂರನೇ ಬಾರಿಯೂ ಗದ್ದಲ ಮುಂದುವರಿದಿದ್ದರಿಂದ ಸಭಾಧ್ಯಕ್ಷರ ಸ್ಥಾನದಲ್ಲಿದ್ದ ವಂದನಾ ಚವಾಣ್ ಅವರು ಕಲಾಪವನ್ನು ಮಂಗಳವಾರಕ್ಕೆ ಮುಂದೂಡಿದರು.

ಬಜೆಟ್ ಅಧಿವೇಶನ ಅವಧಿ ಮೊಟಕು ಸಾಧ್ಯತೆ

ನವದೆಹಲಿ (ಪಿಟಿಐ): ಸಂಸತ್‌ನ ಬಜೆಟ್ ಅಧಿವೇಶನದ ಅವಧಿ ಕಡಿತಗೊಳ್ಳುವ ಸಾಧ್ಯತೆ ಇದೆ. ವಿವಿಧ ರಾಜ್ಯಗಳ ವಿಧಾನಸಭೆಯ ಮೊದಲ ಹಂತದ ಚುನಾವಣೆ ಮಾರ್ಚ್ 27ರಂದು ನಡೆಯಲಿದ್ದು, ಇದಕ್ಕೂ ಮೊದಲೇ ಬಜೆಟ್ ಅಧಿವೇಶನ ಅಂತ್ಯಗೊಳ್ಳುವ ಸಾಧ್ಯತೆ ಇದೆ ಎಂದು ಮೂಲಗಳು ಹೇಳಿವೆ.

ಅಧಿವೇಶನದ ಅವಧಿಯನ್ನು ಮೊಟಕುಗೊಳಿಸುವ ಕುರಿತು ಸ್ಪೀಕರ್ ಓಂ ಬಿರ್ಲಾ ಅಂತಿಮ ನಿರ್ಧಾರ ಕೈಗೊಳ್ಳುವರು.

ಈಗಾಗಲೇ ನಿಗದಿಯಾಗಿರುವಂತೆ ಏಪ್ರಿಲ್ 8ರ ವರೆಗೆ ಬಜೆಟ್ ಅಧಿವೇಶನ ನಡೆಯಬೇಕಿತ್ತು. ಆದರೆ, ನಾಲ್ಕು ರಾಜ್ಯಗಳ ಹಾಗೂ ಒಂದು ಕೇಂದ್ರಾಡಳಿತ ಪ್ರದೇಶದ ವಿಧಾನಸಭೆಗೆ ಚುನಾವಣೆ ನಡೆಯುವ ಕಾರಣ ಅಧಿವೇಶನ ಅವಧಿಯನ್ನು ಮೊಟಕುಗೊಳಿಸುವಂತೆ ಹಲವಾರು ಪಕ್ಷಗಳು ಮನವಿ ಮಾಡಿದ್ದವು.

ಮಂಗಳವಾರ ಉಭಯ ಸದನಗಳ ಕಲಾಪ ಬೆಳಿಗ್ಗೆ 11ಕ್ಕೆ ಆರಂಭವಾಗಿ, ಸಂಜೆ 6ರ ವರೆಗೆ ನಡೆಯುವುದು. ಕೋವಿಡ್‌ನಿಂದಾಗಿ ಈ ವರೆಗೆ ಬದಲಾದ ಸಮಯದಲ್ಲಿ ಸದನದ ಕಲಾಪಗಳು ನಡೆಯುತ್ತಿದ್ದವು.

'ಜನಾಂಗೀಯ ನಿಂದನೆ ಎದುರಿಸಿದೆವು'

ನೋವನ್ನು ಹಂಚಿಕೊಂಡ ರಾಜಕುಮಾರ ಹ್ಯಾರಿ ಪತ್ನಿ ಮೇಘನ್

ಲಾಸ್ ಏಂಜಲೀಸ್ (ಎಪಿ): ರಾಜಮನೆತನದ ಸದಸ್ಯರಿಗೆ ನೀಡಲಾಗುತ್ತಿದ್ದ ರಕ್ಷಣೆಯನ್ನು ಕಳೆದುಕೊಳ್ಳುವ ಭಯ, ಹುಟ್ಟಲಿರುವ ಮಗುವಿನ ಚರ್ಮದ ಬಣ್ಣ ಹೇಗಿದ್ದೀತು ಎಂಬುದರ ಚರ್ಚೆ..... ಹೀಗೆ ಹಲವಾರು ನೋವಿನ ಸಂಗತಿಗಳನ್ನು ಪ್ರಿನ್ಸ್ ಹ್ಯಾರಿ ಹಾಗೂ ಮೇಘನ್ ಮಾರ್ಕೆಲ್ ಅವರು ಟಿ.ವಿ ಸಂದರ್ಶನವೊಂದರಲ್ಲಿ ಹಂಚಿಕೊಂಡಿದ್ದಾರೆ.

ಅಮೆರಿಕದ ಖ್ಯಾತ ನಿರೂಪಕಿ ಓಪ್ರಾ ವಿನ್‌ಫ್ರೇ ಅವರಿಗೆ ನೀಡಿರುವ ಸಂದರ್ಶನವೊಂದರಲ್ಲಿ ಅವರು ಈ ವಿಚಾರವನ್ನು ಬಹಿರಂಗಪಡಿಸಿದ್ದಾರೆ. ಈ ಸಂದರ್ಶನ ಭಾನುವಾರ ಪ್ರಸಾರವಾಗಿದ್ದು, ಅಮೆರಿಕ ಹಾಗೂ ಬ್ರಿಟನ್‌ನಲ್ಲಿ ಈ ವಿಷಯ ಪ್ರತಿಧ್ವನಿಸುವ ಸಾಧ್ಯತೆ ಇದೆ ಎಂದು ವಿಶ್ಲೇಷಿಸಲಾಗುತ್ತಿದೆ.

'ಮದುವೆ ನಂತರ ಒಂಟಿತನ ಕಾಡುತ್ತಿತ್ತು. ಭಾವನಾತ್ಮಕ ಬೆಂಬಲ ಇಲ್ಲದೇ ತೊಳಲಾಡಿದ್ದೆ. ಮಾನಸಿಕವಾಗಿ ಜರ್ಝರಿತಗೊಂಡಿದ್ದ ನನ್ನನ್ನು ಆತ್ಮಹತ್ಯೆ ಯೋಚನೆಗಳೂ ಕಾಡಿದ್ದವು' ಎಂದು ಮೇಘನ್ ಹೇಳಿದ್ದಾರೆ.

'ರಾಜಮನೆತನ ನನ್ನನ್ನು ರಕ್ಷಿಸುವುದಿಲ್ಲ ಎಂಬುದು ಪ್ರಿನ್ಸ್ ಹ್ಯಾರಿಯನ್ನು ವಿವಾಹವಾದ ನಂತರ ನನಗೆ ಸ್ಪಷ್ಟವಾಗಿ ಮನವರಿಕೆಯಾಗಿತ್ತು' ಎಂದು ಹೇಳಿದ್ದಾರೆ.

'ನಾನು ಮಾತ್ರ ರಕ್ಷಣೆಗೆ ಒಳಪಟ್ಟಿರಲಿಲ್ಲ. ಆದರೆ, ಕುಟುಂಬದ ಇತರ ಸದಸ್ಯರನ್ನು ರಕ್ಷಿಸಿಕೊಳ್ಳಲು ಅವರು ಸುಳ್ಳು ಹೇಳಲು ಸಿದ್ಧರಿದ್ದರು. ನನ್ನನ್ನು ಮತ್ತು ನನ್ನ ಗಂಡನನ್ನು ರಕ್ಷಿಸಲು ಸತ್ಯವನ್ನು ಹೇಳಲು ಅವರು ಸಿದ್ಧರಿರಲಿಲ್ಲ' ಎಂದು ಅವರು ಹೇಳಿಕೊಂಡಿದ್ದಾರೆ.

ಟಿ.ವಿ. ಸಂದರ್ಶನದಲ್ಲಿ ರಾಜಕುಮಾರ ಹ್ಯಾರಿ ಹಾಗೂ ಪತ್ನಿ ಮೇಘನ್ ಪಾಲ್ಗೊಂಡಿದ್ದರು –ಎಎಫ್‌ಪಿ ಚಿತ್ರ

ಆದರೆ, ಇದಕ್ಕೆ ಪೂರಕವಾಗಿ ನಿರ್ದಿಷ್ಟ ಸಂದರ್ಭವನ್ನೇನೂ ಅವರು ಉಲ್ಲೇಖಿಸಿಲ್ಲ.

'ನನ್ನ ಮಗ ಆರ್ಚಿ ಗರ್ಭದಲ್ಲಿದ್ದಾಗ ರಾಜಮನೆತನ ಆತಂಕದಲ್ಲಿತ್ತು! ಮಗುವೇನಾದರೂ ಹುಟ್ಟಿದರೆ ಅದರ ಚರ್ಮದ ಬಣ್ಣ ಎಷ್ಟು ಗಾಢವಾಗಿರಬಹುದು ಎಂಬೆಲ್ಲ ಚರ್ಚೆಗಳು ಅಲ್ಲಿ ನಡೆಯುತ್ತಿದ್ದವು' ಎಂದು ಮೇಘನ್ ಹೇಳಿದಾಗ, ನಿರೂಪಕಿ ಒಂದು ಕ್ಷಣ ದಿಗ್ಭ್ರಾಂತರಾದರು.

ಮೇಘನ್‌ಗೆ ರಾಜಕುಮಾರ ಹ್ಯಾರಿ ಈ ವಿಷಯ ತಿಳಿಸಿದ್ದರು. ಆದರೆ, ಹ್ಯಾರಿಗೆ ಯಾರು ಈ ಮಾತು ಹೇಳಿದ್ದರು ಎಂಬುದನ್ನು ಮೇಘನ್ ಬಹಿರಂಗಪಡಿಸಲು ನಿರಾಕರಿಸಿದರು. ಅವರ ಹೆಸರು ಬಹಿರಂಗಪಡಿಸುವುದು 'ಬಹಳ ಹಾನಿಕರ' ಎಂದು ಮೇಘನ್ ಹೇಳಿಕೊಂಡಿದ್ದಾರೆ.

'ವಿಚ್ಛೇದಿತಳು, ಅಮೆರಿಕನ್ ಮೂಲದ ನಟಿಯಾಗಿದ್ದೂ ರಾಜಮನೆತನ ಸೇರಿದ್ದರ ಬಗ್ಗೆ ನಾನು ಎಂದೂ ಯೋಚನೆ ಮಾಡಿರಲಿಲ್ಲ. ಆದರೆ, ಅವರು ಅದನ್ನೇ ಯೋಚನೆ ಮಾಡುತ್ತಿದ್ದರು. ನನ್ನನ್ನೂ ಚಿಂತೆಗೆ ದೂಡಿದರು. ರಾಜಮನೆತನವೊಂದೇ ನನ್ನೊಂದಿಗೆ ಹೀಗೆ ನಡೆದುಕೊಳ್ಳಲಿಲ್ಲ. ರಾಜಮನೆತನದೊಂದಿಗೆ ನಿಕಟವಾಗಿದ್ದ ಜನರೂ ನನ್ನೊಂದಿಗೆ ಇದೇ ರೀತಿ ವರ್ತಿಸಿದರು' ಎಂದೂ ಅವರು ಬೇಸರ ವ್ಯಕ್ತಪಡಿಸಿದ್ದಾರೆ.

'ಬ್ರಿಟಿಷ್ ರಾಣಿ ನನಗೆ ಯಾವತ್ತಿಗೂ ವಿಸ್ಮಯವಾಗಿಯೇ ಉಳಿದಿದ್ದಾರೆ. ನಾನು ರಾಜಕುಮಾರ ಹ್ಯಾರಿಯನ್ನು ಮದುವೆಯಾಗಿ ಹೋದ ನಂತರ ಅಲ್ಲಿ ನನಗೇನು ಕೆಲಸ ಎಂಬುದೇ ನನಗೆ ತಿಳಿದಿರಲಿಲ್ಲ' ಎಂದು ಅವರು ಹೇಳಿದ್ದಾರೆ.

'ರಾಜ ಮನೆತನ ಬೀಸಿದ್ದ ಬಲೆಗೆ ನಾನು ಸಿಲುಕಿದೆ ಎಂದು ಭಾಸವಾಗಿತ್ತು. ಹಣಕಾಸು ನೆರವು ಸ್ಥಗಿತಗೊಂಡಿತ್ತು. ಭದ್ರತೆಯನ್ನು ಸಹ ಹಿಂಪಡೆಯಲಾಗಿತ್ತು. ವರ್ಷದಿಂದ ತಂದೆಯೂ ನನ್ನೊಂದಿಗೆ ಮಾತನಾಡುತ್ತಿರಲಿಲ್ಲ' ಎಂದು ಹ್ಯಾರಿ ನೋವಿನಿಂದ ಹೇಳಿದ್ದಾರೆ.

ಬಾಲ್ಯವಿವಾಹ: ಭಾರತ ಸೇರಿ ಐದು ದೇಶಗಳಲ್ಲಿನ ಪ್ರಮಾಣ ಶೇ 50

ನವದೆಹಲಿ (ಪಿಟಿಐ): ವಿಶ್ವದಲ್ಲಿ ನಡೆಯುವ ಬಾಲ್ಯವಿವಾಹಗಳ ಪೈಕಿ ಶೇ 50ರಷ್ಟು ಪ್ರಕರಣಗಳು ಭಾರತ ಸೇರಿದಂತೆ ಐದು ರಾಷ್ಟ್ರಗಳಲ್ಲಿ ವರದಿಯಾಗುತ್ತವೆ ಎಂದು ಯುನಿಸೆಫ್ ಹೇಳಿದೆ.

ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಸಂದರ್ಭದಲ್ಲಿ ಯುನಿಸೆಫ್ ಬಿಡುಗಡೆ ಮಾಡಿರುವ 'ಕೋವಿಡ್–19: ಬಾಲ್ಯವಿವಾಹ ವಿರುದ್ಧದ ಹೋರಾಟದ ಪ್ರಗತಿಗೆ ಅಪಾಯ' ಎಂಬ ವಿಶ್ಲೇಷಣಾತ್ಮಕ ವರದಿಯಲ್ಲಿ ಈ ಅಂಶ ಇದೆ.

'ಬಾಲ್ಯವಿವಾಹ ತಡೆಯಲು ಸಾಕಷ್ಟು ಹೋರಾಟ ನಡೆದಿದ್ದರೂ, ಈ ದಶಕದ ಅಂತ್ಯದ ವೇಳೆಗೆ ಒಂದು ಕೋಟಿ ಬಾಲ್ಯವಿವಾಹಗಳು ನೆರವೇರುವ ಅಪಾಯ ತಪ್ಪಿದ್ದಲ್ಲ' ಎಂದು ವರದಿ ಆತಂಕ ವ್ಯಕ್ತಪಡಿಸಿದೆ.

ಬಾಲ್ಯವಿವಾಹಕ್ಕೆ ಒಳಗಾಗಿ, ಸದ್ಯ ಬದುಕು ಸಾಗಿಸುತ್ತಿರುವ ಮಹಿಳೆಯರ ಸಂಖ್ಯೆ 65 ಕೋಟಿ. ಈ ಪೈಕಿ ಶೇ 50ರಷ್ಟು ಮಹಿಳೆಯರು ಬಾಂಗ್ಲಾದೇಶ, ಬ್ರೆಜಿಲ್, ಇಥಿಯೋಪಿಯಾ, ಭಾರತ ಹಾಗೂ ನೈಜೀರಿಯಾಕ್ಕೆ ಸೇರಿದವರಾಗಿದ್ದಾರೆ ಎಂದೂ ವರದಿಯಲ್ಲಿ ವಿವರಿಸಲಾಗಿದೆ.

'ಒಂದು ವರ್ಷ ಕಾಲ ಇಡೀ ಜಗತ್ತನ್ನು ಕೋವಿಡ್ ಪಿಡುಗು ಬಾಧಿಸಿದೆ. ಈ ಅವಧಿಯಲ್ಲಿ ಬಾಲಕಿಯರು ಹಾಗೂ ಅವರ ಕುಟುಂಬಗಳನ್ನು ಈ ಅನಿಷ್ಟ ಪದ್ಧತಿಯಿಂದ ರಕ್ಷಿಸುವುದು ತುರ್ತು ಅಗತ್ಯ. ಇದಕ್ಕಾಗಿ ಶಾಲೆಗಳನ್ನು ಪುನಃ ಆರಂಭಿಸಬೇಕು' ಎಂದು ಯುನಿಸೆಫ್‌ನ ಕಾರ್ಯನಿರ್ವಾಹಕ ನಿರ್ದೇಶಕಿ ಹೆನ್ರೀಟಾ ಫೋರ್ ಪ್ರತಿಪಾದಿಸುತ್ತಾರೆ.

ಅತ್ಯಾಚಾರ ಪ್ರಕರಣದ ಹೇಳಿಕೆಯ 'ತಪ್ಪು ವರದಿ'– ಸುಪ್ರೀಂ ಕೋರ್ಟ್

ನವದೆಹಲಿ (ಪಿಟಿಐ): ಮಹಿಳೆಯರ ಬಗ್ಗೆ ತನಗೆ ಅತ್ಯಂತ ಹೆಚ್ಚಿನ ಗೌರವವಿದೆ ಎಂದು ಸೋಮವಾರ ಹೇಳಿರುವ ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಎಸ್.ಎ.ಬೊಬಡೆ ಅವರನ್ನು ಒಳಗೊಂಡ ಪೀಠ, ಅತ್ಯಾಚಾರ ಪ್ರಕರಣವೊಂದಕ್ಕೆ ಸಂಬಂಧಿಸಿದಂತೆ ಕಳೆದ ವಾರದ ವಿಚಾರಣೆಯೊಂದನ್ನು 'ಸಂಪೂರ್ಣವಾಗಿ ತಪ್ಪಾಗಿ ವರದಿ ಮಾಡಲಾಗಿದೆ' ಎಂದು ಹೇಳಿದೆ.

'ಅತ್ಯಾಚಾರ ಸಂತ್ರಸ್ತೆಯನ್ನು ನೀವು ಮದುವೆಯಾಗುತ್ತೀರಾ ಎಂದು ನಾವು ಆರೋಪಿಯನ್ನು ಕೇಳಿದ್ದೇವೆ ಅಷ್ಟೇ, ಮದುವೆಯಾಗುವಂತೆ ಆದೇಶ ನೀಡಿಲ್ಲ. ನ್ಯಾಯಾಂಗದ ಗೌರವವು ಇರುವುದು ವಕೀಲರ ಕೈಯಲ್ಲಿ' ಎಂದು ಪೀಠ ಅಭಿಪ್ರಾಯಪಟ್ಟಿತು.

ಅತ್ಯಾಚಾರಕ್ಕೊಳಗಾಗಿ ಗರ್ಭಿಣಿಯಾಗಿರುವ 14 ವರ್ಷದ ಬಾಲಕಿ, ತನ್ನ ಉದರದೊಳಗಿರುವ 26 ವಾರಗಳ ಭ್ರೂಣವನ್ನು ತೆಗೆಸಲು ಅನುಮತಿ ಕೋರಿ ಸಲ್ಲಿಸಿದ ಅರ್ಜಿಯ ವಿಚಾರಣೆ ವೇಳೆ ಇತರ ಇಬ್ಬರು ನ್ಯಾಯಮೂರ್ತಿಗಳಾದ ಎ.ಎಸ್.ಬೋಪಣ್ಣ ಮತ್ತು ವಿ.ರಾಮಸುಬ್ರಮಣಿಯನ್ ಅವರಿದ್ದ ಪೀಠ ಈ ವಿಷಯ ತಿಳಿಸಿತು.

'ಮಾರ್ಚ್ 1ರಂದು ಸಾಕ್ಷ್ಯ ಕಾಯ್ದೆಯಲ್ಲಿಯನ ಅಂಶಗಳ ಆಧಾರದಲ್ಲಿ, ಆರೋಪಿ ನೀಡಿದ ಮುಚ್ಚಳಿಕೆಯನ್ನು ಉಲ್ಲೇಖಿಸಿ ನ್ಯಾಯಪೀಠ ಅತ್ಯಾಚಾರ ಸಂತ್ರಸ್ತೆಯನ್ನು ನೀವು ಮದುವೆಯಾಗುತ್ತೀರಾ ಎಂಬ ಪ್ರಶ್ನೆ ಕೇಳಿತ್ತಷ್ಟೇ. ಆದರೆ ಈ ವಿಷಯವನ್ನು ಸಂಪೂರ್ಣವಾಗಿ ತಪ್ಪಾಗಿ ವರದಿ ಮಾಡಲಾಯಿತು' ಎಂದು ಪೀಠ ಅಸಮಾಧಾನ ವ್ಯಕ್ತಪಡಿಸಿತು.

ಮುಖ್ಯ ನ್ಯಾಯಮೂರ್ತಿ ಅವರೇ ಇಂತಹ ಹೇಳಿಕೆ ನೀಡಿದ್ದಾರೆನ್ನಲಾದ ಬಗ್ಗೆ ದೇಶವ್ಯಾಪಿಯಾಗಿ ತೀವ್ರ ಆಕ್ಷೇಪ ವ್ಯಕ್ತವಾಗಿತ್ತು. ಸಿಪಿಎಂ ಪ್ಯಾಲಿಟ್ ಬ್ಯೂರೊ ಸದಸ್ಯೆ ಬೃಂದಾ ಕಾರಟ್ ಅವರು ಮುಖ್ಯ ನ್ಯಾಯಮೂರ್ತಿ ಅವರು ತಮ್ಮ ಹೇಳಿಕೆ ಹಿಂಪಡೆಯಲು ಆಗ್ರಹಿಸಿ ಪತ್ರವನ್ನೂ ಬರೆದಿದ್ದರು. ವಿವಿಧ ಸಂಘಟನೆಗಳು, ವ್ಯಕ್ತಿಗಳು ಮುಖ್ಯ ನ್ಯಾಯಮೂರ್ತಿಗಳ ಕ್ಷಮೆಗೆ ಆಗ್ರಹಿಸಿದ್ದರು.

ಮಧ್ಯಪ್ರದೇಶ: ಮತಾಂತರ ತಡೆ ಮಸೂದೆಗೆ ಒಪ್ಪಿಗೆ

ಭೋಪಾಲ್ (ಪಿಟಿಐ): ಧಾರ್ಮಿಕ ಮತಾಂತರ ತಡೆ ಮಸೂದೆಗೆ ಮಧ್ಯಪ್ರದೇಶ ವಿಧಾನಸಭೆ ಸೋಮವಾರ ಧ್ವನಿ ಮತದ ಮೂಲಕ ಅನುಮೋದನೆ ನೀಡಿದೆ.

ಡಿಸೆಂಬರ್‌ನಲ್ಲಿ ಸಚಿವ ಸಂಪುಟವು ಧಾರ್ಮಿಕ ಮತಾಂತರ ತಡೆ ಸುಗ್ರೀವಾಜ್ಞೆ ಜಾರಿಗೊಳಿಸಿತ್ತು.

ಮಾರ್ಚ್ 1ರಂದು ರಾಜ್ಯ ಗೃಹ ಸಚಿವ ನರೋತ್ತಮ ಮಿಶ್ರಾ ಅವರು 'ಧಾರ್ಮಿಕ ಸ್ವಾತಂತ್ರ್ಯ ಮಸೂದೆ–2021' ಅನ್ನು ಸದನದಲ್ಲಿ ಮಂಡಿಸಿದ್ದರು. ಚರ್ಚೆಯ ಬಳಿಕ ಧ್ವನಿ ಮತದ ಮೂಲಕ ಮಸೂದೆಗೆ ಸೋಮವಾರ ಅಂಗೀಕಾರ ನೀಡಲಾಯಿತು.

ವಂಚನೆ ಅಥವಾ ಬಲವಂತರ ವಿವಾಹದ ಮೂಲಕ ಧಾರ್ಮಿಕ ಮತಾಂತರವಾಗುವುದನ್ನು ತಡೆಯಲು ಈ ಕಾಯ್ದೆ ರೂಪಿಸಲಾಗಿದೆ.

ತಪ್ಪಿತಸ್ಥರಿಗೆ 10 ವರ್ಷಗಳ ಜೈಲು ಶಿಕ್ಷೆ ಮತ್ತು ಅಪಾರ ದಂಡ ವಿಧಿಸುವ ಅವಕಾಶವನ್ನು ಸುಗ್ರೀವಾಜ್ಞೆಯಲ್ಲಿ ಪ್ರಸ್ತಾಪಿಸಲಾಗಿತ್ತು. ಸುಗ್ರೀವಾಜ್ಞೆ ಜಾರಿಗೊಳಿಸಿದ ಕೇವಲ ಒಂದು ತಿಂಗಳಲ್ಲಿ 23 ಪ್ರಕರಣಗಳನ್ನು ದಾಖಲಿಸಲಾಗಿತ್ತು ಎಂದು ಗೃಹ ಸಚಿವ ಮಿಶ್ರಾ ಕಳೆದ ತಿಂಗಳು ಹೇಳಿಕೆ ನೀಡಿದ್ದರು.

ಅಂಬಾನಿ ನಿವಾಸದ ಬಳಿ ಸ್ಫೋಟಕ ವಾಹನ ಎನ್‌ಐಎ ತನಿಖೆ

ನವದೆಹಲಿ (ಪಿಟಿಐ): ಉದ್ಯಮಿ ಮುಕೇಶ್ ಅಂಬಾನಿ ಅವರ ಮುಂಬೈ ನಿವಾಸದ ಸಮೀಪ ಸ್ಫೋಟಕಗಳನ್ನು ತುಂಬಿದ ವಾಹನವನ್ನು ಜಪ್ತಿ ಮಾಡಿರುವ ಪ್ರಕರಣದ ತನಿಖೆಯನ್ನು ರಾಷ್ಟ್ರೀಯ ತನಿಖಾ ದಳ (ಎನ್‌ಐಎ) ಕೈಗೆತ್ತಿಕೊಂಡಿದೆ.

ಕೇಂದ್ರ ಗೃಹ ಸಚಿವಾಲಯದ ಆದೇಶದಂತೆ ಎನ್‌ಐಎ ಈ ಪ್ರಕರಣವನ್ನು ಕೈಗೆತ್ತಿಕೊಳ್ಳುತ್ತಿರುವುದಾಗಿ ತನಿಖಾ ಸಂಸ್ಥೆಯ ವಕ್ತಾರರು ಸೋಮವಾರ ತಿಳಿಸಿದ್ದಾರೆ. ಫೆಬ್ರುವರಿ 25ರಂದು ಮುಂಬೈನ ಉದ್ಯಮಿ ಮುಕೇಶ್ ಅಂಬಾನಿ ಅವರ ನಿವಾಸದ ಸಮೀಪ 20 ಜಿಲೆಟಿನ್ ಕಡ್ಡಿಗಳಿದ್ದ ಸ್ಕಾರ್ಪಿಯೊ ವಾಹನ ಪತ್ತೆಯಾಗಿತ್ತು. ಪೊಲೀಸರು ಅದನ್ನು ಜಪ್ತಿ ಮಾಡಿದ್ದರು.

ಪೊಲೀಸರ ಪ್ರಕಾರ, ಫೆ.18ರಂದು ಐರೋಲಿ–ಮುಲುಂಡ್ ಸೇತುವೆಯ ಬಳಿಯಿಂದ ಈ ವಾಹನ ಕಳ್ಳತನವಾಗಿತ್ತು. ಈ ವಾಹನದ ಮಾಲೀಕ ಹಿರೆನ್ ಮನ್ಸುಖ್ ಅವರ ಮೃತದೇಹ ಶುಕ್ರವಾರ ಠಾಣೆ ನಗರದ ಹತ್ತಿರದ ಹಳ್ಳವೊಂದರಲ್ಲಿ ಪತ್ತೆಯಾಗಿತ್ತು.

ಪ್ರತಿಕ್ರಿಯಿಸುವಂತೆ ರಾಜ್ಯಗಳಿಗೆ 'ಸುಪ್ರೀಂ' ಸೂಚನೆ

ಜಾತಿಗಳಿಗೆ ಹಿಂದುಳಿದ ಸ್ಥಾನ: ರಾಜ್ಯಗಳಿಗೆ ಅಧಿಕಾರ ಇದೆಯೇ?

ನವದೆಹಲಿ (ಪಿಟಿಐ): ಮೀಸಲಾತಿಗಾಗಿ ನಿರ್ದಿಷ್ಟ ಜಾತಿಯನ್ನು ಸಾಮಾಜಿಕ ಮತ್ತು ಶೈಕ್ಷಣಿಕ ರೀತಿಯಲ್ಲಿ ಹಿಂದುಳಿದಿದೆ ಎಂದು ಘೋಷಿಸಲು ರಾಜ್ಯಗಳ ಶಾಸಕಾಂಗಗಳು ಸಮರ್ಥವಾಗಿವೆಯೇ ಎಂಬ ಮಹತ್ವದ ಪ್ರಶ್ನೆಯನ್ನು ಸುಪ್ರೀಂಕೋರ್ಟ್ ಕೇಳಿದೆ. ಅಲ್ಲದೆ ಈ ಬಗ್ಗೆ ಲಿಖಿತ ಪ್ರತಿಕ್ರಿಯೆ ನೀಡುವಂತೆ ರಾಜ್ಯಗಳಿಗೆ ಸೂಚಿಸಿದೆ.

ಈ ಮೂಲ ಪ್ರಶ್ನೆಯ ಹಿನ್ನೆಲೆಯಲ್ಲಿ ರಾಷ್ಟ್ರಪತಿ ಅವರು ಸಿದ್ಧಪಡಿಸಿರುವ ಪಟ್ಟಿಯಲ್ಲಿ ಹೆಸರಿಸಲಾಗಿರುವ ನಿರ್ದಿಷ್ಟ ಸಮುದಾಯಕ್ಕೆ ಮೀಸಲಾತಿ ನೀಡುವ ಕುರಿತಾಗಿ ಸಂವಿಧಾನದ 102ನೇ ತಿದ್ದುಪಡಿಯ ವ್ಯಾಖ್ಯಾನವನ್ನು ನ್ಯಾಯಾಲಯ ಪರಿಶೀಲಿಸಲಿದೆ.

338 ಬಿ ವಿಧಿಯು ರಾಷ್ಟ್ರೀಯ ಹಿಂದುಳಿದ ವರ್ಗದ ಆಯೋಗದ ರಚನೆ, ಕರ್ತವ್ಯಗಳು ಮತ್ತು ಅಧಿಕಾರದ ಬಗ್ಗೆ ಪ್ರಸ್ತಾಪಿಸಲಾಗಿದೆ, 342 ಎ ವಿಧಿಯು ಒಂದು ನಿರ್ದಿಷ್ಟ ಜಾತಿಯನ್ನು ಸಾಮಾಜಿಕವಾಗಿ ಮತ್ತು

ಶೈಕ್ಷಣಿಕವಾಗಿ ಹಿಂದುಳಿದ ವರ್ಗ ಎಂದು ತಿಳಿಸುವ ಅಧಿಕಾರವನ್ನು ರಾಷ್ಟ್ರಪತಿಗೆ ನೀಡಿದೆ. 102ನೇ ತಿದ್ದುಪಡಿಯ ಮೂಲಕ ಸಿಇಬಿಸಿ ಪಟ್ಟಿ ಸಿದ್ಧಪಡಿಸುವ ಅಧಿಕಾರವನ್ನು ಸಂಸತ್ತಿಗೆ ನೀಡಲಾಗಿದೆ.

ಐವರು ನ್ಯಾಯಾಧೀಶರ ಸಂವಿಧಾನ ಪೀಠವು ಮರಾಠ ಮೀಸಲಾತಿ ಕಾನೂನಿನ ಸಿಂಧುತ್ವ ಮತ್ತು ಒಂದು ನಿರ್ದಿಷ್ಟ ಜಾತಿಯನ್ನು ಸಾಮಾಜಿಕವಾಗಿ ಮತ್ತು ಘೋಷಿಸಲು ರಾಜ್ಯ ಶಾಸಕಾಂಗವು ಸಮರ್ಥವಾಗಿದೆಯೇ ಎಂಬುದರ ಬಗ್ಗೆ ಪರಿಶೀಲನೆ ನಡೆಸುವಾಗ 102 ನೇ ತಿದ್ದುಪಡಿಯ ವ್ಯಾಖ್ಯಾನದ ಪ್ರಶ್ನೆ ಉದ್ಭವಿಸಿದೆ.

ನ್ಯಾಯಮೂರ್ತಿ ಅಶೋಕ್ ಭೂಷಣ್ ಅವರು ಈ ಪೀಠದ ಮುಖ್ಯಸ್ಥರಾಗಿದ್ದು, ನ್ಯಾಯಮೂರ್ತಿಗಳಾದ ಎಲ್. ನಾಗೇಶ್ವರ ರಾವ್, ಎಸ್. ಅಬ್ದುಲ್ ನಜೀರ್, ಹೇಮಂತ್ ಗುಪ್ತಾ ಮತ್ತು ರವೀಂದ್ರ ಭಟ್ ಈ ಪೀಠದಲ್ಲಿ ಇದ್ದಾರೆ.

'ವಿವಿಧ ಪಕ್ಷಗಳು ಸಲ್ಲಿಸಿರುವ ಅರ್ಜಿಯನ್ನು ಪರಿಗಣಿಸಿದ್ದೇವೆ. ಆದರೆ ಸಂವಿಧಾನದ 102 ನೇ ತಿದ್ದುಪಡಿಯ ವ್ಯಾಖ್ಯಾನವು ಬಹಳ ಪ್ರಮುಖವಾದ್ದರಿಂದ ರಾಜ್ಯಗಳಿಗೆ ಶಾಸಕಾಂಗದ ಸಾಮರ್ಥ್ಯದ ಬಗ್ಗೆ ಪ್ರತಿಕ್ರಿಯಿಸುವಂತೆ ಸೂಚಿಸಲಾಗಿದೆ' ಎಂದು ಪೀಠ ಹೇಳಿದೆ.

ಆದರೆ ಇದಕ್ಕೆ ವಿರೋಧ ವ್ಯಕ್ತಪಡಿಸಿರುವ ಕೆಲವೊಂದು ಬಣಗಳು, 'ಎಲ್ಲಾ ರಾಜ್ಯಗಳಿಗೆ ವ್ಯಾಖ್ಯಾನದ ಬಗ್ಗೆ ಪ್ರತಿಕ್ರಿಯಿಸುವ ಅಗತ್ಯವಿಲ್ಲ. ಇದರಿಂದಾಗಿ ವಿಚಾರಣೆಯಲ್ಲಿ ವಿಳಂಬವಾಗಬಹುದು. ಇದರ ಬದಲಿಗೆ ಕೇವಲ ಸಂಬಂಧಪಟ್ಟ ರಾಜ್ಯಕ್ಕೆ ವ್ಯಾಖ್ಯಾನಕ್ಕೆ ಪ್ರತಿಕ್ರಿಯಿಸುವಂತೆ ಸೂಚಿಸುವುದು ಒಳಿತು' ಎಂದು ಹೇಳಿದೆ.

'ದೇಶಕ್ಕೆ ಮೋದಿ ಹೆಸರಿಡುವ ದಿನ ದೂರವಿಲ್ಲ'

ಕೋಲ್ಕತ್ತ (ಪಿಟಿಐ): ಕೋವಿಡ್ ಲಸಿಕೆ ಹಾಕಿಸಿಕೊಂಡವರಿಗೆ ನೀಡುವ ಪ್ರಮಾಣಪತ್ರದ ಮೇಲೆ ಪ್ರಧಾನಿ ನರೇಂದ್ರ ಮೋದಿ ಅವರ ಚಿತ್ರ ಪ್ರಕಟಿಸಿರುವುದಕ್ಕೆ ಆಕ್ರೋಶ ವ್ಯಕ್ತಪಡಿಸಿರುವ ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ, 'ಈ ದೇಶದ ಹೆಸರನ್ನು ನರೇಂದ್ರ ಮೋದಿ ಎಂಬುದಾಗಿ ಬದಲಾಯಿಸುವ ದಿನಗಳು ದೂರ ಇಲ್ಲ' ಎಂದು ಕಿಡಿ ಕಾರಿದ್ದಾರೆ.

ಮಮತಾ ಬ್ಯಾನರ್ಜಿ

ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ಕ್ರೀಡಾಂಗಣಕ್ಕೆ ಪ್ರಧಾನಿ ಹೆಸರು ಇಡಲಾಗಿದೆ. ಕೋವಿಡ್ ಲಸಿಕೆ ಪ್ರಮಾಣ ಪತ್ರದಲ್ಲಿ ಅವರ ಚಿತ್ರಗಳನ್ನು ಛಾಪಿಸಲಾಗಿದೆ. ಹೀಗಾಗಿ ಈ ದೇಶಕ್ಕೆ ಅವರ ಹೆಸರು ಇಟ್ಟರೂ ಆಶ್ಚರ್ಯ ಇಲ್ಲ' ಎಂದು ಟೀಕಿಸಿದರು.

'ಪ್ರಧಾನಿ ತೃಣಮೂಲ ಕಾಂಗ್ರೆಸ್ ಸರ್ಕಾರದ ವಿರುದ್ಧ ಸುಳ್ಳು ಹೇಳುವುದು, ಸರ್ಕಾರ ಕುರಿತು ದ್ವೇಷ ಹರಡುತ್ತಿದ್ದಾರೆ. ಈ ಚುನಾವಣೆಯಲ್ಲಿ ಎಲ್ಲ 294 ಕ್ಷೇತ್ರಗಳಲ್ಲಿ ಬಿಜೆಪಿ ಹಾಗೂ ನನ್ನ ನಡುವೆಯೇ ಸ್ಪರ್ಧೆ ಇರಲಿದ್ದು, ನಮ್ಮ ಪಕ್ಷ ಅಧಿಕಾರದ ಚುಕ್ಕಾಣಿ ಹಿಡಿಯಲಿದೆ' ಎಂದರು.

ಟಿಎಂಸಿಯ ಐವರು ಶಾಸಕರು ಬಿಜೆಪಿಗೆ ಸೇರ್ಪಡೆ

ಕೋಲ್ಕತ್ತ (ಪಿಟಿಐ): ಪಶ್ಚಿಮ ಬಂಗಾಳ ವಿಧಾನಸಭೆಗೆ ನಡೆಯಲಿರುವ ಚುನಾವಣೆಯ ಕಾವು ದಿನೇದಿನೇ ಏರುತ್ತಿದ್ದರೆ, ಮುಖಂಡರು ಪಕ್ಷವನ್ನು ತೊರೆದು ಬಿಜೆಪಿ ಸೇರುತ್ತಿರುವುದು ಆಡಳಿತಾರೂಢ ಟಿಎಂಸಿಗೆ ತಲೆನೋವಾಗಿ ಪರಿಣಮಿಸಿದೆ.

ಟಿಎಂಸಿಯ ಐದು ಜನ ಶಾಸಕರು ಸೋಮವಾರ ಬಿಜೆಪಿ ಸೇರಿದ್ದಾರೆ. ಇದರೊಂದಿಗೆ ಮಾಲ್ಡಾ ಜಿಲ್ಲಾ ಪರಿಷದ್ ಮೇಲಿನ ತನ್ನ ನಿಯಂತ್ರಣವನ್ನು ಸಹ ಟಿಎಂಸಿ ಕಳೆದುಕೊಂಡಂತಾಗಿದೆ.

ಮಮತಾ ಬ್ಯಾನರ್ಜಿಯ ಆಪ್ತೆಯಾಗಿದ್ದ ಶಾಸಕಿ ಸೋನಾಲಿ ಗುಹಾ, 80 ವರ್ಷದ ರವೀಂದ್ರನಾಥ್ ಭಟ್ಟಾಚಾರ್ಯ, 85 ವರ್ಷದ ಜತು ಲಹಿರಿ, ಮಾಜಿ ಫುಟ್ಬಾಲ್ ಆಟಗಾರ ದೀಪೇಂದು ಬಿಸ್ವಾಸ್ ಹಾಗೂ ಶೀತಲ್ ಸರ್ದಾರ್ ಬಿಜೆಪಿ ಸೇರಿರುವ ಶಾಸಕರು.

ಗುಂಡಣ್ಣ

ಬೆರಗಿನ ಬೆಳಕು

ಗುರುರಾಜ ಕರಜಗಿ

ನತದೃಷ್ಟನ ಕರ್ಮ

ಮಿಥಿಲೆಯಲ್ಲಿ ಪಿಂಗುತ್ತರ ಎಂಬ ಒಬ್ಬ ಕುಬ್ಜ ಮನುಷ್ಯನಿದ್ದ. ಆತ ತಕ್ಕಶಿಲೆಗೆ ಬಂದು ಪ್ರಸಿದ್ಧರಾದ ಗುರುಗಳ ಕಡೆಗೆ ನಿಂತು ವಿದ್ಯೆಗಳನ್ನು ಕಲಿತ. ಶಿಕ್ಷಣ ಮುಗಿದ ಮೇಲೆ ಗುರುಗಳಿಂದ ಮನೆಗೆ ಹೋಗಲು ಅಪ್ಪಣೆ ಕೇಳಿದ. ಈತ ಬುದ್ಧಿವಂತನಾದ್ದರಿಂದ ತನ್ನ ಮಗಳನ್ನು ಆತನಿಗೇ ಕೊಟ್ಟು ಮದುವೆ ಮಾಡುವುದಾಗಿ ಗುರು ಯೋಚನೆ ಮಾಡಿದ. ಅವನ ಮಗಳು ತುಂಬ ಸುಂದರಿ, ಅಪ್ಸರೆಯರಿಗಿಂತ ರೂಪವತಿಯಾಗಿದ್ದಳು. ಗುಣದಲ್ಲಿಯೂ ಆಕೆ ಶ್ರೇಷ್ಠಳು, ಪುಣ್ಯವಂತೆ. ಈ ಪಿಂಗುತ್ತರ ನಿರ್ಭಾಗ್ಯ. ಗುರುಗಳು ಹೇಳಿದಾಗ ಇಲ್ಲವೆನ್ನಲಾರದೆ ಮದುವೆಯಾದ. ರಾತ್ರಿ ಅಲಂಕೃತ ಶಯನಾಗಾರದಲ್ಲಿ ಹಾಸಿಗೆಯ ಮೇಲೆ ಮಲಗಿದಾಗ, ಆಕೆ ಹಾಸಿಗೆಗೆ ಬಂದಾಗ, ಈತ ಗಾಬರಿಯಾಗಿ ಕೆಳಗಿಳಿದು ನೆಲದ ಮೇಲೆ ಮಲಗಿದ. ಆಕೆಯೂ ಇಳಿದು ಅವನ ಬಳಿಗೆ ಬಂದಾಗ, ಈತ ಎದ್ದು ಹಾಸಿಗೆಯ ಮೇಲೆ ಮಲಗಿದ. ಆಕೆ ಮತ್ತೆ ಹಾಸಿಗೆಗೆ ಬಂದಾಗ ಪಿಂಗುತ್ತರ ನೆಲದ ಮೇಲೆ ಮಲಗಿದ. ಆಕೆ, ಈತ ನತದೃಷ್ಟ, ಲಕ್ಷ್ಮಿಯ ಬೆಲೆ ಅವನಿಗೇನು ಗೊತ್ತು ಎಂದು ಹಾಸಿಗೆಯ ಮೇಲೆ ಮಲಗಿದಳು. ಮರುದಿನ ಇಬ್ಬರೂ ತಮ್ಮ ಊರಿಗೆ ಹೊರಟರು. ಆತ ಅವಳೊಂದಿಗೆ ಒಂದು ಮಾತೂ ಆಡಲಿಲ್ಲ. ಮಿಥಿಲೆಯ ಹತ್ತಿರ ಬಂದಾಗ, ತುಂಬ ಹಸಿವಾಗಿತ್ತು. ಅಲ್ಲೊಂದು ಹಣ್ಣುಗಳಿಂದ ತುಂಬಿದ ಅತ್ತಿಯ ಮರವಿತ್ತು. ಈತ ಸರಸರನೆ ಮೇಲೇರಿ ಹಣ್ಣು ತಿನ್ನತೊಡಗಿದ. ಆಕೆ ಮರದ ಕೆಳಗೆ ಬಂದು, 'ನನಗೂ ಹಣ್ಣು ಉದುರಿಸು' ಎಂದು ಬೇಡಿದಳು. ಆತ, 'ನಿನಗೆ ಕೈ, ಕಾಲು ಇಲ್ಲವೇ? ಬೇಕಾದರೆ ನೀನೇ ಮರ ಹತ್ತಿ ಹಣ್ಣು ತಿನ್ನು' ಎಂದ ಒರಟಾಗಿ. ಆಕೆ ಮರ ಏರಿದಾಗ ಪಿಂಗುತ್ತರ ಕೆಳಗೆ ಹಾರಿಕೊಂಡು, ಆಕೆ ಕೆಳಗೆ ಬರದಂತೆ ಮರದ ಕೆಳಗೆ ಮುಳ್ಳುಕಂಟಿಗಳನ್ನು ತುಂಬಿ ನಗರಕ್ಕೆ ಓಡಿ ಹೋದ.

ಪಾಪ! ಆಕೆ ಅಳುತ್ತ ಮರದ ಮೇಲೆ ಕುಳಿತಳು. ಅಂದು ಸಂಜೆ ಉದ್ಯಾನದಲ್ಲಿ ಕ್ರೀಡೆಯನ್ನು ಪೂರೈಸಿ ಆನೆಯ ಮೇಲೆ ಕುಳಿತು ರಾಜ ನಗರ ಪ್ರವೇಶ ಮಾಡುವಾಗ ಮರದ ಮೇಲೆ ಕುಳಿತಿದ್ದ ಅವಳನ್ನು ಕಂಡು, ಅವಳ ರೂಪಕ್ಕೆ ಬೆರಗಾಗಿ, ಆಸಕ್ತನಾಗಿಬಿಟ್ಟ. ಮಂತ್ರಿಗಳಿಗೆ ಹೇಳಿದ, 'ಹೋಗಿ ಅವಳನ್ನು ಮಾತನಾಡಿಸಿಕೊಂಡು ಬನ್ನಿ. ಆಕೆ ಬೇರೊಬ್ಬರ ಪತ್ನಿಯಾಗಿದ್ದರೆ ವಿಚಾರಬೇಡ. ಕನ್ಯೆಯಾಗಿದ್ದರೆ ಕರೆತನ್ನಿ ಅವಳನ್ನು ನಾನು ಮದುವೆಯಾಗುತ್ತೇನೆ'. ವಿಚಾರಿಸಿ ಬಂದು ಅಮಾತ್ಯ ಹೇಳಿದ, 'ಸ್ವಾಮಿ, ಆಕೆಗೆ ಗಂಡ ಇದ್ದಾನೆ. ಆದರೆ ಆಕೆಯನ್ನು ಮುಟ್ಟುವುದು ದೂರವಿರಲಿ, ಆಕೆಯ ಜೊತೆಗೆ ಮಾತೂ ಡದೆ, ಆಕೆಯನ್ನು ತ್ಯಾಜ್ಯಮಾಡಿ ಹೋಗಿದ್ದಾನೆ. ಒಡೆಯನಿಲ್ಲದ ವಸ್ತು ರಾಜನಿಗೆ ಸೇರಿದ್ದು'. ರಾಜ ಆಕೆಯನ್ನು ಕರೆತಂದು ಪಟ್ಟದರಾಣಿಯನ್ನಾಗಿ ಮಾಡಿಕೊಂಡ. ಆಕೆ ಔದುಂಬರ ವೃಕ್ಷದಲ್ಲಿ ದೊರಕಿದ್ದುದರಿಂದ ಅವಳಿಗೆ ಉದುಂಬರಾದೇವಿ ಎಂದು ಹೆಸರು ಕೊಟ್ಟ.

ಒಂದು ದಿನ ರಾಜ ತನ್ನ ರಾಣಿಯೊಂದಿಗೆ ಹೊಸದಾಗಿ ನಿರ್ಮಾಣವಾಗುತ್ತಿದ್ದ ರಸ್ತೆಯ ಕಾರ್ಯದ ವೀಕ್ಷಣೆಗೆ ಹೊರಟ. ಅಲ್ಲಿ ಪಿಂಗುತ್ತರ ಕಚ್ಚೆ ಬಿಗಿದು, ನೆಲ ಅಗಿದು, ಕೂಲಿ ಮಾಡುತ್ತಿದ್ದ. ಅವನನ್ನು ಕಂಡು ರಾಣಿ ನಕ್ಕಳು. ರಾಜ ಕಾರಣ ಕೇಳಿದಾಗ, 'ಆತ ನನ್ನ ಮೊದಲನೆಯ ಗಂಡ. ಈತನೇ ನನ್ನನ್ನು ಬಿಟ್ಟು ಓಡಿ ಹೋದವನು. ಅವನಿಗೆ ಲಕ್ಷ್ಮಿಯ ಬೆಲೆ ಹೇಗೆ ತಿಳಿದೀತು?' ಎಂದಳು. ರಾಜ ಅಮಾತ್ಯ ಸೇನಕನ ಅಭಿಪ್ರಾಯ ಕೇಳಿದ. ಆತ, 'ಸಾಧ್ಯವಿಲ್ಲ ಸ್ವಾಮಿ, ಇಂಥ ಚೆಲುವೆಯನ್ನು ಯಾರಾದರೂ ಬಿಡುತ್ತಾರೆಯೇ? ರಾಣಿ ಸುಳ್ಳು ಹೇಳುತ್ತಾಳೆ' ಎಂದು ರಾಜನ ತಲೆ ತುಂಬಿದ. ಈ ಮನೆ ಒಡೆಯುವ ಮಾತುಗಳನ್ನು ಕೇಳಿ ಮಹೋಷಧಕುಮಾರ ಹೇಳಿದ, "ಪ್ರಭೂ, ರಾಣಿ ಹೇಳಿದ್ದು ಸತ್ಯ. ನತದೃಷ್ಟನ ಮುಂದೆ ಲಕ್ಷ್ಮಿ ಬಂದರೂ ಆತ ನೋಡಲಾರ. ಅವನ ಕರ್ಮವೇ ಅಂಥದ್ದು. ಸುಖದಲ್ಲಿಯೇ ದು:ಖವನ್ನರಸುವುದು ನತದೃಷ್ಟರ ದೈವ. ಇಲ್ಲದಿದ್ದರೆ ಲಕ್ಷ್ಮಿಯಂತಹ ಹೆಂಡತಿಯನ್ನು ಬಿಟ್ಟು ನೆಲ ಅಗೆಯುವ ಕರ್ಮ ಆತನಿಗೆ ಬರುತ್ತಿತ್ತೇ?'. ರಾಜ ಅವನ ಮಾತು ಒಪ್ಪಿದ. ನಿಜ, ದೈವವಿಲ್ಲದಿದ್ದರೆ, ಕಣ್ಣ ಮುಂದಿದ್ದ ಸ್ವರ್ಗವೂ ನರಕದಂತೆ ಕಾಣುತ್ತದೆ. ❖

ದಿನ ಭವಿಷ್ಯ

ಮಂಗಳವಾರ 9 ಮಾರ್ಚ್ 2021

ಶಾರ್ವರಿ ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ಮಾಘ ಮಾಸ ಕೃಷ್ಣಪಕ್ಷ ಮಳೆ ನಕ್ಷತ್ರ ಪೂರ್ವಾಭಾದ್ರ ಏಕಾದಶೀ ಗಂ. 23-51 (ಹ. 4-10) ಮಂಗಳವಾರ ನಿತ್ಯ ನಕ್ಷತ್ರ ಉತ್ತರಾಷಾಢ ಗಂ. 37-50 (ರಾ. 9-46) ವರೀಯನ್ ನಾಮ ಯೋಗ ಗಂ. 16-58 ಬಾಲವ ಕರಣ ಗಂ. 23-51 ವಿಷ. ಶೇಷ ಗಂ. 2-38 ವಿಷ ಗಂ. 47-39 ಅಮೃತ ಗಂ. 22-41 : ರಾಹುಕಾಲ: ಮ. ಗಂ. 3-00 ರಿಂದ 4-30 ಗುಳಿಕ ಕಾಲ ಮ. ಗಂ 12-00 ರಿಂದ 1-30 ಯಮಗಂಡ ಕಾಲ ಬೆ. ಗಂ 9-00 ರಿಂದ 10-30 ಸೂರ್ಯೋದಯ: 6-36 ಸೂರ್ಯಾಸ್ತ: 6-26 ಅದೃಷ್ಟ ಸಂಖ್ಯೆ 3 6

ಮೇಷ: ಆರ್ಥಿಕ ಸಂಪನ್ಮೂಲಗಳ ಅಭಿವೃದ್ಧಿಯಿಂದಾಗಿ ಸಂತೃಪ್ತಿ. ಕುಟುಂಬದ ಹಿರಿಯರ ಮನೋಭಿಲಾಷೆಗಳು ಈಡೇರುವವು. ಸಂಗಾತಿಯ ಆರೋಗ್ಯದಲ್ಲಿ ವ್ಯತ್ಯಯ. ಪ್ರಾಪ್ತವಯಸ್ಕರಿಗೆ ವಿವಾಹ ನಿಶ್ಚಯ.

ವೃಷಭ: ವೈಯಕ್ತಿಕ ತೊಂದರೆಯಿಂದ ಮುಕ್ತರಾಗುವಿರಿ. ಚಿನ್ನಾಭರಣ - ಸ್ಥಿರಾಸ್ತಿ ಖರೀದಿ ಸಾಧ್ಯತೆ. ಉದ್ಯೋಗದಲ್ಲಿ ಪ್ರಗತಿಯನ್ನು ಕಾಣುವಿರಿ. ಪತ್ನಿಯ ಆರೋಗ್ಯದಲ್ಲಿ ವ್ಯತ್ಯಯ ಸಾಧ್ಯತೆ. ಬಂಧುಗಳ ಆಗಮನ.

ಮಿಥುನ: ಅನಾವಶ್ಯಕ ಪ್ರಯಾಣದಿಂದಾಗಿ ಧನ ನಷ್ಟವಾಗುವುದು. ಮನರಂಜನಾ ಕಾರ್ಯಕ್ರಮದಲ್ಲಿ ಭಾಗಿಯಾಗುವ ಸಾಧ್ಯತೆ. ಪ್ರಿಯ ವ್ಯಕ್ತಿಗಳ ಆಗಮನ. ಮಕ್ಕಳ ಶ್ರೇಯೋಭಿವೃದ್ಧಿಯಿಂದಾಗಿ ಮಾನಸಿಕ ತೃಪ್ತಿ.

ಕರ್ಕಾಟಕ: ಅನಾವಶ್ಯಕ ಮಾತುಗಳಿಂದಾಗಿ ನಿಷ್ಠೂರಕ್ಕೊಳಗಾಗುವ ಸಾಧ್ಯತೆ. ಉದ್ಯೋಗಾಕಾಂಕ್ಷಿಗಳಿಗೆ ಉತ್ತಮ ಅವಕಾಶಗಳು ದೊರಕಲಿದೆ. ಉದ್ಯೋಗದಲ್ಲಿರುವವರಿಗೆ ಪದೋನ್ನತಿ. ಇಷ್ಟದೇವತಾ ದರ್ಶನದಿಂದ ನೆಮ್ಮದಿ.

ಸಿಂಹ: ಪರಸ್ಪರ ಭಿನ್ನಾಭಿಪ್ರಾಯಗಳು ಪರಿಹಾರವಾಗಿ ಸುಖದಾಂಪತ್ಯ ಜೀವನಕ್ಕೆ ನಾಂದಿ. ಶುಭ ಸಮಾರಂಭಗಳಲ್ಲಿ ಭಾಗಿ. ಕೆಲಸ ಕಾರ್ಯಗಳಲ್ಲಿ ಆತುರತೆ ಬೇಡ. ವ್ಯವಹಾರದಲ್ಲಿ ಆರ್ಥಿಕ ನಷ್ಟ ಸಾಧ್ಯತೆ.

ಕನ್ಯಾ: ವಿದ್ಯಾರ್ಥಿಗಳಿಗೆ ಓದಿನಲ್ಲಿ ವಿಶೇಷ ಪ್ರಗತಿ. ಮಾತಿನಿಂದ ಗೌರವ ಪ್ರಾಪ್ತವಾಗುವುದು. ಸರ್ಕಾರದಿಂದಾಗುವ ಕೆಲಸ ಕಾರ್ಯಗಳು ಸುಗಮವಾಗುವವು. ಉದ್ಯೋಗ ನಿಮಿತ್ತ ದೂರ ಪ್ರಯಾಣ ಯೋಗ.

ತುಲಾ: ವೈಯಕ್ತಿಕ ಜೀವನದಲ್ಲಿ ಅಭಿವೃದ್ಧಿ. ಸಾಮಾಜಿಕ ಚಿಂತನೆಗಳಿಂದ ಗೌರವಾದರಗಳನ್ನು ಹೊಂದುವಿರಿ. ಕೃಷಿ ಕ್ಷೇತ್ರದಲ್ಲಿ ಧನ ಧಾನ್ಯಾಭಿವೃದ್ಧಿ. ಸಂಗಾತಿಯಿಂದ ಸಂತಸದ ಸುದ್ದಿ.

ವೃಶ್ಚಿಕ: ಇಂದಿನ ಮಟ್ಟಿಗೆ ದೂರದ ಪ್ರಯಾಣಗಳನ್ನು ಮುಂದೂಡುವುದು ಸೂಕ್ತ. ಸಂಗಾತಿಯ ಸಹಕಾರದಿಂದಾಗಿ ಸಾಂಸಾರಿಕ ನೆಮ್ಮದಿ. ವಿವಾಹಾಕಾಂಕ್ಷಿಗಳಿಗೆ ವಿವಾಹ ಸಂಬಂಧಗಳು ಕೂಡಿಬರಲಿವೆ.

ಧನು: ಹೊಸ ಸಂಬಂಧಿಗಳಿಂದ ಹೊಸ ಯೋಜನೆಗಳಿಗೆ ಉತ್ಸಾಹ ಮೂಡುವುದು. ಶುಭಕಾರ್ಯಗಳ ಸಂಕಲ್ಪ ಈಡೇರಿ ಸಂತಸ. ಅವಸರದ ನಿರ್ಧಾರಗಳು ಸೂಕ್ತವಲ್ಲ. ಮಹಿಳೆಯರಿಗೆ ಗೌರವ ಪ್ರಾಪ್ತಿ.

ಮಕರ: ಸಾಮಾಜಿಕ ಕಾರ್ಯಕರ್ತರಿಗೆ ಇರಿಸುಮುರಿಸು. ಮನೆಯಲ್ಲಿ ವಸ್ತ್ರಾಭರಣ ಖರೀದಿ. ಶತ್ರುಬಾಧೆ ಉಲ್ಬಣ. ವಿದ್ಯಾಭ್ಯಾಸಕ್ಕಾಗಿ ದೂರಪ್ರಯಾಣ ಸಾಧ್ಯತೆ. ಆರೋಗ್ಯದ ಬಗ್ಗೆ ಎಚ್ಚರ.

ಕುಂಭ: ಆರ್ಥಿಕ ವಿಷಯಗಳಲ್ಲಿ ತುಂಬಾ ಎಚ್ಚರಿಕೆ ಅಗತ್ಯ. ಸರ್ಕಾರಿ ನೌಕರರಿಗೆ ಕಾರ್ಯಗಳಲ್ಲಿ ಪ್ರಗತಿ ಉಂಟಾಗುವುದು. ಕುಟುಂಬದಲ್ಲಿ ಸೌಹಾರ್ದತೆ. ಸೋದರರಿಂದ ಸಹಕಾರ ಮಕ್ಕಳ ಅಭಿವೃದ್ಧಿಯಿಂದಾಗಿ ಸಂತೃಪ್ತಿ.

ಮೀನ: ಅನಾವಶ್ಯಕ ವ್ಯವಹಾರಗಳಲ್ಲಿ ತಲೆ ಹಾಕದಿರುವುದೇ ಉತ್ತಮ. ಸರ್ಕಾರಿ ನೌಕರಿಯಲ್ಲಿರುವವರಿಗೆ ಬಡ್ತಿ. ಹೊಸ ಯೋಜನೆಯನ್ನು ನಿರೂಪಿಸುವಲ್ಲಿ ಯಶಸ್ಸು. ಮಾತೃವರ್ಗದವರಿಂದ ಸಹಕಾರ ದೊರಕುವುದು.

ನಿಮ್ಮ ಜನ್ಮದಿನ 9-ಮಾರ್ಚ್ ಈ ದಿನವು ಅತ್ಯಂತ ಶುಭಕರವಾಗಿದ್ದು, ವ್ಯವಹಾರದಲ್ಲಿ ಏರುಪೇರುಗಳ ನಡುವೆಯೇ ಪ್ರಗತಿಯ ಆಶಾಕಿರಣ ಮೂಡಿಬರಲಿದೆ. ಉದ್ಯೋಗಸ್ಥರಿಗೆ ಬಡ್ತಿ ಸಾಧ್ಯತೆ. ಹಣಕಾಸಿನ ವ್ಯವಹಾರದಲ್ಲಿ ಕೈ ಸುಟ್ಟುಕೊಳ್ಳುವ ಸಾಧ್ಯತೆ ಇದ್ದು, ವಿದ್ಯಾ ಬಲದ ಮೇಲಿನ ನೌಕರಿ ನಿಮಗೆ ಅನುಕೂಲಕರವಾಗಿರುವುದು.

ಪದಬಂಧ 4531 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ
2. ಅಂಕಗಣಿತದ ಕೋಷ್ಟಕ (2)
4.ಮನ್ಮಥನಿಂದ ಉದ್ಭವಿಸಿದ ಆಸೆ (3)
5.ಅಂಗಣಕ್ಕೇರಿದಾಗ ಗೋಚರಿಸಿದ ಮಂಗಳಗ್ರಹ (4)
6.ಇದು ಮಾತಿಗೆ ನಿಲುಕದ್ದು (4)
7.ವಾನರನನ್ನು ಹೋಲುತ್ತಿರುವ ಮನುಷ್ಯ (2)
9.ಕವಿಪುಂಗವರು ಹೊಕ್ಕಿರುವ ಗುಹೆ! (2)
13.ಹೊಸಯುಗ ಈ ತರ ಬಂದಿದೆ! (4)
14.ಅವಶ್ಯವಿಲ್ಲದ ಖರ್ಚು (4)
15.ಚಂದಾಹಣವನ್ನು ಹೀಗೂ ಹೇಳುವರು (3)
16.ಮೂರು ಮಾತ್ರೆಗಳ ಕಾಲವನ್ನು ಹೊಂದಿರುವ ಅಕ್ಷರ (2)

ಮೇಲಿಂದ ಕೆಳಕ್ಕೆ
1.ಕಾಲಕ್ಕೆ ಸರಿಯಾದುದು (4)
2.ಮಗಳಗಂಡನನ್ನು ಮನೆಯಲ್ಲಿ ಇಟ್ಟುಕೊಳ್ಳುವುದು (5)
3.ನೆನಪಿನಲ್ಲಿ ಉಳಿಯದಿರುವುದು (3)
5.ತರಂಗ ಎಬ್ಬಿಸಿದ ಒಳಮನಸ್ಸು! (4)
8. ದ್ರವದಿಂದ ತುಂಬಿರುವುದು (4)
10. ಈತ ವಿವೇಕಶಾಲಿ (5)
11.ನೇರವಲ್ಲದ ಗೀಟು (4)
12.ಅತಿಯಾದ ಬಯಕೆ (3)



4530ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಸಂಸ್ಥಾನ 3.ದೀನಭಾವ 6.ಶತಮಾನ 7.ರಜತ 10.ಮಡದಿ 12.ಹಸುಗೂಸು 15.ಮಲಯಜ 16.ಯಕೃತ್ತು

ಮೇಲಿಂದ ಕೆಳಕ್ಕೆ: 1.ಸಂಹಿತೆ 2.ನದೀತೀರ 4.ವಶ 5.ಅನಸೂಯೆ 8.ತತ್ಸಮ 9.ಮನೋಹರ 11.ದಿಗ್ವಿಜಯ 13.ಸುಮ 14.ನಿಯತ್ತು

ಸುಡೊಕು 4917

				6	8	1		3
9		6					7	
	8		7			2		6
6		1		5		7		9
	7		8	9	6			
8				7		5		2
3		9		1			2	
			6		7	9		4
7		8		2			1	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

4916 ಸುಡೊಕು

1	5	9	3	2	7	6	8	4
4	6	7	1	8	9	3	5	2
3	8	2	6	4	5	9	1	7
2	9	3	5	1	4	7	6	8
6	7	4	9	3	8	5	2	1
5	1	8	7	6	2	4	9	3
8	2	5	4	9	3	1	7	6
7	3	1	2	5	6	8	4	9
9	4	6	8	7	1	2	3	5

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	14,938
ಇಂದಿನ ಅಂತ್ಯ	14,956
▲	18
ದಿನದ ಗರಿಷ್ಠ	15,111

ವಿನಿಮಯ ದರ

$ ಡಾಲರ್	73.25
£ ಪೌಂಡ್	100.94
€ ಯುರೊ	86.96
¥ ಯೆನ್ (100ಕ್ಕೆ)	67

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹415
12 ಮೊಟ್ಟೆಗೆ	₹55
ಮೈಸೂರು	
100 ಮೊಟ್ಟೆಗೆ	₹418

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1515 (1480)
ಸೋಯಾ (ರಿಫೈನ್ಡ್)	₹1220 (1200)
ಸೂರ್ಯಕಾಂತಿ (ರಿಫೈನ್ಡ್)	₹1650 (1645)
ಪಾಮೋಲಿನ್	₹1200 (1190)

ಚಿನ್ನದ ದರ ₹ 122 ಇಳಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ 10 ಗ್ರಾಂ ಚಿನ್ನದ ದರ ₹ 122ರಷ್ಟು ಇಳಿಕೆಯಾಗಿ ₹ 44,114ರಂತೆ ಮಾರಾಟವಾಗಿದೆ. ಬೆಳ್ಳಿ ಧಾರಣೆ ಕೆ.ಜಿಗೆ ₹ 587ರಷ್ಟು ಏರಿಕೆಯಾಗಿ ₹ 65,534ಕ್ಕೆ ತಲುಪಿದೆ.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಚಿನ್ನದ ದರ ಇಳಿಕೆ ಆಗಿರುವುದರಿಂದ ದೇಶಿ ಮಾರುಕಟ್ಟೆಯಲ್ಲಿಯೂ ಅದರ ಪರಿಣಾಮ ಉಂಟಾಗಿದೆ ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್ ತಿಳಿಸಿದೆ.

ಏಳು ವರ್ಷಗಳಲ್ಲಿ ಎಲ್‌ಪಿಜಿ ದರ ದುಪ್ಪಟ್ಟು: ಪ್ರಧಾನ್

ನವದೆಹಲಿ (ಪಿಟಿಐ): ಎಲ್‌ಪಿಜಿ ಸಿಲಿಂಡರ್ ದರವು ಕಳೆದ ಏಳು ವರ್ಷಗಳಲ್ಲಿ ದುಪ್ಪಟ್ಟಾಗಿದ್ದು ₹ 819ಕ್ಕೆ ತಲುಪಿದೆ. ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ತೆರಿಗೆ ಹೆಚ್ಚಳವು, ಆದಾಯ ಸಂಗ್ರಹವನ್ನು ಶೇ 459ರಷ್ಟು ಏರಿಕೆ ಮಾಡಿದೆ ಎಂದು ಪೆಟ್ರೋಲಿಯಂ ಸಚಿವ ಧರ್ಮೇಂದ್ರ ಪ್ರಧಾನ್ ಸೋಮವಾರ ತಿಳಿಸಿದ್ದಾರೆ.

ಬೆಂಗಳೂರಿನಲ್ಲಿ ಸದ್ಯ 14.2 ಕೆ.ಜಿಯ ಸಿಲಿಂಡರ್ ದರವು ₹ 822 ಇದೆ.

ಇಂಧನ ದರ ಏರಿಕೆಯ ಕುರಿತ ಪ್ರಶ್ನೆಯೊಂದಕ್ಕೆ ಲೋಕಸಭೆಯಲ್ಲಿ ಉತ್ತರಿಸಿದ ಅವರು, '2014ರ ಮಾರ್ಚ್ 1ರಂದು 14.2 ಕೆ.ಜಿಯ ಎಲ್‌ಪಿಜಿ ಸಿಲಿಂಡರಿನ ರಿಟೇಲ್ ಮಾರಾಟ ದರವು ₹ 410.5 ಇತ್ತು. 2020ರ ಡಿಸೆಂಬರ್‌ನಲ್ಲಿ ₹ 594ರಷ್ಟಿತ್ತು. ಅದು ಸದ್ಯ ₹ 819ಕ್ಕೆ ಏರಿಕೆಯಾಗಿದೆ' ಎಂದು ವಿವರಿಸಿದರು.

ಸೀಮೆ ಎಣ್ಣೆ ದರವು 2014ರ ಮಾರ್ಚ್‌ನಲ್ಲಿ ಒಂದು ಲೀಟರಿಗೆ ₹ 14.96 ಇತ್ತು. ಸದ್ಯ ₹ 35.35ರಷ್ಟಿದೆ.

2013ರಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ತೆರಿಗೆಯಿಂದ ಒಟ್ಟಾರೆ ₹ 52,537 ಕೋಟಿ ಸಂಗ್ರವಾಗಿತ್ತು. 2019–20ರಲ್ಲಿ ಅದು ₹ 2.13 ಲಕ್ಷ ಕೋಟಿಗೆ ಏರಿಕೆ ಆಗಿದೆ. ಪ್ರಸಕ್ತ ಹಣಕಾಸು ವರ್ಷದ 11 ತಿಂಗಳಿನಲ್ಲಿ ₹ 2.94 ಲಕ್ಷ ಕೋಟಿಗಳಿಗೆ ಏರಿಕೆ ಕಂಡಿದೆ ಎಂದು ಅವರು ಮಾಹಿತಿ ನೀಡಿದ್ದಾರೆ.

ಪೆಟ್ರೋಲ್, ಡೀಸೆಲ್, ಎಟಿಎಫ್, ನೈಸರ್ಗಿಕ ಅನಿಲ ಮತ್ತು ಕಚ್ಚಾ ತೈಲವನ್ನೂ ಒಳಗೊಂಡು ಕೇಂದ್ರದ ಒಟ್ಟಾರೆ ಎಕ್ಸೈಸ್ ಸುಂಕ ಸಂಗ್ರಹವು 2016–17ರಲ್ಲಿ ₹ 2.37 ಲಕ್ಷ ಕೋಟಿಗಳಷ್ಟಿತ್ತು. 2020–21ರ ಏಪ್ರಿಲ್–ಜನವರಿ ಅವಧಿಯಲ್ಲಿ ₹ 3.01 ಲಕ್ಷ ಕೋಟಿಗಳಿಗೆ ಏರಿಕೆಯಾಗಿದೆ ಎಂದು ಪ್ರಧಾನ್ ತಿಳಿಸಿದ್ದಾರೆ.

ಸೌದಿಯ ತೈಲಾಗಾರಗಳ ಮೇಲೆ ಡ್ರೋನ್ ದಾಳಿ

70 ಡಾಲರ್ ದಾಟಿದ ಬ್ರೆಂಟ್ ತೈಲ ದರ

ಸಿಂಗಪುರ (ರಾಯಿಟರ್ಸ್/ಪಿಟಿಐ): ಸೌದಿ ಅರೇಬಿಯಾದ ತೈಲಾಗಾರಗಳ ಮೇಲೆ ಭಾನುವಾರ ಡ್ರೋನ್ ಮತ್ತು ಮಿಸೈಲ್ ದಾಳಿ ನಡೆದಿದೆ. ಇದಾದ ನಂತರ, ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಸೋಮವಾರ ಕಚ್ಚಾತೈಲ ದರಗಳು ಭಾರಿ ಏರಿಕೆ ಕಂಡವು.

ಬ್ರೆಂಟ್ ಕಚ್ಚಾ ತೈಲ ದರ ಬ್ಯಾರಲ್‌ಗೆ ಸೋಮವಾರ 70 ಡಾಲರ್ ಗಡಿ ದಾಟಿದೆ. ಕೋವಿಡ್–19 ಸಾಂಕ್ರಾಮಿಕ ಆರಂಭವಾದ ಬಳಿಕ ಇದೇ ಮೊದಲ ಬಾರಿಗೆ ಈ ಮಟ್ಟವನ್ನು ತಲುಪಿದೆ. ಅಮೆರಿಕದ ಡಬ್ಲ್ಯುಟಿಐ ದರ್ಜೆಯ ಕಚ್ಚಾ ತೈಲ ದರ ಎರಡು ವರ್ಷಗಳಿಗೂ ಹೆಚ್ಚಿನ ಗರಿಷ್ಠ ಮಟ್ಟಕ್ಕೆ ಏರಿಕೆಯಾಗಿದೆ.

ಏಷ್ಯಾದ ಮಾರುಕಟ್ಟೆಯಲ್ಲಿ ಮೇನಲ್ಲಿ ವಿತರಿಸುವ ಬ್ರೆಂಟ್ ತೈಲ ದರ ಬ್ಯಾರಲ್‌ಗೆ 71.38 ಡಾಲರ್‌ಗೆ ತಲುಪಿತ್ತು. 2020ರ ಜನವರಿ 8ರ ಬಳಿಕದ ಗರಿಷ್ಠ ಮಟ್ಟ ಇದಾಗಿದೆ. ನಂತರ ಒಂದು ಬ್ಯಾರಲ್‌ಗೆ 70.47 ಡಾಲರ್‌ಗಳಿಗೆ ತಗ್ಗಿತು.

ಯೆಮೆನ್‌ನ ಹೂಥಿ ಪಡೆಗಳು ನಡೆಸಿದ ಡ್ರೋನ್ ಮತ್ತು ಮಿಸೈಲ್ ದಾಳಿಯು ಅತಿದೊಡ್ಡ ತೈಲ ಕಂಪನಿಯಾದ ಸೌದಿ ಅರಾಮ್ಕೊದ ಘಟಕದ ಮೇಲೆಯೂ ನಡೆದಿದೆ. ಮಾರ್ಚ್ 4ರಂದು ಜೆಡ್ಡಾದಲ್ಲಿ ನಡೆದ ದಾಳಿಯ ನಂತರದ ಎರಡನೇ ದಾಳಿ ಇದು ಎಂದು ವಿಶ್ಲೇಷಕರು ಹೇಳಿದ್ದಾರೆ.

ಮೇಲಿಂದ ಮೇಲೆ ಈ ರೀತಿಯ ದಾಳಿಗಳು ನಡೆಯುವುದರಿಂದ ಮಾರುಕಟ್ಟೆಯಲ್ಲಿ ತೈಲ ದರದಲ್ಲಿ ಇನ್ನಷ್ಟು ಏರಿಕೆ ಆಗಬಹುದು ಎಂದು ಅವರು ಹೇಳಿದ್ದಾರೆ.

ಈ ವರ್ಷದಲ್ಲಿ ಇಲ್ಲಿಯವರೆಗೆ ಕಚ್ಚಾ ತೈಲ ದರವು ಶೇಕಡ 30ರಷ್ಟು ಏರಿಕೆಯಾಗಿದೆ. ಒಪೆಕ್ ರಾಷ್ಟ್ರಗಳು ಏಪ್ರಿಲ್‌ನಲ್ಲಿಯೂ ತೈಲ ಉತ್ಪಾದನೆ ಕಡಿತ ಮುಂದುವರಿಸಲು ನಿರ್ಧರಿಸಿವೆ. ಇದರಿಂದಾಗಿ ಸತತ ನಾಲ್ಕನೇ ವಹಿವಾಟು ಅವಧಿಯಲ್ಲಿಯೂ ಬ್ರೆಂಟ್ ಮತ್ತು ಡಬ್ಲ್ಯುಟಿಐ ದರ ಏರಿಕೆಯಾಗಿದೆ.

ಹೊರೆ ಹೆಚ್ಚುವ ಸಂಭವ: ದೇಶದಲ್ಲಿ ಈಗಾಗಲೇ ಪೆಟ್ರೋಲ್, ಡೀಸೆಲ್ ದರಗಳು ಗರಿಷ್ಠ ಮಟ್ಟದಲ್ಲಿವೆ. ಕಚ್ಚಾ ತೈಲ ದರ ನಿರಂತರವಾಗಿ ಏರಿಕೆ ಆಗುತ್ತಿರುವುದರಿಂದ ದೇಶಿ ಮಾರುಕಟ್ಟೆಯಲ್ಲಿ ಇಂಧನ ದರ ಮತ್ತಷ್ಟು ಹೆಚ್ಚುವ ಸಾಧ್ಯತೆ ಇದೆ.

ಸವಿನೆನಪು

ಶ್ರೀಮತಿ ತ್ರಿವೇಣಿ. ಹೆಚ್ ಮತ್ತು ಕುಮಾರಿ ವಿನುಷ. ಎಲ್
ನಿಧನ: 09–03–2019
"ನಿಮ್ಮ ಸ್ವರ್ಗೀಯ ನೆನಪು ಸದಾ ಪಸಿರ, ನಿಮ್ಮ ಸ್ಮರಣೆಯೇ ನಮ್ಮ ಜೀವನದ ದೀವಿಗೆ"
ಸದಾ ಸ್ಮರಿಸುವ
ಶ್ರೀ ಲವಕುಮಾರ್. ವಿ ಮತ್ತು ಕುಟುಂಬದವರು
ಮನ್ನಾರಾಯಣ ಪಾಳ್ಯ, ಆರ್.ಟಿ.ನಗರ ಬೆಂಗಳೂರು.

ದಿ|| ಶ್ರೀ. ಸಿ.ಎಂ. ನಾಗರಾಜ್
ಜನನ: 9-3-1942
ಮರಣ: 18-8-2008

ಮಾಜಿ ಮಹಾಪೌರರು, ಮಹಾನಗರ ಪಾಲಿಕೆ, ಬೆಂಗಳೂರು.
ಸಂಸ್ಥಾಪಕ ಅಧ್ಯಕ್ಷರು, ಎಸ್.ಎಸ್ & ಎಸ್.ಎಸ್. ಗ್ರೂಪ್ ಆಫ್ ಇನ್‌ಸ್ಟಿಟ್ಯೂಷನ್ಸ್, ರಾಜಾಜಿನಗರ, ಬೆಂಗಳೂರು.
79ನೇ ಹುಟ್ಟುಹಬ್ಬ ಹಾಗೂ ಸಂಸ್ಮರಣ ದಿನ
09-03-2021
ಕಾರ್ಯದರ್ಶಿಗಳು, ಆಡಳಿತ ಮಂಡಳಿ ಸದಸ್ಯರು, ಪ್ರಾಂಶುಪಾಲರು, ಶಿಕ್ಷಕವೃಂದ, ವಿದ್ಯಾರ್ಥಿಗಳು, ಸಿಬ್ಬಂದಿವರ್ಗದವರು, ಕುಟುಂಬವರ್ಗದವರು ಹಾಗೂ ಬಂಧುಮಿತ್ರರು.
EWSK-20105-PV

ಪರಸ್ಪರ ಅಂತರ ಕಾಯ್ದುಕೊಳ್ಳಿ

ಪ್ರಜಾವಾಣಿ
FOR ADVERTISEMENT QUERIES
• OBITUARY
• REMEMBRANCES
Contact:
Santhosh : 9880856233
Vishal : 9845114560
Ravi : 9606912256
Office: 080-45557160 /163 /164

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಅಡಿಕೆ	
ಬಂಟ್ವಾಳ	
ಕೋಕ	10000-22500
ಹೊಸತು	22500-40500
ಹಳತು	42500-50500
ಕುಮಟ	
ಚಿಪ್ಪು	26099-29199
ಕೋಕ	16869-28011
ಫ್ಯಾಕ್ಟರಿ	14569-17777
ಹಳೆಚಾಲಿ	39169-41099
ಹೊಸಚಾಲಿ	34169-37209
ಪುತ್ತೂರು	
ಕೋಕ	9500-24000
ಹೊಸತು	28500-40500
ಸಿದ್ದಾಪುರ	
ಬಿಳಿಗೋಟು	22699-29909
ಕೋಕ	19699-29108
ಚಾಲಿ	34099-37199
ಕೆಂಪುಗೋಟು	19899-29489
ರಾಶಿ	40769-41599
ತಟ್ಟಿಬೆಟ್ಟೆ	31509-38699
ಶಿವಮೊಗ್ಗ ಎಪಿಎಂಸಿ	
ಬೆಟ್ಟೆ	42099-43599
ರಾಶಿ	38069-42099
ಸರಕು	48800-76020
ಗೊರಬಲು	17000-39770
ಸಾಗರ	
ಬಿಳಿಗೋಟು	20579-25289
ಕೋಕ	15899-29199
ಚಾಲಿ	31009-33799
ಕೆಂಪುಗೋಟು	24899-32909
ರಾಶಿ	35099-42299
ಸಿಪ್ಪೆಗೋಟು	8890-17929
ರಾಮನಗರ ರೇಷ್ಮೆ ಧಾರಣೆ	
ಮಿಶ್ರತಳಿ (ಸಿ.ಬಿ)	282-385
ದ್ವಿತಳಿ (ಬಿ.ವಿ)	243-446

ಮೂಡಿಗೆರೆ ಕಾಫಿ

	ಮುದ್ರೆಮನೆ
ಎಪಿ	9850
ಎಸಿ	3920
ಆರ್‌ಪಿ	5250
ಆರ್‌ಸಿ	3000

ಷೇರುಪೇಟೆ ಭಾಗೀದಾರರು ಯಾರು?

ಷೇರು ಮಾತು

ಶರತ್ ಎಂ.ಎಸ್.

ಷೇರು ಮಾರುಕಟ್ಟೆಗೆ ಬರುವವರೆಲ್ಲರೂ ಹೂಡಿಕೆ ಮಾಡಿ ಲಾಭ ಗಳಿಸುವ ಉದ್ದೇಶದಿಂದಲೇ ಬರುತ್ತಾರೆ. ಷೇರುಪೇಟೆಯಲ್ಲಿ ಷೇರುಗಳ ಖರೀದಿ ಮತ್ತು ಮಾರಾಟ ಮಾಡುವವರನ್ನು ಷೇರುಪೇಟೆಯ ಭಾಗಿದಾರರು (Stock Market Participants) ಎಂದು ಸರಳವಾಗಿ ಕರೆಯಬಹುದು. ವೈಯಕ್ತಿಕ ಹೂಡಿಕೆದಾರರು, ಸಾಂಸ್ಥಿಕ ಹೂಡಿಕೆದಾರರು, ಹಣಕಾಸು ನಿರ್ವಹಣಾ ಸಂಸ್ಥೆಗಳು, ವಿದೇಶಿ ಸಾಂಸ್ಥಿಕ ಹೂಡಿಕೆದಾರರು ಹೀಗೆ ಹಲವರು ಷೇರು ಮಾರುಕಟ್ಟೆಯ ಭಾಗೀದಾರರಾಗಿರುತ್ತಾರೆ. ಅವರೆಲ್ಲರ ಪಾಲ್ಗೊಳ್ಳುವಿಕೆಯಿಂದ ಷೇರು ಮಾರುಕಟ್ಟೆ ಮುನ್ನಡೆಯುತ್ತದೆ.

ಮಾರುಕಟ್ಟೆಯ ಭಾಗೀದಾರರ ಕೆಲವು ಉದಾಹರಣೆಗಳು ಹೀಗಿವೆ.

1. ದೇಶಿ ರಿಟೇಲ್ ಹೂಡಿಕೆದಾರರು (Domestic Retail Participants): ಷೇರುಗಳ ಖರೀದಿ ಮತ್ತು ಮಾರಾಟ ಮಾಡುವ ನಮ್ಮ–ನಿಮ್ಮಂತಹ ವೈಯಕ್ತಿಕ ಹೂಡಿಕೆದಾರರನ್ನು ದೇಶಿ ರಿಟೇಲ್ ಹೂಡಿಕೆದಾರರು ಎಂದು ಕರೆಯಬಹುದು. ಇಲ್ಲಿ ಹೂಡಿಕೆದಾರನು ಸಾಂಪ್ರದಾಯಿಕ ರೀತಿಯಲ್ಲಿ ಅಥವಾ ಆನ್‌ಲೈನ್ ಮೂಲಕ ಷೇರುಗಳನ್ನು ಖರೀದಿಸುತ್ತಾನೆ. ಐಪಿಒಗಳಲ್ಲಿ (ಆರಂಭಿಕ ಸಾರ್ವಜನಿಕ ಹೂಡಿಕೆ) ₹ 2 ಲಕ್ಷದವರೆಗಿನ ಹೂಡಿಕೆ ಮಾಡುವವರನ್ನು ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿ (ಸೆಬಿ) ರಿಟೇಲ್ ಹೂಡಿಕೆದಾರ ಎಂದು ಪರಿಗಣಿಸುತ್ತದೆ.

2. ಅನಿವಾಸಿ ಭಾರತೀಯ ಹೂಡಿಕೆದಾರ (Non-Resident Indians - NRI's): ಭಾರತೀಯ ಮೂಲದವರಾಗಿದ್ದು ಅನ್ಯ ದೇಶಗಳಲ್ಲಿ ವಾಸವಿದ್ದು ಭಾರತೀಯ ಷೇರುಪೇಟೆಯಲ್ಲಿ ಹಣ ತೊಡಗಿಸುವವರು ಅನಿವಾಸಿ ಭಾರತೀಯ ಹೂಡಿಕೆದಾರರು. ಅನಿವಾಸಿ ಭಾರತೀಯರು ಷೇರು ಮಾರುಕಟ್ಟೆಯಲ್ಲಿ ತೊಡಗಿಸಲು ಕೆಲವು ಇತಿಮಿತಿಗಳಿವೆ.

ಪ್ರಾತಿನಿಧಿಕ ಚಿತ್ರ

3. ದೇಶಿ ಸಾಂಸ್ಥಿಕ ಹೂಡಿಕೆದಾರರು (Domestic Institutions): ದೊಡ್ಡ ಕಾರ್ಪೊರೇಟ್ ಸಂಸ್ಥೆಗಳು ಷೇರು ಮಾರುಕಟ್ಟೆಯಲ್ಲಿ ಹೂಡಿಕೆ ಮಾಡುವುದನ್ನು ದೇಶಿಯ ಸಾಂಸ್ಥಿಕ ಹೂಡಿಕೆ ಎಂದು ಕರೆಯಲಾಗುತ್ತದೆ. ಸಾರ್ವಜನಿಕ ಭವಿಷ್ಯ ನಿಧಿ (ಪಿಪಿಎಫ್), ರಾಷ್ಟ್ರೀಯ ಪಿಂಚಣಿ ಯೋಜನೆ (ಎನ್‌ಪಿಎಸ್), ಕಾರ್ಮಿಕರ ಭವಿಷ್ಯ ನಿಧಿ (ಇಪಿಎಫ್), ಭಾರತೀಯ ಜೀವ ವಿಮಾ ನಿಗಮ (ಎಲ್‌ಐಸಿ), ವಿವಿಧ ಬ್ಯಾಂಕ್‌ಗಳು ದೇಶಿ ಸಾಂಸ್ಥಿಕ ಹೂಡಿಕೆದಾರರಿಗೆ ಉದಾಹರಣೆಗಳು.

4. ದೇಶಿ ಹಣಕಾಸು ನಿರ್ವಹಣಾ ಸಂಸ್ಥೆಗಳು (Domestic Asset Management Companies): ದೇಶಿ ಹಣಕಾಸು ನಿರ್ವಹಣಾ ಸಂಸ್ಥೆಗಳು ಜನರಿಂದ ಸಂಗ್ರಹಿಸಿದ ಹೂಡಿಕೆಯನ್ನು ಷೇರು ಮಾರುಕಟ್ಟೆಯಲ್ಲಿ ತೊಡಗಿಸುತ್ತವೆ. ಮ್ಯೂಚುವಲ್ ಫಂಡ್ ಕಂಪನಿಗಳು ಇಂತಹ ಹೂಡಿಕೆ ಸಂಸ್ಥೆಗಳಿಗೆ ಉದಾಹರಣೆಗಳು.

5. ವಿದೇಶಿ ಸಾಂಸ್ಥಿಕ ಹೂಡಿಕೆದಾರರು (Foreign Institutional Investors - FII's): ವಿದೇಶಿ ಸಂಸ್ಥೆಗಳು ಭಾರತದ ಷೇರುಪೇಟೆಯಲ್ಲಿ ಹೂಡಿಕೆ ಮಾಡುವುದನ್ನು ವಿದೇಶಿ ಸಾಂಸ್ಥಿಕ ಹೂಡಿಕೆ ಎನ್ನಬಹುದು. ವಿದೇಶಿ ಹಣಕಾಸು ನಿರ್ವಹಣಾ ಸಂಸ್ಥೆಗಳು, ಮ್ಯೂಚುವಲ್ ಫಂಡ್ ಕಂಪನಿಗಳು, ಇನ್ಶ್ಯೂರೆನ್ಸ್ ಕಂಪನಿಗಳು ಇದರಲ್ಲಿ ಒಳಗೊಂಡಿರುತ್ತವೆ. ಭಾರತದಂತಹ ಅಭಿವೃದ್ಧಿಶೀಲ ಅರ್ಥ ವ್ಯವಸ್ಥೆಯಲ್ಲಿ ವಿದೇಶಿ ಸಾಂಸ್ಥಿಕ ಹೂಡಿಕೆದಾರರು ಪ್ರಮುಖ ಪಾತ್ರ ವಹಿಸುತ್ತಾರೆ. ಭಾರತದಲ್ಲಿ ಸುಮಾರು 1,500 ವಿದೇಶಿ ಸಾಂಸ್ಥಿಕ ಹೂಡಿಕೆ ಕಂಪನಿಗಳು 'ಸೆಬಿ'ಯಲ್ಲಿ ನೋಂದಾಯಿಸಿಕೊಂಡು ಷೇರುಗಳ ಖರೀದಿ ಮತ್ತು ಮಾರಾಟದಲ್ಲಿ ಭಾಗಿಯಾಗುತ್ತಿವೆ.

ಜಿಎಸ್‌ಡಿಪಿ ಕುಸಿತ ಶೇ(–)2.6ರಷ್ಟು

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೇಶದ ಒಟ್ಟು ಆಂತರಿಕ ಉತ್ಪಾದನೆಯ (ಜಿಡಿಪಿ) ಬೆಳವಣಿಗೆ ದರವು 2020–21ನೇ ಸಾಲಿನಲ್ಲಿ ಶೇಕಡ (–)7.7ರಷ್ಟು ಕುಸಿತ ದಾಖಲಿಸುವ ಅಂದಾಜು ಮಾಡಲಾಗಿದೆ. ಆದರೆ, ರಾಜ್ಯದ ಜಿಡಿಪಿ (ಜಿಎಸ್‌ಡಿಪಿ) ಕುಸಿತದ ಪ್ರಮಾಣವು ಕಡಿಮೆ ಇರಲಿದೆ. 'ಈ ಆರ್ಥಿಕ ವರ್ಷದಲ್ಲಿ ರಾಜ್ಯದ ಜಿಡಿಪಿ ಶೇ(–)2.6ರಷ್ಟು ಕುಸಿತ ಕಾಣಲಿದೆ' ಎಂದು ವಿಧಾನಸಭೆಯಲ್ಲಿ ಸೋಮವಾರ ಮಂಡಿಸಲಾದ 2020–21ನೇ ಸಾಲಿನ ಆರ್ಥಿಕ ಸಮೀಕ್ಷೆಯು ಅಂದಾಜಿಸಿದೆ.

ಕರ್ನಾಟಕದ ಜಿಡಿಪಿಯು ಹಿಂದಿನ ಆರ್ಥಿಕ ವರ್ಷದಲ್ಲಿ ಶೇ 5ರಷ್ಟು ಬೆಳವಣಿಗೆ ಕಂಡಿತ್ತು. ರಾಜ್ಯದ ಕೃಷಿ ಕ್ಷೇತ್ರವು ಶೇ 6.4ರಷ್ಟು ಬೆಳವಣಿಗೆ ದಾಖಲಿಸಲಿದೆ. ಕೈಗಾರಿಕೆ ಮತ್ತು ಸೇವಾ ವಲಯಗಳು ಕ್ರಮವಾಗಿ ಶೇ (–)5.1ರಷ್ಟು, ಶೇ (–)3.1ರಷ್ಟು ಕುಸಿಯಲಿವೆ ಎಂದು ಸಮೀಕ್ಷೆಯು ಅಂದಾಜು ಮಾಡಿದೆ.

ಈಗಿನ ಬೆಲೆಗಳಲ್ಲಿ, ರಾಜ್ಯದ ನಿವ್ವಳ ತಲಾ ಆದಾಯ 2019–20ನೇ ಸಾಲಿನಲ್ಲಿ ₹ 2.23 ಲಕ್ಷ ಆಗಿತ್ತು. ಇದು 2020–21ನೇ ಸಾಲಿನಲ್ಲಿ ಶೇ 1.6ರಷ್ಟು ಹೆಚ್ಚಳ ಕಾಣಲಿದೆ, ₹2.26 ಲಕ್ಷಕ್ಕೆ ತಲುಪಲಿದೆ ಎಂದು ಸಮೀಕ್ಷೆಯು ಹೇಳಿದೆ. ರಾಷ್ಟ್ರೀಯ ತಲಾ ಆದಾಯ 2020–21ನೇ ಸಾಲಿನಲ್ಲಿ ಶೇ (–)5.4ರಷ್ಟು ಕಡಿಮೆ ಆಗಿ, ₹ 1.26 ಲಕ್ಷ ಆಗಲಿದೆ ಎಂದು ಅಂದಾಜಿಸಲಾಗಿದೆ.

ಮುಂಬೈ ಧಾರಣೆ

ಶೇಂಗಾ

8-3-2021

ಜಾವಾ 70/80(ಹೊಸ)	10550-10600
ಜಾವಾ 80/90(ಹೊಸ)	10250-10300
ದಪ್ಪ ಮಧ್ಯಪ್ರದೇಶ(ಹೊಸ)	9800-9900
ದಪ್ಪ ಗುಜರಾತ್(ಹೊಸ)	8800-8900

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1525 (1490)
ಒಂದು ವಾರದ ಡೆಲಿವರಿ	1520 (1485)
ಸೋಯಾ ಕಚ್ಚಾ	--- (1180)
ಪಾಮ್ ವಾರದ ಡೆಲಿವರಿ	1198 (1188)
ಸೂರ್ಯಕಾಂತಿ ಎಣ್ಣೆ ಕಚ್ಚಾ	1620 (1615)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10 ಗ್ರಾಂ
44,350 (44,550)
ಬೆಳ್ಳಿ ಕೆ.ಜಿ 65,500 (65,000)

ಆವರಣದಲ್ಲಿ ಶನಿವಾರದ ಧಾರಣೆ

ಐಸಿಸಿ ಮಹಿಳಾ ವಿಶ್ವಕಪ್: ತಂಡಗಳ ಹೆಚ್ಚಳಕ್ಕೆ ನಿರ್ಧಾರ

ದುಬೈ (ಪಿಟಿಐ): ಅಂತರರಾಷ್ಟ್ರೀಯ ಕ್ರಿಕೆಟ್ ಸಮಿತಿ (ಐಸಿಸಿ) ಆಯೋಜಿಸುವ ಮಹಿಳೆಯರ ಕ್ರಿಕೆಟ್ ಟೂರ್ನಿಗಳಲ್ಲಿ 2026ರಿಂದ ತಂಡಗಳ ಸಂಖ್ಯೆಯನ್ನು ಹೆಚ್ಚಿಸಲು ಚಿಂತನೆ ನಡೆದಿದೆ. ಅಂತರ ರಾಷ್ಟ್ರೀಯ ಮಹಿಳಾ ದಿನವಾದ ಸೋಮವಾರ ಈ ವಿಷಯವನ್ನು ತಿಳಿಸಲಾಗಿದೆ.

2026ರ ಮಹಿಳಾ ಟಿ20 ವಿಶ್ವಕಪ್ ಟೂರ್ನಿಯಲ್ಲಿ 10ರ ಬದಲು 12 ತಂಡಗಳು ಇರಲಿವೆ. 2029ರ ಏಕದಿನ ವಿಶ್ವಕಪ್ ಟೂರ್ನಿಯಲ್ಲಿ ಎಂಟು ತಂಡಗಳ ಬದಲು 10 ತಂಡಗಳನ್ನು ಕಣಕ್ಕೆ ಇಳಿಸಲಾಗುವುದು ಎಂದು ಐಸಿಸಿ ಹೇಳಿದೆ.

'ಮಹಿಳಾ ಟೂರ್ನಿಗಳಿಗೆ ಪ್ರೇಕ್ಷಕರ ಸಂಖ್ಯೆ ಹೆಚ್ಚಿಸುವ ಉದ್ದೇಶದೊಂದಿಗೆ ಕಳೆದ ನಾಲ್ಕು ವರ್ಷಗಳಿಂದ ಪ್ರಸಾರ ವ್ಯಾಪ್ತಿ ಮತ್ತು ಮಾರ್ಕೆಟಿಂಗ್‌ನಲ್ಲಿ ಹೂಡಿಕೆ ಮಾಡಲಾಗುತ್ತಿದೆ. 2020ರ ಟಿ20 ವಿಶ್ವಕಪ್ ಟೂರ್ನಿಯನ್ನು ದಾಖಲೆಯ 100 ಕೋಟಿಗಿಂತ ಅಧಿಕ

ಮಂದಿ ವಿಡಿಯೋಗಳ ಮೂಲಕ ವೀಕ್ಷಿಸಿದ್ದರು' ಎಂದು ಐಸಿಸಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಮನು ಸಾಹ್ನಿ ಹೇಳಿದ್ದಾರೆ.

ಮೆಲ್ಬರ್ನ್ ಕ್ರಿಕೆಟ್ ಕ್ರೀಡಾಂಗಣದಲ್ಲಿ ನಡೆದ 2020ರ ಟಿ20 ವಿಶ್ವಕಪ್ ಫೈನಲ್‌ಗೆ 86,174 ಪ್ರೇಕ್ಷಕರು ಸಾಕ್ಷಿಯಾಗಿದ್ದರು. ಮಹಿಳಾ ಕ್ರಿಕೆಟ್ ಟೂರ್ನಿಗೆ ಇದು ದಾಖಲೆಯ ಉಪಸ್ಥಿತಿಯಾಗಿದೆ.

2027ರಿಂದ ನಡೆಯಲಿರುವ ಮಹಿಳೆಯರ ಟಿ20 ಚಾಂಪಿಯನ್ಸ್ ಕಪ್ ಟೂರ್ನಿಯು ಆರು ತಂಡಗಳನ್ನು ಒಳಗೊಂಡಿರುತ್ತದೆ.

ಸೌತಾಂಪ್ಟನ್‌ನಲ್ಲಿ ಡಬ್ಲ್ಯುಟಿಸಿ ಫೈನಲ್: ಸೌರವ್ ಗಂಗೂಲಿ

ನವದೆಹಲಿ (ಪಿಟಿಐ): ಭಾರತ ಹಾಗೂ ನ್ಯೂಜಿಲೆಂಡ್ ತಂಡಗಳ ನಡುವಣ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ (ಡಬ್ಲ್ಯುಟಿಸಿ) ಫೈನಲ್ ಪಂದ್ಯವು ಸೌತಾಂಪ್ಟನ್‌ನ ಏಜಿಸ್ ಬೌಲ್ ಕ್ರೀಡಾಂಗಣದಲ್ಲಿ ನಡೆಯಲಿದೆ. ಜೂನ್ 18ರಿಂದ 22ರವರೆಗೆ ಈ ಹಣಾಹಣಿ ನಡೆಯಲಿದೆ ಎಂದು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಅಧ್ಯಕ್ಷ ಸೌರವ್ ಗಂಗೂಲಿ ಸೋಮವಾರ ತಿಳಿಸಿದ್ದಾರೆ.

ಫೈನಲ್ ಪಂದ್ಯವನ್ನು ಈ ಮೊದಲು ಲಾರ್ಡ್ಸ್ ಕ್ರೀಡಾಂಗಣದಲ್ಲಿ ಆಯೋಜಿಸಲು ಉದ್ದೇಶಿಸಲಾಗಿತ್ತು. ಸೌತಾಂಪ್ಟನ್ ಕ್ರೀಡಾಂಗಣದಲ್ಲಿ ಪಂಚತಾರಾ ಸೌಲಭ್ಯಗಳಿರುವುದರಿಂದ ತಂಡಗಳಿಗೆ ಜೀವಸುರಕ್ಷಾ ವಾತಾವರಣ ಕಲ್ಪಿಸಿಕೊಡಲು ಐಸಿಸಿ ಹಾಗೂ ಇಂಗ್ಲೆಂಡ್ ಮತ್ತು ವೇಲ್ಸ್ ಕ್ರಿಕೆಟ್ ಮಂಡಳಿಗಳಿಗೆ ಅನುಕೂಲವಾಗಲಿದೆ. ಇತ್ತೀಚೆಗೆ ಕೊನೆಗೊಂಡ ಇಂಗ್ಲೆಂಡ್ ವಿರುದ್ಧದ ಟೆಸ್ಟ್ ಸರಣಿಯನ್ನು 3–1ರಿಂದ ತನ್ನದಾಗಿಸಿಕೊಂಡಿರುವ ಭಾರತ, ಫೈನಲ್ ಪ್ರವೇಶಿಸಿದೆ.

ಕ್ರಿಕೆಟ್: ದಕ್ಷಿಣ ಆಫ್ರಿಕಾ ವಿರುದ್ಧ ಎರಡನೇ ಏಕದಿನ ಪಂದ್ಯ ಇಂದು

ಪುಟಿದೇಳುವ ಛಲದಲ್ಲಿ ಮಿಥಾಲಿ ಬಳಗ

ಲಖನೌ (ಪಿಟಿಐ): ದಕ್ಷಿಣ ಆಫ್ರಿಕಾ ವಿರುದ್ಧ ಮೊದಲ ಪಂದ್ಯದಲ್ಲೇ ನಿರಾಸೆ ಅನುಭವಿಸಿದ್ದ ಭಾರತ ಮಹಿಳಾ ಕ್ರಿಕೆಟ್ ತಂಡವು ಎರಡನೇ ಹಣಾಹಣಿಯಲ್ಲಿ ಲಯ ಕಂಡುಕೊಳ್ಳುವ ವಿಶ್ವಾಸದಲ್ಲಿದೆ. ಇಲ್ಲಿಯ ಏಕಾನ ಕ್ರೀಡಾಂಗಣದಲ್ಲಿ ಮಂಗಳವಾರ ಪಂದ್ಯ ನಡೆಯಲಿದೆ.

ಕೋವಿಡ್–19ರಿಂದಾಗಿ ಒಂದು ವರ್ಷ ಸ್ಪರ್ಧಾತ್ಮಕ ಕ್ರಿಕೆಟ್ ಕಣಕ್ಕೆ ಇಳಿಯದಿದ್ದ ಮಿಥಾಲಿ ರಾಜ್ ನೇತೃತ್ವದ ಭಾರತ ಇದೇ ಮೊದಲ ಬಾರಿ ಸರಣಿ ಆಡುತ್ತಿದೆ. ಭಾನುವಾರ ನಡೆದ ಮೊದಲ ಪಂದ್ಯದಲ್ಲಿ ಪ್ರವಾಸಿ ತಂಡ ಸಂಪೂರ್ಣ ಪ್ರಾಬಲ್ಯ ಮೆರೆದಿತ್ತು. ಎಂಟು ವಿಕೆಟ್‌ಗಳಿಂದ ಪಂದ್ಯ ಗೆದ್ದುಕೊಂಡಿತ್ತು. ಪಂದ್ಯದ ಬಳಿಕ ಪ್ರತಿಕ್ರಿಯಿಸಿದ್ದ ಭಾರತ ತಂಡದ ಉಪನಾಯಕಿ ಹರ್ಮನ್‌ಪ್ರೀತ್ ಕೌರ್, 'ಆಟಗಾರ್ತಿಯರಿಗೆ ಒಂದು ತಂಡವಾಗಿ ಆಡಲು ಸ್ವಲ್ಪ ಸಮಯದ ಅಗತ್ಯವಿದೆ' ಎಂದಿದ್ದರು.

ಆ ಪಂದ್ಯದಲ್ಲಿ ಕೌರ್, ನಾಯಕಿ

ಮಿಥಾಲಿ ರಾಜ್–ಪಿಟಿಐ ಚಿತ್ರ

ಮಿಥಾಲಿ ರಾಜ್ ಅವರನ್ನು ಹೊರತುಪಡಿಸಿ ಉಳಿದ ಯಾರಿಂದಲೂ ಉತ್ತಮ ಸಾಮರ್ಥ್ಯ ಹೊರಹೊಮ್ಮಿರಲಿಲ್ಲ.

ಹೊಡೆತಗಳ ಆಯ್ಕೆಯಲ್ಲಿ ಆಟಗಾರ್ತಿಯರು ಎಡವಿದ್ದನ್ನು ಕೌರ್ ಉಲ್ಲೇಖಿಸಿದ್ದರು.

ಭಾರತ ತಂಡದ ಸಾಂಪ್ರದಾಯಿಕ ಬೌಲಿಂಗ್ ಶಕ್ತಿಯಾಗಿರುವ ಸ್ಪಿನ್ ವಿಭಾಗವೂ ಪ್ರವಾಸಿ ತಂಡದ ಲಿಜೆಲ್ಲೆ ಲೀ ಹಾಗೂ ಲೌರಾ ವೊಲ್ವಾರ್ಟ್ ಬ್ಯಾಟಿಂಗ್ ಎದುರು ಹೈರಾಣಾಗಿತ್ತು. ಬ್ಯಾಟಿಂಗ್‌ನಲ್ಲಿ ಮಿಥಾಲಿ ಹಾಗೂ ಬೌಲಿಂಗ್‌ನಲ್ಲಿ ಜೂಲನ್ ಗೋಸ್ವಾಮಿ ಉತ್ತಮ ಆಟವಾಡಿದ್ದು ಭಾರತಕ್ಕೆ ಸಮಾಧಾನದ ಸಂಗತಿ.

ಐದು ಪಂದ್ಯಗಳ ಸರಣಿಯ ಮೊದಲ ಪಂದ್ಯದಲ್ಲೇ ಗೆದ್ದು ಆತ್ಮವಿಶ್ವಾಸ ಹೆಚ್ಚಿಸಿಕೊಂಡಿರುವ ದಕ್ಷಿಣ ಆಫ್ರಿಕಾ, ಅದೇ ಲಯದೊಂದಿಗೆ ಮುಂದುವರಿಯುವ ಹಂಬಲದಲ್ಲಿದೆ. ಆ ತಂಡದ ವೇಗಿ ಶಬ್ನಿಮ್ ಇಸ್ಮಾಯಿಲ್ ನೇತೃತ್ವದ ಬೌಲಿಂಗ್ ಪಡೆ ಮೊದಲ ಪಂದ್ಯದಲ್ಲಿ ಪರಿಣಾಮಕಾರಿಯಾಗಿತ್ತು. ಈ ಅಪಾಯವನ್ನು ಎದುರಿಸಿ ಕ್ರೀಸ್‌ನಲ್ಲಿ ನೆಲೆಯೂರುವ ಛಲವನ್ನು ಭಾರತದ ಬ್ಯಾಟ್ಸ್‌ವುಮನ್‌ಗಳು ತೋರಬೇಕಿದೆ.

ತಂಡಗಳು: ಭಾರತ: ಮಿಥಾಲಿ ರಾಜ್ (ನಾಯಕಿ), ಸ್ಮೃತಿ ಮಂದಾನ, ಜೆಮಿಮಾ ರಾಡ್ರಿಗಸ್, ಪೂನಂ ರಾವತ್, ಪ್ರಿಯಾ ಪೂನಿಯಾ, ಯಸ್ತಿಕಾ ಭಾಟಿಯಾ, ಹರ್ಮನ್‌ಪ್ರೀತ್ ಕೌರ್, ಡಿ.ಹೇಮಲತಾ, ದೀಪ್ತಿ ಶರ್ಮಾ, ಸುಷ್ಮಾ ವರ್ಮಾ (ವಿಕೆಟ್ ಕೀಪರ್), ಶ್ವೇತಾ ವರ್ಮಾ, ರಾಧಾ ಯಾದವ್, ರಾಜೇಶ್ವರಿ ಗಾಯಕವಾಡ್, ಜೂಲನ್ ಗೋಸ್ವಾಮಿ, ಮಾನಸಿ ಜೋಶಿ, ಪೂನಂ ಯಾದವ್, ಪ್ರತ್ಯೂಷಾ, ಮೋನಿಕಾ ಪಟೇಲ್.

ದಕ್ಷಿಣ ಆಫ್ರಿಕಾ: ಸೂನ್ ಲೂಜ್ (ನಾಯಕಿ), ಅಯಮೊಂಗಾ ಖಾಕ, ಶಬ್ನಿಮ್ ಇಸ್ಮಾಯಿಲ್, ಲೌರಾ ವೊಲ್ವಾರ್ಟ್, ತ್ರಿಶಾ ಚೆಟ್ಟಿ, ಸಿನಾಲೊ ಜಾಫ್ತ, ತಸ್ಮಿನ್ ಬ್ರಿಟ್ಸ್, ಮರಿಜಾನೆ ಕಾಪ್, ನೊಂಡುಮಿಸೊ ಶಾಂಗಸೆ, ಲಿಜೆಲಿ ಲೀ, ಅನೆಕೆ ಬೋಶ್, ಫೆ ತನಿಕ್ಲಿಫ್, ನೊಂಕುಲುಲೆಕೊ ಮಾಬಾ, ಮಿಗ್ನನ್ ಡು ಪ್ರೀಜ್, ನಡಿನೆ ಡಿ ಕ್ಲರ್ಕ್, ಲಾರಾ ಗುಡಾಲ್, ತೂಮಿ ಸೆಖುಖುನೆ.

ಆರಂಭ: ಬೆಳಿಗ್ಗೆ 9.00
ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ವ್ಯಾಪಾರ
Business Offers
Business For Sale
ಮಾರಾಟಕ್ಕಿದೆ: ಬೆಂಗಳೂರಿನಲ್ಲಿ ಉತ್ತಮ ವ್ಯಾಪಾರವಿರುವ ಬೇಕರೀ (ಜ್ಯೂಸ್ & ಟೀ ಪಾಯಿಂಟ್). ಸಂಪರ್ಕಿಸಿ: 7406781063

ಭವಿಷ್ಯ
Astrology
ಒಂದೇ ಕರೆಯಲ್ಲಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೇಷಲಿಸ್ಟ್ 100% ಗ್ಯಾರಂಟಿ ಪರಿಹಾರ ಪಂಡಿತ್.ಕೃಷ್ಣಪ್ರಸಾದ್.ಉಚಿತ ಭವಿಷ್ಯ ಖಚಿತ ಪರಿಹಾರ ಶ್ರೀಕ್ಷೇತ್ರ ಧರ್ಮಸ್ಥಳ, 7022443071
★ವಶೀಕರಣ ಮೋಡಿಮಾಂತ್ರಿಕರು★ 500ವರ್ಷಗಳ ಇತಿಹಾಸ 35000ಜನರಿಗೆ ಸಮಾಧಾನ ಸ್ತ್ರೀ ವಶೀಕರಣ, ಪ್ರೇಮವಿಚಾರ, ಗಂಡ ಹೆಂಡತಿ ಕಲಹ, ಇನ್ಯಾವುದೇ ಸಮಸ್ಯೆಗಳಿಗೆ ಶೀಘ್ರದಲ್ಲೇ ಪರಿಹಾರ. 7829724990
★ಚೌಡೇಶ್ವರಿದೇವಿ★ ಆರಾಧಕರು ಪ್ರಧಾನ ತಾಂತ್ರಿಕ್ ಮಂಜುನಾಥ್. ಪ್ರೀತಿಪ್ರೇಮ, ದಾಂಪತ್ಯ ಸಮಸ್ಯೆ, ವಶೀಕರಣ ಫೋನಿನ ಮುಖಾಂತರ ಕೆಲವೇ ನಿಮಿಷಗಳಲ್ಲಿ ಪರಿಹಾರ. 8050498041
ಪ್ರಖ್ಯಾತ ಪಂಡಿತರು, ವಶೀಕರಣ ಸ್ಪೆಷಲಿಸ್ಟ್. ಯಾವುದೇ ಗುಪ್ತ ಸಮಸ್ಯೆಗಳಿಗೆ ಕೇರಳೀಯ, ಬಂಗಾಳಿ ಪದ್ಧತಿಯಿಂದ ಖಚಿತ ಪರಿಹಾರ. A.R. ಗಣಾಚಾರಿ 9902157331
ಅಂಬಾಭವಾನಿ ಜ್ಯೋತಿಷ್ಯಾಲಯ: ಕೊಳ್ಳೆಗಾಲದ ನಂ.1 ವಶೀಕರಣ ಸ್ಪೆಷಲಿಸ್ಟ್ ದೇವಿಪ್ರಸಾದ್ (ಉಚಿತ ಭವಿಷ್ಯ ಖಚಿತ ಪರಿಹಾರ) ನಿಮ್ಮ ಸಮಸ್ಯೆಗಳೇನೆಯಿರಲಿ 2ದಿನದಲ್ಲಿ ಪರಿಹಾರ.9886755306

ಉದ್ಯೋಗಾವಕಾಶ
General
TVS ಬ್ರಿಟಾನಿಯಾ ವಿಡಿಯೋಕಾನ್ ಗಳಿಗೆ 7th,SSLC,PUC, ಡಿಗ್ರಿಯವರು ITI ನವರುಗಳು ಕರ್ನಾಟಕದ ಎಲ್ಲಾ ಜಿಲ್ಲೆಗಳಿಗೆ ನೇರನೇಮಕಾತಿಯಿರುತ್ತದೆ. ESI, PF ನೊಂದಿಗೆ 16,600-60,000/- ವಸತಿಯೂಟವಿರುತ್ತದೆ. ಸಂಪರ್ಕಿಸಿ:7760014526, 9739544856
WORK FROM HOME ಮನೆಯಿಂದಲೆ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000ವರೆಗೆ ಸಂಪಾದಿಸಿ. ಕನ್ನಡ/ ಇಂಗ್ಲೀಷ್ ಓದಲು, ಬರೆಯಲು ಬರುವ ಎಲ್ಲರಿಗೂ ಅವಕಾಶ. ಕೊರಿಯರ್ ಸೌಲಭ್ಯವಿದೆ. 8884875553/ 8884875554
ಕಂಪನಿಗಳಿಗೆ ಹೌಸ್‌ಕೀಪಿಂಗ್, ಸೆಕ್ಯೂರಿಟಿ ,ಆಫೀಸ್, ಕಾರ್ ವಾಷಿಂಗ್, ಫ್ಯಾಕ್ಟರಿಗಳಿಗೆ, ಪ್ಯಾಕಿಂಗ್‌ಗಾಗಿ ಹೆಲ್ಪರ್ಸ್‌ಗಳು, ಟೆಲಿಕಾಲರ್ಸ್‌ಗಳು. ಸಂಬಳ: 14,000 -20,000/-. ವಸತಿಯೂಟವಿದೆ. 6360238526
ಬೇಕಾಗಿದ್ದಾರೆ ನೇರನೇಮಕಾತಿ TOYOTA, ಟಾಟಾ ಮೋಟಾರ್ಸ್, TVS, ಬ್ರಿಟಾನಿಯಾಗಳಿಗೆ SSLC, PUC, ITI ನವರು.ಡಿಗ್ರಿಯವರುಗಳು 16,800-56,000/- ವಸತಿಯೂಟವಿದೆ. 7795049766, 7795048129
VIDEOCON, ಟಯೋಟಾ, TVS, ಬ್ರಿಟಾನಿಯಾ ಕಂಪನಿಗಳಿಗೆ SSLC, PUC, ITI, ಡಿಗ್ರಿಯವರು, ವಿದ್ಯಾರ್ಹತೆಯಿಲ್ಲದವರು ನೇರನೇಮಕಾತಿ 16,600-56,000/- ವಸತಿಯೂಟವಿದೆ. 9611715755
WANTED FEMALE office assistant/ Telesale for UPS company in BTM layout Bangalore. 9840091910/ 9840121767
Wanted
ತಕ್ಷಣ ಬೇಕಾಗಿದ್ದಾರೆ ಹೊಸದಾದ ಕಂಪನಿಗಳಿಗೆ ಆಫೀಸ್‌ಗಳಿಗೆ MNC ಕಂಪನಿಗಳಿಗೆ ಹಾಗೂ ಎಲ್ಲಾಜಿಲ್ಲೆಗಳಿಗೆ ಯುವಕಯುವತಿಯರು ಕೆಲಸಕ್ಕೆ ಬೇಕಾಗಿದ್ದಾರೆ 7th,SSLC, PUC, ITI Degree Pass/Fail ಆದವರಿಗೆ, ಉಚಿತ ವಸತಿಯೂಟದೊಂದಿಗೆ ESI/PF ನೊಂದಿಗೆ ಸಂಬಳ 16,800/- ರಿಂದ 45000/- ದವರೆಗೆ. 9916016092, 9739993386,
ತಕ್ಷಣ ಬೇಕಾಗಿದ್ದಾರೆ :TVS, TOYOTA, VOLVO ಮುಂತಾದ ಕಂಪನಿ ಹಾಗೂ ಆಫೀಸ್ ವರ್ಕ್ ಗಳಿಗೆ ಯುವಕ ಯುವತಿಯರು. ವಸತಿಯೂಟದೊಂದಿಗೆ 15800-55000/- 7411720917, 7411720918
Part-Time Jobs
ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000-15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503
WORK FROM HOME: ಮನೆಯಿಂದಲೇ ಕುಳಿತು ಬುಕ್ ಬರೆಯುವ ಫಾರಂ ತುಂಬುವ ಕೆಲಸ, ಗಳಿಸಿ 15000-22000/- ಕೊರಿಯರ್ ಸೌಲಭ್ಯವಿದೆ. 7338376317, 9108059956

ಪ್ರವಾಸ
Travel
ತಾ.13-3-2021 ರಿಂದ 4ದಿನ 9ನವಗ್ರಹ ದರ್ಶನ ಮತ್ತು ಶ್ರೀರಂಗ, ತಂಜಾವೂರು, ಕುಂಭಕೋಣಂ, ಚಿದಂಬರಂ ತಾ.18-3-2021 ರಿಂದ 9 ದಿನ ವೈಷ್ಣವಿದೇವಿ, ಡೆಲ್ಲಿ, ಹರಿದ್ವಾರ, ಆಗ್ರಾ, ಅಮೃತ್‌ಸರ್. ಶ್ರೀ ಗುರುರಾಜ ಟ್ರಾವೆಲ್ಸ್.9900124333, 9611082432, 8123099913
ಸಸ್ಯಾಹಾರಿ ಊಟ, ವಸತಿಯೊಂದಿಗೆ 22.04.2021,25/35 ದಿನಗಳ ಕಾಶಿ,ಗಯಾ, ನೇಪಾಳ,ಬದರಿನಾಥ್, ಕೇದಾರನಾಥ್, ಗಂಗೋತ್ರಿ, ವೈಷ್ಣೋದೇವಿ.18.05.2021 ರಿಂದ 18 ದಿನಗಳ ಚಾರ್‌ಧಾಮ್ ಯಾತ್ರೆ 20.06.2021 ರಿಂದ 18 ದಿನಗಳ ಅಮರನಾಥ ಯಾತ್ರೆಗಳಿಗೆ ಏಷ್ಯನ್ ಟ್ರಾವಲ್ ಏಜೆನ್ಸಿ 080-26574131, 26573421, 9448522551
★ವಿಮಾನದಲ್ಲಿ 20.04.2021★ 8ದಿನಗಳು ಗುಜರಾತ್, ಭಾವನಗರ್, ಸೋಮನಾಥ್. 04.05.2021 12ದಿನಗಳು ವೈಷ್ಣೋದೇವಿ, ಶಿಮ್ಲಾ ಮನಾಲಿ,ಸಪ್ತಶಕ್ತಿಪೀಠಗಳು. ಆರ್.ಗಾಂಧಿ ಟೂರ್ಸ್. 9902433500/ 9945445809
28.3.21 ದೆಹಲಿ, ವೈಷ್ಣೋದೇವಿ, ಅಮೃತ್‌ಸರ್, ಹರಿದ್ವಾರ, ಕಾಶಿ, ಗಯಾ, ಅಲಹಾಬಾದ್. 24.4.21 ಮಧ್ಯಪ್ರದೇಶ, ಗುಜರಾತ್/ ರಾಜಸ್ಥಾನ್/ ನೇಪಾಳ.12.5.21 ಗಂಗೋತ್ರಿ, ಯಮುನೋತ್ರಿ, ಕೇದಾರನಾಥ, ಬದರಿನಾಥ. 27.6.21 ಅಮರನಾಥ. ಕರ್ನಾಟಕ ಹೆರಿಟೇಜ್ ಟೂರ್ಸ್ (ಹನುಮಂತನಗರ) ಸಂ: 9845035349, 9482435755
ಕಾಶಿ, ಮುಕ್ತಿನಾಥ್-ಯಾತ್ರ, 25-04-2021, 15 ದಿನಗಳು. ಹಾಗು ಪ್ರತಿದಿನ ತಿರುಪತಿ ಪ್ಯಾಕೇಜ್ ಪ್ರಾರಂಭಿಸಿದ್ದು ಬುಕಿಂಗ್-ಗಳಿಗಾಗಿ ವಿಜಯ ಟ್ರಾವಲ್ಸ್ ಮಲ್ಲೇಶ್ವರಂ,ಬೆಂಗಳೂರು-03. 9448294477
ಗುಜರಾತ್ ಪ್ರವಾಸ 25-3-2021, ಸೋಮನಾಥ್, ದ್ವಾರಕ, ಸರ್ದಾರ್ ವಲ್ಲಭಯ್ ವಿಗ್ರಹ ಅಹ್ಮದಾಬಾದ್, ಚಾರ್‌ಧಾಮ್ ಯಾತ್ರ 13-5-2021 ಶ್ರೀ ಮಾಹಾಲಕ್ಷ್ಮಿ ಟ್ರಾವೆಲ್ಸ್:9964527782

ವಾಹನ
Four Wheelers Selling
Others

ಮಾರ್ಚ್ ತಿಂಗಳ ಭರ್ಜರಿ ಕೊಡುಗೆಗಳು
ACE Gold ಪೆಟ್ರೋಲ್ ಮೇಲೆ ಆಕರ್ಷಕ ಕೊಡುಗೆಗಳೊಂದಿಗೆ

1.99%* ಬಡ್ಡಿದರದಲ್ಲಿ ಸಾಲ ಸೌಲಭ್ಯ
ಹೆಚ್ಚುವರಿ ಎಕ್ಸ್‌ಚೇಂಜ್ ಬೋನಸ್ ₹15,000/-* ದವರೆಗೆ
ತ್ವರೆಮಾಡಿ! ಈ ಕೊಡುಗೆಗಳು 25ನೇ ಮಾರ್ಚ್ 2021 ರವರೆಗೆ ಮಾತ್ರ
ಹೆಚ್ಚಿನ ವಿವರಗಳಿಗಾಗಿ ಕರೆಮಾಡಿ
Bangalore -7259784441
Bangalore/Mysore 95389 35533
Tumkur/Davanagere/ Chitradurga-7829055525
Mangalore/Shivamogga/ Udupi/Hassan/ Chikkamagalur/Karwar 96208 63338
Hubli/Haveri/Gadag/Bellary/ Raichur - 9620955858
Bagalkot/Bijapur/Gulbarga/ Belgaum/Bidar 8095202223
* ಷರತ್ತುಗಳು ಅನ್ವಯಿಸುತ್ತದೆ.

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

DH ಪ್ರಜಾವಾಣಿ Classifieds
EFFECTIVE FROM JUNE 3rd, 2020
DECCAN HERALD & PRAJAVANI CLASSIFIEDS PACKAGE RATES

PUBLICATION	TEXT AD RATE PER INS FOR 15 WORDS	CLASSIFIEDS DISPLAY RATE PER SQCM
DH ALL KARNATAKA+ PV BENGALURU	1020/-	480/-
PV ALL KARNATAKA	900/-	430/-

*GST applicable

SPECIAL SCHEMES ALL CATEGORY

PAY	2	And	GET	1	Free
PAY	3	And	GET	2	Free
PAY	5	And	GET	5	Free

For More Details
Contact: 9880856233 | 9731810277
9901641752 | 9845114560 | 9886213331

ವಿಜಯ್ ಹಜಾರೆ ಟ್ರೋಫಿ: ಸಮರ್ಥ್ ದಾಖಲೆಯ ಶತಕ; ದೇವದತ್ತ ದ್ವಿಶತಕದ ಜೊತೆಯಾಟ

ಸೆಮಿಫೈನಲ್‌ಗೆ ಕರ್ನಾಟಕ

ದೆಹಲಿ (ಪಿಟಿಐ): ಕರ್ನಾಟಕದ ಆರಂಭಿಕ ಜೋಡಿ ಮತ್ತೊಮ್ಮೆ ಮಿಂಚಿನ ಬ್ಯಾಟಿಂಗ್ ಮಾಡಿ ಎದುರಾಳಿಗಳನ್ನು ಕಂಗೆಡಿಸಿತು. ಇಲ್ಲಿನ ಪಾಲಂ ಕ್ರೀಡಾಂಗಣದಲ್ಲಿ ಸೋಮವಾರ ನಡೆದ ವಿಜಯ್ ಹಜಾರೆ ಟ್ರೋಫಿ ಏಕದಿನ ಕ್ರಿಕೆಟ್ ಟೂರ್ನಿಯ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಆರ್.ಸಮರ್ಥ್ ಮತ್ತು ದೇವದತ್ತ ಪಡಿಕ್ಕಲ್ ಅವರ ಅಮೋಘ ಆಟದಿಂದಾಗಿ ಕರ್ನಾಟಕ 80 ರನ್‌ಗಳಿಂದ ಕೇರಳವನ್ನು ಮಣಿಸಿತು.

ಮೊದಲು ಬ್ಯಾಟಿಂಗ್ ಮಾಡಿದ ಕರ್ನಾಟಕ, ನಾಯಕ ಸಮರ್ಥ್ (192; 158 ಎಸೆತ, 22 ಬೌಂಡರಿ 3 ಸಿಕ್ಸರ್) ಮತ್ತು ಪಡಿಕ್ಕಲ್ (101; 119ಎ, 10 ಬೌಂ, 2 ಸಿ) ಅವರ ದ್ವಿಶತಕದ ಜೊತೆಯಾಟದ ನೆರವಿನಿಂದ ಮೂರು ವಿಕೆಟ್‌ಗೆ 338 ರನ್ ಗಳಿಸಿತು. ಗುರಿ ಬೆನ್ನತ್ತಿದ ಕೇರಳದ ಪರ ವತ್ಸಲ್ ಗೋವಿಂದ್ (92; 96 ಎ, 6 ಬೌಂ, 3 ಸಿ) ಮತ್ತು ಮೊಹಮ್ಮದ್ ಅಜರುದ್ದೀನ್ (52; 34 ಎ, 5 ಬೌಂ, 2 ಸಿ) ಹೋರಾಡಿದರು. ಆದರೆ ರೋನಿತ್ ಮೋರೆ, ಶ್ರೇಯಸ್ ಗೋಪಾಲ್ ಮತ್ತು ಕೃಷ್ಣಪ್ಪ ಗೌತಮ್ ಅವರ ದಾಳಿಗೆ ನಲುಗಿ 44ನೇ ಓವರ್‌ನಲ್ಲಿ 258 ರನ್‌ಗಳಿಗೆ ಪತನ ಕಂಡಿತು.

ಟಾಸ್ ಗೆದ್ದರೂ ಎದುರಾಳಿಗಳನ್ನು ಬ್ಯಾಟಿಂಗ್‌ಗೆ ಆಹ್ವಾನಿಸಿ ಕೇರಳ ಕೈಸುಟ್ಟುಕೊಂಡಿತು. ಸಮರ್ಥ್ ಮತ್ತು ಪಡಿಕ್ಕಲ್ ನಿರಾಯಾಸವಾಗಿ ಬ್ಯಾಟ್ ಬೀಸಿ ರನ್ ಗಳಿಸತೊಡಗಿದರು. ಎಸ್.ಶ್ರೀಶಾಂತ್ ಮತ್ತು ಬಾಸಿಲ್ ತಂಬಿ ಅವರಂಥ ಶ್ರೇಷ್ಠ ಬೌಲರ್‌ಗಳಿದ್ದರೂ ಸಮರ್ಥ್ ಮತ್ತು ಪಡಿಕ್ಕಲ್ ಅವರನ್ನು ನಿಯಂತ್ರಿಸಲು ಕೇರಳಕ್ಕೆ ಸಾಧ್ಯವಾಗಲಿಲ್ಲ. ಇವರಿಬ್ಬರ ಜೊತೆಯಾಟ 43ನೇ ಓವರ್ ವರೆಗೆ ಮುಂದುವರಿದಾಗ ಕರ್ನಾಟಕದ ಮೊತ್ತ 249 ಆಯಿತು. ದೇವದತ್ತ ಸತತ ನಾಲ್ಕನೇ ಶತಕ ಗಳಿಸಿದರು. ಲಿಸ್ಟ್ 'ಎ' ಟೂರ್ನಿಯಲ್ಲಿ ಈ ಸಾಧನೆ ಮಾಡಿದ ಮೊದಲ ಭಾರತೀಯ ಎನಿಸಿಕೊಂಡರು. ಇಂಗ್ಲೆಂಡ್ ಎದುರಿನ ಏಕದಿನ ಸರಣಿಗೆ ತಂಡವನ್ನು ಆಯ್ಕೆ ಮಾಡುವಾಗ ತಮ್ಮ ಹೆಸರು ನೆನಪಿನಲ್ಲಿರಲಿ ಎಂಬ ಸಂದೇಶವನ್ನೂ ಅವರು ಆಯ್ಕೆ ಸಮಿತಿಗೆ ರವಾನಿಸಿದರು.

ಆರ್.ಸಮರ್ಥ್ –ಪ್ರಜಾವಾಣಿ ಚಿತ್ರ

ಮುಖ್ಯಾಂಶಗಳು

- ಲಿಸ್ಟ್ 'ಎ' ಟೂರ್ನಿಯಲ್ಲಿ ಸತತ ನಾಲ್ಕು ಶತಕ ಗಳಿಸಿ ದಾಖಲೆ ಬರೆದ ದೇವದತ್ತ
- ನಾಕೌಟ್ ಹಂತದಲ್ಲಿ ಗರಿಷ್ಠ ರನ್ ಗಳಿಸಿದ ಜಾಫರ್ ದಾಖಲೆ ಹಿಂದಿಕ್ಕಿದ ಸಮರ್ಥ್

ಸಮರ್ಥ್ ದ್ವಿಶತಕದಿಂದ ವಂಚಿತರಾದರೂ ವಿಜಯ್ ಹಜಾರೆ ಟೂರ್ನಿಯ ನಾಕ್ ಔಟ್ ಹಂತದಲ್ಲಿ ಅತಿಹೆಚ್ಚು ವೈಯಕ್ತಿಕ ಮೊತ್ತ ಗಳಿಸಿದ ಆಟಗಾರ ಎಂಬ ಶ್ರೇಯ ತಮ್ಮದಾಗಿಸಿಕೊಂಡರು. 170 ರನ್ ಗಳಿಸಿದ ವಾಸಿಂ ಜಾಫರ್ ಅವರ ಹೆಸರಿನಲ್ಲಿ ಇಲ್ಲಿಯ ವರೆಗೆ ಈ ದಾಖಲೆ ಇತ್ತು.

112 ಎಸೆತಗಳಲ್ಲಿ ಶತಕ ಪೂರೈಸಿದ ಅವರು ನಂತರವೂ ಅಮೋಘ ಬ್ಯಾಟಿಂಗ್ ಮುಂದುವರಿಸಿದರು. ಪಡಿಕ್ಕಲ್ ಔಟಾದ ನಂತರ ಮನೀಷ್ ಪಾಂಡೆ ಜೊತೆ 68 ರನ್ ಸೇರಿಸಿದ ಸಮರ್ಥ್ 49ನೇ ಓವರ್‌ನಲ್ಲಿ ವಾಪಸಾದರು. ಅಷ್ಟರಲ್ಲಿ ತಂಡದ ಮೊತ್ತ 315 ರನ್ ದಾಟಿತ್ತು. ಇನಿಂಗ್ಸ್‌ನಲ್ಲಿ ಉರುಳಿದ ಮೂರೂ ವಿಕೆಟ್‌ಗಳು ಮಧ್ಯಮ ವೇಗಿ ನಡುಮಂಗುಳಿ ಬಾಸಿಲ್ ಅವರ ಪಾಲಾದವು.

ವೈಫಲ್ಯ ಕಂಡ ಉತ್ತಪ್ಪ : ಕರ್ನಾಟಕದ ಎದುರಿನ ಲೀಗ್ ಪಂದ್ಯದಲ್ಲಿ ವಿಫಲರಾಗಿದ್ದ ರಾಬಿನ್ ಉತ್ತಪ್ಪ ಈ ಪಂದ್ಯದಲ್ಲೂ ಬೇಗನೇ ಔಟಾದರು. ತಂಡದ ಮೊತ್ತ 13 ಆಗಿದ್ದಾಗ ರೋನಿತ್ ಮೋರೆ ಅವರ ಎಲ್‌ಬಿಡಬ್ಲ್ಯು ಬಲೆಯಲ್ಲಿ ಬಿದ್ದು ಉತ್ತಪ್ಪ ವಾಪಸಾದರು. ಈ ಆಘಾತದಿಂದ ಚೇತರಿಸಿಕೊಳ್ಳುವಷ್ಟರಲ್ಲಿ ರೋಹನ್ ಕುನ್ನುಮ್ಮಲ್ ಮತ್ತು ವಿಷ್ಣು ವಿನೋದ್ ಅವರ ವಿಕೆಟ್ ಕೂಡ ಉರುಳಿತು. ಈ ಸಂದರ್ಭದಲ್ಲಿ ವತ್ಸಲ್ ಗೋವಿಂದ್ ಮತ್ತು ನಾಯಕ ಸಚಿನ್ ಬೇಬಿ ಜೊತೆಗೂಡಿ ಮೊತ್ತವನ್ನು 100ರ ಗಡಿ ದಾಟಿಸಿದರು.

ಸ್ಕೋರ್‌ಕಾರ್ಡ್

ಕರ್ನಾಟಕ 3ಕ್ಕೆ 338 (50 ಓವರ್‌ಗಳಲ್ಲಿ)	
ಆರ್.ಸಮರ್ಥ್ ಸಿ ವಿಷ್ಣು ವಿನೋದ್ ಬಿ ಎನ್.ಪಿ.ಬಾಸಿಲ್	192
ದೇವದತ್ತ ಪಡಿಕ್ಕಲ್ ಬಿ ಎನ್.ಪಿ.ಬಾಸಿಲ್	101
ಮನೀಷ್ ಪಾಂಡೆ ಔಟಾಗದೆ	34
ಕೃಷ್ಣಪ್ಪ ಗೌತಮ್ ಸಿ ಗೋವಿಂದ್ ಬಿ ಎನ್.ಪಿ.ಬಾಸಿಲ್	0
ಕೆ.ವಿ.ಸಿದ್ಧಾರ್ಥ್ ಔಟಾಗದೆ	4
ಇತರೆ (ಲೆಗ್‌ಬೈ 1, ವೈಡ್ 6)	7

ವಿಕೆಟ್ ಪತನ: 1-249 (ದೇವದತ್ತ ಪಡಿಕ್ಕಲ್; 42.4), 2-317 (ಆರ್.ಸಮರ್ಥ್, 48.2), 3-324 (ಕೃಷ್ಣಪ್ಪ ಗೌತಮ್; 48.6)

ಬೌಲಿಂಗ್: ಜಲಜ್ ಸಕ್ಸೇನಾ 10–1–34–0, ಶ್ರೀಶಾಂತ್ 10–1–73–0, ಬಾಸಿಲ್ ತಂಬಿ 7–0–67–0, ಎನ್.ಪಿ.ಬಾಸಿಲ್ 8–0–57–3, ಅಕ್ಷಯ್ ಚಂದ್ರನ್ 7–0–47–0, ಸಚಿನ್ ಬೇಬಿ 6–0–44–0, ವಿಷ್ಣು ವಿನೋದ್ 2–0–15–0

ಕೇರಳ 258 (43.4 ಓವರ್‌ಗಳಲ್ಲಿ)	
ರಾಬಿನ್ ಉತ್ತಪ್ಪ ಎಲ್‌ಬಿಡಬ್ಲ್ಯು ಬಿ ರೋನಿತ್ ಮೋರೆ	2
ವಿಷ್ಣು ವಿನೋದ್ ಸಿ ಶರತ್ ಬಿ ಪ್ರಸಿದ್ಧ ಕೃಷ್ಣ	28
ರೋಹನ್ ಕುನ್ನುಮ್ಮಲ್ ಸಿ ಪ್ರಸಿದ್ಧ ಕೃಷ್ಣ ಬಿ ರೋನಿತ್ ಮೋರೆ	0
ವತ್ಸಲ್ ಗೋವಿಂದ್ ಸಿ ಪ್ರಸಿದ್ಧ ಕೃಷ್ಣ ಬಿ ರೋನಿತ್ ಮೋರೆ	92
ಸಚಿನ್ ಬೇಬಿ ಸಿ ಸಿದ್ಧಾರ್ಥ್ ಬಿ ಕೃಷ್ಣಪ್ಪ ಗೌತಮ್	27
ಮೊಹಮ್ಮದ್ ಅಜರುದ್ದೀನ್ ಸ್ಟಂಪ್ಡ್ ಶರತ್ ಬಿ ಶ್ರೇಯಸ್ ಗೋಪಾಲ್	52
ಅಕ್ಷಯ್ ಚಂದ್ರನ್ ಬಿ ಶ್ರೇಯಸ್ ಗೋಪಾಲ್	9
ಜಲಜ್ ಸಕ್ಸೇನಾ ಸಿ ಶರತ್ ಬಿ ಕೃಷ್ಣಪ್ಪ ಗೌತಮ್	24
ಬಾಸಿಲ್ ತಂಬಿ ಸಿ ಕೆ.ವಿ.ಸಿದ್ಧಾರ್ಥ್ ಬಿ ರೋನಿತ್ ಮೋರೆ	2
ಶ್ರೀಶಾಂತ್ ಬಿ ರೋನಿತ್ ಮೋರೆ	4
ಎನ್.ಪಿ.ಬಾಸಿಲ್ ಔಟಾಗದೆ	10
ಇತರೆ (ಲೆಗ್‌ಬೈ 2, ವೈಡ್ 6)	8

ವಿಕೆಟ್ ಪತನ: 1-13 (ರಾಬಿನ್ ಉತ್ತಪ್ಪ, 3.4), 2-15 (ರೋಹನ್ ಕುನ್ನುಮ್ಮಲ್; 5.1), 3-52 (ವಿಷ್ಣು ವಿನೋದ್; 11.5), 4-111 (ಸಚಿನ್ ಬೇಬಿ, 23.4), 5-203 (ಮೊಹಮ್ಮದ್ ಅಜರುದ್ದೀನ್; 33.2), 6-215 (ಅಕ್ಷಯ್ ಚಂದ್ರನ್; 35.6), 7-219 (ವತ್ಸಲ್ ಗೋವಿಂದ್; 36.6), 8-229 (ಬಾಸಿಲ್ ತಂಬಿ, 38.6), 9-237 (ಶ್ರೀಶಾಂತ್; 40.5), 10-258 (ಜಲಜ್ ಸಕ್ಸೇನಾ, 43.4)

ಬೌಲಿಂಗ್: ಪ್ರಸಿದ್ಧ ಕೃಷ್ಣ 6-0-22-1, ರೋನಿತ್ ಮೋರೆ 9-0-36-5, ವೈಶಾಕ್ ವಿಜಯಕುಮಾರ್ 8-0-45-0, ಶ್ರೇಯಸ್ ಗೋಪಾಲ್ 10-0-64-2, ಕೃಷ್ಣಪ್ಪ ಗೌತಮ್ 9.4-0-73-2, ಕರುಣ್ ನಾಯರ್ 1-0-16-0

ಫಲಿತಾಂಶ: ಕರ್ನಾಟಕಕ್ಕೆ 80 ರನ್‌ಗಳ ಜಯ; ಸೆಮಿಫೈನಲ್‌ಗೆ ಪ್ರವೇಶ

ಪಾಂಚಾಲ್ ಶತಕ; ಗುಜರಾತ್‌ಗೆ ಜಯ

ಅರುಣ್ ಜೇಟ್ಲಿ ಮೈದಾನದಲ್ಲಿ ನಡೆದ ಪಂದ್ಯದಲ್ಲಿ ಗುಜರಾತ್ 117 ರನ್‌ಗಳಿಂದ ಆಂಧ್ರವನ್ನು ಮಣಿಸಿತು. ಮೊದಲು ಬ್ಯಾಟಿಂಗ್ ಮಾಡಿದ ಗುಜರಾತ್ ನಾಯಕ ಪ್ರಿಯಾಂಕ್ ಪಾಂಚಾಲ್ (134; 131 ಎಸೆತ, 10 ಬೌಂಡರಿ, 2 ಸಿಕ್ಸರ್) ಅವರ ಅಮೋಘ ಆಟದ ನೆರವಿನಿಂದ 7ಕ್ಕೆ 299 ರನ್ ಗಳಿಸಿತು. ಉತ್ತರವಾಗಿ ಆಂಧ್ರ 42ನೇ ಓವರ್‌ನಲ್ಲಿ 182 ರನ್‌ಗಳಿಗೆ ಆಲೌಟಾಯಿತು.

ಸಂಕ್ಷಿಪ್ತ ಸ್ಕೋರು: ಗುಜರಾತ್: 50 ಓವರ್‌ಗಳಲ್ಲಿ 7ಕ್ಕೆ 299: (ಪ್ರಿಯಾಂಕ್ ಪಾಂಚಾಲ್ 134, ರಾಹುಲ್ ಶಾ 36; ಹರಿಶಂಕರ್ ರೆಡ್ಡಿ 60ಕ್ಕೆ3, ಲಲಿತ್ ಮೋಹನ್ 55ಕ್ಕೆ2); ಆಂಧ್ರ: 41.2 ಓವರ್‌ಗಳಲ್ಲಿ 182 (ರಿಕಿ ಭುಯಿ 67; ಅರ್ಜಾನ್ ನಾಗ್ವಸ್ವಾಲ 28ಕ್ಕೆ4, ಪೀಯೂಷ್ ಚಾವ್ಲಾ 33ಕ್ಕೆ3). ಫಲಿತಾಂಶ: ಗುಜರಾತ್‌ಗೆ 117 ರನ್‌ಗಳ ಜಯ; ಸೆಮಿಫೈನಲ್‌ಗೆ ಪ್ರವೇಶ.

ಫುಟ್‌ಬಾಲ್: ಮಾತೃ ಪ್ರತಿಷ್ಠಾನಕ್ಕೆ ಜಯ

ಬೆಂಗಳೂರು: ಜ್ಯೋತಿ ಅವರ ಹ್ಯಾಟ್ರಿಕ್ (6, 71, 87ನೇ ನಿಮಿಷ) ಮತ್ತು ಕೌಸಲ್ಯ ಗಳಿಸಿದ ಎರಡು ಗೋಲುಗಳ ನೆರವಿನಿಂದ ಮಾತೃ ಪ್ರತಿಷ್ಠಾನ ತಂಡ ರಾಜ್ಯ ಫುಟ್‌ಬಾಲ್ ಸಂಸ್ಥೆ ಆಯೋಜಿಸಿರುವ ಮಹಿಳೆಯರ ಲೀಗ್‌ನಲ್ಲಿ 5–0ಯಿಂದ ರೆಬೆಲ್ಸ್ ವಿಮೆನ್ಸ್ ಎಫ್‌ಸಿಯನ್ನು ಮಣಿಸಿತು.

KLES
DR. PRABHAKAR KORE HOSPITAL & MEDICAL RESEARCH CENTRE
NEHRU NAGAR, BELAGAVI-590010 KARNATAKA, INDIA

Multi-Speciality Hospital with 2400 beds calls for the outsourcing of PHARMACY of the hospital. Applications invited from the genuine parties capable of handling the Pharmacy:

OUT-SOURCING
Central Pharmacy & Subsidiary Pharmacy outlets

Only Genuine parties with experience and expertise may apply through sealed offer letters to the Medical Director & Chief Executive of the hospital and non-refundable registration charges of **Rs.25,000/- (Rupees twenty five thousand only)** by DD favouring "The Medical Director & Chief Executive, KLES Dr. Prabhakar Kore Hospital & MRC" on or before **22nd March 2021.** The hospital reserves the right to accept or reject any or all the applications without assigning any reasons.

For more details, contact:
ADMINISTRATOR – F & A
Phone No. 0831-2551130 or 0831-2473777 (16Lines),
Fax:0831-2470732, E-mail: medicaldirector@klehospital.org

www.klehospital.org
Dr Prabhakar B. Kore
Chairman, KLE Society, Belagavi

ಮಹಿಳಾ ದಿನಾಚರಣೆ ಅಂಗವಾಗಿ ರಾಜ್ಯ ಯುವಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸೋಮವಾರ ಆಯೋಜಿಸಿದ್ದ ಸಾಹಸ ಕ್ರೀಡೆ ಕಾರ್ಯಕ್ರಮದಲ್ಲಿ ಶ್ರೀಯಾ ಎಂ. ಅವರು ಗೋಡೆ ಹತ್ತುವ ಕೌಶಲ ಪ್ರದರ್ಶಿಸಿದರು –ಪ್ರಜಾವಾಣಿ ಚಿತ್ರ

ಫುಟ್‌ಬಾಲ್ ಕ್ರೀಡಾಂಗಣದಲ್ಲಿ 'ಕಾಳಗ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಬೆಂಗಳೂರು ಫುಟ್‌ಬಾಲ್ ಮೈದಾನ ಸೋಮವಾರ ಮಧ್ಯಾಹ್ನ ಬೆಂಗಳೂರು ಎಫ್‌ಸಿ ಅಧಿಕಾರಿಗಳು ಮತ್ತು ರೆಫರಿಗಳ ನಡುವಿನ ಕಾಳಗಕ್ಕೆ ವೇದಿಕೆಯಾಯಿತು. ಕೆಲವು ಬಾಹ್ಯ ಶಕ್ತಿಗಳು ಕೂಡ ಗಲಾಟೆಯಲ್ಲಿ ಭಾಗಿಯಾದ ಕಾರಣ ರಾಜ್ಯ ಫುಟ್‌ಬಾಲ್ ಸಂಸ್ಥೆಯ (ಕೆಎಸ್‌ಎಫ್‌ಎ) ಹಾಗೂ ಬೆಂಗಳೂರು ಜಿಲ್ಲಾ ಫುಟ್‌ಬಾಲ್ ಸಂಸ್ಥೆಯ ಕಚೇರಿಯ ಕಿಟಕಿ ಗಾಜಿಗೂ ಕಲ್ಲುಗಳು ಬಿದ್ದವು.

ಬಿಡಿಎಫ್‌ಎ ಆಯೋಜಿಸಿರುವ ಸೂಪರ್ ಡಿವಿಷನ್ ಲೀಗ್‌ನ ಪಂದ್ಯದಲ್ಲಿ ಎಫ್‌ಸಿ ಬೆಂಗಳೂರು ಯುನೈಟೆಡ್ ತಂಡ ಬೆಂಗಳೂರು ಎಫ್‌ಸಿಯನ್ನು 3–2ರಲ್ಲಿ ಮಣಿಸಿತ್ತು. ಪಂದ್ಯ ಮುಕ್ತಾಯಗೊಳ್ಳುತ್ತಿದ್ದಂತೆ ಗಲಾಟೆ ಆರಂಭವಾಯಿತು. ಪಂದ್ಯದಲ್ಲಿ ಮೂರು ಪೆನಾಲ್ಟಿ ಕಿಕ್‌ಗಳನ್ನು ರೆಫರಿ ನಿರಾಕರಿಸಿದರು ಎಂದು ತಂಡದ ಅಧಿಕಾರಿಗಳು ಆರೋಪಿಸಿದ್ದರು. ಡಿಫೆಂಡರ್ ಹರಪ್ರೀತ್ ಸಿಂಗ್‌ಗೆ ರೆಡ್ ಕಾರ್ಡ್ ತೋರಿಸಿದ್ದು ಅವರನ್ನು ಮತ್ತಷ್ಟು ಕುಪಿತಗೊಳಿಸಿತ್ತು. ರೆಫರಿ ಜೊತೆ ವಾಗ್ವಾದ ನಡೆಸಿ ಅವಾಚ್ಯ ಪದಗಳಿಂದ ನಿಂದಿಸಿದ್ದಕ್ಕಾಗಿ ರೆಡ್ ಕಾರ್ಡ್ ತೋರಿಸಲಾಗಿತ್ತು ಎಂದು ಟೂರ್ನಿಯ ಅಧಿಕಾರಿಗಳು ತಿಳಿಸಿದರು.

ಆಟಗಾರರ ಮೇಲೆ ಹಲ್ಲೆ ನಡೆಸಿದ ವ್ಯಕ್ತಿ –ಪ್ರಜಾವಾಣಿ ಚಿತ್ರ

ಗಲಾಟೆ ನಿಯಂತ್ರಿಸಲು ಪೊಲೀಸರನ್ನು ಕರೆಸಲಾಯಿತು. ರೆಫರಿಗಳನ್ನು ಭದ್ರತೆಯೊಂದಿಗೆ ಅವರ ಮನೆಗಳಿಗೆ ತಲುಪಿಸಲಾಯಿತು. ಘಟನೆಯ ಬಗ್ಗೆ ವರದಿ ನೀಡುವಂತೆ ರೆಫರಿಗೆ ಸೂಚಿಸಲಾಗಿದ್ದು ಅದರ ಆಧಾರದಲ್ಲಿ ಕ್ರಮ ಕೈಗೊಳ್ಳಲಾಗುವುದು ಎಂದು ಕೆಎಸ್‌ಎಫ್‌ಎ ಮತ್ತು ಬಿಡಿಎಫ್‌ಎ ಅಧಿಕಾರಿಗಳು ತಿಳಿಸಿದ್ದಾರೆ.

ಇನ್ನೊಂದು ಪಂದ್ಯದಲ್ಲಿ ಡ್ರೀಮ್ ಯುನೈಟೆಡ್ 2–1ರಿಂದ ಆದಾಯ ತೆರಿಗೆ ತಂಡವನ್ನು ಮಣಿಸಿತು.

ಮನದೀಪ್ ಗೋಲು: ಭಾರತ ಜಯಭೇರಿ

ಆ್ಯಂಟ್‌ವರ್ಪ್, ಬೆಲ್ಜಿಯಂ(ಪಿಟಿಐ): ಮನದೀಪ್ ಸಿಂಗ್ ಗಳಿಸಿದ ಎರಡು ಗೋಲುಗಳ ನೆರವಿನಿಂದ ಭಾರತ ಹಾಕಿ ತಂಡವು 3–2ರಿಂದ ಗ್ರೇಟ್ ಬ್ರಿಟನ್ ತಂಡವನ್ನು ಸೋಮವಾರ ಮಣಿಸಿತು. ಇದರೊಂದಿಗೆ ಯೂರೋಪ್ ಪ್ರವಾಸವನ್ನು ಅಜೇಯವಾಗಿ ಕೊನೆಗೊಳಿಸಿತು.

ಪಂದ್ಯದ ಮೊದಲ ನಿಮಿಷದಲ್ಲಿಯೇ ಗೋಲು ದಾಖಲಿಸಿದ ಹರ್ಮನ್‌ಪ್ರೀತ್ ಸಿಂಗ್ ಭಾರತಕ್ಕೆ ಕನಸಿನ ಆರಂಭ ನೀಡಿದರು. ಮನದೀಪ್ 28 ಹಾಗೂ 59ನೇ ನಿಮಿಷದಲ್ಲಿ ಕೈಚಳಕ ತೋರಿದರು. ಗ್ರೇಟ್ ಬ್ರಿಟನ್ ಪರ ಜೇಮ್ಸ್ ಗಾಲ್ (20) ಹಾಗೂ ಆ್ಯಡಂ ಫಾರಸಿತ್ (55ನೇ ನಿಮಿಷ) ಗೋಲು ಹೊಡೆದರು.

ಕಳೆದ ಪಂದ್ಯದಲ್ಲಿ ಭಾರತ, ಬ್ರಿಟನ್‌ನೊಂದಿಗೆ 1–1ರ ಡ್ರಾ ಸಾಧಿಸಿತ್ತು. ಅದಕ್ಕೂ ಮೊದಲು ಜರ್ಮನಿ ಎದುರು ಎರಡು ಪಂದ್ಯಗಳಲ್ಲಿ ಕ್ರಮವಾಗಿ 6–1ರ ಗೆಲುವು ಹಾಗೂ 1–1ರ ಸಮಬಲ ಸಾಧಿಸಿತ್ತು.

ಟೆನಿಸ್: ಅಗ್ರ ಶ್ರೇಯಾಂಕಿತರಿಗೆ 'ಅರ್ಹರ' ಪೆಟ್ಟು

ಬೆಂಗಳೂರು: ಅಗ್ರ ಶ್ರೇಯಾಂಕಿತರು ಇಲ್ಲಿನ ಟಾಪ್‌ಸ್ಪಿನ್ ಟೆನಿಸ್ ಅಕಾಡೆಮಿಯಲ್ಲಿ ಸೋಮವಾರ ಆರಂಭಗೊಂಡ ಎಐಟಿಎ 18 ವರ್ಷದೊಳಗಿನವರ ಟೆನಿಸ್ ಟೂರ್ನಿಯ ಬಾಲಕ ಮತ್ತು ಬಾಲಕಿಯರ ವಿಭಾಗದಲ್ಲಿ ಆಘಾತ ಅನುಭವಿಸಿದರು. ಅರ್ಹತಾ ಸುತ್ತಿನಲ್ಲಿ ಗೆದ್ದು ಬಂದವರು ಸುಲಭವಾಗಿ ಎರಡನೇ ಸುತ್ತು ಪ್ರವೇಶಿಸಿದರು.

ಬಾಲಕರ ವಿಭಾಗದಲ್ಲಿ ರಾಜ್ಯದ ನಿನಾದ್ ರವಿ ಅವರನ್ನು ಅರ್ಹತಾ ಸುತ್ತಿನಲ್ಲಿ ಗೆದ್ದು ಬಂದ ತಮಿಳುನಾಡು ಆಟಗಾರ ಅನಿರುದ್ಧ ಆದಿತ್ಯ 6–2, 6–2ರಲ್ಲಿ ಮಣಿಸಿದರೆ ಬಾಲಕಿಯರ ವಿಭಾಗದಲ್ಲಿ ಮೀನಾಕ್ಷಿ ಎಲ್ ಅವರನ್ನು ಅರ್ಹತಾ ಸುತ್ತಿನಲ್ಲಿ ಗೆದ್ದು ಬಂದಿದ್ದ ಸೌಮ್ಯಾ ರೋಣಡೆ 6-1, 6-1ರಲ್ಲಿ ಸೋಲಿಸಿದರು.

ಚಿತ್ರದ ಬಿಡಿಭಾಗಗಳನ್ನು ಎ ಬಿ ಸಿ ಸಾಲಿನ ಕ್ರಮದಲ್ಲಿ ಹೊಂದಿಸಿ, ಪ್ರತಿ ಸಾಲಿನಲ್ಲಿ ಎಡದಿಂದ ಬಲಕ್ಕೆ ಜೋಡಿಸಿ

ಮಾದರಿ ಉದಾಹರಣೆಗೆ ಇಲ್ಲಿ ಸ್ಕ್ಯಾನ್ ಮಾಡಿ

ಪ್ರಜಾವಾಣಿ

ಚಿತ್ರಬಂಧ

ಕಣ್ಣಿಗೆ ಗೊಂದಲವಾಗಿ ಕಾಣುವ ಚಿತ್ರವನ್ನು ಕಲ್ಪನೆಯಲ್ಲಿ ಚಿತ್ರಿಸಿ ಬಹುಮಾನ ಗೆಲ್ಲಿ

ಬಂಪರ್ ಬಹುಮಾನ* ONE PLUS 7 PRO ಮೊಬೈಲ್

ಹೆಚ್ಚು ಹೆಚ್ಚು ಭಾಗವಹಿಸಿ ಬಂಪರ್ ಬಹುಮಾನವನ್ನು ಗೆಲ್ಲುವ ಅವಕಾಶ ನಿಮ್ಮದಾಗಿಸಿಕೊಳ್ಳಿ

14 ಅದೃಷ್ಟಶಾಲಿಗಳಿಗೆ, ಪ್ರತಿದಿನ ₹500 ಬೆಲೆಯ ಅಮೆಜಾನ್ ಗಿಫ್ಟ್ ವೌಚರ್

ಸರಿಯಾದ ಉತ್ತರದ ಕ್ರಮವನ್ನು PVCB A <3ಸಂಖ್ಯೆ> B <3ಸಂಖ್ಯೆ> C <3ಸಂಖ್ಯೆ> ಎಂದು ಟೈಪ್ ಮಾಡಿ, ಇಂದು ರಾತ್ರಿ 8 ರೊಳಗೆ 9246020020 ಗೆ SMS ಮಾಡಿ.

ಉತ್ತರಿಸುವ ಕ್ರಮದ ಉದಾಹರಣೆ: PVCB A143 B276 C859

*ಷರತ್ತುಗಳು ಅನ್ವಯ

ಟೆನಿಸ್ ರ‍್ಯಾಂಕಿಂಗ್: ನೊವಾಕ್ ದಾಖಲೆ

ಪ್ಯಾರಿಸ್ (ಎಎಫ್‌ಪಿ): ವಿಶ್ವ ಟೆನಿಸ್ ಕ್ರಮಾಂಕದಲ್ಲಿ 311 ವಾರಗಳ ಕಾಲ ಅಗ್ರಸ್ಥಾನದಲ್ಲಿರುವ ಮೂಲಕ ನೊವಾಕ್ ಜೊಕೊವಿಚ್ ಅವರು ಸೋಮವಾರ ನೂತನ ದಾಖಲೆ ಬರೆದರು. ದಿಗ್ಗಜ ಆಟಗಾರ ರೋಜರ್ ಫೆಡರರ್ 310 ವಾರ ಈ ಸ್ಥಾನದಲ್ಲಿದ್ದರು.

20 ಗ್ರ್ಯಾನ್‌ಸ್ಲಾಮ್ ಪ್ರಶಸ್ತಿ ಗೆದ್ದಿರುವ ಸ್ವಿಟ್ಜರ್ಲೆಂಡ್‌ನ ಫೆಡರರ್ ದಾಖಲೆಯ ಮೇಲೆ ಜೊಕೊವಿಚ್ ಈಗ ಕಣ್ಣು ನೆಟ್ಟಿದ್ದಾರೆ. 33 ವರ್ಷದ ಸರ್ಬಿಯಾ ನೊವಾಕ್ ಸದ್ಯ 18 ಗ್ರ್ಯಾನ್‌ಸ್ಲಾಮ್ ಕಿರೀಟ ಧರಿಸಿದ್ದಾರೆ. ಸ್ಪೇನ್‌ನ ರಫೆಲ್ ನಡಾಲ್ ಕೂಡ 20 ಗ್ರ್ಯಾನ್‌ಸ್ಲಾಮ್ ಪ್ರಶಸ್ತಿಗಳ ಒಡೆಯರಾಗಿದ್ದಾರೆ.

ಆರ್ಚರಿ ತಂಡದಲ್ಲಿ ಅತನು, ದೀಪಿಕಾ

ಪುಣೆ (ಪಿಟಿಐ): ಟೋಕಿಯೊ ಒಲಿಂಪಿಕ್ಸ್‌ಗೆ ಭಾರತ ಆರ್ಚರಿ ತಂಡದ ಆಯ್ಕೆ ಟ್ರಯಲ್ಸ್ ಇಲ್ಲಿಯ ಆರ್ಮಿ ಇನ್‌ಸ್ಟಿಟ್ಯೂಟ್ ಆಫ್ ಸ್ಪೋರ್ಟ್ಸ್‌ನಲ್ಲಿ ಸೋಮವಾರ ನಡೆಯಿತು. ಪುರುಷರ ತಂಡಕ್ಕೆ ಅತನು, ತರುಣದೀಪ್ ಹಾಗೂ ಪ್ರವೀಣ್ ಜಾಧವ್ ಹಾಗೂ ಮಹಿಳಾ ತಂಡಕ್ಕೆ ದೀಪಿಕಾ ಕುಮಾರಿ, ಅಂಕಿತಾ ಭಕತ್, ಕೋಮಲಿಕಾ ಬಾರಿ ಆಯ್ಕೆಯಾದರು

ರೋಮ್ ಕುಸ್ತಿ: ಚಿನ್ನ ಗೆದ್ದು ಅಗ್ರಸ್ಥಾನಕ್ಕೇರಿದ ಬಜರಂಗ್

ರೋಮ್ (ಪಿಟಿಐ): ಭಾರತದ ಬಜರಂಗ್ ಪೂನಿಯಾ ಇಲ್ಲಿ ನಡೆಯುತ್ತಿರುವ ಮಟಿಯೊ ಪೆಲಿಕಾನ್ ರ‍್ಯಾಂಕಿಂಗ್ ಸೀರಿಸ್ ಕುಸ್ತಿ ಟೂರ್ನಿಯಲ್ಲಿ ಚಿನ್ನ ಗೆದ್ದು 65 ಕೆಜಿ ವಿಭಾಗದವರ ವಿಶ್ವ ರ‍್ಯಾಂಕಿಂಗ್‌ನಲ್ಲಿ ಅಗ್ರ ಸ್ಥಾನಕ್ಕೇರಿದರು. ಭಾನುವಾರ ರಾತ್ರಿ ನಡೆದ ಫೈನಲ್ ಬೌಟ್‌ನಲ್ಲಿ ಅವರು ಮಂಗೋಲಿಯಾದ ಟಲ್ಗಾ ತುಮುರ್ ಒಚಿರ್ ವಿರುದ್ಧ ಹಿನ್ನಡೆ ಅನುಭವಿಸಿದ್ದರು. ಆದರೆ ಅಂತಿಮ 30 ಸೆಕೆಂಡುಗಳಲ್ಲಿ ಎದುರಾಳಿಯನ್ನು ಕಂಗೆಡಿಸಿ ಎರಡು ಪಾಯಿಂಟ್ ತಮ್ಮದಾಗಿಸಿಕೊಂಡು ಗೆಲುವಿನ ನಗೆ ಬೀರಿದರು. ಈ ಮೂಲಕ ಪ್ರಶಸ್ತಿಯನ್ನು ಉಳಿಸಿಕೊಂಡರು.

ರಾಷ್ಟ್ರೀಯ ತರಬೇತಿ ಶಿಬಿರಕ್ಕೆ ಹಾಜರಾಗುವ ಮೊದಲು ವಿದೇಶದಲ್ಲೇ ಕೆಲ ಕಾಲ ತರಬೇತಿ ಪಡೆಯಲು ಬಯಸಿರುವ ಬಜರಂಗ್ ಏಪ್ರಿಲ್ ಒಂಬತ್ತರಿಂದ 11ರ ವರೆಗೆ ಕಜಕಸ್ತಾನದಲ್ಲಿ ನಡೆಯಲಿರುವ ಏಷ್ಯನ್ ಚಾಂಪಿಯನ್‌ಷಿಪ್‌ನಲ್ಲಿ ಪಾಲ್ಗೊಂಡ ನಂತರ ತವರಿಗೆ ಮರಳಲು ನಿರ್ಧರಿಸಿದ್ದಾರೆ.

ವಿಶಾಲ್‌ಗೆ ಕಂಚಿನ ಪದಕ: ಒಲಿಂಪಿಕೇತರ ಸ್ಪರ್ಧೆಯಾದ 70 ಕೆಜಿ ವಿಭಾಗದಲ್ಲಿ ಭಾರತದ ವಿಶಾಲ್ ಕಳಿರಮಣ್ ಕಜಕಸ್ತಾನದ ಸಿರ್ಬಾಸ್ ತಲ್ಗಟ್ ವಿರುದ್ಧ 5–1ರಲ್ಲಿ ಗೆದ್ದು ಕಂಚಿನ ಪದಕ ಗಳಿಸಿದರು. ಉದ್ದೀಪನ ಮದ್ದು ಸೇವನೆ ಪ್ರಕರಣದಲ್ಲಿ ನಾಲ್ಕು ವರ್ಷಗಳ ಅಮಾನತಿಗೆ ಒಳಗಾಗಿ ಈಚೆಗೆ ಕಣಕ್ಕೆ ಮರಳಿರುವ ನರಸಿಂಗ್ ಪಂಚಮ್ ಯಾದವ್ ಕಂಚಿನ ಪದಕಕ್ಕಾಗಿ ನಡೆದ ಸ್ಪರ್ಧೆಯಲ್ಲಿ ಕಜಕಸ್ತಾನದ ಡನಿಯಾರ್ ಕೈಸನೊವ್‌ಗೆ 0–5ರಲ್ಲಿ ಮಣಿದರು.

ಬಜರಂಗ್ ಪೂನಿಯಾ –ಪಿಟಿಐ ಚಿತ್ರ

ಟೂರ್ನಿಯಲ್ಲಿ ಭಾರತ ಒಟ್ಟು ಏಳು ಪದಕಗಳನ್ನು ಗಳಿಸಿತು. ವಿನೇಶಾ ಫೋಗಟ್ ಮತ್ತು ಸರಿತಾ ಮೋರ್ ಮಹಿಳೆಯರ ವಿಭಾಗದಲ್ಲಿ ಕ್ರಮವಾಗಿ ಚಿನ್ನ ಮತ್ತು ಬೆಳ್ಳಿ ಪದಕ ಗೆದ್ದಿದ್ದರು. ಗ್ರೀಕೊ ರೋಮನ್ ವಿಭಾಗದಲ್ಲಿ ನೀರಜ್ (63 ಕೆಜಿ), ಕುಲದೀಪ್ ಮಲಿಕ್ (72 ಕೆಜಿ) ಮತ್ತು ನವೀನ್ (130 ಕೆಜಿ) ಕಂಚಿನ ಪದಕ ಗಳಿಸಿದ್ದರು.

ಐಎಸ್‌ಎಲ್: ಫೈನಲ್‌ನತ್ತ ಎಟಿಕೆಎಂಬಿ ಚಿತ್ತ

ಮಡಗಾಂವ್ (ಪಿಟಿಐ): ಫೈನಲ್ ಮೇಲೆ ಕಣ್ಣಿಟ್ಟಿರುವ ಎಟಿಕೆ ಮೋಹನ್ ಬಾಗನ್ (ಎಟಿಕೆಎಂಬಿ) ಹಾಗೂ ನಾರ್ತ್‌ಈಸ್ಟ್ ಯುನೈಟೆಡ್ ಎಫ್‌ಸಿ ತಂಡಗಳು ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಫುಟ್‌ಬಾಲ್ ಟೂರ್ನಿಯ ಎರಡನೇ ಲೆಗ್ ಸೆಮಿಫೈನಲ್‌ಗೆ ಸಜ್ಜಾಗಿವೆ. ಉಭಯ ತಂಡಗಳ ನಡುವೆ ಮಂಗಳವಾರ ನಡೆಯುವ ಹಣಾಹಣಿಗೆ ಫಟೋರ್ಡ ಕ್ರೀಡಾಂಗಣ ಸಿದ್ಧಗೊಂಡಿದೆ.

ಮೊದಲ ಲೆಗ್ ಸೆಮಿಫೈನಲ್ ಪಂದ್ಯವನ್ನು ಉಭಯ ತಂಡಗಳು 1–1ರಿಂದ ಡ್ರಾ ಮಾಡಿಕೊಂಡಿದ್ದವು. ಪ್ರಶಸ್ತಿ ಸುತ್ತಿಗೆ ತಲುಪಲು ಮಂಗಳವಾರ ನಡೆಯುವ ಪಂದ್ಯವು ಉಭಯ ತಂಡಗಳಿಗೆ ನಿರ್ಣಾಯಕವಾಗಿದೆ. ಇಲ್ಲಿ ಗೆದ್ದರೆ ನಾರ್ತ್‌ಈಸ್ಟ್ ತಂಡಕ್ಕೆ ಮೊದಲ ಬಾರಿ ಫೈನಲ್ ತಲುಪುವ ಅವಕಾಶ ಸಿಗಲಿದೆ; ಆ್ಯಂಟೊನಿಯೊ ಹಬಾಸ್ ತರಬೇತಿಯಲ್ಲಿ ಪಳಗಿರುವ ಎಟಿಕೆಎಂಬಿ ಮೂರನೇ ಬಾರಿ ಅಂತಿಮ ಪಂದ್ಯದಲ್ಲಿ ಆಡಲಿದೆ.

ಡಿಫೆನ್ಸ್ ವಿಭಾಗದಲ್ಲಿ ಬಲಿಷ್ಠವಾಗಿರುವ ಕೋಲ್ಕತ್ತ ಮೂಲದ ಎಟಿಕೆಎಂಬಿ, ಲೀಗ್ ಹಂತದಲ್ಲಿ ಕೇವಲ 15 ಗೋಲುಗಳನ್ನು ಬಿಟ್ಟುಕೊಟ್ಟಿದೆ.

ಪಂದ್ಯ ಆರಂಭ: ಸಂಜೆ 7.30

ಸ್ಥಳ: ಫಟೋರ್ಡ ಕ್ರೀಡಾಂಗಣ, ಮಡಗಾಂವ್

ಫೈನಲ್‌ಗೆ ಮುಂಬೈ ಸಿಟಿ

ಬ್ಯಾಂಬೊಲಿಮ್: ರೋಚಕ ಹಣಾಹಣಿಯಲ್ಲಿ ಎಫ್‌ಸಿ ಗೋವಾವನ್ನು 6–5ರಿಂದ ಪೆನಾಲ್ಟಿ ಶೂಟ್ ಔಟ್‌ನಲ್ಲಿ ಮಣಿಸಿದ ಮುಂಬೈ ಸಿಟಿ ಎಫ್‌ಸಿ ತಂಡ ಐಎಸ್‌ಎಲ್‌ನ ಫೈನಲ್ ಪ್ರವೇಶಿಸಿತು.

ಜಿಎಂಸಿ ಕ್ರೀಡಾಂಗಣದಲ್ಲಿ ಸೋಮವಾರ ರಾತ್ರಿ ನಡೆದ ಮೊದಲ ಸೆಮಿಫೈನಲ್‌ನ ಎರಡನೇ ಲೆಗ್ ಪಂದ್ಯದ ನಿಗದಿತ ಅವಧಿಯಲ್ಲಿ ಗೋಲು ದಾಖಲಾಗಲಿಲ್ಲ. ಹೀಗಾಗಿ ಅರ್ಧ ತಾಸು ಅಧಿಕ ಅವಧಿಯನ್ನು ನೀಡಲಾಯಿತು. ಈ ವೇಳೆಯಲ್ಲೂ ಚೆಂಡನ್ನು ಗುರಿ ಸೇರಿಸಲು ಉಭಯ ತಂಡಗಳು ವಿಫಲವಾದವು. ಹೀಗಾಗಿ ಫಲಿತಾಂಶ ನಿರ್ಣಯಿಸಲು ಶೂಟ್‌ಔಟ್ ಮೊರೆಹೋಗಲಾಯಿತು. ಮೊದಲ 5 ಅವಕಾಶದಲ್ಲಿ ಉಭಯ ತಂಡಗಳು ತಲಾ ಎರಡು ಗೋಲು ಹೊಡೆದವು. ಮತ್ತೆ ಐದು ಅವಕಾಶ ನೀಡಲಾಯಿತು. ಇದರಲ್ಲಿ ಮುಂಬೈ ಫಲ ಕಂಡಿತು.



Honda Motorcycle & Scooter India Pvt. Ltd., Registered Office: Commercial Complex II, Sector – 49-50, Golf Course Extension Road, Gurugram – 122018 (Haryana), India; **Website:** www.honda2wheelersindia.com; **Customer Care:** customercare@honda2wheelersindia.com

Honda Exclusive Authorised Dealerships: Ananda Honda - **BOMMANAHALLI:** 9738074162; **HEBBAGODI:** 9738074162; **SARJAPUR RD:** 9738074162; **JIGANI:** 9738066600; **HOSUR ROAD:** 9738066600; Anekal Honda - **ANEKAL:** 080-27830234, 9880417779; City Honda - **ST. JOHNS ROAD:** 25320623, 9480812350; **H.R.B.R:** 41614777, 9845941305; **FRAZER TOWN:** 9480812353; **LALBAGH:** 8884434200; Haiku Honda - **DOMLUR:** 49656565, 9342432156; **INDIRANAGAR:** 9343796289, 08049692323; Dhruvdesh Honda - **MEKHRI CIRCLE:** 40500700, 9972237311; **THANISANDRA (NAGAWARA):** 7353030333; **YELAHANKA:** 40551122, 9343968407; **VIDYARANYAPURA:** 8150866333, 8152866333; Planet Honda - **RAJAJINAGAR:** 08068898888, 9980927735; **PEENYA:** 08068898888, 9980927730; **SUNKADAKATTE:** 08068898888, 9980927728; **BASAWESHWAR NAGAR:** 08068898888, 9980927726; Raja Honda - **KORAMANGALA:** 08067329000,9035310055; Prime Honda - **VIJAYNAGAR:** 23010300, 8050503111; **NAGARBHAVI:** 23010700, 8095778000; **KAMAKSHIPALYA:** 080-23019700, 7829900444; Silicon Honda - **RV ROAD:** 26574467/68, 9844502222; **BANSHANKARI:** 9844502444, 8722279009; **R.R. NAGAR:** 9964388333, 9071174800; **MONOTYPE:** 7353744400, **JAYANAGAR:** 8722801626; Saphire Honda - **JP NAGAR:** 7026000002; **BANNERAGHATTA RD:** 08068818881; **KANAKAPURA RD:** 08068818881; **PUTTENAHALLI:** 08068818881; **GOTTIGERE:** 08068818881; VFM Honda - **KR PURAM:** 49499299, 9071858885; **HENNUR ROAD:** 9108989817, 9108989818; Tansi Honda - **HOODI:** 080-45510000, 7259030091; **MARTHAHALLI:** 080-67166600, 7259030093; **VARTHUR RD:** 08042620600, 9686573013; **GUNJUR:** 9606450642, 9606450641; Turbo Honda - **DODDABALLAPURA:** 7022038682; **NELAMANAGALA:** 080-27722333, 7022008894; Wings Honda - **HOSKOTE:** 7676907272; **MALUR:** 7676155600; **TC PALYA:** 9590815959; Sri Kausthub Honda - **KOLAR:** 08152-221414, 9900018515; **KGF:** 08153-266606, 9900092115; **MULBAGAL:** 9008941044; **SRINIVASAPUR:** 8495956515; Namma Honda - **CHIKKABALLAPUR:** 9606060610, 9900071211; **CHINTAMANI:** 9606060620, 9606060690; **BAGEPALLI:** 9611596112, 9611596110; Shankar Honda - **GOWRIBIDANUR:** 9900007422/33; SLN Honda - **SHIDLAGATTA:** 9986160961; Century Honda - **TUMKUR:** 7829767340, 8892610223; **SIRA:** 9620267057, 9538392767; **GUBBI:** 9620267051; Shantinath Honda - **TUMKUR:** 0816-2279979, 9449334359; **KUNIGAL:** 7022276603; **KUNIGAL ROAD:** 9844351599, 9844351399; Honey Honda - **PAVAGADA:** 9686724405; Annapoorna Honda - **MADHUGIRI:** 9886627429; Vignesh Honda - **TIPTUR:** 9448214014; **TURUVEKERE:** 9448214014; Sri Srinivasa Honda - **CHIKKANAYAKANAHALLI:** 8722522221; Prestige Honda - **RAMNAGARA:** 9606490030; **KANAKAPURA:** 9606036053; ART Honda - **BIDADI:** 9945966771, 9164871007; Springs Honda - **KENGERI:** 9513771114; Nideesh Honda - **DEVANAHALLI:** 9108871999, 9686608579.

For Bulk/Institutional enquiries, please write us at: institutionalsales@honda2wheelersindia.com